ರಂಜನೆ ಬೋಧನೆ ಪ್ರಬೋಧನೆ


ಲಂಕೇಶ್

10 ಆಗಸ್ಟ್ 2016 ಪುಟ 20 ರೂ. 15/-

ಸಂತಾನೋತ್ಪತ್ತಿ
ಒಂದಷ್ಟು
ವಿಜ್ಞಾನ...
ಮತ್ತೊಂದಷ್ಟು...



ಅಡುಗೆಯವಳ ತಪ್ಪೊಪ್ಪಿಗೆ



ಲಿಂಗಾನಂದರನ್ನು ವಿಷ ಹಾಕಿ ಕೊಂದೆ!

ಬಸವಧರ್ಮ ಪೀಠ

ಕಳಸಾ-ಬಂಡೂರಿ ಹೋರಾಟ



ಮೂಗು ಹಿಡಿದು ಬಾಯಿ ತೆರೆಸಬೇಕು

ಜೆಡಿಎಸ್ ಭಿನ್ನರ ಪಾಲಿಗೆ

'ಮೂರು' ದಾರಿ 'ನಾಲ್ಕು' ಆಯ್ಕೆ!






ಬಳ್ಳಾರಿ ಪ್ರತಾಪ ರೆಡ್ಡಿಯ ಗೂಂಡಾಗಿರಿ



ಉತ್ತರ ಕನ್ನಡ

ಅನಂತ್ಮಾಣಿಯ ನೀಚ ನಾಲಿಗೆ

ಸಾರಿಗೆ ನೌಕರರ ಮುಷ್ಕರ ಬೆಂಬಲಿಸಬೇಕು



ಈ ಲೇಖನ ಬರೆಯುತ್ತಿರುವ ಹೊತ್ತಿನಲ್ಲಿ ಕರ್ನಾಟಕ ರಾಜ್ಯ ಸರ್ಕಾರೀ ಸಾರಿಗೆ ನೌಕರರ ಮುಷ್ಕರ 3ನೇ ದಿನಕ್ಕೆ ಕಾಲಿಟ್ಟಿದೆ. 2012ರಲ್ಲಿ ನಡೆದ ಮುಷ್ಕರದಂತೆಯೇ ಇದೂ ಸಹ ಕಾರ್ಮಿಕ ಚಳವಳಿಯ ದೃಷ್ಟಿಯಿಂದ ಬಹಳ ಮಹತ್ವದ ಬೆಳವಣಿಗೆಯಾಗಿದೆ. ಮುಷ್ಕರದ 2ನೇ ದಿನ ಸಾರಿಗೆ ಇಲಾಖೆಯ ಅಧಿಕಾರಿಗಳ ಭಾರೀ ಪ್ರಯತ್ನದ ಹೊರತಾಗಿಯೂ, ಪೊಲೀಸರ ರಕ್ಷಣೆ ಪಡೆದುಕೊಂಡೂ ಇಡೀ ರಾಜ್ಯದಲ್ಲಿ ಕೇವಲ 74 ಬಸ್ಸುಗಳನ್ನು ಮಾತ್ರ ಓಡಿಸುವ ಪ್ರಯತ್ನ ನಡೆದಿದೆ. ಈ ಬಸ್ಸನ್ನು ಓಡಿಸಲು ಕೂತ ವ್ಯಕ್ತಿಗಳೂ ಸಂಸ್ಥೆಯ ಕಾಯಂ ಅಥವಾ ಗುತ್ತಿಗೆ ನೌಕರರಲ್ಲ, ಅಧಿಕಾರಿಗಳ ಕಾರು ಚಾಲಕರು, ಟ್ರೈನಿಗಳು ಹೀಗೆ ಯಾರ್‍ಯಾರನ್ನೋ ಹಿಡಿದು ಸರ್ಕಾರೀ ಬಸ್ಸು ಓಡಿಸಲು ಸೂಚಿಸಲಾಗಿದೆ. ಆ ಬಸ್ಸುಗಳೂ ಸಹ ಮಧ್ಯಾಹ್ನದ ಹೊತ್ತಿಗೆ ನಿಂತುಹೋಗಿವೆ. ಈ ಮಟ್ಟದ ಒಗ್ಗಟ್ಟನ್ನು ಮತ್ತು ಶಕ್ತಿಯನ್ನು ಪ್ರದರ್ಶಿಸಲು ಇವರಿಗೆ ಹೇಗೆ ಸಾಧ್ಯವಾಯಿತು? ಯಾಕಾಗಿ ಸಾರಿಗೆ ನೌಕರರು ಇಷ್ಟೊಂದು ಸಿಟ್ಟಿಗೆದ್ದಿದ್ದಾರೆ ಎಂಬುದನ್ನು ಯೋಚಿಸದೇ ಕೆಲವು ಮಾಧ್ಯಮಗಳು 'ಕೂಡಲೇ ಮುಷ್ಕರ ನಿಲ್ಲಿಸಿ' ಎಂದು ಫರ್ಮಾನು ಹೊರಡಿಸುತ್ತಿವೆ. ಸಾರಿಗೆ ನೌಕರರ ಪರವಾಗಿ ಮಾತಾಡುತ್ತಿರುವಂತೆ ಕಾಣುತ್ತಿರುವ ಕೆಲವು ಟಿವಿ ಚಾನೆಲ್‌ಗಳೂ ಸಹ ಕಾರ್ಮಿಕರ ಪರ ನಿಲುವಿನ ಕಾರಣಕ್ಕೆ ಅದನ್ನು ಹೇಳುತ್ತಿಲ್ಲ. ಇದು ಮುಖ್ಯಮಂತ್ರಿ ಸಿದ್ದರಾಮಯ್ಯನವರ ವಿರುದ್ಧ ಮಾತಾಡಲು ಅವರಿಗೆ ಸಿಕ್ಕ ಹೊಸ ಅಸ್ತ್ರವಾಗಿದೆ ಅಷ್ಟೇ.

ಕಾರ್ಮಿಕ ಸಂಘಟನೆಗಳ ವಿರುದ್ಧ ಈ ಚಾನೆಲ್‌ಗಳಲ್ಲಿ ಮಾತನಾಡುತ್ತಿರುವವರು ಕೆಲವು ಪ್ರಶ್ನೆಗಳನ್ನು ಕೇಳುತ್ತಿದ್ದಾರೆ. 'ನೀವು ಹೀಗೆ ಏಕಾಏಕಿ ಮುಷ್ಕರ ಮಾಡಿದರೆ ಹೇಗೆ? ಪ್ರಯಾಣಿಕರಿಗೆ ತೊಂದರೆಯಾಗುವುದಿಲ್ಲವೇ?', '35% ವೇತನ ಏರಿಕೆ ಕೇಳುತ್ತಿದ್ದೀರಿ. ಸರ್ಕಾರ 10% ಕೊಡುತ್ತೀವಿ ಅಂತಿದ್ದಾರಲ್ಲಾ? ಏನೋ ಸ್ವಲ್ಪ ಅಡ್ಜಸ್ಟ್ ಮಾಡಿಕೊಂಡು ಹೋಗಬೇಕು?'. ಇನ್ನೊಬ್ಬ ಚಾನೆಲ್‌ನ ಮುಖ್ಯಸ್ಥರೇ ಹೀಗಂದರು: 'ನೀವು 35% ಅನ್ನುತ್ತಿದ್ದೀರಿ. ಸರ್ಕಾರ 10% ಅನ್ನುತ್ತಿದೆ. ಹೋಗಲಿ 15%ಗೆ ಒಪ್ಪಿಕೊಂಡು ಬಿಡಿ'. ಇವೆಲ್ಲಕ್ಕಿಂತ ಹೆಚ್ಚಾಗಿ ಎಲ್ಲಾ ಕಡೆ ಸಾಮಾನ್ಯವಾಗಿ ಕೇಳಿಬಂದದ್ದು ಇನ್ನೊಂದು ಮಾತು 'ಸರ್ಕಾರ ಮತ್ತು ಸಾರಿಗೆ ನೌಕರರ ಕಿತ್ತಾಟದ ನಡುವೆ ಸಾಮಾನ್ಯ ಜನರು ಕಷ್ಟ ಅನುಭವಿಸುವಂತಾಗಿದೆ'.

ಒಂದೊಂದಾಗಿ ಈ ಅಂಶಗಳ ಕುರಿತು ಚರ್ಚಿಸುವ ಮುನ್ನ ಒಂದನ್ನು ನೆನಪಿನಲ್ಲಿಟ್ಟುಕೊಳ್ಳಬೇಕಿದೆ. ನಾವಾಡುವ ಮಾತುಗಳಿಗೆ ಒಂದು ತರ್ಕವಿರಬೇಕು, ನಮ್ಮದು ಕೇವಲ 'ಫೀಲಿಂಗ್' ಅನ್ನುವವರೂ ಸಹ ಈ ಫೀಲಿಂಗ್‌ನ ಹಿಂದಿನ ತರ್ಕವೇನು ಎಂಬುದನ್ನು ಹುಡುಕಿಕೊಂಡು ಎದುರಿಗಿರುವವರಿಗೆ ಸಮಾಧಾನವಾಗಿ ಅರ್ಥ ಮಾಡಿಸಲು ಪ್ರಯತ್ನಿಸಬೇಕು. ಹಾಗೆಯೇ ಎದುರಿಗಿರುವವರ ಮಾತು ಅಥವಾ ಫೀಲಿಂಗ್‌ನ ಹಿಂದೆಯೂ ಏನಾದರೂ ಕಾರಣಗಳಿರಬಹುದಾ ಎಂತಲೂ ಯೋಚಿಸಬೇಕು. ಆನಂತರ ನಮ್ಮ ಅಭಿಪ್ರಾಯವನ್ನು ಅವರಿಗೆ ಮನವರಿಕೆ ಮಾಡಿಕೊಡುವ ಅಂಶಗಳನ್ನು ಮುಂದಿಡಬೇಕು. ಇಲ್ಲದಿದ್ದರೆ ಏನಾಗುತ್ತದೆ? ಇಲ್ಲದಿದ್ದರೆ ಟಿವಿ ಚರ್ಚೆಯಾಗುತ್ತದೆ.

ಸಾರಿಗೆ ಕಾರ್ಮಿಕರು ಇದ್ದಕ್ಕಿದ್ದಂತೆ ಮುಷ್ಕರ ಮಾಡಿಬಿಟ್ಟರೇ? ಹಾಲಿ ಮುಷ್ಕರಕ್ಕೆ ಕರೆ ನೀಡಿರುವ ಮೂರು ಯೂನಿಯನ್‌ಗಳ ಜಂಟಿ ಸಮಿತಿಯು ಇದನ್ನು ಈಗಾಗಲೇ ಸ್ಪಷ್ಟಪಡಿಸಿದೆ. ಈ ಸಾರಿಯ ಮುಷ್ಕರದ ಪ್ರಮುಖ ಹಕ್ಕೊತ್ತಾಯ ವೇತನ ಪರಿಷ್ಕರಣೆಯದ್ದು. ನಿಯಮಗಳ ಪ್ರಕಾರ ವೇತನ ಪರಿಷ್ಕರಣೆಯು ನಿಗದಿತ ಅವಧಿಗೊಮ್ಮೆ ಕಾರ್ಮಿಕ ಸಂಘಟನೆಗಳು, ಆಡಳಿತ ಮಂಡಳಿಯ ನಡುವೆ ದ್ವಿಪಕ್ಷೀಯ ಒಪ್ಪಂದವಾಗಿ ಅಥವಾ ಕಾರ್ಮಿಕ ಅಧಿಕಾರಿಯನ್ನೂ ಒಳಗೊಂಡಂತೆ ತ್ರಿಪಕ್ಷೀಯ ಒಪ್ಪಂದವಾಗಿ ಜಾರಿಗೆ ಬರಬೇಕು. ಇದನ್ನು ಕಳೆದ 20 ವರ್ಷಗಳಿಂದ ಸಾರಿಗೆ ಸಂಸ್ಥೆಯ ಆಡಳಿತವು ಉಲ್ಲಂಘಿಸುತ್ತಾ ಬಂದಿದೆ. ಇರುವ ಹಲವು ಕಾರ್ಮಿಕ ಸಂಘಟನೆಗಳಲ್ಲಿ ಯಾವುದರ ಜೊತೆ ಈ ಒಪ್ಪಂದ ಆಗಬೇಕು ಎಂಬುದನ್ನು ನಿರ್ಧರಿಸಲು ಒಂದು ಚುನಾವಣೆಯನ್ನೂ ಆಡಳಿತ ಮಂಡಳಿಯು ನಡೆಸಬೇಕು. ಅದನ್ನೂ ಮಾಡದೇ, ಕಾರ್ಮಿಕ ಸಂಘಗಳಿಗೆ ಮಾನ್ಯತೆ ನೀಡದೇ ತನಗಿಷ್ಟ ಬಂದ ರೀತಿಯಲ್ಲಿ ಕಾರ್ಯನಿರ್ವಹಿಸುತ್ತಾ ಬರುತ್ತಿದೆ. ಇವೆಲ್ಲವೂ ನಿಯಮಗಳಿಗೆ ವಿರುದ್ಧವಾದುದು. ಈ ದೇಶದ ಕಾನೂನು ಕಾರ್ಮಿಕರಿಗೆ ನೀಡಿರುವ ಸಂವಿಧಾನಬದ್ಧ ಹಕ್ಕುಗಳನ್ನು ಉಲ್ಲಂಘಿಸುವಂತಹದ್ದು.

1,25,000 ಕಾರ್ಮಿಕರಿರುವ ಒಂದು ಬೃಹತ್ ಸಂಸ್ಥೆಯಲ್ಲಿ ಆಡಳಿತ ಮಂಡಳಿಯು ಒಂದೇ ಸಂಘಟನೆಯ ಜೊತೆ ಮಾತುಕತೆ ನಡೆಸುತ್ತಾ ಶಾಂತಿ - ಸೌಹಾರ್ದತೆಯನ್ನು ಕಾಪಾಡಿಕೊಂಡು ಬರುವುದು ಹೇಗಿರುತ್ತದೆ? ದಬ್ಬಾಳಿಕೆ, ದೌರ್ಜನ್ಯಗಳೂ ಹೇರಳವಾಗಿರುವ ಮತ್ತು ನಿತ್ಯದ ಒತ್ತಡಗಳಲ್ಲಿ ಕೆಲಸ ಮಾಡುವ ಲಕ್ಷಾಂತರ ಕಾರ್ಮಿಕರನ್ನು ಅಡ್ಡಾದಿಡ್ಡಿ ನಿಭಾಯಿಸುವುದು ಹೇಗಿರುತ್ತದೆ? ಅಂದರೆ, ಕಾರ್ಮಿಕರ ಹಕ್ಕಿನ ಪ್ರಶ್ನೆ ಪಕ್ಕಕ್ಕಿರಲಿ; ಈ ಸಂಸ್ಥೆಯನ್ನು ಸುಸೂತ್ರವಾಗಿ ನಡೆಸಿಕೊಂಡು ಹೋಗಲೂ ಸಹ ಇದರ ಅಗತ್ಯವಿತ್ತು. ಅದನ್ನೂ ಆಡಳಿತ ಮಂಡಳಿ ಮಾಡಲಿಲ್ಲ. ತನ್ನ ಕಾನೂನುಗಳನ್ನು ತಾನೇ ಪಾಲಿಸದ ಸರ್ಕಾರದ ನೇರ ಸುಪರ್ದಿಯಲ್ಲಿರುವ, ಅದಕ್ಕೆಂದೇ ಒಬ್ಬ ಮಂತ್ರಿಯೂ ಇರುವ ಸಂಸ್ಥೆಯ ಪಾಡೇ ಹೀಗಾದರೆ ಹೇಗೆ? ಅಂದರೆ, ಉಲ್ಲಂಘನೆ ಆಡಳಿತ ಮಂಡಳಿಯಿಂದಲೇ ಆಗಿದೆ. ಅದು, ಈವರೆಗೂ ಆಡಳಿತ ನಡೆಸಿರುವ ಮೂರೂ ಪ್ರಮುಖ ರಾಜಕೀಯ ಪಕ್ಷಗಳ ಕಡೆಯಿಂದಲೂ ಆಗಿದೆ.



ಹಾಗೆ ನೋಡಿದರೆ, ಕಾರ್ಮಿಕ ಸಂಘಟನೆಗಳು ಎಲ್ಲಿಲ್ಲದ ಸಂಯಮ ತೋರಿವೆ. ಈ ಸಾರಿಯ ವೇತನ ಪರಿಷ್ಕರಣೆಯ ಅವಧಿ ಡಿಸೆಂಬರ್ 31ಕ್ಕೆ ಮುಗಿಯುತ್ತಿದ್ದುದರಿಂದ, ಎಐಟಿಯುಸಿ ನೇತೃತ್ವದ ಯೂನಿಯನ್ 5ನೇ ನವೆಂಬರ್ 2015ರಂದು ತನ್ನ ಹಕ್ಕೊತ್ತಾಯಗಳನ್ನು ಲಿಖಿತ ರೂಪದಲ್ಲಿ ಆಡಳಿತ ಮಂಡಳಿಗೆ ನೀಡಿತ್ತು, ಕೆ.ಎಸ್.ಶರ್ಮಾ ಅವರ ನೇತೃತ್ವದ ಮಹಾಮಂಡಳ ತನ್ನ ಹಕ್ಕೊತ್ತಾಯಗಳನ್ನು ನೀಡಿದ್ದು 13ನೇ ಡಿಸೆಂಬರ್ 2015ರಂದು. ಡಿಸೆಂಬರ್ 31ರ ಒಳಗೆ ಆಡಳಿತ ಮಂಡಳಿಯೂ ಏನೂ ಮಾಡಲಿಲ್ಲ. ಈ ಮಧ್ಯೆ ಸರ್ಕಾರವು ಏನೋ ಮಾಡಲು ಹೊರಟಿದೆ ಎಂಬ ಸುಳಿವು ಸಿಕ್ಕಿದ್ದರಿಂದ, ಮಹಾಮಂಡಳವು ಏಪ್ರಿಲ್ 22ರಂದು ಒಂದು ಪತ್ರ ಬರೆದು ಏಕಪಕ್ಷೀಯ ವೇತನ ಪರಿಷ್ಕರಣೆ ಮಾಡಬಾರದೆಂದೂ, ಹಾಗೆ ಮಾಡಿದರೆ, ನಾವು ಅನಿವಾರ್ಯವಾಗಿ ಮುಂದಿನ ಹೋರಾಟಕ್ಕಿಳಿಯ ಬೇಕಾಗುತ್ತದೆಂದೂ ತಿಳಿಸಿದ್ದಾರೆ. ಮಹಾಮಂಡಳವು 13ನೇ ಜೂನ್ 2016ರಂದು ಮತ್ತೊಂದು ನೋಟಿಸನ್ನೂ ನೀಡಿ ಎಚ್ಚರಿಸಿತ್ತು.

ಇಷ್ಟೆಲ್ಲಾ ಆಗಿದ್ದರೂ 29ನೇ ಜೂನ್ 2016ರಂದು ರಾಜ್ಯ ಸಚಿವ ಸಂಪುಟದಲ್ಲಿ ಒಂದು ಏಕಪಕ್ಷೀಯ ತೀರ್ಮಾನವನ್ನು ಸರ್ಕಾರವು ಮಾಡಿತು. ಅದು ಸರ್ಕಾರೀ ಸಾರಿಗೆ ನೌಕರರಿಗೆ 8% ವೇತನ ಹೆಚ್ಚಳದ ನಿರ್ಣಯ. ಕಾಕತಾಳೀಯವಾಗಿ ಅದೇ ದಿನ ಕೇಂದ್ರ ಸರ್ಕಾರವು ತನ್ನ ನೌಕರರಿಗೆ 23.55%ರಷ್ಟು ವೇತನ ಹೆಚ್ಚಳ ಮಾಡಿತು ಮತ್ತು ಕನಿಷ್ಠ ವೇತನವನ್ನು 7,000 ರೂ.ಗಳಿಂದ 18,000 ರೂ.ಗಳಿಗೆ ಏರಿಸಿತು. ವಾಸ್ತವದಲ್ಲಿ ಕೇಂದ್ರ ಸರ್ಕಾರದ ಈ ಕ್ರಮವೇ ಸರಿಯಿಲ್ಲವೆಂದು ಕೇಂದ್ರ ಸರ್ಕಾರೀ ನೌಕರರ ಸಂಘಟನೆಗಳು ಪ್ರತಿಭಟಿಸುತ್ತಿವೆ. ಇದು ಇತ್ತೀಚಿನ ದಶಕಗಳಲ್ಲಿ ಕೇಂದ್ರ ಸರ್ಕಾರದ ಕಡೆಯಿಂದ ಆಗಿರುವ ಅತ್ಯಂತ ಕಡಿಮೆ ವೇತನ ಏರಿಕೆಯಾಗಿದೆ! ಬಿಎಸ್‌ಎನ್‌ಎಲ್ ತನ್ನ ಪಿಂಚಣಿದಾರರಿಗೇ ಶೇ.9ರಷ್ಟು ಹೆಚ್ಚಳವನ್ನು ಘೋಷಿಸಿದೆ. ಕರ್ನಾಟಕದ ಹಾಲಿ ಸರ್ಕಾರೀ ನೌಕರರಿಗೆ ಅದಕ್ಕಿಂತ ಕಡಿಮೆ.

ಸಹಜವಾಗಿ ಇದನ್ನು ಸಾರಿಗೆ ನೌಕರರ ಸಂಘಟನೆಗಳು ಖಂಡಿಸಿದವು. ಆಗ ಇದ್ದಕ್ಕಿದ್ದಂತೆ ಬೀದಿಗಿಳಿದವೇ? ಇಲ್ಲ, ಜುಲೈ 3ರಂದು ಅಧಿಕೃತವಾಗಿ ಮುಷ್ಕರದ ನೋಟಿಸನ್ನು ನೀಡಿದವು. ನೋಟಿಸನ್ನು ನಿಯಮಗಳಿಗನುಗುಣವಾಗಿ ಕೈಗಾರಿಕಾ ವ್ಯಾಜ್ಯ ಕಾಯ್ದೆಯ ನಿಯಮ 71ರ ಕೆಳಗೆ ಫಾರಂ ಎಲ್‌ನಲ್ಲಿ ನೀಡಲಾಗಿದೆ. ಜುಲೈ 25ರಿಂದ ಮುಷ್ಕರ ನಡೆಸುವುದಾಗಿಯೂ ಅವರು ಮೊದಲೇ ತಿಳಿಸಿದ್ದರು. ಮೇಲಿನಂತೆ ಎಲ್ಲಾ ಪ್ರಕ್ರಿಯೆಗಳನ್ನೂ ನಿಯಮಬದ್ಧವಾಗಿ ಮಾಡಿದ್ದ ಎರಡು ಯೂನಿಯನ್‌ಗಳು ಮತ್ತು ಒಂದು ಎಸ್.ಸಿ., ಎಸ್.ಟಿ. ಯೂನಿಯನ್ ಜೊತೆಗೂಡಿ ಒಂದು ಜಂಟಿ ಸಮಿತಿ ಮಾಡಿಕೊಂಡು, ಅದರಿಂದಲೇ ಮುಷ್ಕರದ ನೋಟಿಸನ್ನು ನೀಡಲಾಗಿತ್ತು, ಸರ್ಕಾರವು ಇದಕ್ಕೆ ಸ್ಪಂದಿಸಲೇ ಇಲ್ಲ. ಇನ್ನೇನು ಮುಷ್ಕರದ ದಿನ ಹತ್ತಿರ ಬಂದಿತು ಎನ್ನುವಾಗ ಕಾಟಾಚಾರಕ್ಕೆ ಸಂಘಟನೆಗಳ ಸಭೆ ಕರೆಯಿತು ಮತ್ತು ವೇತನವನ್ನು ಶೇ.10ರಷ್ಟಕ್ಕೆ ಏರಿಸುವುದಾಗಿ ತಿಳಿಸಿತು.

ಇದನ್ನು ಕಾರ್ಮಿಕ ಸಂಘಟನೆಗಳು ಒಪ್ಪಬೇಕಿತ್ತೇ? ಅಥವಾ ಕೆಲವು ಚಾನೆಲ್ ಮುಖ್ಯಸ್ಥ ಖಾಜಿಗಳು ಮಾಡುತ್ತಿರುವ 'ನ್ಯಾಯ ಪಂಚಾಯ್ತಿ'ಯಲ್ಲಿ ನೀಡುತ್ತಿರುವ 'ತೀರ್ಪಿ'ನಂತೆ 15%ಗೋ 20%ಗೋ ಒಪ್ಪಬೇಕೇ? ನಿಯಮಬದ್ಧವಾಗಿ ತಮ್ಮೊಡನೆ ಚರ್ಚಿಸಿ ಒಪ್ಪಂದ ಮಾಡಿಕೊಳ್ಳಿ ಎಂದು ಕಾರ್ಮಿಕ ಸಂಘಟನೆಗಳು ಕೇಳಿದ್ದೂ ನ್ಯಾಯಯುತವಾಗಿತ್ತು. ಹೋಗಲಿ, ಅದನ್ನು ಬಿಡೋಣ. ಆದರೆ, 35% ಹೆಚ್ಚಳ ಆಗಬೇಕು ಎಂದು ಕಾರ್ಮಿಕರು ಕೇಳಿದ್ದು ತಪ್ಪಾಗಿತ್ತೇ? ಪ್ರತೀ ವರ್ಷವೂ ಮೂಲವೇತನದ ಜೊತೆಗೆ ಡಿ.ಎ. ಸೇರಿಸಿ ಕೊಡುತ್ತಾರಾದರೂ, ಈ ಡಿ.ಎ ಅಥವಾ ತುಟ್ಟಿಭತ್ಯೆಯು ಎಂದೂ ನಿಜವಾದ ಬೆಲೆ ಹೆಚ್ಚಳಕ್ಕೆ ತಕ್ಕಂತೆ ಇರುವುದಿಲ್ಲ. ಒಟ್ಟಾರೆ ಹೆಚ್ಚಾಗುತ್ತಿರುವ ಹಣದುಬ್ಬರ ಈ ತುಟ್ಟಿಭತ್ಯೆ ನಿಗದಿ ಮಾಡುವುದಕ್ಕೆ ಒಂದು ಮಾನದಂಡವಾದರೂ, ಅದು ಮನುಷ್ಯರ ಬದುಕಿನ ಎಲ್ಲಾ ಅಗತ್ಯಗಳನ್ನೂ ಗಣನೆಗೆ ತೆಗೆದುಕೊಳ್ಳುವುದಿಲ್ಲ. ಆ ವಿವರಗಳಿಗೆ ಹೋಗದೇ, ಕೇವಲ ಹಣದುಬ್ಬರದ ಅಂಶವನ್ನು ಪರಿಗಣಿಸೋಣ. 2011ರಲ್ಲಿ 8.9%, 2012ರಲ್ಲಿ 9.3%, 2013ರಲ್ಲಿ 10.9%, 2014ರಲ್ಲಿ 6.4%, 2015ರಲ್ಲಿ 5.88% ಮತ್ತು 2016ರಲ್ಲಿ 5.88% ನಷ್ಟು ಹಣದುಬ್ಬರ ವಿತ್ತು ಎಂದು ಸರ್ಕಾರವೇ ಹೇಳುತ್ತದೆ. ಈ ಪ್ರಮಾಣದ ಹಣದುಬ್ಬರ ಏರುತ್ತಿರುವಾಗ ಅದಕ್ಕೆ ತಕ್ಕಂತೆ ಮೂಲವೇತನದಲ್ಲಿ ಹೆಚ್ಚಳವಾಗದಿದ್ದರೆ, ಕಾರ್ಮಿಕರ ವೇತನ ಕುಸಿಯುತ್ತಿದೆ ಎಂದೇ ಅರ್ಥ. ಇದನ್ನು 'ನಿಜವಾದ ವೇತನ ಹೆಚ್ಚಳ' (Real wage increase) ಎಂದು ಕರೆಯುತ್ತಾರೆ. ಅಂದರೆ, ಕೆಎಸ್‌ಆರ್‌ಟಿಸಿ ನೌಕರರಿಗೆ ನಿಜವಾದ ವೇತನ ಹೆಚ್ಚಳ ಆಗಿಯೇ ಇಲ್ಲ ಎಂದು ಇದರ ಅರ್ಥ.

ಪರಿಸ್ಥಿತಿ ಹೀಗಿರುವಾಗ ಸರ್ಕಾರವು 8% ಯಾಕೆ ಅಥವಾ 10% ಯಾಕೆ ಎಂಬುದನ್ನು ವಿವರಿಸುವ ಗೋಜಿಗೆ ಹೋಗದೇ, ಸುಮ್ಮನೇ ಒಪ್ಪಿಕೊಳ್ಳಿ ಎಂದು ಹೇಳುವುದು ಸರಿಯೇ? ಕಳೆದ 5 ವರ್ಷಗಳಲ್ಲಿ ಕರ್ನಾಟಕ ರಾಜ್ಯ ಸಾರಿಗೆ ದರ ಶೇ.50ರಷ್ಟು ಹೆಚ್ಚಾಗಿದೆ. ಅದಕ್ಕೆ ಡೀಸೆಲ್ ಬೆಲೆಯಲ್ಲಿ ಏರಿಕೆಯಾದದ್ದೇ ಕಾರಣ ಎಂದು ಹೇಳಲಾಗಿತ್ತು. ಸಾರಿಗೆ ಸಂಸ್ಥೆಯ ಒಟ್ಟಾರೆ ಖರ್ಚಿನಲ್ಲಿ ಹೆಚ್ಚುಕಡಿಮೆ ಅರ್ಧದಷ್ಟು ಸಿಬ್ಬಂದಿಯ ವೇತನ ಮತ್ತು ಭತ್ಯೆಗಳಿಗೇ ಹೋಗುತ್ತಿದೆಯೆಂದು ಈಗ ಹೇಳುತ್ತಿದ್ದಾರೆ. ಹಾಗಾದರೆ, 10% ಡೀಸೆಲ್ ಬೆಲೆ ಏರಿಕೆಗೆ 10% ಟಿಕೆಟ್ ದರ ಏಕೆ ಏರಿಸಲಾಯಿತು? ಆಗ ಪ್ರಯಾಣಿಕರ ಮೇಲೆ ಹೆ ಹಾಕಲು ಡೀಸೆಲ್ ಬೆಲೆ ಏರಿಕೆ ಕಾರಣ ಕೊಟ್ಟ ಸರ್ಕಾ ಡೀಸೆಲ್ ಬೆಲೆ ಇಳಿದಾಗ ಮಾತ್ರ ಟಿಕೆಟ್ ದರ ಇಳಿಸ ಈಗಲೂ ಸಹ ಸಿಬ್ಬಂದಿಯ ಸಂಬಳವನ್ನು ಏರಿಸಿ ಟಿಕೆಟ್ ದರ ಏರಿಸಿದರೆ ಅದು ಪ್ರಯಾಣಿಕರಿಗೆ ಮಾಡ ಮೋಸವಾಗಿರುತ್ತದೆ. ಏಕೆಂದರೆ, ಒಟ್ಟಾರೆ ಖರ್ಚಿನಲ್ಲಿ ವೇ ಭತ್ಯೆಗಳೇ ಶೇ.50ರಷ್ಟಿದೆ ಎಂದರೆ ಮತ್ತು ಕಳೆದ ವರ್ಷಗಳಲ್ಲಿ ಟಿಕೆಟ್ ದರವನ್ನೂ ಶೇ.50ರಷ್ಟು ಏರಿಸಿ ದರಿಂದ, ಕಾರ್ಮಿಕರ ವೇತನದಲ್ಲೂ (ಟಿಕೆಟ್ ಏರಿಸದೆಯೂ) ಶೇ.50ರಷ್ಟು ಏರಿಕೆಯಾಗಬೇಕು. ಹಾ ತಮಗೆ ಕಾರ್ಮಿಕರ ವೇತನಕ್ಕಿಂತ ಇತರ ಖರ್ಚು ಹ ಎನ್ನುವುದಾದರೆ, ಆ ಇತರ ಖರ್ಚಿನ ವಿವರವನ್ನು ಸರಿಯ ಕೊಡಬೇಕು. ಅನುಕೂಲಸಿಂಧು ವಾದಗಳನ್ನು 'ಮಾ ಉದ್ಯೋಗದಾತ' ಆಗಿರಬೇಕಾದ ಸರ್ಕಾರವು ಮಾಡಬಾರ

ಇನ್ನು ಎರಡನೆಯದಾಗಿ, ಕಾರ್ಮಿಕ ಸಂಘಟನೆ ಒಟ್ಟು 44 ಹಕ್ಕೊತ್ತಾಯಗಳನ್ನು ಮುಂದಿಟ್ಟಿವೆ. ಅವುಗ ಕೆಲವು ಈ ರೀತಿ ಇವೆ. ಮೂಲವೇತನ ಶೇ.35ರ ಹೆಚ್ಚಿಸುವುದು ಮತ್ತು ಸರ್ವೀಸ್ ವೈಟೇಜ್. 31.12.20 ಕ್ಕೆ ನೌಕರರಾಗಿರುವ ಎಲ್ಲಾ ದಿನಗೂಲಿ, ಇತ್ಯಾದಿ ತಾತ್ಕಾ ಕಾರ್ಮಿಕರನ್ನು ಕಾಯಂ ನೌಕರರೆಂದು ಪರಿಗಣಿಸಬೇ ಇಎಸ್‌ಐ ವ್ಯಾಪ್ತಿಗೆ ತರುವುದು ಮತ್ತು ಆರೋಗ್ಯ ಭ ಮಹಿಳೆಯರಿಗೆ ವಿಶ್ರಾಂತಿ ಗೃಹ, ಕಿರುಕುಳ ತಪ್ಪಬೇ ಮೆಕ್ಯಾನಿಕ್‌ಗಳಿಗೆ ಸೋಪು ಮತ್ತು ಗುಣಮಟ್ಟದ ವೇ ಕೊಡುವುದು. ಹೊರಗೆ ತಂಗುವ ಸಿಬ್ಬಂದಿಗೆ ವಿಶ್ರಾ ಗೃಹ. ಕಾರ್ಮಿಕರ ಮೇಲೆ ನಡೆಯುತ್ತಿರುವ ಹಲವು ಬಗೆ ದೌರ್ಜನ್ಯ ಮತ್ತು ದಬ್ಬಾಳಿಕೆಗಳನ್ನು ನಿಲ್ಲಿಸುವುದು.

ಮಹಿಳೆಯರಿಗೆ ವಿಶ್ರಾಂತಿ ಗೃಹ ಒದಗಿಸುವು ಹೊರಗೆ ತಂಗುವ ಸಿಬ್ಬಂದಿಗೆ ವಿಶ್ರಾಂತಿ ಗೃಹ ಒದಗಿಸುವ ಕಾನೂನುಪ್ರಕಾರ ಕಡ್ಡಾಯವಾದುದು. ಅವೂ ಸಹ ಮುಷ್ಕ ಹಕ್ಕೊತ್ತಾಯಗಳಾಗಬೇಕಾದ ಸಂದರ್ಭವನ್ನು ಇಲಾಖೆಯು ತಂದಿದೆ! ಇನ್ನು ಎಲ್ಲಾ ಕಾರ್ಮಿಕರಿಗ ಅದರಲ್ಲೂ ಮಹಿಳಾ ಕಾರ್ಮಿಕರಿಗೆ ನೀಡಲಾಗುತ್ತಿರ ಕಿರುಕುಳ ಮತ್ತು ದಬ್ಬಾಳಿಕೆಗಳದ್ದೇ ಇನ್ನೊಂದು ದೊ ಕಥೆ. ಈ ಇಲಾಖೆಯಲ್ಲಿ ಕಾರ್ಮಿಕರು ಸಿಡಿದೆದ್ದು ಮೇಲಧಿಕಾರಿಗಳ ಮೇಲೆ ಹಲ್ಲೆ ನಡೆಸದೇ ಇರುವು ಆಶ್ಚರ್ಯವೆನ್ನುವಷ್ಟು ಪ್ರಮಾಣದಲ್ಲಿ ಇಲ್ಲಿ ದಬ್ಬಾಳಿಕೆ ಇ ಸುಮಾರು 15 ವರ್ಷಗಳ ಕಾಲ ತೀವ್ರ ಹಿನ್ನಡೆಗೊಳಗಾ ಕರ್ನಾಟಕ ಸಾರಿಗೆ ನೌಕರರ ಚಳವಳಿಯು 2012 ಇದ್ದಕ್ಕಿದ್ದಂತೆ ಭಾರೀ ಐಕ್ಯತೆಯೊಂದಿಗೆ ಮೇಲೆದ್ದು ಬಂದಿ ಈ ದಬ್ಬಾಳಿಕೆಯ ಕಾರಣಕ್ಕೇನೇ.

ಆ ಸಂದರ್ಭದಲ್ಲಿ ಸರ್ಕಾರವು ವೇತನವ ಹೊರತುಪಡಿಸಿದ ಇತರ ಹಕ್ಕೊತ್ತಾಯಗಳ ಪರಿಶೀಲಿಸಲು, ಸಂಘಟನೆಗಳ ಪ್ರತಿನಿಧಿಗಳನ್ನೊಳಗೊಂ ಒಂದು ಉನ್ನತ ಮಟ್ಟದ ಸಮಿತಿ ರಚಿಸುವುದಾಗಿ ಹೇಳಿ ಅದು ಇದುವರೆಗೂ ಕೆಲಸ ಮಾಡಿಲ್ಲ. ಕಾರ್ಮಿ ಮೇಲಾಗುವ ದೌರ್ಜನ್ಯ ತಡೆಗೆ ಒಂದು ಸೂಕ್ತವಾ ಯಂತ್ರಾಂಗವನ್ನು ರೂಪಿಸಿಲ್ಲ. ದಕ್ಷಿಣ ಭಾರತದಲ್ಲೇ ಅತ್ಯ ಹೆಚ್ಚು ಬಸ್ ಪ್ರಯಾಣ ದರ ನಿಗದಿಪಡಿಸಿರುವ ರಾ ಸಾರಿಗೆ ಸಂಸ್ಥೆಯು, ಅತ್ಯಂತ ಕಡಿಮೆ ವೇತನವನ್ನು ತ ನೌಕರರಿಗೆ ನೀಡುತ್ತದೆ.

ಇವೆಲ್ಲಾ ಕಾರಣಗಳಿಂದ ಈಗ ನಡೆಯುತ್ತಿರುವ ಸಾರಿ ನೌಕರರ ಮುಷ್ಕರವು ಅತ್ಯಂತ ನ್ಯಾಯೋಚಿತವಾಗಿದೆ. ಒಂ ವೇಳೆ ನೌಕರರ ಸಂಘಟನೆಗಳು ಶೇ.15 ಅಥವಾ ಶೇ.20ರ ವೇತನ ಹೆಚ್ಚಳಕ್ಕೆ ಒಪ್ಪಿಗೆ ಸೂಚಿಸಿದರೂ, ಸಂಪೂರ್ಣ ನ್ಯಾಯ ಒದಗಿಸಿದಂತೆ ಆಗುವುದಿಲ್ಲ. ಈ ಮುಷ್ಕರ ಬೆಂಬಲ ಸೂಚಿಸುವುದು ನಮ್ಮೆಲ್ಲರ ಕರ್ತವ್ಯವಾಗಿ ಸಾರ್ವಜನಿಕರಿಗೆ ತೊಂದರೆ ಆಗುತ್ತಿದೆ ಎಂದು ಹೇಳುವವ ಸಾರಿಗೆ ನೌಕರರೂ ಸಾರ್ವಜನಿಕರೇ ಆಗಿದ್ದಾರೆಂಬುದ ಮರೆಯಬಹುದೇ?

ಕಡೆಯದಾಗಿ ಒಂದು ಮಾತು. ಈ ಎಲ್ಲಾ ಅಂಶಗಳ ಇತರ ಸಾರ್ವಜನಿಕರಿಗೂ ತಿಳಿಸುವುದಕ್ಕೆ ಸಾರಿಗೆ ನೌಕರ ಸಂಘಟನೆಗಳೂ ದಾರಿಗಳನ್ನು ಹುಡುಕಬೇಕಿತ್ತು. ಪ್ರತಿನ ಕೋಟ್ಯಾಂತರ ಸಾರ್ವಜನಿಕ ಪ್ರಯಾಣಿಕರ ಜೊ ವ್ಯವಹರಿಸುವ ಲಕ್ಷಾಂತರ ಕಾರ್ಮಿಕ ಸದಸ್ಯರ ಹೊಂದಿರುವ ಈ ಸಂಘಟನೆಗಳಿಗೆ ಅದು ಕಷ್ಟವಾ ಆಗಿರಲಿಲ್ಲ. ಮುಂದಿನ ದಿನಗಳಲ್ಲಾದರೂ ಅದನ್ನು ಮಾಡ ಎಂದು ಆಶಿಸೋಣ. ಹಾಗೆಯೇ ಈ ಕಾರ್ಮಿಕರ ಜೊತ ನಿಲ್ಲಬೇಕಾದ ನಮ್ಮ ಕರ್ತವ್ಯವನ್ನೂ ಮರೆಯದಿರೋ ಅಲ್ಲವೇ?

ಬೆಂಗಳೂರು ನಗರದ ರೋಚಕ ಇತಿಹಾಸ



• ಗೌರಿ ಲಂಕೇಶ್
editorlankesh@gmail.com

"ಭಾರತೀಯ ರಾಜಕೀಯ ಸಂಚುಗಳಲ್ಲಿ ಬೆಂಗಳೂರು ನಗರ ಹಲವಾರು ಬಾರಿ ಚದುರಂಗದಾಟದ ಪಾನ್ ತರಹ ಬಳಕೆ ಆಗಿರುವುದು ಕುತೂಹಲಕಾರಿಯಾಗಿದೆ. ಕೆಂಪೇಗೌಡ ಈ ನಗರವನ್ನು ನಿರ್ಮಿಸಿದರು. ಬಿಜಾಪುರದ ಸುಲ್ತಾನರು ಅದನ್ನು ಜಯಿಸಿದರು. ಮೊಘಲರು ಅದನ್ನು ಮಾರಿದರು. ಮೈಸೂರಿನ ಚಿಕ್ಕದೇವರಾಜ ಒಡೆಯರು ಅದನ್ನು ಖರೀದಿಸಿದರು. ಒಮ್ಮೆ ಅದು ಮರಾಠ ಶಾಹಜಿ ಬೋನ್ಸ್ಲೆ ಅವರ ಜಹಗೀರ್ ಆಗಿದ್ದರೆ, ಇನ್ನೊಮ್ಮೆ ಅದು ಮುಸಲ್ಮಾನ ಹೈದರನ ಜಹಗೀರ್ ಆಗಿತ್ತು. ಬ್ರಿಟಿಷರ ಕಾಲದಲ್ಲಿ ಅದು 'ಭಾರತದ ಚಿಕ್ಕ ಇಂಗ್ಲೆಂಡ್' ಆಗಿತ್ತು..." ಹೀಗೆ ಬೆಂಗಳೂರಿನ ಬಗ್ಗೆ ಬರೆದದ್ದು ಮಾಜಿ ರಾಜ್ಯಪಾಲ ಧರ್ಮವೀರ. ಅವರು ಎಂ. ಫಜ್ಲುಲ್ ಹಸನ್ ಎಂಬುವವರು ಈ ನಗರದ ಇತಿಹಾಸ ಕುರಿತಂತೆ ಬರೆದಿದ್ದ ಪುಸ್ತಕದ ಮುನ್ನುಡಿಯಲ್ಲಿ ಈ ಮಾತುಗಳನ್ನು ಆಡಿದ್ದರು.


1970ರಲ್ಲಿ ಪ್ರಕಟಗೊಂಡಿದ್ದ 'ಬೆಂಗಳೂರ್ ಥ್ರೂ ದ ಸೆಂಚುರೀಸ್' ಎಂಬ ಆ ಪುಸ್ತಕ ನನ್ನ ಅಚ್ಚುಮೆಚ್ಚಿನ ಪುಸ್ತಕಗಳಲ್ಲಿ ಒಂದಾಗಿತ್ತು. ಆದರೆ ನಾನು ಖರೀದಿಸಿದ್ದ ಆ ಪುಸ್ತಕದ ಪ್ರತಿಗಳನ್ನೆಲ್ಲ ಕಳೆದುಕೊಂಡು ಅದೆಷ್ಟೋ ದಶಕಗಳಾಗಿದ್ದವು. ಅದರ ಪ್ರತಿಗಳು ಎಲ್ಲೂ ಲಭ್ಯವಿರಲಿಲ್ಲ. ಇತ್ತೀಚೆಗೆ ಮುಂಬೈನಿಂದ ಬಂದಿದ್ದ ಜ್ಯೋತಿ ಎಂಬ ಪತ್ರಕರ್ತೆ ಬೆಂಗಳೂರಿನ ಬಗ್ಗೆ ಸಂಶೋಧನೆ ನಡೆಸುತ್ತಿದ್ದಳು. "ಈ ನಗರ ಕುರಿತಂತೆ ಅತ್ಯುತ್ತಮ ಪುಸ್ತಕ ಹಸನ್ ಅವರು ಬರೆದಿದ್ದದ್ದು. ಆದರೀಗ ಅದು ಎಲ್ಲೂ ಸಿಗುತ್ತಿಲ್ಲ" ಎಂದು ನಾನು ಆಕೆಗೆ ಹೇಳಿದೆ. ಹಲವು ದಿನಗಳ ನಂತರ ಆಕೆ ಫೋನ್ ಮಾಡಿ, "ಪುಸ್ತಕದ ಪಿಡಿಎಫ್ ಪ್ರತಿ ಸಿಕ್ಕಿದೆ. ನಿಮಗೊಂದು ಪ್ರತಿ ಬೇಕೆ?" ಎಂದು ಕೇಳಿದಳು. "ಪ್ಲೀಸ್, ಅದನ್ನು ನನಗೆ ಈಮೇಲ್ ಮಾಡು" ಎಂದೆ. ಮೊನ್ನೆ ಅದನ್ನು ಮತ್ತೊಮ್ಮೆ ಓದಿ ರೋಮಾಂಚಿತಳಾದೆ.

ಕೆಂಪೇಗೌಡ ಈ ಪ್ರದೇಶವನ್ನು ಮೊದಲು ನೋಡಿದಾಗ ಇದೊಂದು ಕಾಡು ಆಗಿತ್ತು. ಆದರೂ ಇದೇ ತನ್ನ ರಾಜಧಾನಿ ಆಗಬೇಕೆಂದು ನಿರ್ಧರಿಸಿದ ಕೆಂಪೇಗೌಡ ಮೊದಲು ಮಾಡಿದ ಕೆಲಸ ಯಾವುದು ಗೊತ್ತಾ? ತನ್ನ ಜ್ಯೋತಿಷಿಗಳ ಸಲಹೆ ಮೇರೆಗೆ ಒಂದು ಸೂಕ್ತ ಗಳಿಗೆಯನ್ನು ಆಯ್ಕೆ ಮಾಡಿ 1537ರ ಒಂದು ದಿನ ಈಗ ದೊಡ್ಡಪೇಟೆ ಇರುವ ಸ್ಥಳದಲ್ಲಿ ಎಲ್ಲವನ್ನು ಸಜ್ಜುಮಾಡಿಸಿದ್ದ. ಒಕ್ಕಲಿಗರಾಗಿದ್ದ ಗೌಡರು ಈ ನಗರವನ್ನು ನಿರ್ಮಿಸುವ ಮೊದಲ ಹೆಜ್ಜೆಯಾಗಿ ಆಯ್ಕೆ ಮಾಡಿಕೊಂಡಿದ್ದು ನಾಲ್ಕು ಬಿಳಿ ಎತ್ತಿನ ಜೋಡಿಗಳನ್ನು. ಆ ಎತ್ತುಗಳನ್ನು ಅಲಂಕಾರಗೊಂಡಿದ್ದ ನೇಗಿಲುಗಳಿಗೆ ಕಟ್ಟಲಾಗಿತ್ತು. ಗೌಡರು ಆದೇಶ ಹೊರಡಿಸಿದ ಕೂಡಲೇ ನಾಲ್ವರು ಯುವಕರು ಆ ನಾಲ್ಕೂ ನೇಗಿಲುಗಳನ್ನು ನಾಲ್ಕು ದಿಕ್ಕಿನಲ್ಲಿ ಸಾಗಿಸುತ್ತಾ ನೆಲದ ಮೇಲೆ ನೇರವಾದ ಗೆರೆಗಳನ್ನು ಗುರುತು ಹಾಕಿದರು. ಹಾಗೆ ಮಾಡಿದ ನಂತರ ಪೂರ್ವ ದಿಕ್ಕಿನಲ್ಲಿದ್ದದ್ದನ್ನು ಚಿಕ್ಕಪೇಟೆ, ಪಶ್ಚಿಮದಲ್ಲಿದ್ದ ಪ್ರದೇಶವನ್ನು ದೊಡ್ಡ ಪೇಟೆ, ಉತ್ತರಕ್ಕಿದ್ದದ್ದನ್ನು ಹಲಸೂರು ಮತ್ತು ದಕ್ಷಿಣಕ್ಕೆ ಇದ್ದದ್ದನ್ನು ಸೊಂಡೆಕೊಪ್ಪ ಎಂದು ನಾಮಕರಣ ಮಾಡಲಾಯಿತು. ಈ ಪ್ರದೇಶಗಳೇ ನಗರದ ಹೃದಯ ಭಾಗವಾದವು. ಈ ಭಾಗದಲ್ಲಿಯೇ ಕೆಂಪೇಗೌಡ ಒಂದು ಮಣ್ಣಿನ ಕೋಟೆಯನ್ನು ಕಟ್ಟಿಸಿದ.

ವಿಜಯನಗರ ಸಾಮ್ರಾಜ್ಯದ ಸಾಮಂತನಾಗಿದ್ದ ಕೆಂಪೇಗೌಡನ ನೂತನ ನಗರ ಎಲ್ಲರ ಮೆಚ್ಚುಗೆಯನ್ನು ಪಡೆಯಲಾರಂಭಿಸಿತು. ಇದನ್ನು ಕಂಡು ಪಕ್ಕದ ಚನ್ನಪಟ್ಟಣದ ಪಾಳೆಗಾರ ಜಗದೇವ ರಾಯನ ಹೊಟ್ಟೆ ಉರಿಯಲಾರಂಭಿಸಿತು. ಆಗ ಕೆಂಪೇಗೌಡ ಒಂದು ಎಡವಟ್ಟು ಮಾಡಿಕೊಂಡ. ಆತ ತನ್ನದೇ ಆತ ನಾಣ್ಯಗಳನ್ನು -ವೀರಭದ್ರ ವರಹಗಳನ್ನು - ಟಂಕಿಸಿ ಬಿಡುಗಡೆ ಮಾಡಿದ. ಇದನ್ನು ನೋಡಿ ಜಗದೇವ ರಾಯ ವಿಜಯನಗರದ ರಾಜ ಸದಾಶಿವ ರಾಯನ ಕಿವಿ ಊದಿದ. ಕೆರಳಿದ ಸದಾಶಿವರಾಯ ಕೆಂಪೇಗೌಡನನ್ನು ಬಂಧಿಸಿ ಜೈಲಿಗೆ ಹಾಕಿದ. ಪಾಪ, ಕೆಂಪೇಗೌಡ ಐದು ವರ್ಷಗಳ ಕಾಲ ಕಂಬಿ ಎಣಿಸಬೇಕಾಯಿತು.

ಸದಾಶಿವರಾಯನ ನಂತರ ವಿಜಯನಗರದ ಸಿಂಹಾಸನವನ್ನೇರಿದ ರಾಮ ರಾಯನ ಸ್ಥಿತಿಗತಿ ಅಷ್ಟು ಚೆನ್ನಾಗಿರಲಿಲ್ಲ. ಏಕೆಂದರೆ ಅಷ್ಟು ಹೊತ್ತಿಗೆ ವಿಜಯನಗರದ ಪ್ರಭಾವ ಕರಗಿಹೋಗಿತ್ತು ಮತ್ತು ಅದರ ವಿರುದ್ಧ ಅಹಮದನಗರ, ಬಿಜಾಪುರ ಮತ್ತು ಗೋಲ್ಕೊಂಡದ ಸಾಮ್ರಾಟರು ಕತ್ತಿ ಮಸೆಯತೊಡಗಿದ್ದರು. ತನ್ನ ಸಿಂಹಾಸನವನ್ನು ಉಳಿಸಿಕೊಂಡರೆ ಸಾಕು ಎಂಬ ಸ್ಥಿತಿಯನ್ನು ತಲುಪಿದ್ದ ರಾಮ ರಾಯನು ಕೆಂಪೇಗೌಡ ಸೂಚಿಸಿದ ಪರಿಹಾರವನ್ನು ಒಪ್ಪಿಕೊಂಡ. ಆ ನಿಟ್ಟಿನಲ್ಲಿ ಕೆಂಪೇಗೌಡನಿಂದ ಹಣ ಪಡೆದ ರಾಮರಾಯ ಗೌಡನನ್ನು ಬಿಡುಗಡೆ ಮಾಡಿದ. ಕೆಂಪೇಗೌಡ ಬೆಂಗಳೂರಿಗೆ ವಾಪಸ್ ಬಂದಾಗ ಇಲ್ಲಿನ ಜನ ಆತನನ್ನು ಸಂತೋಷದಿಂದ ಅದ್ಧೂರಿಯಾಗಿ ಸ್ವಾಗತಿಸಿದರು.

ಕೆಂಪೇಗೌಡ ತನ್ನ ಪ್ರೀತಿಯ ನಗರವನ್ನು ಇನ್ನಷ್ಟು ಅಭಿವೃದ್ಧಿಪಡಿಸಲು ಶ್ರಮಿಸಿದ. ಹಲವಾರು ಕೆರೆಗಳನ್ನು, ಕಚೇರಿಗಳನ್ನು ಮತ್ತು ದೇವಸ್ಥಾನಗಳನ್ನು ನಿರ್ಮಿಸಿದ. ಆತನ ನಂತರ ಅಧಿಕಾರಕ್ಕೇರಿದ ಎರಡನೇ ಕೆಂಪೇಗೌಡನೂ ತನ್ನ ಅಪ್ಪನ ಹಾದಿಯಲ್ಲಿ ಸಾಗಿ ಬೆಂಗಳೂರಿನ ಪ್ರಖ್ಯಾತ ನಾಲ್ಕು ಗೋಪುರಗಳನ್ನು ನಿರ್ಮಿಸಿದ. ಎರಡನೆ ಕೆಂಪೇಗೌಡನೂ ತನ್ನ ತಂದೆಯಂತೆ ವೀರ ಯೋಧನಾಗಿದ್ದರೂ ಆತನ ಸೈನ್ಯ ಬಿಜಾಪುರ ಸುಲ್ತಾನರ ಸೈನ್ಯದಷ್ಟು ಬಲಿಷ್ಠವಾಗಿರಲಿಲ್ಲ. ಆ ಕಾರಣಕ್ಕೇ ಸುಲ್ತಾನನ ಸೈನ್ಯ ಬೆಂಗಳೂರಿನ ಮೇಲೆ ದಾಳಿ ಮಾಡಿದಾಗ ವಿಧಿ ಇಲ್ಲದೆ ಕೆಂಪೇಗೌಡ ಈ ನಗರವನ್ನು ಅವರಿಗೆ ಕೊಟ್ಟು ತನ್ನ ರಾಜಧಾನಿಯನ್ನು ಮಾಗಡಿಗೆ ಸ್ಥಳಾಂತರಿಸಿದ.



ವಿಚಿತ್ರವೆಂದರೆ, ಬಿಜಾಪುರದ ಮುಸಲ್ಮಾನ ಸುಲ್ತಾನನ ಸೈನ್ಯದ ನಾಯಕತ್ವವನ್ನು ವಹಿಸಿಕೊಂಡು ಬೆಂಗಳೂರಿನ ಮೇಲೆ ದಾಳಿ ಮಾಡಿದ್ದು ಶಾಹಜಿ ಬೋನ್ಸ್ಲೆ ಎಂಬಾತ. ಈತ ಬೇರೆ ಯಾರೂ ಅಲ್ಲ, ಛತ್ರಪತಿ ಶಿವಾಜಿಯ ತಂದೆ! ಬೋನ್ಸ್ಲೆಯ ಪರಾಕ್ರಮ ಕಂಡು ಹರ್ಷಿತನಾದ ಎರಡನೆ ಅಲಿ ಆದಿಲ್ ಶಾ ಬೆಂಗಳೂರನ್ನು ಆತನಿಗೆ ಜಹಗೀರ್ ಆಗಿ ನೀಡಿದ. ಆಗ ಬೋನ್ಸ್ಲೆ ತನ್ನ ಇಬ್ಬರು ಪತ್ನಿಯರನ್ನು ಮತ್ತು ಪುತ್ರರನ್ನು (ಶಿವಾಜಿ ಮೊದಲನೆ ಪತ್ನಿ ಜೀಜಾ ಬಾಯಿಯ ಪುತ್ರನಾದರೆ, ವೆಂಕೋಜಿ ಆತನ ಎರಡನೆ ಪತ್ನಿ ತುಯಾ ಬಾಯಿಯ ಪುತ್ರ) ಬೆಂಗಳೂರಿಗೆ ಕರೆಸಿಕೊಂಡು ಇಲ್ಲೇ ವಾಸ್ತವ್ಯವನ್ನು ಹೂಡಿದ. ಶಿವಾಜಿ ತನ್ನ ಬಾಲ್ಯದ ಹನ್ನೆರಡು ವರ್ಷಗಳನ್ನು ಬೆಂಗಳೂರಿನಲ್ಲೇ ಕಳೆದ.

ಬೋನ್ಸ್ಲೆ ಮರಣ ಹೊಂದಿದನಂತರ ಆತನ ಸಾಮ್ರಾಜ್ಯದ ಪೂಣೆ ಪ್ರಾಂತ್ಯವು ಶಿವಾಜಿಯ ಪಾಲಾದರೆ, ವೆಂಕೋಜಿಗೆ ಸಿಕ್ಕಿದ್ದು ಬೆಂಗಳೂರು ಪ್ರಾಂತ್ಯ. ಶಿವಾಜಿ ತರಹ ವೆಂಕೋಜಿಯೂ ಮಹಾನ್ ಶೂರನೆ. ಆತ ಸ್ಥಾಪಿಸಿದ ಸೈನ್ಯ ಅದೆಷ್ಟು ಗಟ್ಟಿಯಾಗಿತ್ತೆಂದರೆ ಆತ ತಂಜಾವೂರ್ ಸಾಮ್ರಾಜ್ಯದ ಮೇಲೆ ಯುದ್ಧ ಸಾರಿ ಅದನ್ನು ತನ್ನದಾಗಿಸಿಕೊಂಡ. ಆಮೇಲೆ ಆತ ತಂಜಾವೂರ್‌ಗೆ ಹೋಗಿ ಅಲ್ಲೇ ನೆಲೆಸಲಾರಂಭಿಸಿದ. ಆತನಿಗೆ ಏನನ್ನಿಸಿತೋ ಏನೋ, ಅಷ್ಟು ದೂರದಿಂದ ಬೆಂಗಳೂರನ್ನು ನಿಭಾಯಿಸುವುದು ಆತನಿಗೆ ಕಷ್ಟ ಅನ್ನಿಸಿದ್ದರಿಂದ ಅದನ್ನು ಬಿಕರಿ ಮಾಡಲು ನಿರ್ಧರಿಸಿದ. ಆಗ ಬೆಂಗಳೂರನ್ನು ಮೂರು ಲಕ್ಷ ರೂಪಾಯಿಗಳಿಗೆ ಖರೀದಿಸಲು ಮುಂದಾದದ್ದು ಮೈಸೂರಿನ ರಾಜ ಚಿಕ್ಕದೇವರಾಜ ಒಡೆಯರ್.

ಒಡೆಯರ್‌ಗೆ ಬೆಂಗಳೂರನ್ನು ಮಾರುವ ಸುದ್ದಿ ಶಿವಾಜಿಗೆ ಗೊತ್ತಾದಾಗ ಆತ ಕೆಂಡಮಂಡಲವಾದ. ತನ್ನ ಅಪ್ಪನಿಗೆ ಜಹಗೀರ್ ಆಗಿದ್ದ, ತಾನು ಬೆಳೆದಿದ್ದ ಪ್ರದೇಶವನ್ನು ಅದು ಹೇಗೆ ಬೇರೆಯವರಿಗೆ ಮಾರುತ್ತೀಯ ಎಂದು ವಿರೋಧ ವ್ಯಕ್ತಪಡಿಸಿದ. ಅಷ್ಟೇ ಅಲ್ಲ, ತನ್ನ ತಂದೆ ತೀರಿಕೊಂಡ ನಂತರ ತನಗೆ ಅಪ್ಪನ ಆಸ್ತಿಯಲ್ಲಿ ಬರಬೇಕಿದ್ದ ಪಾಲನ್ನೂ ವೆಂಕೋಜಿ ಬಿಟ್ಟುಕೊಟ್ಟಿಲ್ಲ ಎಂಬ ಕೋಪವೂ ಶಿವಾಜಿಗೆ ಇತ್ತು. ಆತ ಒಂದು ಪತ್ರದಲ್ಲಿ ತನ್ನ ತಮ್ಮನಿಗೆ ಹೀಗೆ ಹೇಳಿದ್ದ: "ಹದಿಮೂರು ವರ್ಷಗಳ ಕಾಲ ನಾನು ನನ್ನ ಪಾಲಿಗಾಗಿ ತಾಳ್ಮೆಯಿಂದ ಕಾದೆ. ಆದರೆ ಅದನ್ನು ನನಗೆ ಕೊಡಲು ನೀನು ಮುಂದಾಗುತ್ತಿಲ್ಲ. ದಾಯಾದಿಗಳು ತಮ್ಮ ನಡುವೆ ಕಾದಾಡಿಕೊಂಡರೆ ಇಬ್ಬರಿಗೂ ಪಾಂಡವರಿಗೆ ಮತ್ತು ಕೌರವರಿಗೆ ಆದದ್ದೇ ಆಗುತ್ತದೆ ಎಂಬುದನ್ನು ನೆನಪಿಟ್ಟುಕೋ. ಇಬ್ಬರೂ ನಮ್ಮನಮ್ಮ ಪಾಲನ್ನು ಹಂಚಿಕೊಂಡು ನೆಮ್ಮದಿಯಿಂದ ಇರೋಣ ಎಂದು ನಾನು ಮಾತುಕತೆಗೆ ಮಧ್ಯವರ್ತಿಗಳನ್ನು ಕಳುಹಿಸಿದರೆ ನೀನು ದುರ್ಯೋಧನನಂತೆ ವರ್ತಿಸುತ್ತಿದ್ದೀಯ. ವಿಧಿ ಇಲ್ಲದೆ ನಾನು ನಿನ್ನ ವಿರುದ್ಧ ದಾಳಿ ಮಾಡುವಂತಹ ಪರಿಸ್ಥಿತಿಯನ್ನು ನಿರ್ಮಿಸಬೇಡ."

ಆದರೆ ವೆಂಕೋಜಿ ಚಿಕ್ಕಾಸು ಬಿಟ್ಟುಕೊಡುವುದಕ್ಕೂ ಸಿದ್ಧನಿರಲಿಲ್ಲ. ಇತ್ತ ಒಡೆಯರ್ ಜೊತೆ ಚೌಕಾಸಿ ಮಾಡುತ್ತಲೇ ಅತ್ತ ಶಿವಾಜಿ ಜೊತೆ ಸಂಧಾನವನ್ನೂ ವೆಂಕೋಜಿ ಮುಂದುವರೆಸಿದ. ಆತನ ಅದೃಷ್ಟಕ್ಕೆ ಇವೆಲ್ಲ ನಡೆಯುತ್ತಿದ್ದ ಸಂದರ್ಭದಲ್ಲೇ ಶಿವಾಜಿ ಸತ್ತುಹೋದ.

ಅತ್ತ ಮೊಘಲ್ ದೊರೆ ಔರಂಗಜೇಬ ತನ್ನ ಸಾಮ್ರಾಜ್ಯವನ್ನು ದಕ್ಷಿಣ ದಿಕ್ಕಿನಲ್ಲೂ ವಿಸ್ತರಿಸುವ ಹಂಬಲದಲ್ಲಿದ್ದರೆ, ಇತ್ತ ಆತನ ಮಹತ್ವಾಂಕಾಕ್ಷೆಗಳಿಗೆ ಬ್ರೇಕ್ ಹಾಕಲು ಮರಾಠರೂ ತೋಳೇರಿಸಿ ನಿಲ್ಲುತ್ತಿದ್ದರು. ಆಗ ಇಬ್ಬರ ಕಣ್ಣಿಗೂ ಬಿದ್ದದ್ದು ಮತ್ತದೇ ಬೆಂಗಳೂರು. ಆದರೆ ಮರಾಠರ ದುರದೃಷ್ಟಕ್ಕೆ ಮೊಘಲರ ಸೈನ್ಯ ಮುಂಚಿತವಾಗಿಯೇ ಬೆಂಗಳೂರಿನ ಮೇಲೆ ದಾಳಿ ಮಾಡಿತು. ಮೊಘಲ್ ಸೈನ್ಯದ ವಿರುದ್ಧ ವೆಂಕೋಜಿಗೆ ಸೆಣೆಸಲಾಗಲಿಲ್ಲ. ಆತನ ಸೈನ್ಯ ಸೋತು ಬೆಂಗಳೂರು ಮೊಘಲರ ಪಾಲಾಯಿತು.

ಮೊಘಲರು ಮೂರು ವರ್ಷಗಳ ಕಾಲ ಬೆಂಗಳೂರನ್ನು ಆಳಿದರು. ಶಾಹಜಿ ಬೋನ್ಸ್ಲೆಯಿಂದಾಗಿ ಸ್ಥಳೀಯರಿಗೆ ಮರಾಠಿ ಭಾಷೆ ಮತ್ತು ಸಂಸ್ಕೃತಿ ಪರಿಚಯವಾಗಿತ್ತು. ಈಗ ಮೊಘಲರ ಸೈನಿಕರು ಮತ್ತು ಅಧಿಕಾರಿಗಳಿಂದಾಗಿ ಇಲ್ಲಿನ ಜನರಿಗೆ ಪಂಜಾಬಿ, ಗುಜರಾತಿ, ರಾಜಸ್ಥಾನಿ, ಪರ್ಶಿಯನ್ ಮತ್ತು ಇತರೆ ಭಾಷೆಗಳ ಪರಿಚಯವೂ ಆಯಿತು. ಹಸನ್ ಅವರು ತಮ್ಮ ಪುಸ್ತಕದಲ್ಲಿ ಹೇಳಿರುವಂತೆ ಬೆಂಗಳೂರು ಬಹುಭಾಷೆಗಳ ನಗರವಾಗಿ ಪರಿವರ್ತನೆಗೊಂಡಿದ್ದು ಆ ಕಾಲಘಟ್ಟದಲ್ಲಿಯೇ. "ಹೊರಗಿನಿಂದ ಬಂದವರು ಮತ್ತು ಸ್ಥಳೀಯರ ನಡುವೆ ವ್ಯವಹಾರಿಕ ಭಾಷೆಯಾಗಿ ಆಗ ರೂಪಗೊಂಡಿದ್ದು ರೆಕ್ತಾ ಭಾಷೆ. ಅನಂತರ ಆ ಭಾಷೆ ದಕ್ಷಿಣ ಭಾರತದಲ್ಲಿ ದಖನಿ ಎಂದೂ, ಉತ್ತರ ಭಾರತದಲ್ಲಿ ಉರ್ದು ಎಂದೂ ಪರಿಗಣಿಸಲ್ಪಟ್ಟಿತು" ಎನ್ನುತ್ತಾರೆ ಹಸನ್.

ಇರಲಿ, ಅಷ್ಟು ಹೊತ್ತಿಗೆ ವಿಜಯನಗರ ಸಾಮ್ರಾಜ್ಯ ಪತನಗೊಂಡು ಅದರ ಮೇಲೆ ತಮ್ಮ ಅಧಿಕಾರ ಸ್ಥಾಪಿಸಲು ಮರಾಠರು ಮತ್ತು ಒಡೆಯರ್ ನಡುವೆ ಪೈಪೋಟಿ ಶುರುವಾಗಿತ್ತು. ಆದ್ದರಿಂದ ಸಹಜವಾಗಿಯೇ ಒಡೆಯರ್ ಅವರಿಗೆ ಮರಾಠರಿಗಿಂತ ಮೊಘಲರ ಸಾಮೀಪ್ಯ ಬೇಕಿತ್ತು. ಆಗ ಅವರು ವೆಂಕೋಜಿಗೆ ಸಲ್ಲಿಸಿದ್ದ ಪ್ರಸ್ತಾಪವನ್ನೇ ಮೊಘಲರ ಮುಂದೆ ಇಟ್ಟರು. ಬೆಂಗಳೂರಿಗಾಗಿ ಮರಾಠರು ಮತ್ತು ಒಡೆಯರರು ಕಿತ್ತಾಡಿಕೊಳ್ಳಲಿ ಎಂದು ಲೆಕ್ಕ ಹಾಕಿದ ಮೊಘಲರು 1690ರಲ್ಲಿ ಈ ನಗರವನ್ನು ಮೂರು ಲಕ್ಷ ರೂಪಾಯಿಗಳಿಗೆ ಮಾರಿ ಕೈತೊಳೆದುಕೊಂಡರು.

ಒಡೆಯರರೂ ಬೆಂಗಳೂರನ್ನು ಉತ್ತಮಗೊಳಿಸಲು ಶ್ರಮಿಸಿದರು. ಆದರೆ ಅವರ ನಂತರ ಅಧಿಕಾರಕ್ಕೆ ಬಂದ ಮೈಸೂರು ರಾಜರು ಅವರಷ್ಟು ಶಕ್ತಿಶಾಲಿಗಳಾಗಿರಲಿಲ್ಲ. ಆದ್ದರಿಂದ ಅವರ ಸಾಮ್ರಾಜ್ಯದ ಮೇಲೆ ಹೊರಗಿನವರಿಂದ ಪದೇಪದೇ ದಾಳಿಗಳು ನಡೆದವು. ಆರ್ಕಾಟಿನ ನವಾಬನ ದಾಳಿಯಿಂದ ತಪ್ಪಿಸಿಕೊಳ್ಳಲು ಮೈಸೂರು ರಾಜರು ಬರೋಬ್ಬರಿ ನಾಲ್ಕು ಕೋಟಿ ರೂಪಾಯಿಗಳನ್ನು ತೆತ್ತಬೇಕಾಯಿತು. ಹೈದರಾಬಾದಿನ ನಿಜಾಮ ಸಲಾಬತ್ ಜಂಗ್ ಕೂಡ 56 ಲಕ್ಷ ರೂಪಾಯಿಗಳನ್ನು ಕಿತ್ತುಕೊಂಡ. ಮರಾಠರ ಪೇಶ್ವಾ ಬಾಲಾಜಿ ರಾವ್ 32 ಲಕ್ಷ ರೂಪಾಯಿಗಳನ್ನು ಕೊಡದಿದ್ದರೆ ನಿಮಗೆ ಏನಾಗುತ್ತೆ ನೋಡಿ ಎಂದು ಬೆದರಿಸಿ ಅಷ್ಟು ಹಣವನ್ನು ತನ್ನದಾಗಿಸಿಕೊಂಡ. ಒಡೆಯರ್ ಅವರ ಆಳ್ವಿಕೆ ಇಂತಹ ದಾರುಣ ಪರಿಸ್ಥಿತಿಯಲ್ಲಿದ್ದಾಗ ಅವರ ನೆರವಿಗೆ ಬಂದದ್ದು ಹೈದರ್ ಅಲಿ ಎಂಬ ಸೈನಿಕ. ಮರಾಠರ ಸೈನ್ಯ ಮತ್ತೊಮ್ಮೆ ಮೈಸೂರು ರಾಜ್ಯದ ಮೇಲೆ ದಾಳಿ ಮಾಡಿದಾಗ ತನ್ನ ಬುದ್ಧಿ ಶಕ್ತಿ ಮತ್ತು ಶೌರ್ಯವನ್ನು ಪ್ರದರ್ಶಿಸಿ ಅವರನ್ನು ಹಿಮ್ಮೆಟ್ಟಿಸಿದ್ದು ಇದೇ ಹೈದರ್ ಅಲಿ. ತಮ್ಮ ಮಾನವನ್ನು ಕಾಪಾಡಿದ ಹೈದರ್ ಬಗ್ಗೆ ಮೈಸೂರು ರಾಜರಲ್ಲಿ ಅದೆಷ್ಟು ಋಣಾನುಭಾವ ಮೂಡಿತೆಂದರೆ ಅವರು ಆತನಿಗೆ ಬೆಂಗಳೂರನ್ನು ಜಹಗೀರ್ ಆಗಿ ನೀಡಿದರು. ಆಗ ಹೈದರ್ ನಗರದ ಸುತ್ತ ಒಂದು ಕಲ್ಲಿನ ಕೋಟೆ ಕಟ್ಟಿಸಿದನಲ್ಲದೆ, ಬೆಂಗಳೂರನ್ನು ಯುದ್ಧಕ್ಕೆ ಬೇಕಾದ ಶಸ್ತ್ರಾಸ್ತ್ರಗಳನ್ನು ತಯಾರಿಸುವ ಪ್ರಮುಖ ಕೇಂದ್ರವಾಗಿ ಬೆಳೆಸಿದ.

ಬ್ರಿಟಿಷರು ಇಲ್ಲಿಗೆ ಬಂದಾಗ ಬೆಂಗಳೂರಿನ ಪ್ರಾಮುಖ್ಯತೆಯನ್ನು ಅರಿತರು. ದಕ್ಷಿಣ ಭಾರತದ ಮಧ್ಯೆ ಇರುವ, ಒಂದೆಡೆ ಮಂಗಳೂರು ಬಂದರಿಗೂ, ಇನ್ನೊಂದೆಡೆ ಮದ್ರಾಸ್ ನಗರಕ್ಕೂ ಸಮಾನಾಂತರ ದೂರದಲ್ಲಿದ್ದ, ವಿಶೇಷವಾಗಿ ಹೈದರ್ ಮತ್ತು ಟಿಪ್ಪು ಸುಲ್ತಾನರ ರಾಜಧಾನಿ ಶ್ರೀರಂಗಪಟ್ಟಣದ ಮೇಲೆ ದಾಳಿ ಮಾಡಲು ಸೂಕ್ತ ಜಾಗವೆನಿಸಿದ್ದ ಬೆಂಗಳೂರನ್ನು ತಮ್ಮ ವಶಕ್ಕೆ ತೆಗೆದುಕೊಳ್ಳಲು ಬ್ರಿಟಿಷರು ಹಲವು ಬಾರಿ ಪ್ರಯತ್ನಿಸಿದರು. ಆದರೆ ಪ್ರತಿ ಬಾರಿ ಹೈದರ್ ಮತ್ತು ಟಿಪ್ಪು ಸೈನ್ಯ ಅವರನ್ನು ಸೋಲಿಸಿ ಹೊರಗಟ್ಟಿತ್ತು. ಮೂರನೆ ಆಂಗ್ಲ-ಮೈಸೂರು ಯುದ್ಧದ ಭಾಗವಾಗಿ ಬ್ರಿಟಿಷರು ಬೆಂಗಳೂರಿನ ಮೇಲೆ 1791ರಲ್ಲಿ ಪ್ರಬಲವಾದ ದಾಳಿಯನ್ನೇ ಪ್ರಾರಂಭಿಸಿದರು. ಹಲವು ದಿನಗಳ ಕಾಲ ನಡೆದ ಆ ಯುದ್ಧದಲ್ಲಿ ಅಂತಿಮವಾಗಿ ಬೆಂಗಳೂರು ಪರಕೀಯರ ಪಾಲಾಯಿತು. ಒಂದು ವರ್ಷ ಕಾಲ ಬೆಂಗಳೂರನ್ನು ಆಳಿದ ಬಿಳಿಯರು ಆಮೇಲೆ 'ಶ್ರೀರಂಗಪಟ್ಟಣದ ಒಪ್ಪಂದ'ದ ಪ್ರಕಾರ ಅದನ್ನು ಟಿಪ್ಪು ಸುಲ್ತಾನನಿಗೆ ವಾಪಸ್ ಕೊಟ್ಟರು. ನಾಲ್ಕನೆ ಆಂಗ್ಲ-ಮೈಸೂರು ಯುದ್ಧದಲ್ಲಿ ಟಿಪ್ಪು ಮರಣ ಹೊಂದಿದ ನಂತರ ಬ್ರಿಟಿಷರು ಬೆಂಗಳೂರನ್ನು ಒಡೆಯರ್ ಕುಟುಂಬಕ್ಕೆ ಹಸ್ತಾಂತರಿಸಿದರು. 1809ರಲ್ಲಿ ಬ್ರಿಟಿಷರು ಬೆಂಗಳೂರಿನ ಹೊರವಲಯದಲ್ಲಿ 15 ಹಳ್ಳಿಗಳನ್ನು ವಶಪಡಿಸಿಕೊಂಡು ತಮ್ಮ ಕ್ಯಾಂಟೋನ್‌ಮೆಂಟ್ (ಸಿಪಾಯಿಬೀಡು) ಸ್ಥಾಪಿಸಿದರು. ಸಹಜವಾಗಿಯೇ ಅದರ ಸುತ್ತ ಬೆಂಗಳೂರು ಬೆಳೆಯಲಾರಂಭಿಸಿತು. ಸೋಜಿಗವೆಂದರೆ, ಬೆಂಗಳೂರಿನ ಮೇಲೆ ಮೈಸೂರು ರಾಜರ ಅಧಿಕಾರ ನಡೆಯುತ್ತಿದ್ದರೂ ಈ ಸಿಪಾಯಿಬೀಡಿನ ಮೇಲೆ ಅವರಿಗೆ ಯಾವ ಅಧಿಕಾರವೂ ಇರಲಿಲ್ಲ. ಮೈಸೂರು ಮಹಾರಾಜರು ಇದರ ಬಗ್ಗೆ ಮತ್ತೆ ಮತ್ತೆ ಪ್ರಸ್ತಾಪಿಸಿದರಾದರೂ ಬ್ರಿಟಿಷರು ತಮ್ಮ ಅಧಿಕಾರವನ್ನು ಬಿಟ್ಟುಕೊಡಲು ಹಿಂದೇಟು ಹಾಕುತ್ತಿದ್ದರು. ಅದೇ ಹೊತ್ತಿನಲ್ಲಿ ಸ್ವಾತಂತ್ರ್ಯ ಸಂಗ್ರಾಮವೂ ಗಟ್ಟಿಗೊಂಡಿತ್ತು. 1947ರಲ್ಲಿ ಬ್ರಿಟಿಷರು ಭಾರತ ಬಿಟ್ಟುಹೋಗಲು ನಿರ್ಧರಿಸಿದ ವೇಳೆಯೇ ಬ್ರಿಟಿಷರು ಬೆಂಗಳೂರಿನ ತಮ್ಮ ಸಿಪಾಯಿಬೀಡನ್ನು ಮೈಸೂರು ಮಹಾರಾಜರಿಗೆ ಹಸ್ತಾಂತರಿಸಿದರು. ಆದರೇನಂತೆ, ಇದಾದ ಕೆಲ ತಿಂಗಳ ನಂತರ ಭಾರತ ದೇಶ ಉದಯಿಸಿ ಮೈಸೂರು ಸಂಸ್ಥಾನದ ಅಧಿಕಾರವೂ ಹೋಯಿತು.


1949ರಲ್ಲಿ ಅಧಿಕೃತವಾಗಿ ಹಳೆ ಬೆಂಗಳೂರು ಮತ್ತು ಸಿಪಾಯಿಬೀಡಾಗಿದ್ದ ಕ್ಯಾಂಟೋನ್‌ಮೆಂಟ್ ಪ್ರದೇಶಗಳನ್ನು ಒಂದಾಗಿಸಿ 'ಬೆಂಗಳೂರು ಮುನಿಸಿಪಲ್ ಕಾರ್ಪೋರೇಷನ್' ಅನ್ನು ಸ್ಥಾಪಿಸಲಾಯಿತು. ಅದೀಗ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಾಗಿ ರೂಪುಗೊಂಡಿದೆ. ■


ಬಿಜೆಪಿ-ಸಂಘ ಪರಿವಾರ ನೈತಿಕ ಅಧಃಪತನದಲ್ಲಿ ಜಾರುತ್ತಿದೆ. ಕೇಂದ್ರ ಮಂತ್ರಿ ನಿವೃತ್ತ ಸೇನಾ ನಾಯಕ ವಿ.ಕೆ. ಸಿಂಗ್ ಪತ್ರಕರ್ತರನ್ನು ವೇಶ್ಯೆರಿಗೆ ಹೋಲಿಸಿದ್ದಾರೆ. ಯಡ್ಡಿ ತನ್ನ ಹಿಂಬಾಲಕ ಶಾಸಕರು ಅಸೆಂಬ್ಲಿಯಲ್ಲಿ ಬ್ಲೂಫಿಲಂ ನೋಡಿ ಸಿಕ್ಕಿಬಿದ್ದಾಗ ಅದನ್ನು ಬರೆದ ಪತ್ರಕರ್ತರನ್ನು ಉದ್ದೇಶಿಸಿ "ನೀವು ಮನೇಲಿ ಅಂಥ ಸಿನಿಮಾ ನೋಡೋದಿಲ್ಲೇನ್ರಿ?" ಅಂತಾರೆ. ಶೋಭಕ್ಕ ಪೊರಕೇಲಿ 'ಸೋನಿಯಾ - ರಾಹುಲ್ ಹೊಡೀಬೇಕು' ಅಂತಾರೆ. ಸಿ.ಟಿ. ರವಿ ಅಸೆಂಬ್ಲಿಯಲ್ಲಿ ಡಿವೈಎಸ್‌ಪಿ ಹಂಡಿಭಾಗ್ ಪ್ರಕರಣದಲ್ಲಿ 'ನೀವಿದ್ದೀರಿ' ಎಂದ ಮಂತ್ರಿ ರಮಾನಂದ ರೈಗೆ "ಕತ್ತೆಗೆ ವಯಸ್ಸಾದಂತೆ ವಯಸ್ಸಾಗಿದೆ ನಿನ್ಗೆ" ಅಂತಾನೆ. ಉತ್ತರ ಪ್ರದೇಶದ ಬಿಜೆಪಿ ಉಪಾಧ್ಯಕ್ಷ ದಲಿತ ನಾಯಕಿಗೆ ಕೊಳಕು ಉಪಮೇಯ ಬಳಸುತ್ತಾನೆ. ಉತ್ತರ ಕನ್ನಡದ ಚೆಡ್ಡಿ ಸಂಸದ ಅನಂತ ಹೆಗಡೆ "ಹಿಂದೂತ್ವ ಒಪ್ಪದವರು-ಜಾತ್ಯತೀತರು ಅಪ್ಪನಿಲ್ಲದೇ ಹುಟ್ಟಿದ ಬೇವರ್ಸಿಗಳು" ಅಂತಾನೆ. ಇದೇ ಸಂಘಪರಿವಾರದ ಸಂಸ್ಕೃತಿ ತಾನೆ?!


ದೇಶಭೋಕ್ತ ಅನಂತ್ಮಾಣಿಯ ಆಚಾರವಿಲ್ಲದ ನೀಚ ನಾಲಿಗೆ ನರ್ತನ!!


ಅನಂತಕುಮಾರ್ ಹೆಗಡೆ


ಅನಂತಕುಮಾರ್


ದಯಾಶಂಕರ್ ಸಿಂಗ್


ವಿ.ಕೆ. ಸಿಂಗ್


ಪ್ರಹ್ಲಾದ್ ಜೋಶಿ


ಕಾಗೇರಿ ಹೆಗಡೆ


ಶೋಭಾ ಕರಂದ್ಲಾಜೆ


ಉತ್ತರ ಕನ್ನಡದ ಕರ್ಮಗೇಡಿ ಸಂಸದನೂ ಸ್ವಯಂಘೋಷಿತ ಹರಾಮಿ ಹಿಂದೂತ್ವದ ಹರಿಕಾರನೂ ಆಗಿರುವ ಅನಂತ್ಮಾಣಿ ಉರುಫ್ ಅನಂತಕುಮಾರ್ ಹೆಗಡೆಯ ಆಚಾರವಿಲ್ಲದ ನಾಲಿಗೆ ಮತ್ತೆ ಪೂರ್ವಾಶ್ರಮದ ಬುರ್ನಾಸ್ ಛಾಪೆ ಬಳಕೆ ಶುರು ಹಚ್ಚಿಕೊಂಡಿದೆ. ಮತಾಂಧ ಮಸಲತ್ತುಗಾರ ಮೋದಿ ಮಾಮ ಪ್ರಧಾನಿ ಆಗಿದ್ದೇ ಆಗಿದ್ದು ಅನಂತ್ಮಾಣಿ ತನ್ನ ಅನಾಹುತಕಾರಿ ಕಮ್ಯುನಲ್ ವರಸೆಗಳಿಗೆಲ್ಲ ತುಂಬ ರಹಸ್ಯವಾಗಿ ಸಾಣೆ ಹಾಕಲು ಹತ್ತಿದ್ದ. ಯಾವಾಗ ಯಡ್ಡಿ ಈ ಅನಂತ್ಮಾಣಿಗೆ ರಾಜ್ಯ ಬಿಜೆಪಿ ಉಪಾಧ್ಯಕ್ಷತೆಯ ದೀಕ್ಷೆ ಕೊಟ್ಟನೋ ಆಗಾತನ ಮೈಮೇಲೆ ಹಿಂದೂತ್ವದ ಭೀಭತ್ಸ ಭೂತ ಆವಾಹನೆ ಆಗಿಬಿಟ್ಟದೆ! ಮುಸ್ಲಿಮರು, ಇಸ್ಲಾಮ್ ಮತ್ತು ಜಾತ್ಯತೀತರನ್ನೆಲ್ಲ ಬಾಯಿಗೆಬಂದಂತೆ ಬೈದು ತಲುಬು ತೀರಿಸಿಕೊಳ್ಳುತ್ತಿದ್ದಾನೆ ಅಸಡ್ಡಾಳ ಅನಂತ್ಮಾಣಿ.

ಮಾಣಿಗೆ ತಾನೇನೂ ಪ್ರವೀಣ್ ತೊಗಾಡಿಯಾ, ಸಾಕ್ಷಿ ಮಹಾರಾಜ್, ಸಾಧ್ವಿ ಪ್ರಾಚಿ... ಮತ್ತಿತರ ಉಗ್ರವಾದಿ ಕಾವಿ ಕಲಿಗಳಿಗಿಂತ ಕಡಿಮೆಯೇನೂ ಅಲ್ಲ ಎಂದು ಮೋದಿಗೆ ತೋರಿಸಿಕೊಳ್ಳುವ ಚಪಲ. ತನ್ಮೂಲಕ ಕೇಂದ್ರದ ಮಂತ್ರಿಯಾಗಿ ಸ್ವ-ಪಕ್ಷದ ಹಿತಶತ್ರು-ಜಾತಿ ಎದುರಾಳಿ ಕಾಗೇರಿ ಮಾಣಿ ಎದುರು ಸ್ಟೈಲ್ ಹೊಡೆಯುವ ಹಠ. ಹಾಗಂತ ಯಡ್ಡಿಗೇನೂ ಈ ಮಾಣಿ ಎಂದರೆ ನಂಬಿಕೆಯಾಗಲಿ, ಮಮಕಾರವಾಗಲಿ ಇಲ್ಲ. ತನ್ನ ನಂಬಿಗಸ್ಥ ಬಂಟನೂ-ಜನಿವಾರಿಗಳ ಎದುರಾಳಿಯೂ ಆಗಿದ್ದ ಭಟ್ಕಳದ ಶಿವಾನಂದ ನಾಯ್ಕ ಆಪೋಷನ ಪಡೆದದ್ದು ಇದೇ ಅನಂತ್ಮಾಣಿ ಎಂಬ ಅಸಮಾಧಾನವೂ ಯಡ್ಡಿಗೆ ಇದೆ. ಆದರೆ ವೈರಿಯ ವೈರಿ ಮಿತ್ರನೆಂಬ ಸಿದ್ಧಾಂತ ರಾಜಕಾರಣಿಗಳದಲ್ಲವಾ? ರಾಜ್ಯ ಮಟ್ಟದ ಬ್ರಾಹ್ಮಣ ಲಾಬಿ ಚೆಕ್‌ಮೇಟ್ ಕೊಡಲು ಯಡ್ಡಿಗೆ ಬ್ರಾಹ್ಮಣ ದಾಳ ಒಂದು ಬೇಕಾಗಿತ್ತು.

ಐದು ಬಾರಿ ಸಂಸದನಾಗಿ ಗೆದ್ದರೂ ಕೇಂದ್ರದಲ್ಲಿ ಮಂತ್ರಿಯಾಗುವ ಭಾಗ್ಯ ತನಗೆ ಬರದಿರಲು ಉತ್ತರ ಕನ್ನಡದ ಕಾಗೇರಿ, ಕೇಂದ್ರ ಮಂತ್ರಿ ಅನಂತಕುಮಾರ್ ಶಾಸ್ತ್ರಿ ಹುಬ್ಬಳ್ಳಿಯ ಪ್ರಹ್ಲಾದ್ ಜೋಷಿ... ವಗೈರೆ ಸ್ವ-ಜಾತಿ ಹಿತಶತ್ರುಗಳೇ ಕಾರಣವೆಂಬ ಕೊರಗಲ್ಲಿ ಅನಂತ್ಮಾಣಿ ಇರುವುದು ಚೆನ್ನಾಗಿ ಬಳಸಿಕೊಂಡರು ತಲೆಮಾಸಿದ ಅನುಭವಿ ಯಡ್ಡಿಜೀ. ಉತ್ತರ ಕನ್ನಡದಿಂದ ತನಗೆ ಶಕ್ತಿ ತುಂಬಿದರೆ ರಾಜ್ಯದ ಮಂತ್ರಿ ಮಾಡುವ ಆಮಿಷವೊಡ್ಡಿ ಹುರಿದುಂಬಿಸಿದರು.

ಈ ಜನ್ಮದಲ್ಲಿ ಕೇಂದ್ರ ಮಂತ್ರಿ ಆಗೋದು ಸಾಧ್ಯವಿಲ್ಲ ಎಂಬ ಕಟುವಾಸ್ತವ ಅರಿತಿರುವ ಅನಂತ್ಮಾಣೀ ಯಡ್ಡಿ ಕ್ಯಾಬಿನೆಟ್‌ನಲ್ಲಾದರೂ ತೂರಿಕೊಳ್ಳೋಣವೆಂಬ ಲೆಕ್ಕಾಚಾರ ಹಾಕಿಯೇ ರಾಜ್ಯ ಬಿಜೆಪಿ ಉಪಾಧ್ಯಕ್ಷತೆ ಅಲಂಕರಿಸಿದ್ದಾನೆ. ಶಾಸಕನಾಗಲು ಕುಮಟಾ, ಯಲ್ಲಾಪುರ, ಭಟ್ಕಳ ಈ ಮೂರರಲ್ಲಿ ಯಾವುದು ಹಿತವೆಂಬ ತುಲನೆಯಲ್ಲಿ ತೊಡಗಿರುವ ಅನಂತ್ಮಾಣಿ ಈಗ ಇಡೀ ಜಿಲ್ಲೆಯಲ್ಲಿ ಗಿರಿಗಿಟ್ಲೆ ಹೊಡೆಯುತ್ತಿದ್ದಾನೆ.

ಅನಂತ್ಮಾಣಿ ಐದು ಬಾರಿ ಸಂಸದನಾದರೂ ಆತ ಸದಾ ಕ್ಷೇತ್ರದ ಜನರಿಗೆ ನಾಟ್ ರಿಚೇಬಲ್! ಮೋದಿ ಪರ್ವದಲ್ಲೇ ಎಂಪಿಯಾಗಿ ಎರಡು ವರ್ಷ ಕಳೆದರೂ ಈ ದಂಡಪಿಂಡ ಜಿಲ್ಲೆಯ ಜನರ ಕಷ್ಟ ಸುಖಕ್ಕೆ ಸ್ಪಂದಿಸಿದ ಕುರುಹುಗಳೇ ಕಾಣಿಸದು. ಹಾಗಂತ ತನ್ನ ಸ್ವಾರ್ಥಕ್ಕೆ ಏನೇನು ಬೇಕೋ ಅದೆಲ್ಲ ಮಾಡಿಕೊಂಡಿದ್ದಾನೆ. ಆಸ್ತಿ-ಅಂತಸ್ತು-ಸಂಪತ್ತು ಮಾಡಿಕೊಂಡಿದ್ದಾನೆ. ಅರಣ್ಯ ಅತಿಕ್ರಮಿಸಿ ಎಕರೆಗಟ್ಟಲೆ ಅಡಿಕೆ ತೋಟ ಮಾಡಿಕೊಂಡಿದ್ದಾನೆ. ಸರ್ಕಾರದ ಅನುದಾನ ಕೊಳ್ಳೆ ಹೊಡೆಯಲು 'ಕದಂಬ' ಎಂಬ ಎನ್‌ಜಿಓ ಮಾಡಿಕೊಂಡಿದ್ದಾನೆ. ಕದಂಬದ ಲೇವಾದೇವಿಗೆ ಹೆಂಡತಿಯನ್ನೇ ಯಜಮಾನಿ ಮಾಡಿದ್ದಾನೆ. ಮಾತೆತ್ತಿದರೆ ದೇಶಭಕ್ತಿ, ಪ್ರಾಮಾಣಿಕತೆ, ಬದ್ಧತೆಯೆಂದು ಬಾಯ್ಬಾಯಿ ಬಡಿದುಕೊಳ್ಳುವ ಈ ಮಾಣಿ ಗಣಿ ಕಪ್ಪ ತಿಂದು ಸಿಕ್ಕಿಬಿದ್ದಿದ್ದಾನೆ. ಉತ್ತರ ಕನ್ನಡದ ರೈತ-ತೋಟಿಗ, ಮೀನುಗಾರರಿಗೆಲ್ಲ ಅಂಗೈಯಲ್ಲೇ ಸ್ವರ್ಗ ತೋರಿಸಿ ನಾಜೂಕಾಗಿ ವಂಚಿಸುತ್ತಲೇ ಬಂದಿದ್ದಾನೆ. ಒಂದು ಕಾಲದಲ್ಲಿ ತಿರುಬೋಕಿಯಂತಿದ್ದ ಅನಂತ್ಮಾಣಿ ಭಟ್ಕಳದ ಕಂಡವರ ಮನೆಯಲ್ಲಿ ಉಂಡು ಬೆಂಕಿಯಿಕ್ಕುವ ಕೋಮು ಕಿತಾಪತಿ ಮಾಡುತ್ತ ದಿನ ಕಳೆಯುತ್ತಿದ್ದ, ಇವತ್ತು ಕೋಟ್ಯಾಧಿಪತಿ. ಇದೇ ಚೆಡ್ಡಿಗಳ ಅಸಲಿ 'ದೇಶಭಕ್ತ' ತಾನೆ!!


ಯಡ್ಡಿ

ಕ್ಷೇತ್ರದ ಯಾವ ಸಮಸ್ಯೆಯೂ ಎಂಪಿಗೆ ಸಂಬಂಧಿಸಿದ್ದಲ್ಲ, ಅದೆಲ್ಲ ಜುಜುಬಿ ಎಮ್ಮೆಲ್ಲೆಗಳ ಡ್ಯೂಟಿ ತನ್ನದು ಏನಿದ್ದರೂ ದಿಲ್ಲಿಗೆ ವಿಮಾನದಲ್ಲಿ ಹಾರಿಹೋಗಿ ಪಾರ್ಲಿಮೆಂಟಲ್ಲಿ ಕುಳಿತು ಶಾಸನ ರಚಿಸುವ 'ದೊಡ್ಡಸ್ತಿಕೆ' ಕೆಲಸವೆಂಬ ಅಹಮಿಕೆಯ ಮಾಣಿಗೆ ಜನರನ್ನು ಎದುರಿಸುವ ನೈತಿಕತೆಯೇ ಇಲ್ಲ.

ಆದರೂ ಈ ಐದೈದು ಬಾರಿ ಗೆದ್ದು ಸಂಸದನಾಗಿದ್ದಾನೆಂದರೆ ಅದು ಉತ್ತರ ಕನ್ನಡ ದೌರ್ಭಾಗ್ಯವೇ ಸರಿ. ಮೊದಲೆರಡು ಬಾರಿ ಪಕ್ಕಾ ಹಿಂದೂತ್ವ-ಮುಸ್ಲಿಂ ವೈರತ್ವ-ಭಟ್ಕಳ ಗಲಭೆ ಬಲದಲ್ಲಿ ಗೆದ್ದಿದ್ದ ಅನಂತ್ಮಾಣಿ ಮೂರನೇ ಬಾರಿ ಮಣ್ಣು ಮುಕ್ಕಿದ್ದ. ಅನಂತರ ಮೂರು ಬಾರಿ ಆತ ಗೆದ್ದಿದ್ದರೆ ಅದಕ್ಕೆ ಕಾರಣ ಸ್ಥಳೀಯ ಕಾಂಗ್ರೆಸ್ ಒಳಗಿನ ಮಾರ್ಗ್ಗಿ-ದೇಶಪಾಂಡೆ ಬಣ ಬಡಿದಾಟ ಮತ್ತು ಕ್ಷೇತ್ರದಲ್ಲಿನ ದೇಶಪಾಂಡೆ ಪಾಳೆಗಾರಿ ವಿರೋಧಿ ಅಲೆಯಿಂದಷ್ಟೇ!

ಎರಡು ವರ್ಷದ ಹಿಂದಿನ ಪಾರ್ಲಿಮೆಂಟ್ ಚುನಾವಣಾ ಅಖಾಡದಲ್ಲಿ ಮಾಣಿ ಡಾನ್ ದೇಶಪಾಂಡೆ ಪುತ್ರರತ್ನನನ್ನೇ ಮಣಿಸಿರುವುದರಿಂದ ತಾನೊಬ್ಬ ಬಲಾಢ್ಯ ಜನನಾಯಕನೆಂಬ ಭ್ರಮೆಗೆ ಬಿದ್ದಿದ್ದಾನೆ. ಎಂಪಿಗಿರಿ ಅಯೋಗ್ಯನಾದ ತಾನು ಪ್ರತಿಬಾರಿಯೂ ಸಂದರ್ಭದ ಪಿತೂರಿಯಿಂದ ಗೆದ್ದಿದ್ದೇನೆಯೇ ಹೊರತು ಜನರ ಪ್ರೀತಿ-ವಿಶ್ವಾಸದಿಂದಲ್ಲ ಎಂಬ ವಾಸ್ತವವಿನ್ನೂ ಮಾಣಿಗೆ ಅರಿವಾದಂತಿಲ್ಲ. ಕೇಂದ್ರ ಮಟ್ಟದಲ್ಲಿ ಬಗೆಹರಿಯಬೇಕಾದ ನೌಕಾನೆಲೆ ನಿರಾಶ್ರಿತರ ಸಮಸ್ಯೆ ರಾಷ್ಟ್ರೀಯ ಹೆದ್ದಾರಿ ಸಮಸ್ಯೆ, ಕುಮಟಾದ ಚೆಡ್ಡಿ ಕೊಂಕಣಿ ವರ್ತಕರ ಹಿತ ಕಾಪಾಡುವ ಬೈಪಾಸ್ ಸಮಸ್ಯೆ, ಸಿಆರ್‌ಝಡ್ ಸಮಸ್ಯೆ, ಬೆಳೆ ವಿಮೆ ಸಮಸ್ಯೆಯೇ ಮುಂತಾದ, ಕಷ್ಟ-ನಷ್ಟ-ನೋವು ಖಾಲಿ ಬುರುಡೆಯ ಅನಂತ್ಮಾಣಿಗೆ ಅರ್ಥವೇ ಆಗುತ್ತಿಲ್ಲ. ಕಳೆದೆರಡು ವರ್ಷಗಳಲ್ಲಂತೂ ಆತ ಅನಾರೋಗ್ಯದ ನೆಪದಿಂದ ತಲೆ- ತಪ್ಪಿಸಿಕೊಂಡು ಓಡಾಡಿದ್ದೇ ಜಾಸ್ತಿ.

ಹುಕ್ಕಿ ಬಂದಾಗೊಮ್ಮೆ ಕಾರವಾರ ಅಥವಾ ಶಿರಸಿಯಲ್ಲಿ ಪತ್ರಿಕಾಗೋಷ್ಠಿ ನಡೆಸಿ ತಾನಿನ್ನೂ 'ಎಂಪಿಯಾಗಿದ್ದೇನೆ' ಎಂದು ತೋರಿಸಿಕೊಂಡು ನಾಪತ್ತೆಯಾಗುವ ಗುಣಧರ್ಮದ ಮಾಣಿ ರಾಜ್ಯ ಬಿಜೆಪಿ ಉಪಾಧ್ಯಕ್ಷನಾಗುತ್ತಲೇ 'ಸಕ್ರಿಯ ರಾಜಕಾರಣ'ದಲ್ಲಿ ಕಳಾಯಿಸುತ್ತಿದ್ದಾನೆ. ಹಾಗಂತ ಜನಪರ ರಾಜಕಾರಣ, ಸಂಸದಗಿರಿ ಕರ್ತವ್ಯ ನಿಭಾವಣೆ ಮಾತ್ರ ಆತನಿಂದ ಸಾಧ್ಯವಾಗುತ್ತಿಲ್ಲ! ಇಡೀ ಜಿಲ್ಲಾ ಬಿಜೆಪಿ ತೆಕ್ಕೆಗೆಳೆದುಕೊಂಡಿರುವ ಮಾಣಿ ಈಗಾಗಲೇ ಎದುರಾಳಿ ಕಾಗೇರಿ ಮಾಣಿಯ ಸೊಂಟ ಮುರಿದುಹಾಕಿರುವ ಧರತಿಯಲ್ಲಿ ಅಂಡಲೆಯುತ್ತಿದ್ದಾನೆ. ಜಿಲ್ಲಾ ಬಿಜೆಪಿ ಬೆಳೆಸುವ ಉಮೇದಿಯಲ್ಲಿ ನಿವೃತ್ತ ಭ್ರಷ್ಟ ಅಧಿಕಾರಿಗಳು, ಸಮಾಜ ಕಂಟಕರು, ಉಂಡಾಡಿ ಗುಂಡರನ್ನೆಲ್ಲ ಪಕ್ಷಕ್ಕೆ ಸೇರಿಸಿಕೊಂಡು ಬೀಗುತ್ತಿದ್ದಾನೆ. ಮಜಾ ಎಂದರೆ, ಜನರು ಸಮಸ್ಯೆ-ಸಂ[illegible] ಒಯ್ದು ಪರಿಹಾರಕ್ಕೆ ವಿನಂತಿಸಿದಾಗ ಅನಾರೋಗ್ಯದ ಕಾ[illegible] ಹೇಳಿ ಸಾಗಹಾಕುತ್ತಿದ್ದ ಮಾಣಿಯ ರೋಗಗಳೆಲ್ಲವೂ ರಾ[illegible] ಬಿಜೆಪಿ ಉಪಾಧ್ಯಕ್ಷನಾಗುತ್ತಲೇ ಮಾಯವಾಗಿ ಹೋಗಿ[illegible] ಮಾಣಿ ತುಂಬ ಕ್ರಿಯಾಶೀಲ ಹಿಂದೂತ್ವ[illegible] ರಾಜಕಾರಣಿಯಾಗಿ ಮತ್ತೆ ಅವತರಿಸಿದ್ದಾನೆ!!

ಮೊನ್ನೆ ಮೋದಿ ಕೇಂದ್ರ ಕ್ಯಾಬಿನೆಟ್ ಪುನರ್‌ರ[illegible] ಮಾಡುವ ಮುಹೂರ್ತದಲ್ಲಿ ಮಾಣಿ ತಾ[illegible] ಮಂತ್ರಿಯಾಗುತ್ತೇನೆಂದು ಕನಸು ಕಾಣಲಾರಂಭಿಸಿದ್ದ. ಹಾಗ[illegible] ಸ್ವಜಾತಿ ಪತ್ರಕರ್ತರ ಕಿವಿಯಲ್ಲೂ ಉಸುರಿದ್ದ; ಆತ್ಮೀಯ[illegible] ಎದುರು ಹಲುಬಿದ್ದ. ಆದರೆ ಬ್ರಾಹ್ಮಣ ಕೋಟಾ ಓವ[illegible] ಲೋಡ್ ಆಗಿದ್ದರಿಂದ ಮಾಣಿಗೆ ಅವಕಾಶವೇ ಇಲ್ಲವೆ[illegible] ಸರಳ ಲೆಕ್ಕಾಚಾರ ರಾಜ್ಯ ಬಿಜೆಪಿಯ ಪುಟಗೋಸಿ ಪಿಳ್ಳೆ[illegible] ಗೊತ್ತಾಗಿತ್ತು. ಹಾಗೊಮ್ಮೆ ಕರ್ನಾಟಕದ ಮತ್ತೊ[illegible] ಬ್ರಾಹ್ಮಣನಿಗೆ ಚಾನ್ಸ್ ಕೊಡುವುದಿದ್ದರೆ ಮೋದಿ ಸಂ[illegible] ಪ್ರಹ್ಲಾದ್ ಜೋಶಿಗೇ ಕೊಡುತ್ತಾನೆಯೇ ಹೊರತು ಉ[illegible] ಕನ್ನಡದ ಬರ್ಗಿಯಲ್ಲಿ ಗ್ಯಾಸ್ ಟ್ಯಾಂಕರ್ ಬಿದ್ದು ಹಲ[illegible] ಸಾವು-ನೋವುಗಳಾಗಿ ಊರಿಗೆ ಊರೇ ಸುಟ[illegible] ಕರಕಲಾದರೂ ಬಂದು ನೋಡದ ಕಲ್ಲು ಹೃದಯ[illegible] ಹೊಣೆಗೇಡಿ ಸಂಸದ ಅನಂತ್ಮಾಣಿಗೆ ಅಲ್ಲ. ಹಾಗ[illegible] ಜಿಲ್ಲೆಯಿಂದ ದಿಲ್ಲಿವರೆಗೆ ಗುಲ್ಲೆದ್ದರೂ ಮಾಣಿ ಮ[illegible] ಮನಸ್ಸಿನಲ್ಲೇ ಮಂಡಿಗೆ ತಿನ್ನುತ್ತಲೇ ಇದ್ದ.

ಮೋದಿ ಗಮನ ಸೆಳೆಯಲೆಂದೇ ಕೆಲವು ತಿಂ[illegible] ಹಿಂದೆ ಅನಂತ್ಮಾಣಿ- "ಇಸ್ಲಾಂ ಜಗತ್ತಿನಲ್ಲಿ ಇರೋವ[illegible] ಭಯೋತ್ಪಾದನೆ ಇರುತ್ತದೆ.... ಮುಸ್ಲಿಮ[illegible] ಭಯೋತ್ಪಾದಕರು..." ಎಂದು ನಾಲಿಗೆ ಹರಿಬಿಟ್ಟಿದ್ದ. ಇ[illegible] ಪ್ರಯೋಜನಕ್ಕೆ ಬರಲಿಲ್ಲ. ಪೊಲೀಸ್ ಕೇಸು ಬಿತ್ತು. ಆ[illegible] ಸಿದ್ದು ಸರ್ಕಾರ ಈ ಸಂವಿಧಾನ ವಿರೋಧಿ ಉಗ್ರ ಹಿಂದೂ[illegible] ಬಂಧಿಸಿ ಪಾಠ ಕಲಿಸುವ ಉಸಾಬರಿಗೆ ಹೋಗಲಿ[illegible] ಕಾಂಗ್ರೆಸಿಗರ ಇಂಥ "ಮೃದು ಹಿಂದೂತ್ವವೇ" ಇವ[illegible] ಅನಂತ್ಮಾಣಿ, ಕಲ್ಲಡ್ಕ ಭಟ್ಟ, ಜಗದೀಶ ಕಾರಂತನ[illegible] ಕೋಮು ಕುತಂತ್ರಿಗಳನ್ನು ಸೈತಾನರಾಗಿ ಕೊಬ್ಬಿಸಿಬಿಟ್ಟ[illegible]

ಬಂಡಲ್ ಬಿಟ್ಟು ಜನರ ಮರುಳು ಮಾ[illegible] ಚಲಾವಣೆಯಲ್ಲಿರಲು ಹವಣಿಸುವ ಫೋಕ್ಕು ಪುಢಾರಿ ಮಾ[illegible] ತಾನೊಬ್ಬ ಪರ್ಯಾವರಣ ಪಂಡಿತನೆಂಬಂತೆ ಪೋ[illegible] ಕೊಡುವ ಕಲೆ ಕರಗತ ಮಾಡಿಕೊಂಡಿದ್ದಾನೆ. ಸುಭಾ[illegible] ಚಂದ್ರ ಭೋಸ್ ವಂಶಜರನ್ನು ಭೇಟಿಯಾಗಿ ಬಂದಿದ್ದೇ[illegible] ಕೊಲ್ಕತ್ತಾದಲ್ಲಿ ಭೋಸ್ ವಾರಸುದಾರರಿದ್ದಾರೆಂದು ಭೋಂ[illegible] ಬಿಟ್ಟು ನಗೆಪಾಟಲಿಗೀಡಾಗಿದ್ದ ಮಾ[illegible] ಜೀಯೋಥರ್ಮಲ್‌ನಿಂದ ವಿದ್ಯುತ್ ಉತ್ಪಾದಿಸ[illegible] 'ಆವಿಷ್ಕಾರ' ಮಾಡಿದ್ದ! ನೆಲದೊಳಗಿನ ಜ್ವಾಲಾಮು[illegible] ಬಳಸಿಕೊಂಡು ವಿದ್ಯುತ್ ಉತ್ಪಾದಿಸಬಹುದೆಂಬ ಕಾಯ[illegible] ಸಾಧುವಲ್ಲದ ವಿಧಾನದ ಅಡುಗೋಲಜ್ಜಿ ಕತೆ ಈ ಸಂಸ[illegible] ಸಾಹೇಬ ಹೇಳಿದ್ದ. ಆಗಲೂ ಜನರು ಈ ಜೋಕ[illegible] ಬಿದ್ದುಬಿದ್ದು ನಕ್ಕಿದ್ದೇ ನಕ್ಕಿದ್ದು.

ರಾಜ್ಯ ಬಿಜೆಪಿಯಲ್ಲಿ ಯಡ್ಡಿ ಪಕ್ಕದ ಸೀಟು ಗಿಟ್ಟಿಸಿ[illegible] ತಡ ಈ ಪರಿಸರ ತಜ್ಞ-ಅಡಿಕೆ ಬೆಳೆ ಸಂರಕ್ಷಕ-ತೋಟಗಾರಿ[illegible] ವಿಜ್ಞಾನಿ ಮಂಗನ ಬೇಟೆಗೆ ರಣ ಹದ್ದುಗಳ ಹಾರಿಸು[illegible] ಯೋಜನೆ ಪ್ರಕಟಿಸಿದ್ದಾನೆ! ಅಡಿಕೆ ತಿಂದು ಹಾಕುವ, ಅ[illegible] ಉದುರಿಸುವ ಮಂಗನ ಹಾವಳಿಯಿಂದ ಉತ್ತರ ಕನ್ನ[illegible] ಘಟ್ಟದ ಮೇಲಿನ ತೋಟಿಗರು ಕಂಗಾಲಾಗಿಹೋಗಿದ್ದಾ[illegible] ರೈತರ ಈ ಅಸಹಾಯಕತೆ ತನ್ನ ಸುದ್ದಿ ಮಾಡುವ ಚಟ[illegible] ಬಳಸಿಕೊಂಡು ಪೆದ್ದುತನ ಪ್ರದರ್ಶಿಸಿದ್ದಾನೆ. ಮಂಗ[illegible] ಮರಿಗಳನ್ನು ರಣಹದ್ದುಗಳು ತಿನ್ನುವುದರಿಂದ ಉತ್ತ[illegible] ಕನ್ನಡವನ್ನು ರಣಹದ್ದುಗಳ ಸಂರಕ್ಷಿತ ಪ್ರದೇಶವೆಂದು ಕೇಂ[illegible] ಪರಿಸರ ಇಲಾಖೆಯಿಂದ ಘೋಷಣೆ ಮಾಡಿಸಿದ್ದೇನೆ. ಮಂ[illegible] ಸಂತತಿ ರಣಹದ್ದುಗಳಿಂದ ನಿಯಂತ್ರಣ ಮಾಡುವ ಪ್ಲಾ[illegible] ಇದೆಂದು ಬಫೂನ್ ಮಾಣಿ ಹಲುಬಿದ್ದಾನೆ.

ವಾಸ್ತವವೆಂದರೆ 1990ರ ದಶಕ ಅಂತ್ಯದಿಂದ ಉತ್ತರಕನ್ನಡದಲ್ಲಿ ರಣ ಹದ್ದುಗಳ ಸಂತತಿಯೇ ಇಲ್ಲದಂತಾಗಿದೆ. 1990ರ ದಶಕದ ಕೊನೆಯಲ್ಲಿ ಖ್ಯಾತ ಪಕ್ಷಿ ತಜ್ಞ-ಪಕ್ಷಿ ಫೋಟೋಗ್ರಾಫರ್ ಸುದರ್ಶನ್ ತೆಗೆದದ್ದೇ ಬಹುಶಃ ಕೊನೆಯ ರಣಹದ್ದಿನ ಚಿತ್ರ ಎನ್ನಲಾಗಿದೆ. ಪರಿಸ್ಥಿತಿ ಹೀಗಿರುವಾಗ ಮಂಗನ ತಿನ್ನಲು ರಣಹದ್ದು ಎಲ್ಲಿಂದ ಬರಬೇಕು? ಈ ಮಾಣಿ ಜಾಯಮಾನವೇ ಅಷ್ಟು. ಬಾಯಿ ತೆಗೆದರೆ ಬಣ್ಣಗೇಡು. ಸಾಂಬಾರ ಬೆಳೆ, ವೆನಿಲ್ಲಾ, ಅಗರವುಡ್ ಎಂದೆಲ್ಲ ರೈತರಿಗೆ ಆಟ್ಟಹುತ್ತಿಸಿ ಮೋಸ ಮಾಡಿದ ಮಾಣಿ ಹೆಚ್ಚುಕಮ್ಮಿ ಹದಿನೈದು ದಿನದ ಹಿಂದೆ ಕುಮಟಾದ ಬಿಜೆಪಿ ಸಭೆಯೊಂದರಲ್ಲಿ ಉತ್ತರ ಪ್ರದೇಶ ಬಿಜೆಪಿ ಭಂಡ ದಯಾಶಂಕರ ಸಿಂಗ್‌ನ ದೊಡ್ಡಣ್ಣನಂತೆ ಬೊಗಳಿದ್ದಾನೆ! ಯಾರ್‍ಯಾರದೋ ತಾಯಂದಿರ ಶೀಲವನ್ನೇ ಶಂಕಿಸುವ ಅನಾಚಾರ ಮಾಡಿದ್ದಾನೆ. ಹಿಂದೂತ್ವ ಒಪ್ಪದವರೆಲ್ಲರೂ ಅಪ್ಪನಿಲ್ಲದೆ ಹಾದರಕ್ಕೆ ಹುಟ್ಟಿದ ಬೇವರ್ಸಿಗಳು ಎಂದು ತನ್ನ ನೀಚನಾಲಿಗೆ ಹರಿಬಿಟ್ಟದ್ದಾನೆ.

ನಾಲಿಗೆ ಸಂಸ್ಕೃತಿ ತೋರಿಸುತ್ತದೆನ್ನುತ್ತಾರೆ ಬಲ್ಲವರು. ಸಂಸದ ಅನಂತ್ಕುಮಾಣಿ ಆಡಿರುವ ಮಾತುಗಳು ಆತ ಅದೆಂಥ ಕೀಳು ಮನಸ್ಥಿತಿಯ ಗಬ್ಬು ವ್ಯಕ್ತಿತ್ವವೆಂಬುದು ಸಾಬೀತುಮಾಡಿದೆ ಬಿಜೆಪಿಯ ಸಂಸ್ಕೃತಿಯನ್ನೂ ಖಾತ್ರಿ ಮಾಡಿದೆ. ಮಾಣಿಯ ಬುರ್ನಾಸ್ ಭಾಷಣ ಬಿಜೆಪಿಯ ಮಹಿಳೆಯರೂ ನಾಚಿ ತಲೆತಗ್ಗಿಸುವಷ್ಟು ಹೇಯವಾಗಿತ್ತು. "ತನ್ನನ್ನು ಹುಟ್ಟಿಸಿದ ಅಪ್ಪನ ರಕ್ತ ಗೊತ್ತಿದ್ದವ ಹಿಂದೂ ಎಂದು ಹೇಳಿಕೊಳ್ಳಲು ಹಿಂಜರಿಯುವುದಿಲ್ಲ. ಅಪ್ಪ ಯಾರೆಂದು ಗೊತ್ತಿಲ್ಲದವರಷ್ಟೇ ಜಾತ್ಯತೀತರೆಂದು ಹೇಳುತ್ತಾರೆ... ನನ್ನಪ್ಪನ ರಕ್ತ ನಂಗೆ ಗೊತ್ತಿದೆ... ಹಾಗಾಗಿ ಧೈರ್ಯವಾಗಿ ನಾನು ಹಿಂದೂ ಎಂದು ಹೇಳಿಕೊಳ್ಳುತ್ತೇನೆ... ತಂದೆ ಯಾರೆಂದು ಗೊತ್ತಿಲ್ಲದವರು ಬೇವರ್ಸಿಗಳು... ಜಾತ್ಯತೀತರೆನ್ನುವರ ಬಗ್ಗೆ ಇಂಥ ಬೇವರ್ಸಿ ಪದ ಬಳಸಬೇಕಾಗಿದೆ..." ಎಂದು ಕೊಳಕುಕೊಳಕಾಗಿ ಹಾರಾಡಿದ್ದಾನೆ.

ಉತ್ತರ ಪ್ರದೇಶದ ಚೆಡ್ಡಿ ಕ್ರಿಮಿ ದಯಾಶಂಕರ್ ಉವಾಚಕ್ಕಿಂತಲೂ ಹೊಲಸಾದ ಮಾತಾಡಿಯೂ ಮಾಣಿ ನಿರಾತಂಕವಾಗಿದ್ದಾನೆ. ತನ್ನನ್ನು ಕಟ್ಟಿಹಾಕುವ ಧೀರರು ಜಿಲ್ಲೆಯಲ್ಲಿಲ್ಲ ಎಂಬ ಧಿಮಾಕಿನಲ್ಲಿ ಮೆರೆದಾಡುತ್ತಿದ್ದಾನೆ. ದುರಂತವೆಂದರೆ ಕ್ರಿಮಿನಲ್ ಕೇಸ್‌ನ ಮಾತುಗಾರಿಕೆ ನಡೆಸಿರುವ ಸಂಸದ ಅನಂತ್ಕುಮಾಣಿಯನ್ನು ಎದುರಿಸುವ ತಾಕತ್ತು ಜಿಲ್ಲೆಯ ಕಾಂಗ್ರೆಸ್-ಜೆಡಿಎಸ್ ಅಥವಾ ಕಮ್ಯುನಿಸ್ಟ್ ಭೂಪರಲ್ಲಿಲ್ಲ; ವಿಚಾರವಂತರೂ ಒಂಥರಾ ನಿಷ್ಕ್ರಿಯರಂತಾಗಿದ್ದಾರೆ. ನಾಚಿಕೆಗೇಡಿನ ಸಂಗತಿಯೆಂದರೆ ಎಲೆಕ್ಷನ್ ವಾರ್ ಸಮಯವಲ್ಲದ ಈ ಶಾಂತಿ ದಿನಗಳಲ್ಲೂ ಸಂಸದ ಮಾಣಿಗೆ ಅಭಿವೃದ್ಧಿ, ಜನಪರ ಕಳಕಳಿಯ ಮಾತೂ ಹೊರಡುತ್ತಿಲ್ಲ. ಆತನದೇನಿದ್ದರೂ ಅಶ್ಲೀಲ, ಅನೈತಿಕ, ಅಜ್ಞಾನದ, ವಿಭಜಕ ಭಾಷಣ ಲಹರಿ!

ವಿರೋಧ ಪಕ್ಷದವರು ಸುಮ್ಮನಿದ್ದರೂ ಸ್ವ-ಪಕ್ಷದ ಶಾಸಕ ಕಾಗೇರಿ ವೈರಿ ಅನಂತ್ಕುಮಾಣಿಯ ಅವಮಾನಕಾರಿ ಮಾತುಕತೆಗಳ ಬಗ್ಗೆ ನಿಗಾ ಇಟ್ಟಿದ್ದಾರೆ. ಕಂಡ-ಕಂಡವರನ್ನು, ಕಂಡ-ಕಂಡ ಧರ್ಮದವರನ್ನು ಅವಹೇಳನಕಾರಿಯಾಗಿ ಮೂದಲಿಸಿ ಪಾರ್ಟಿಗೆ ಡ್ಯಾಮೇಜ್ ಮಾಣಿ ಮಾಡುತ್ತಿದ್ದಾನೆಂದು ಕಾಗೇರಿ ಹೈಕಮಾಂಡ್ ಕಿವಿ ಕಚ್ಚಿಯಾಗಿದೆಯಂತೆ. ಈಗಂತೂ ಅನಂತ್ಕುಮಾಣಿಯ ಕೆಂಗಣ್ಣು ಭಟ್ಕಳದ ಮೇಲೆ ಬಿದ್ದಿದೆ. 1990ರ ದಶಕದಲ್ಲಿ ವರ್ಷಗಟ್ಟಲೆ ಕೋಮು ದಂಗೆ ಭಟ್ಕಳದಲ್ಲಿ ಎಬ್ಬಿಸಿ ರಾಜಕೀಯ ಬೇಳೆ ಬೇಯಿಸಿಕೊಂಡಿದ್ದರು ಅನಂತ್ಕುಮಾಣಿ ಮತ್ತವನ ಗುರು ದಿವಂಗತ ಚಿತ್ತರಂಜನ್. ಈಗ ಅಂಥದೇ ಪರಿಸ್ಥಿತಿ ನಿರ್ಮಿಸಿ ಭಟ್ಕಳದಿಂದ ಎಮ್ಮೆಲ್ಲೆಯಾಗುವ ಸ್ಕೆಚ್ ಮಾಣಿ ಹಾಕಿದ್ದಾನಂತೆ. ಅದಕ್ಕೆಂದೇ ಆತ ಹಿಂದೂ ಜಾಗರಣಾ ವೇದಿಕೆಯ ಕ್ರಿಮಿನಲ್ ಕಿಂಗ್ ಜಗದೀಶ್ ಕಾರಂತನನ್ನು ಭಟ್ಕಳದಾದ್ಯಂತ ಓಡಾಡಿಸುವ ಪ್ಲಾನ್ ಸಿದ್ಧ ಮಾಡಿದ್ದಾನೆ. ಭಟ್ಕಳಕ್ಕೆ ಬೆಂಕಿ ಇಕ್ಕುವ ಕರಾಮತ್ತು ನಡೆಯುತ್ತಿದೆ.

ಇದು ರಾಜ್ಯದ ಗುಪ್ತಚರ ದಳಕ್ಕೆ ಗೊತ್ತಿದೆಯಾ? ಗೃಹ ಮಂತ್ರಿ ಪರಮೇಶ್ವರ್‌ಗೆ ಇದರ ಮಾಹಿತಿಯಿದೆಯಾ? ಹಿಂದೂ ಉಗ್ರವಾದ ತನ್ನ ತಾಯಿ ಗರತಿ; ಹಿಂದೂತ್ವ ಒಪ್ಪದವರ-ಜಾತ್ಯತೀತರ ತಾಯಿ ಅಲ್ಲ ಎಂದಿರುವ ಪಾಪಿ ಮಾಣಿಯ ಮುಸುಡಿಗೆ ಇಕ್ಕುವ ತಾಕತ್ತು ಗೃಹ ಇಲಾಖೆಗೆ ಇವೆಯಾ. ಮಹಿಳೆಯರ ಬಗ್ಗೆ ಅವಹೇಳನಕಾರಿ, ಯಾರ್‍ಯಾರದೋ ತಾಯಂದಿರ ಚಾರಿತ್ರ್ಯವಧೆ ಮಾಡುವ ಕ್ರಿಮಿನಲ್ ಮಾತಾಡಿರುವ ಮಾಣಿ ಮೇಲೆ ಕೇಸು ಜಡಿದು ಒದ್ದು ಒಳಗೆ ಹಾಕುವ ತಾಕತ್ತು ಸಿದ್ದು ಸರ್ಕಾರಕ್ಕೆ ಇದೆಯಾ? ಸಂಸದ ಅನಂತ್ಕುಮಾಣಿಗೆ ಅಂಕುಶ ಇಡದಿದ್ದರೆ ಉತ್ತರ ಕನ್ನಡಕ್ಕೆ ಸಂಚಕ ಖಂಡಿತ! ಬಿಜೆಪಿ ಹೈಕಮಾಂಡ್ ಎಚ್ಚೆತ್ತುಕೊಳ್ಳದಿದ್ದರೆ ದಯಾಶಂಕರ್‌ನಂತೆ ಮಾಣಿ ಆ ಪಾರ್ಟಿಗೆ ಹೊರೆಯಾಗುವುದು ಗ್ಯಾರಂಟಿ!!

■ ವರದಿಗಾರ

ಪೂಜಾರಿ ಅಂದಮೇಲೆ ಗಂಟೆ ಹೊಡೀತಾಯಿರಬೇಕು

"ಕರ್ನಾಟಕದಲ್ಲಿ ನಡೆದಾಡುವ ದೇವರು ಯಾರಪ್ಪಾ ಅಂತ ಕೇಳಿದ್ರೆ, ಒಂದು ಸಿದ್ದಗಂಗೆ ಶಿವಕುಮಾರ ಸ್ವಾಮಿಗಳು. ಎರಡನೆಯವರು ನಮ್ಮ ಪೇಜಾವರ ಶ್ರೀಗಳು..." ಈ ಅಣಿಮುತ್ತು ಯಾರ ಬಾಯಿಂದ ಬಿದ್ದಿರಬಹುದು ಹೇಳಿ? ಕರ್ನಾಟಕದ ಮಟ್ಟಿಗೆ ಇಂತಹ ಮಾತನಾಡುವ ಮಾತಿನಮಲ್ಲ ಇನ್ಯಾರಿದ್ದಾರೆ? ನಮ್ಮ ಇಬ್ರಾಹಿಂ ಸಾಹೇಬರು! ಇಬ್ರಾಹಿಂ ಈ ಮಾತನಾಡಿದಾಗ ಪೇಜಾವರ ಶಿಷ್ಯರೇ ತುಸು ಹೊತ್ತು ಗಲಿಬಿಲಿಯಾಗಿ "ಇದು ನಿಜಕ್ಕೂ ನಂಬಲನರ್ಹವಾದ ಮಾತು. ಇಬ್ರಾಹಿಂ ತಮಾಷೆ ಮಾಡಿರಬಹುದು" ಎಂದು ಅನುಮಾನಗೊಂಡರಂತಲ್ಲಾ. ಆದರೆ ಇಬ್ರಾಹಿಂ ಮಾತಿನ ಇತಿಹಾಸವನ್ನು ಗಮನಿಸಿದರೆ, ಆತ ಸಭೆಯಲ್ಲಿ ಹೇಳುವುದೇ ಒಂದು, ಖಾಸಗಿ ಮಾತುಕತೆಯಲ್ಲಿ ಹೇಳುವ ಸತ್ಯವೇ ಬೇರೆ ಎಂದು ಸಾಬೀತಾಗಿಹೋಗಿದೆಯಲ್ಲಾ. ಆದರೂ ಪ್ರಜ್ಞಾವಂತ ಉಡುಪಿಯ ರಥಬೀದಿಯ ಜನ "ಸಕಲ ಜಾತಿಯವರಿಗೂ ಸಹಪಂಕ್ತಿ ಭೋಜನ ನೀಡುವ ಸಿದ್ದಗಂಗೆ ಸ್ವಾಮಿ ಎಲ್ಲಿ? ಪಂಕ್ತಿ ಭೋಜನದ ವಿರೋಧಿಯಾದ ಪೇಜಾವರ ಎಲ್ಲಿ? ಬಹಿರಂಗಸಭೆಯಲ್ಲಿ ಈ ಸಾಬಿ ಇಂತಹ ಸುಳ್ಳೇಳುವುದೆ?" ಎಂದು ನಕ್ಕರಂತಲ್ಲಾ, ಥೂತ್ತೇರಿ!

* * *

ಇಬ್ರಾಹಿಂನ ಇಂತಹ ಬುದ್ಧಿಗೇ ಸಿದ್ದು ಶಾನೆ ದೂರದಲ್ಲಿದ್ದಾರಂತಲ್ಲಾ. ಚಾಮುಂಡೇಶ್ವರಿಯಲ್ಲಿ ಹೆಗಲಿಗೆ ಹೆಗಲು ಕೊಟ್ಟು ಸಿದ್ದು ಗೆಲ್ಲಿಸಿದ್ದಕ್ಕೆ ತುಂಬಾ ಪ್ರತಿಫಲಗಳನ್ನು ನಿರೀಕ್ಷಿಸಿದ್ದ ಇಬ್ರಾಹಿಂ ಸಿದ್ದು ಅಂತರವನ್ನು ಕಾಯ್ದುಕೊಳ್ಳುವುದನ್ನು ಗಮನಿಸಿ "ಈ ಕುರುಬಣ್ಣನ ಗೆಲ್ಸಕ್ಕೆ ಎಷ್ಟೆಲ್ಲಾ ದುಡದೆ. ಅದ್ರೀಗ ನಾನೇನಾದ್ರು ಅರ್ಜಿ ಕೊಟ್ರೆ ಜೇಬಿನಿಂದ ಪೆನ್ನನ್ನೇ ತಗಿಯದಿಲ್ಲವಲ್ಲ ಈ ಸಿದ್ದಣ್ಣ. ಅನ್ನಂಗಿಲ್ಲ, ಆಡಂಗಿಲ್ಲ, ಇನ್ನೆಲ್ಲೂ ಹೋಗಂಗಿಲ್ಲ. ಅಂಗಾಗ್ಯದೆ ನಮ್ಮ ಕತೆ" ಎಂದು ಇಬ್ರಾಹಿಂ ಜೋರಾಗಿಯೇ ಮಾತನಾಡುತ್ತಿದ್ದಾರಂತಲ್ಲಾ, ಥೂತ್ತೇರಿ!!


* * *

ತಡವಾಗಿಯಾದರೂ ಚೆಡ್ಡಿಗಳ ವಿಕಾರ ಮನಸ್ಸು ಭಾರತದಾದ್ಯಂತ ಅನಾವರಣಗೊಳ್ಳುತ್ತಿದೆ. ಚೆಡ್ಡಿ ದಯಾಶಂಕರ ಸಿಂಗ್ ಎಂಬ ಮೂರ್ಖ ಇಡೀ ಚೆಡ್ಡಿ ಸಮೂಹದ ಅಂತರಂಗದ ಅಸಹ್ಯಕರ ಭಾವನೆಗಳಿಗೆ ಮಾತು ಕೊಟ್ಟಿದ್ದಾನೆ. ಎಂದಿನಂತೆ ಮಾತಿನಮಲ್ಲ ಮೋದಿ ಮೌನಕ್ಕೆ ಶರಣಾಗಿದ್ದಾನೆ. ಆದರೆ ದಲಿತ ದ್ವೇಷವನ್ನು ತಮ್ಮ ರಕ್ತದಲ್ಲೇ ಕಾಪಾಡಿಕೊಂಡು ಬಂದಿರುವ ಉತ್ತರ ಪ್ರದೇಶದ ಮೇಲ್ಜಾತಿ ಮನಸ್ಸುಗಳು ಮಾಯಾವತಿಯ ಕಡೆಯಿಂದಲೇ ದಯಾಶಂಕರ್ ಸಿಂಗ್‌ನ ಕುಟುಂಬಕ್ಕೆ ಅವಮಾನವಾಗಿದೆ ಎಂಬ ಕೇಸು ಜಡಿದಿದೆಯಲ್ಲಾ. ದೂರದ ಮಾತಂತಿರಲಿ. ಬಾಬಾಬುಡನ್‌ಗಿರಿಯ ಬುಡದಲ್ಲೇ ಉತ್ತರ ಪ್ರದೇಶ, ಗುಜರಾತನ್ನು ಮೀರಿಸುವ ಘಟನೆಗಳು ನಡೆದಿದೆಯಲ್ಲಾ. ಮಲಯಾಳಿ ಮಾಂತ್ರಿಕನಂತೆ ಕಾಣುವ ಚಿಕ್ಕಮಗಳೂರು ರಾಜಕಾರಣಿಯ ಬೆಂಬಲಿಗರ ಉಪಟಳ ಹತ್ತಿಕ್ಕಲು ಪಶ್ಚಿಮ ವಲಯದ ಐಜಿಪಿ ಸಾಹೇಬರೇ ಬರುವಂತಾಗಿದೆಯಲ್ಲಾ, ಥೂತ್ತೇರಿ!!

* * *

ಪೂಜಾರಿಯ ಕೆಲಸವೇನೆಂದರೆ ಆಗಾಗ್ಗೆ ಗಂಟೆ ಹೊಡೆಯುವುದು. ಇಂತಹ ಅಭ್ಯಾಸವನ್ನು ಮುಂದುವರಿಸಿಕೊಂಡು ಬಂದಿರುವ ಜನಾರ್ದನ ಪೂಜಾರಿ ಮತ್ತೆ ಸಿದ್ದು ವಿರುದ್ಧ ಗಂಟೆ ಬಾರಿಸಿದೆಯಲ್ಲಾ. ಕರ್ನಾಟಕದಲ್ಲಿ ಈಚೆಗೆ ನಡೆದ ಉಪನ್ಯಾಸಕರು, ಪೊಲೀಸರು, ಸಾರಿಗೆ ಸಿಬ್ಬಂದಿ ಇವರೆಲ್ಲಾ ಸರಣಿಯೋಪಾದಿಯಲ್ಲಿ ಮುಷ್ಕರ ನಡೆಸಿದ್ದಾರೆ. ಇದರಲ್ಲಿ ಬೇಡಿಕೆ ಕಾಲು ಪರಸ್ಸೆಂಟಿದ್ದರೆ, ಪ್ರಚೋದನೆ ಮುಕ್ಕಾಲು ಭಾಗ. ಸದರಿ ಇಲಾಖೆಗಳಲ್ಲಿ ಸೇರಿಕೊಂಡಿರುವ ಹಲವು ಹುಂಬರಿಗೆ "ಈ ಸಿದ್ದರಾಮಯ್ಯನಿಗೆ ಹಲವಾರು ಭಾಗ್ಯಗಳನ್ನು ಕರುಣಿಸಲು ಹಣವಿದೆ. ನಿಮಗೆ ಸಂಬಳ ಹೆಚ್ಚು ಮಾಡಲು ಕಾಸಿಲ್ಲವೆ? ಜೋರಾಗಿ ಕೂಗಿ ಪ್ರತಿಭಟಿಸಿ, ನಿಮ್ಮ ಹಿಂದೆ ನಾವಿದ್ದೇನೆ" ಎಂಬ ಅತೃಪ್ತ ನಾಯಕರ ಪ್ರಚೋದನೆಗಳೇ ಕಾರಣವಾಗಿವೆಯಂತಲ್ಲಾ. ಇಂತಹ ಪ್ರಚೋದನೆಗಳ ಮರ್ಮವನ್ನರಿಯದ ಪೂಜಾರಿ "ಈ ಸಿದ್ದರಾಮಯ್ಯನ ಬದಲಿಗೆ ಮೋಟಮ್ಮ, ರೇವಣ್ಣ, ಪರಮೇಶ್ವರ್‌ನನ್ನು ಮುಖ್ಯಮಂತ್ರಿ ಮಾಡುತ್ತೇನೆ" ಎಂದು ಕೂಗುತ್ತಿರುವುದನ್ನು ಕೇಳಿಸಿಕೊಂಡ ಮಂಗಳೂರು ಜನ "ಈ ಪೂಜಾರಿಗೆ ತಲೆ ಸಮ ಇಲ್ಲ ಅಂತ ನಾವು ಮೊದಲೇ ಗುರುತಿಸಿ ಮೂರು ಬಾರಿ ಸೋಲಿಸಿದ್ದೇವೆ. ಅದಕ್ಕೇ ಇರಬಹುದು ಈತನ ಗಂಟೆಗೆ ಸಿದ್ದು ಕ್ಯಾರೆ ಎನ್ನುತ್ತಿಲ್ಲ" ಎಂದು ನಕ್ಕರಂತಲ್ಲಾ, ಥೂತ್ತೇರಿ!!!

* * *





ಮಂಡ್ಯ ಜಿಲ್ಲೆಯ ಜನತಾದಳದ ಜಗಳ ಉತ್ತರ ಪ್ರದೇಶದ ಚೆಡ್ಡಿಗಳು ಮತ್ತು ಮಾಯಾವತಿ ಕಡೆಯವರ ಜಗಳದ ಭಾಷೆಗಿಂತಲೂ ಕೆಳಗಿಳಿದಿದೆಯಲ್ಲಾ. ಕುಮಾರಣ್ಣ ಮತ್ತು ಚಲುವಣ್ಣನ ಅಭಿಮಾನಿಗಳು ದಿನಬೆಳಗಾಯ್ತೆಂದರೆ ಪರಸ್ಪರ ಫೋನ್ ಮಾಡಿಕೊಂಡು ಮಾತಾಡುತ್ತಾರಂತಲ್ಲಾ. ಅವರ ಸಂಭಾಷಣೆ ಹೀಗೆ ನಡೆಯುತ್ತಂತಲ್ಲಾ:

"ನಮ್ಮ ಕುಮಾರಣ್ಣನ್ನೆ ಟೀಕೆ ಮಾಡ್ತಿಯಲ್ಲ. ಯಾರಿಗುಟ್ಟಿದ್ದಿಲ ನೀನು?"

"ನಾನು ನಮ್ಮಪ್ಪನಿಗೇ ಹುಟ್ಟಿದಿನಿ. ನೀನ್ಯಾರಿಗುಟ್ಟಿದ್ದಿಲ್ಲ?"

"ನಿಮ್ಮಪ್ಪ ನಿಮ್ಮವ್ವ ಕಪ್ಪಗವ್ರೆ. ನೀನು ಬೆಳ್ಳಗಿದ್ದಿ. ಯಾರಿಗುಟ್ಟಿದಿ ಹೇಳ್ಲ."

"ನಿಮ್ಮಪ್ಪ ನೋಡಿದ್ರೆ ಆರಡಿಯವನೆ. ನೀನು ನಾಕಡಿ ಇದ್ದಿ. ನೀನ್ಯಾರಿಗುಟ್ಟಿದ್ದಿ ಹೇಳ್ಲ?"

"ನಿನ್ನ ಹುಟ್ಟಿಲ್ಲ ಅನ್ನಿಸಿಬುಡ್ತಿನಿ."

"ಇನ್ನೊಂದು ಸತಿ ಹುಟ್ಟಿಬಂದ್ರೂ ಆಗದಿಲ್ಲ."

ದಿನ ಬೆಳಗಾಯ್ತೆಂದರೆ ದಳದ ದಾಂಡಾಟಿ ಜಗಳ ಈ ಮಟ್ಟಕ್ಕೆ ಬೆಳೆದು ಇಂತಹ ಭಾಷೆಯ ಜಗಳದಲ್ಲೇ ತಮ್ಮ ನಾಯಕರ ಗಮನ ಸೆಳೆದು ನಿಷ್ಠೆ ತೋರಲು ಹೊರಟ ಅನಾಗರಿಕರ ರೋಷ ನೋಡಿದರೆ ಮುಂದೆ ಮಂಡ್ಯದಲ್ಲಿ ಏನಾದರೂ ಆಗಬಹುದಂತಲ್ಲಾ. ಜಾತ್ಯತೀತ ಜನತಾ ದಳದ ರಾಜಕೀಯ, ಪ್ರಣಾಳಿಕೆ, ಅದರ ಕಾರ್ಯಕ್ರಮ ಮತ್ತು ತಾತ್ವಿಕ ಭಿನ್ನಾಭಿಪ್ರಾಯಗಳೆಲ್ಲಾ ಕಾಣೆಯಾಗಿ ಕಾರ್ಯಕರ್ತರ ಹುಟ್ಟಿನ ಮೂಲಗಳು ಭುಗಿಲೇಳುವಂತಹ ಕ್ಷೋಭೆ ಸೃಷ್ಟಿಯಾಗುತ್ತಿರುವುದು ಒಂದು ವಿಪರ್ಯಾಸವಲ್ಲದೇ,

ಥೂತ್ತೇರಿ

ಯಾಹೂ ▸

ಥೂತ್ತೇರಿ!!

* * *

"ಕುಮಾರಣ್ಣನನ್ನ ನನ್ನ ಕೈಗೆ ಕೊಡಿ. ಅದ್ಯಂಗೋ ನಾವು ಅವರನ್ನು ಮತ್ತೆ ಮುಖ್ಯಮಂತ್ರಿ ಮಾಡೇ ಮಾಡ್ತೀವಿ" ಎಂದು ಮಾಗಡಿ ಬಾಲಕೃಷ್ಣ ಪ್ರಜಾಪ್ರಭುತ್ವಕ್ಕೆ ಮತ್ತೆ ದೇವೇಗೌಡರಿಗೆ ಸವಾಲಾಕುತ್ತಿರುವ ಈ ಸಮಯದಲ್ಲಿ ಕುಮಾರಣ್ಣ ಮತ್ತೆ "ಮುಂದಿನ 2018ರ ನಂತರ ನಿವೃತ್ತನಾಗುತ್ತೇನೆ" ಎಂದು ಹೆದರಿಸಿದ್ದಾರಲ್ಲಾ. ಈ ಬಗ್ಗೆ ಅವರನ್ನು ಕೇಳಿ ನಿವೃತ್ತಿ ಖಚಿತ ಮಾಡಿಕೊಳ್ಳಲು ಫೋನ್ ಮಾಡಿದರೆ ರಿಂಗಾಯ್ತು.

ರಿಂಗ್‌ಟೋನ್ : "ನಿನ್ನೊಲುಮೆ ನಮಗಿರಲಿ ತಂದೇ, ಕೈಹಿಡಿದು ನೀ ನಡೆಸು ಮುಂದೆ."

"ಹಲೋ ಯಾರು?"

"ನಾನು ಸಾರ್ ಯಾಹು."

"ಏನೇಳಿ ಯಾಹು ಅವ್ರೆ."

"ಬಿಜಿನ ಸಾರ್?"

"ನಮ್ಮ ಕೆಎಸ್‌ಆರ್‌ಟಿಸಿ ಬ್ರದರ್ಸ್‌ಗಳ ಜೊತೆ ಇದ್ದಿನಿ."

"ಏನಂತಾರೆ ಸಾರ್ ಅವ್ರು?"

"ಈ ಸರ್ಕಾರ ನನ್ನನ್ನ ಮಾತಿಗೆ ಕರದ್ರೆ ಪ್ರಾಬ್ಲಂ ಸಾಲು ಮಾಡ್ತಿನಿ."

"ಅಲ್ಲ ಸಾರ್, ಆ ಬಿಜೆಪಿಗಳ ಜೊತೆ ಸೇರಿಕೊಂಡು ಸದನನೆ ಹಾಳು ಮಾಡಿದ್ರಿ. ಅಂತದ್ರಲ್ಲಿ ನಿಮ್ಮನ್ನ ಕರೀತಾರಾ...?"

"ನಾವ್ರು ಸದನವನ್ನು ಹಾಳು ಮಾಡಲಿಲ್ಲ. ಅವ್ರುರೇ ಅಂಥ ಪರಿಸ್ಥಿತಿಯನ್ನ ತಯಾರು ಮಾಡಿಕೊಂಡು, ಕೆಟ್ಟ ನಡವಳಿಕೆ ಏನಿದೆ ಅದನ್ನು ಪ್ರದರ್ಶನ ಮಾಡಿ ಸದನ ಮುಂದೂಡಿದ್ರು."

"ಅಲ್ಲ ಸಾರ್, ನೀವ್ರು ಮಾಜಿ ಮುಖ್ಯಮಂತ್ರಿಯಾಗಿ ಒಳ್ಳೆ ವಿರೋಧಿ ನಾಯಕರಾಗಿ ಆ ಸೈಕಿಕ್ ಗಣಪತಿ ಆತ್ಮಹತ್ಯೆ ವಿಷಯ ತಗೊಂಡು ಯಾಕ್ ಸಾರ್ ಸದನನೆ ಹಾಳು ಮಾಡಿದ್ರಿ?"

"ನೋಡಿ, ಗಣಪತಿ ಮುಂದೆ ಜೆಡಿಎಸ್ ಸರ್ಕಾರ ಬರ್ಲಿ ಅಂತ ಹೇಳತಿದ್ರು. ಅಂದ್ರೆ ಅವ್ರುರು ನಮ್ಮ ಮೇಲೆ ಇಟ್ಟಿರತಕ್ಕಂಥ ಅಭಿಮಾನಕ್ಕೆ ಗೌರವ ಕೊಡತಕ್ಕಂತ ಪರಿಸ್ಥಿತಿ ನಿರ್ಮಾಣ ಆಯ್ತು. ಅದಕ್ಕಾಗಿ ನಾನು ಹೋರಾಟ ಮಾಡಬೇಕಾಯ್ತು."

"ಚೆಡ್ಡಿಗಳೇನೋ ಯಲ್ಲಾನು ವಿರೋಧ ಮಾಡೋ ಮೈಂಡ್‌ಸೆಟ್ಟಿನೋರು. ನೀವಾದ್ರು ದೇವೇಗೌಡ್ರ ಕೇಳಿ ಮುಂದುವರಿಬೇಕಿತ್ತು."

"ತಂದೆಯವರನ್ನ ಕೇಳಿ ನಾನೀಗ ರಾಜಕಾರಣ ಮಾಡ್ತಾಯಿದ್ದಿನಿ."

"ಅಂಗಾದ್ರೆ 2018ಕ್ಕೆ ಗ್ಯಾರಂಟಿ ನಿವೃತ್ತಿ ಆಗ್ತಿರಲ್ಲವ ಸಾರ್?"

"ಆ ತರ ಆಗಲ್ಲ. ಈ ಸಿದ್ದರಾಮಯ್ಯನ ಸರ್ಕಾರ ನೋಡಿದ್ರೆ ನಾವು ಕನಿಷ್ಠ 56 ಸೀಟು ಬರ್ತೀವಿ."

"ಅಲ್ಲಿಗೆ ಇನ್ನೊಂದಾಟ ಇದೆ ಅಂದಂಗಾಯ್ತು."


"ನೋಡನ ಇರಿ."

"ಸಾರ್, ಮೊದ್ಲು ಜಮೀರ್ ಅದ್ಮೇಲಿ ಸೇರಿಕೊಂಡು ರಾತ್ರಿಯೆಲ್ಲಾ ಕುಡಿತ, ಸಿಗರೇಟ್ ಸೇದಿಕೊಂಡು ಈ ಕರ್ನಾಟಕಕ್ಕೆ ಏನು ಮಾಡಬೇಕು. ಅನ್ನದನ್ನ ಚರ್ಚೆ ಮಾಡತಿದ್ರಿ. ಈಗ ಬಲ್ಲಿ ಸೇರತಿರಿ ಸಾರ್?"

"ಎಲ್ಲೂ ಸೇರತಾಯಿಲ್ಲ. ಅದ್ಯೆ ರಾಜಕಾರಣನೇ ಬೋರಾಗಿದೆ ಕಂಡ್ರಿ."

"ಥೂತ್ತೇರಿ!!!" ■

ಬಳ್ಳಾರಿ: ಭೂಗಳ್ಳ ಪ್ರತಾಪರೆಡ್ಡಿಯ ಗೂಂಡಾಗಿರಿ !



ಎನ್ ಪ್ರತಾಪರೆಡ್ಡಿ


ಭೂಲೂಟಿ, ಅಕ್ರಮ ಗಣಿಗಾರಿಕೆ ಇತ್ಯಾದಿ ಪ್ರಕರಣಗಳಿಂದ ಕುಖ್ಯಾತಿಗೆ ಒಳಗಾಗಿರುವ ಬಳ್ಳಾರಿ ಜಿಲ್ಲೆ ಸದಾ ಒಂದಿಲ್ಲೊಂದು ಕಾರಣಕ್ಕೆ ಸುದ್ದಿಯಲ್ಲಿರುತ್ತದೆ. ಇಲ್ಲಿನ ಕಾಂಗ್ರೆಸ್‌ನ ಪ್ರಭಾವಿ ನಾಯಕರು ಸಿಕ್ಕಸಿಕ್ಕಲೆಲ್ಲಾ ಭೂಮಿ ಲಪಟಾಯಿಸುವುದರ ಜೊತೆಗೆ ಅದನ್ನು ವಿರೋಧಿಸುವವರ ಮೇಲೆ ಹಲ್ಲೆ, ದೌರ್ಜನ್ಯ ನಡೆಸುವುದು ಮತ್ತು ಕೊಲೆ ಬೆದರಿಕೆ ಹಾಕುವುದು ಸಾಮಾನ್ಯವಾಗಿಬಿಟ್ಟಿದೆ. ಜಿಲ್ಲೆಯ ಬಿಜೆಪಿ ನಾಯಕರು ಗಣಿಲೂಟಿಯಿಂದ ತಮ್ಮ ತಿಜೋರಿ ತುಂಬಿಸಿಕೊಂಡು ಸೆರೆವಾಸ ಅನುಭವಿಸಿದ್ದಾಗಿದೆ. ಇನ್ನು ದಲಿತರ, ಹಿಂದುಳಿದವರ ಭೂಮಿಯನ್ನು ಕಬಳಿಸಿ ಮೆರೆಯುತ್ತಿರುವ ಕಾಂಗ್ರೆಸ್ ನಾಯಕರಿಗೂ ಅಂತಹದ್ದೊಂದು ಗತಿ ಬರುವುದು ಬಾಕಿಯಿದೆ.

ಬಳ್ಳಾರಿ ನಗರಕ್ಕೆ ಹೊಂದಿಕೊಂಡಂತಿರುವ ಬಂಡಿಹಟ್ಟಿಯ 131 ಎಕರೆ ಭೂಒತ್ತುವರಿ ಪ್ರಕರಣದಲ್ಲಿ ದಲಿತರಿಗೆ ಆಗುತ್ತಿರುವ ಅನ್ಯಾಯ ಅಷ್ಟಿಷ್ಟಲ್ಲ. ಕೋಟ್ಯಂತರ ರೂಪಾಯಿ ಬೆಲೆಬಾಳುವ ಬಡವರ, ದಲಿತರ ಭೂಮಿಗೆ ಬುಡಾ (ಬಳ್ಳಾರಿ ನಗರಾಭಿವೃದ್ಧಿ ಪ್ರಾಧಿಕಾರ) ಮಾಜಿ ಅಧ್ಯಕ್ಷ ಎನ್.ಪ್ರತಾಪರೆಡ್ಡಿ ಕನ್ನಹಾಕಿ ಕೂತಿದ್ದಾನೆ. ಈ ಹಿಂದೆಯೇ ಪತ್ರಿಕೆ ಪ್ರತಾಪರೆಡ್ಡಿಯ ಭೂಕಬಳಿಕೆ ಬಗ್ಗೆ ವಿಸ್ತೃತ ವರದಿಯನ್ನು ಪ್ರಕಟಿಸಿತ್ತು. ಇದೀಗ ಈತ ಭೂಒತ್ತುವರಿ ವಿರುದ್ಧ ಹೋರಾಟ ನಡೆಸುತ್ತಿರುವ ದಲಿತ ಮುಖಂಡ ಕರಿಯಪ್ಪ ಗುಡಿಮನಿ ಮೇಲೆ ತನ್ನ ಚೇಲಾಗಳನ್ನು ಬಿಟ್ಟು ಹಲ್ಲೆ ನಡೆಸುವ ಮೂಲಕ ಬಳ್ಳಾರಿ ಪೊಲೀಸರ ಕಾನೂನು ಸುವ್ಯವಸ್ಥೆಯನ್ನು ಅಕ್ಷರಶಃ ಅಣಕಿಸಿದ್ದಾನೆ.

ಬಳ್ಳಾರಿ ನಗರದ ಹೊರವಲಯದಲ್ಲಿರುವ ಬಂಡಿಹಟ್ಟಿ ಮತ್ತು ದಾನಪ್ಪ ಬೀದಿಯ 44 ಕುಟುಂಬಗಳಿಗೆ 1970-71ರಲ್ಲಿ ಭೂನ್ಯಾಯಮಂಡಳಿಯಿಂದ 131 ಎಕರೆ ಭೂಮಿ ಮಂಜೂರಾಗಿತ್ತು. 1994 ರಿಂದ 1999 ರವರೆಗೆ ಬುಡಾ ಅಧ್ಯಕ್ಷನಾಗಿದ್ದ ಕಾಂಗ್ರೆಸ್‌ನ ಎನ್. ಪ್ರತಾಪರೆಡ್ಡಿ ಅಧಿಕಾರ ದುರ್ಬಳಕೆ ಮಾಡಿಕೊಂಡು ಕೋಟಿ ಬೆಲೆಬಾಳುವ ಈ ಜಮೀನನ್ನು ತನ್ನ ಮತ್ತು ತನ್ನ ಪತ್ನಿಯ ಹೆಸರಿಗೆ ಲಪಟಾಯಿಸಿದ್ದ. 2005ರಲ್ಲಿ ಎಕರೆಗೆ 15 ಸಾವಿರ ರೂ.ಗಳಂತೆ ಕಾನೂನುಬಾಹಿರವಾಗಿ ಅಕ್ರಮ ಖಾತೆಯನ್ನೂ ಮಾಡಿಸಿಕೊಂಡಿದ್ದಾನೆ. ಅಲ್ಲದೇ ಅಲ್ಲಿನ ಫಲಾನುಭವಿಗಳನ್ನು ಬಲವಂತವಾಗಿ ಒಕ್ಕಲೆಬ್ಬಿಸುವ ಕೆಲಸ ಶುರು ಮಾಡಿದ್ದಾನೆ. ಪರಿಶಿಷ್ಟ ಜಾತಿ, ಪಂಗಡ, ಕುರುಬ ಸಮುದಾಯ ಸೇರಿದಂತೆ 44 ಕುಟುಂಬಗಳು ಇದನ್ನು ವಿರೋಧಿಸಿದಾಗ ಅವರ ಮೇಲೆ ಹಲ್ಲೆ, ದೌರ್ಜನ್ಯ ನಡೆಸಿ ಕೊಲೆ ಬೆದರಿಕೆ ಸಹ ಹಾಕಿಸಿದ್ದಾನೆ. ಇದರಿಂದ ಆ ಬಡಪಾಯಿಗಳಿಗೆ ದಾರಿ ಕಾಣದಂತಾಗಿತ್ತು. ಅದೇವೇಳೆ ಬಳ್ಳಾರಿ ಜಿಲ್ಲೆಯ ಶ್ರೀರಾಮ ರಂಗಾಪುರದಲ್ಲಿ ಕರ್ನಾಟಕ ಜನಶಕ್ತಿ ಹಾಗೂ ಕರ್ನಾಟಕ ಮಾದಿಗ ರಕ್ಷಣಾ ವೇದಿಕೆಗಳು 'ನಮ್ಮ ಭೂಮಿ ನಮ್ಮ ಹಕ್ಕು' ಅಭಿಯಾನದಡಿ ಯಶಸ್ವಿ ಭೂಹೋರಾಟ ನಡೆಸಿದ್ದನ್ನು ಕಣ್ಣಾರೆ ಕಂಡ ಬಂಡಿಹಟ್ಟಿಯ ಜನ ಪ್ರತಾಪರೆಡ್ಡಿಯ ಅಟ್ಟಹಾಸದಿಂದ ತಮಗೆ ಮುಕ್ತಿ ದೊರಕಿಸಿಕೊಡುವಂತೆ ಆ ಸಂಘಟನೆಗಳ ಮೊರೆ ಹೋಗಿದ್ದರು. ಈ ಹೋರಾಟದಲ್ಲಿ ಮುಂಚೂಣಿಯಲ್ಲಿದ್ದ ಮುಖಂಡರಾದ ಕರಿಯಪ್ಪ ಗುಡಿಮನಿರವರನ್ನು ಸಂಪರ್ಕಿಸಿ ತಮ್ಮ ಅಳಲನ್ನು ತೋಡಿಕೊಂಡು ನ್ಯಾಯ ಕೊಡಿಸಬೇಕೆಂದು ಮನವಿ ಮಾಡಿದ್ದರು.

ಬಳ್ಳಾರಿ ಜಿಲ್ಲೆಯ ಶ್ರೀರಾಮರಂಗಾಪುರದಲ್ಲಿ 1970-71ರಲ್ಲಿ ಭೂನ್ಯಾಯ ಮಂಡಳಿಯು ಹಲವು ಕುಟುಂಬಗಳಿಗೆ 116 ಸರ್ವೇ ನಂಬರ್‌ನಲ್ಲಿ 209 ಎಕರೆ ಭೂಮಿ ಮಂಜೂರು ಮಾಡಿತ್ತು. ಈ ಎಲ್ಲಾ ಕುಟುಂಬಗಳು ಬಹಳ ವರ್ಷಗಳಿಂದ ಅಲ್ಲಿನ ಭೂಮಾಲೀಕ ಭೀಮನೇನಿ ಕೊಂಡಯ್ಯನ ಮನೆಯಲ್ಲಿ ಜೀತ ಮಾಡುತ್ತಿದ್ದ ಕುಟುಂಬಗಳಾಗಿದ್ದವು. ತಮ್ಮ ಹೆಸರಿಗೆ ಭೂಮಿ ಬಂದರೂ ಕೂಡ ಭೂಮಾಲೀಕ ಭೀಮನೇನಿ ಕುಟುಂಬವನ್ನು ಎದುರು ಹಾಕಿಕೊಂಡು ಉಳುಮೆ ಮಾಡುವ ಧೈರ್ಯವನ್ನು ಯಾರೂ ಮಾಡಿರಲಿಲ್ಲ. ಈ ಜಮೀನನ್ನು ಲಪಟಾಯಿಸುವ ಸಲುವಾಗಿ ಭೀಮನೇನಿ ಕುಟುಂಬ ಒಮ್ಮೆ ಈ ಭೂಫಲಾನುಭವಿಗಳಿಗೆಲ್ಲ ಹೊಸಪೇಟೆ ಸಬ್ ರಿಜಿಸ್ಟ್ರಾರ್ ಆಫೀಸ್‌ಗೆ ಬನ್ನಿ ಅಂತ ಫರ್ಮಾನು ಹೊರಡಿಸಿತ್ತು. ರಾಮಚಂದ್ರ ಎಂಬುವವರು ಇದನ್ನು ವಿರೋಧಿಸಿ ಕರ್ನಾಟಕ ಮಾದಿಗ ರಕ್ಷಣಾ ವೇದಿಕೆ ಮತ್ತು ಕರ್ನಾಟಕ ಜನಶಕ್ತಿಯ ಗಮನಕ್ಕೆ ತಂದಿದ್ದರು. ಇದನ್ನು ಗಂಭೀರವಾಗಿ ಪರಿಗಣಿಸಿದ ಸಂಘಟನೆಗಳು ನಿರಂತರವಾಗಿ ದಾಖಲೆಗಳನ್ನು ಸಂಗ್ರಹಿಸಿ ಅಲ್ಲಿನ ಜನರನ್ನು ಸಂಘಟಿಸಿ 'ನಮ್ಮ ಭೂಮಿ ನಮ್ಮ ಹಕ್ಕು' ಎಂಬ ಘೋಷಣೆಯಡಿ ದೊಡ್ಡ ಹೋರಾಟ ಮಾಡಿತ್ತು. ಅದರ ಫಲವಾಗಿ 2013ರ ಜುಲೈನಲ್ಲಿ ಅಲ್ಲಿನ 13 ಕುಟುಂಬಗಳಿಗೆ 134 ಎಕರೆ ಭೂಮಿಯನ್ನು ಭೀಮನೇನಿ ಕೊಂಡಯ್ಯನಿಂದ ಬಿಡುಗಡೆಗೊಳಿಸಿ ಫಲಾನುಭವಿಗಳಿಗೆ ಹಂಚಲಾಗಿತ್ತು. ಇಂತಹದೇ ಮತ್ತೊಂದು ಪ್ರಕರಣದಲ್ಲಿ ಹಂಪಿ ಸಮೀಪದ ಕಡ್ಡಿರಾಂಪುರದಲ್ಲಿ 3 ಜನ ರೈತರಿಗೆ ಸೇರಿದ್ದ 56/ಎ ಸರ್ವೇ ನಂಬರಿನ 8 ಎಕರೆ ಜಮೀನನ್ನು ಅಲ್ಲಿನ ವಿದ್ಯಾರಣ್ಯ ಮಠದ ಭಾರತಿ ಸ್ವಾಮಿ ಒತ್ತುವರಿ ಮಾಡಿಕೊಂಡು ವಂಚಿಸಿದ್ದರು. ದೇವರು, ಧರ್ಮದ ಹೆಸರಿನಲ್ಲಿ ರೈತರನ್ನು ಭಯಭೀತರನ್ನಾಗಿಸಿದ್ದ ಸ್ವಾಮೀಜಿ ಅವರಿಗೆ ವಿಪರೀತ ಕಿರುಕುಳ ನೀಡಿದ್ದರು. ಬೇಸತ್ತ ರೈತನೊಬ್ಬ ಅದೇ ಹೊಲದಲ್ಲಿ ವಿಷ ಕುಡಿದು ಆತ್ಮಹತ್ಯೆ ಮಾಡಿಕೊಂಡಿದ್ದ. ವಿಷಯ ತಿಳಿದ ಕರಿಯಪ್ಪ ಗುಡಿಮನಿಯವರು ತಮ್ಮ ಸಂಘಟನೆಗಳ ನೇತೃತ್ವ ವಹಿಸಿ ಭೂಮಿ ಮೂಲ ರೈತರಿಗೆ ಸೇರುವವರೆಗೂ ಶವಸಂಸ್ಕಾರ ಮಾಡುವುದಿಲ್ಲ ಎಂದು ಪಟ್ಟು ಹಿಡಿದ ಪರಿಣಾಮವಾಗಿ ಉಪ ವಿಭಾಗಾಧಿಕಾರಿಗಳು ಆಗಮಿಸಿ ಒತ್ತುವರಿ ತೆರವುಗೊಳಿಸಿ ಮೂವರು ರೈತರಿಗೆ ಭೂಮಿ ಹಂಚಿಕೆಯಾಗುವಂತೆ ಮಾಡಿದ್ದರು. ಇದನ್ನೆಲ್ಲಾ ಪತ್ರಿಕೆಗಳಲ್ಲಿ ಗಮನಿಸಿದ ಬಂಡಿಹಟ್ಟಿ ಜನರು ತಮಗೂ ಪ್ರತಾಪರೆಡ್ಡಿ ಯಿಂದ ನ್ಯಾಯಕೊಡಿಸುವಂತೆ ಕರ್ನಾಟಕ ಜನಶಕ್ತಿ ಮತ್ತು ಕರ್ನಾಟಕ ಮಾದಿಗ ರಕ್ಷಣಾ ವೇದಿಕೆಯನ್ನು ಸಂಪರ್ಕಿಸಿದ್ದರು.


ಕೆ.ಸಿ ಕೊಂಡಯ್ಯ


ಅರ್ಜುನ್ ಭೂ ನ್ಯಾಯಮಂಡಳಿ ಸದಸ್ಯ, ಹಲ್ಲೆ ಮಾಡಿದಾತ


ಮೂಲತಃ ಬಂಡಿಹಟ್ಟಿಯ ಸರ್ವೇ ನಂಬರ್ 715ರ ಒಟ್ಟು 1084 ಎಕರೆಯು ಬ್ರಹ್ಮಶಾಸ್ತ್ರಿ ಎಂಬುವವರ ಹೆಸರಿನಲ್ಲಿತ್ತು. ಆದರೆ ಹಾಲಿ ಫಲಾನುಭವಿಗಳು ಈ ಜಮೀನಿನಲ್ಲಿ ಕಳೆದ 40 ವರ್ಷದಿಂದ ಗೇಣಿ ಪದ್ಧತಿಯಂತೆ ಕೃಷಿ ಮಾಡುತ್ತಾ ಬರುತ್ತಿದ್ದರು. 1973-74ರಲ್ಲಿ 'ಉಳುವವನೆ ಭೂಮಿಯ ಒಡೆಯ' ಎಂಬ ಕಾನೂನು ಬಂದದ್ದರಿಂದ ಬ್ರಹ್ಮಶಾಸ್ತ್ರಿಯವರು ಸರ್ಕಾರಕ್ಕೆ ತಮ್ಮ ಭೂಮಿಯನ್ನು ಬರೆದುಕೊಟ್ಟಿದ್ದರು. ಸರ್ಕಾರ ಆ ಭೂಮಿಯನ್ನು ಅಲ್ಲಿ ಉಳುಮೆ ಮಾಡುತ್ತಿದ್ದ 44 ಕುಟುಂಬಗಳಿಗೆ ಟ್ರಿಬ್ಯುನಲ್ ಆರ್ಡರ್ ಮಾಡಿ ಪಟ್ಟಾ ಕೊಟ್ಟಿತ್ತು.

ಆದರೆ ಪ್ರತಾಪ ರೆಡ್ಡಿ ಬುಡಾ ಅಧ್ಯಕ್ಷನಾದ ಮೇಲೆ ಅವನ ಭೂದಾಹಿ ಕಣ್ಣು ಫಲವತ್ತಾದ ಈ ನೆಲದ ಮೇಲೆ ಬಿದ್ದಿತ್ತು. 2005ರಲ್ಲಿ ಬ್ರಹ್ಮಶಾಸ್ತ್ರಿಯವರ ಮಗ ಕೃಷ್ಣಶಾಸ್ತ್ರಿಯನ್ನು ಪುಸಲಾಯಿಸಿ ತಮ್ಮ ರಾಜಕೀಯ ಪ್ರಭಾವ ಬಳಸಿ, ಅಧಿಕಾರ ದುರುಪಯೋಗಮಾಡಿ ಕೊಂಡು ಎಕರೆಗೆ 15 ಸಾವಿರ ಕೊಟ್ಟು ಕೊಂಡುಕೊಂಡಂತೆ ನಕಲಿ ದಾಖಲೆಗಳನ್ನು ಸೃಷ್ಟಿಸಿ ತನ್ನ ಮತ್ತು ಹೆಂಡತಿಯ ಹೆಸರಿನಲ್ಲಿ ರಿಜಿಸ್ಟರ್ ಮಾಡಿಸಿಕೊಂಡಿದ್ದ. ಹಾಗೆ ನೋಡಿದರೆ, 1973-74ರಲ್ಲೇ ಸರ್ಕಾರದ ಸುಪರ್ದಿಗೆ ಒಳಪಟ್ಟಿದ್ದ ಆ ಜಮೀನಿನ ಮೇಲೆ ಬ್ರಹ್ಮಶಾಸ್ತ್ರಿಯ ಮಗ ಕೃಷ್ಣಶಾಸ್ತ್ರಿಗೆ ನಯಾಪೈಸೆಯ ಹಕ್ಕಿಲ್ಲ. ಇದರ ವಿರುದ್ಧ ಕೋರ್ಟ್ ಮೆಟ್ಟಿಲೇರಿದ ಫಲಾನುಭವಿಗಳು ಬೆಂಗಳೂರು ಕೆಎಟಿ, ಧಾರವಾಡದ ಉಚ್ಚ ನ್ಯಾಯಾಲಯ ಮತ್ತು ಬಳ್ಳಾರಿ ಸಿವಿಲ್ ನ್ಯಾಯಾಲಯಗಳಲ್ಲಿ ಪ್ರಕರಣ ದಾಖಲಿಸಿದ್ದಾರೆ. ಅಲ್ಲದೇ ತಮ್ಮ ಭೂಮಿಯನ್ನು ಬಿಡುವುದಿಲ್ಲ ಎಂದು ಶಪಥ ಮಾಡಿ 2015 ಡಿಸೆಂಬರ್‌ನಲ್ಲಿ ಹೋರಾಟ ನಡೆಸಿ ತಮ್ಮ ಭೂಮಿಯಲ್ಲಿ ಉಳುಮೆಯನ್ನೂ ಮಾಡಿದ್ದಾರೆ.

ಭೂಗಳ್ಳರಿಗೆ ಬೆಂಬಲ

ಭೂಗಳ್ಳ ಪ್ರತಾಪರೆಡ್ಡಿಗೆ ಕಾಂಗ್ರೆಸ್‌ನ ಹಾಲಿ ವಿಧಾನಪರಿಷತ್ ಸದಸ್ಯ ಕೆ.ಸಿ.ಕೊಂಡಯ್ಯನ ಭರ್ಜರಿ ಬೆಂಬಲವಿದೆ. ತಮ್ಮ ಕುಟುಂಬಕ್ಕೆ ಸೇರಬೇಕಿದ್ದ ಜಮೀನನ್ನು ದಲಿತರಿಗೆ, ಬಡವರಿಗೆ ಬಿಡಿಸಿಕೊಟ್ಟಿದ್ದು ಇದೇ ಸಂಘಟನೆಯವರು ಎನ್ನುವ ಸಿಟ್ಟು ಕೊಂಡಯ್ಯನ ಮನದಲ್ಲಿ ಕುದಿಯುತ್ತಿದೆ. ಈಗ ಅದೇ ಸಂಘಟನೆಗಳು ಪ್ರತಾಪ್‌ರೆಡ್ಡಿಯ ಮೇಲೂ ಸಮರ ಸಾರಿರುವುದರಿಂದ ಭೂಗಳ್ಳರು ದೋಸ್ತ್‌ಗಳಾಗಿ ಬದಲಾಗಿದ್ದಾರೆ. ತಮ್ಮ ಚೇಲಾಗಳನ್ನೇ ಭೂ ನ್ಯಾಯ ಮಂಡಳಿಯ ಸದಸ್ಯರನ್ನಾಗಿ ನೇಮಿಸಿಕೊಂಡಿರುವುದಲ್ಲದೇ ಬಾಡಿಗೆ ಗೂಂಡಾಗಳನ್ನಿಟ್ಟುಕೊಂಡು ಹೋರಾಟಗಾರರ ಮೇಲೆ ಹಲ್ಲೆ ನಡೆಸುತ್ತಿದ್ದಾರೆ. ಕರಿಯಪ್ಪ ಗುಡಿಮನಿಯವರ ಮೇಲೂ ಅಂತದ್ದೇ ಹಲ್ಲೆ ನಡೆಸಲು ಹೋಗಿ ಇವತ್ತು ಇಂಗುತಿಂದ ಮಂಗನಂತಾಗಿದ್ದಾರೆ.

ಜೂನ್ 27 ರಂದು ಬಳ್ಳಾರಿಯ ಉಪವಿಭಾಗಾಧಿಕಾರಿ ಕಚೇರಿ ಬಳಿ ತೆರಳಿದ್ದ ಕರಿಯಪ್ಪ ಗುಡಿಮನಿಯವರ ಮೇಲೆ ಹಾಲಿ ಭೂನ್ಯಾಯಮಂಡಳಿ ಸದಸ್ಯ ಅರ್ಜುನ್ ಮತ್ತವನ ಚೇಲಾ ಹಲ್ಲೆ ಮಾಡಿದ್ದರು. ಈ ಅರ್ಜುನ್, ಪ್ರತಾಪ್ ರೆಡ್ಡಿ ಮತ್ತು ಕೊಂಡಯ್ಯನ ಬೆಂಬಲದಿಂದಲೇ ಭೂನ್ಯಾಯ ಮಂಡಳಿ ಸದಸ್ಯನಾಗಿರೋದು ರಹಸ್ಯವೇನೂ ಅಲ್ಲ. ಈ


ಕರಿಯಪ್ಪ ಗುಡಿಮನಿ

ಹಲ್ಲೆಯನ್ನ ಗಂಭೀರವಾಗಿ ಪರಿಗಣಿಸಿರುವ ಕರ್ನಾಟಕ ಜನಶ[...] ಸಂಘಟನೆ ಬಳ್ಳಾರಿ ಜಿಲ್ಲೆಯಾದ್ಯಂತ ಮತ್ತು ರಾಜ್ಯದ ಹಲವೆಡ[...] ಪ್ರತಿಭಟನೆಗಳನ್ನು ನಡೆಸಿದೆ. ಎಲ್ಲಾ ದಲಿತ ಸಂಘಟನೆಗಳ[...] ಕರಿಯಪ್ಪ ಗುಡಿಮನಿಯವರ ಬೆನ್ನಿಗೆ ನಿಂತಿವೆ. ಅರ್ಜುನ[...] ಮತ್ತವನ ಚೇಲಾಗಳು ಸೇರಿದಂತೆ ಹಲ್ಲೆಗೆ ಕುಮ್ಮಕ[...] ನೀಡಿದ ಪ್ರತಾಪ್‌ರೆಡ್ಡಿ ಮತ್ತು ಕೊಂಡಯ್ಯನ ಮೇಲ[...] ದೂರು ನೀಡಿದರೂ ಪೊಲೀಸರು ರಾಜಕೀಯ, ರೊಕ್ಕ[...] ಪ್ರಭಾವಕ್ಕೆ ಮಣಿದವರಂತೆ ಬಾಡಿಗೆ ಗೂಂಡಾಗಳ ಮೇಲ[...] ಎಫ್‌ಐಆರ್ ದಾಖಲಿಸಿ ಕೈತೊಳೆದುಕೊಂಡಿದ್ದಾರೆ[...] ವಿಪರ್ಯಾಸವೆಂದರೆ ಹೋರಾಟಗಾರ ಕರಿಯಪ್ಪ ಗುಡಿಮನಿ[...] ಅವರ ಮೇಲೆಯೇ ಪ್ರತಿದೂರು ದಾಖಲಾಗಿದೆ. ಹಲ್ಲೆಯ[...] ಪ್ರತಿ ದೃಶ್ಯವೂ ಅಲ್ಲಿನ ಸಿಸಿ ಕ್ಯಾಮರಾದಲ್ಲಿ ಸೆರೆಯಾಗಿವೆ[...] ಅವುಗಳ ಫೂಟೇಜ್ ನೀಡುವಂತೆ ಆರ್‌ಟಿಐ ಮೂಲಕ[...] ಕೇಳಿದರೆ ಅಧಿಕಾರಿಗಳು ಮೀನಾಮೇಷ ಎಣಿಸುತ್ತಿದ್ದಾರೆ.

ಬಡವರ ಭೂಮಿಯನ್ನು ಉಳ್ಳವರು ಲಪಟಾಯಿಸಿದ[...] ಪ್ರಕರಣಗಳು ಜಿಲ್ಲೆಯಲ್ಲಿ ಬಹಳಷ್ಟಿವೆ. ಬಳ್ಳಾರಿ ತಾಲ್ಲೂಕಿನ[...] ಚಾನಾಳ ಗ್ರಾಮದ 150 ಎಕರೆ ಹೆಚ್ಚುವರಿ ಸರ್ಕಾರಿ[...] ಭೂಮಿಯನ್ನು ಜನರಿಗೆ ಹಂಚಿದ್ದು ಅವುಗಳ[...] ದಾಖಲೆಗಳಿಲ್ಲದೆ ಜನರಿಗೆ ಭೂಮಿ ವಂಚಿಸಲಾಗಿದೆ[...] ಅದೇರೀತಿ ಪೋತಲಕಟ್ಟೆ 140 ಎಕರೆ ಜಮೀನು ಜನರಿಗ[...] ಸಿಗುತ್ತಿಲ್ಲ. ಈ ಎಲ್ಲಾ ಹೋರಾಟಗಳನ್ನು ಕರ್ನಾಟಕ ಮಾದಿಗ[...] ರಕ್ಷಣಾ ವೇದಿಕೆ ಮತ್ತು ಕರ್ನಾಟಕ ಜನಶಕ್ತಿ ಸಂಘಟನೆಗಳ[...] ಕೈಗೆತ್ತಿಕೊಂಡಿವೆ.


ಈ ನಡುವೆ ಪ್ರತಾಪರೆಡ್ಡಿ ಮತ್ತು ಕೊಂಡಯ[...] ದಲಿತರಲ್ಲಿಯೂ ಕೆಲವು ಚೇಲಾಗಳನ್ನಿಟ್ಟುಕೊಂಡು[...] ಹೋರಾಟವನ್ನು ಹತ್ತಿಕ್ಕಲು ಸಾಕಷ್ಟು ಹಣ ಖರ್ಚು[...] ಮಾಡುತ್ತಿದ್ದಾರೆ. ಒಂದಷ್ಟು ಬಿಡಿಗಾಸು ಬಿಸಾಕಿ ಅಂತವರನ್ನು[...] ಮುಂದೆಬಿಟ್ಟು ಅವರ ಮೂಲಕ ಭೂಮಿ ಕದಿಯಲು[...] ಹವಣಿಸುತ್ತಿದ್ದಾರೆ. ಇಂತವರನ್ನು ಮಟ್ಟಹಾಕಬೇಕೆಂದರ[...] ದಲಿತರು, ಪ್ರಜ್ಞಾವಂತರು ಹಾಗೂ ಶೋಷಿತರೆಲ್ಲಾ[...] ಒಂದಾಗಬೇಕಾದ ಅನಿವಾರ್ಯತೆ ಇದೆ. ಅಸಲಿಗೆ ಸರ್ಕಾರ[...] ಮಾಡಬೇಕಿದ್ದ ಕೆಲಸವನ್ನು ಪ್ರಗತಿಪರ ಸಂಘಟನೆಗಳ[...] ಮಾಡುತ್ತಿವೆ, ಆದರೆ ಸರ್ಕಾರ ಕೈಕಟ್ಟಿ ಕೂತು ಭೂಗಳ್ಳರಿಗ[...] ಪರೋಕ್ಷ ಬೆಂಬಲ ನೀಡುತ್ತಿದೆ.

ರೆಡ್ಡಿಗಳ ರಿಪಬ್ಲಿಕ್ ಕಪಿಮುಷ್ಟಿಯಿಂದ ಹೊರಬಂದು[...] ನಿಟ್ಟುಸಿರು ಬಿಟ್ಟಿದ್ದ ಬಳ್ಳಾರಿಗರಿಗೆ ಈಗ ಕಾಂಗ್ರೆಸ್ ಖೂಳರ[...] ಭೂದಾಹ ಕಂಡು ವ್ಯವಸ್ಥೆಯ ಮೇಲೆ ವಿಶ್ವಾಸವೇ[...] ನಶಿಸಿಹೋಗುವಂತಾಗಿದೆ.

● ಮುತ್ತುರಾಜ[...]


ಕರಿಯಪ್ಪ ಗುಡಿಮನಿ ಅವರ ಮೇಲಿನ ಹಲ್ಲೆ ಖಂಡಿಸಿ ಪ್ರತಿಭಟನೆ

ಕಬಾಲಿ: ಮಲೇಶಿಯಾ ತಮಿಳು ದಲಿತರ ತಲ್ಲಣ



ರಜನೀಕಾಂತ್ ಅಭಿನಯದ 'ಕಬಾಲಿ' ಹೆಚ್ಚು ಅರ್ಥವಾಗಬೇಕಾದರೆ ಮಲೇಶಿಯಾ ದೇಶಕ್ಕೆ ತಮಿಳರ ವಲಸೆ ಚರಿತ್ರೆ ಮತ್ತು ಅಲ್ಲಿ ಅವರ ಸಾಮಾಜಿಕ ಸ್ಥಿತಿಗತಿ ಬಗ್ಗೆಯೂ ಕೊಂಚ ತಿಳಿದಿರಬೇಕು. ಈ ವಲಸೆಗೆ ಸುಮಾರು 900 ವರ್ಷಗಳ ಇತಿಹಾಸವಿದೆ. ಮಹಾರಾಜ ರಾಜೇಂದ್ರ ಚೋಳ ಆಳ್ವಿಕೆ ಕಾಲದಲ್ಲಿಯೇ ತಮಿಳರು ಸೈನ್ಯ, ವ್ಯಾಪಾರ ಕಾರಣಗಳಿಂದ ಅಲ್ಲಿ ಹೋಗಿದ್ದಾರೆ; ಹೋದವರಲ್ಲಿ ಸಾಕಷ್ಟು ಮಂದಿ ಅಲ್ಲಿಯೇ ನೆಲೆ ನಿಂತಿದ್ದಾರೆ. ಸಾಮಾಜಿಕವಾಗಿ, ಆರ್ಥಿಕವಾಗಿ ಬಲಾಢ್ಯರಾಗಿದ್ದಾರೆ. ಆದರೆ ಬ್ರಿಟಿಷ್ ಪಾದುಶಾಹಿ ಕಾಲಘಟ್ಟದಲ್ಲಿ ವಲಸೆ ಹೋದವರ ಪರಿಸ್ಥಿತಿ ಇದಕ್ಕಿಂತ ಭಿನ್ನ. 'ಕಬಾಲಿ' ಹೇಳಲು ಹೊರಟಿರುವುದು ಇವರ ದುರಂತ ಕಥೆಯನ್ನೆ.

ಬ್ರಿಟಿಷರು ಮಲೇಶಿಯಾದಲ್ಲಿ ಬಹು ವಿಸ್ತಾರ ರಬ್ಬರ್, ಪಾಮ್ ಆಯಿಲ್ ಪ್ಲಾಂಟೇಶನ್‌ಗಳನ್ನು ಮಾಡಿದಾಗ ಇಂಡಿಯಾದಿಂದ ಭಾರಿ ಸಂಖ್ಯೆಯಲ್ಲಿ ಕಾರ್ಮಿಕರನ್ನು ಕರೆದುಕೊಂಡು ಹೋದರು. ಇವರಲ್ಲಿ ಹೆಚ್ಚಿನವರು ತಮಿಳುನಾಡಿನ ದಲಿತರು. ಬದುಕಿಗೆ ಹೊಸ ಆಧಾರ, ಭರವಸೆ ದೊರೆಯಿತೆಂದು ಹೋದವರಿಗೆ ನಿರಾಶೆ ಕಾದಿತ್ತು, ಅಲ್ಲಿಯೂ ಇಂಡಿಯಾದ ತಾರತಮ್ಯ ಮುಂದುವರಿದಿತ್ತು.

ಸ್ಥಳೀಯರು, ಚೀನಾದಿಂದ ಬಂದವರಿಗೆ ನೀಡುತ್ತಿದ್ದಷ್ಟು ವೇತನವನ್ನು ತಮಿಳು ದಲಿತ ಕಾರ್ಮಿಕರಿಗೆ ನೀಡುತ್ತಿರಲಿಲ್ಲ. ಇದರ ವಿರುದ್ಧ ದೊಡ್ಡಮಟ್ಟದ ಹೋರಾಟಗಳೇ ನಡೆದಿವೆ. ಪ್ಲಾಂಟೇಶನ್‌ಗಳಲ್ಲಿ ಒಂದಿಷ್ಟು ಹೆಚ್ಚಿನ ವೇತನ ದೊರೆತರೂ ಸಾಮಾಜಿಕ ಶ್ರೇಣಿಯಲ್ಲಿ, ರಾಜಕೀಯ ಅಧಿಕಾರದಲ್ಲಿ ಸೂಕ್ತ ಸ್ಥಾನಮಾನ ಇನ್ನೂ ದೊರಕಿಲ್ಲ. ಆದರೆ ಶತಮಾನಗಳ ಹಿಂದೆ ಹೋದ ಮೇಲುಜಾತಿಗಳ ತಮಿಳರು ಅಲ್ಲಿ ಸಾಮಾಜಿಕವಾಗಿ, ಆರ್ಥಿಕವಾಗಿ, ರಾಜಕೀಯವಾಗಿ ಮುಂದುವರಿದಿದ್ದಾರೆ. ದುರದೃಷ್ಟ ಎಂದರೆ ಇವರು ತಮ್ಮದೇ ನಾಡಿನಿಂದ ಬಂದ ತಮಿಳು ದಲಿತರ ನಡುವೆ ಅಂತರ ಕಾಯ್ದುಕೊಂಡಿದ್ದಾರೆ.

ಕಾರ್ಮಿಕ ಹೋರಾಟ, ಸಾಮಾಜಿಕ, ರಾಜಕೀಯ ರಂಗಗಳಲ್ಲಿ ಸೂಕ್ತ ಸ್ಥಾನಮಾನಕ್ಕಾಗಿ ನಡೆದ ಹೋರಾಟಗಳಿಂದ ಅಲ್ಲಿನ ದಲಿತರ ನಡುವೆಯೇ ಪ್ರಮುಖ ನಾಯಕರು ಹೊಮ್ಮಿದ್ದಾರೆ. ಇಂಥವರ ಜೊತೆಗೆ ಕಬಾಲಿಯಂಥ ಭೂಗತ ಜಗತ್ತಿನ ಡಾನ್ ಸಹ ಚಿಮ್ಮಿದ್ದಾರೆ. ಈ ಎಲ್ಲ ಚಿತ್ರಣವನ್ನು ಸೂಕ್ಷ್ಮವಾಗಿ ಕಟ್ಟಿಕೊಡಲು 'ಕಬಾಲಿ' ಸಿನಿಮಾ ಯತ್ನಿಸುತ್ತದೆ.

ದಲಿತರ ನಾಯಕ

ಮುಖ್ಯವಾಗಿ ನಾವಿಲ್ಲಿ ಗಮನಿಸಬೇಕಿರುವುದು ಕಬಾಲಿ ಓರ್ವ ದಲಿತ. ಜೊತೆಗೆ ಮಲೇಶಿಯಾದ ಶೋಷಿತ ದಲಿತ ಸಮುದಾಯದ ಪ್ರತಿನಿಧಿ. ಈತ ದಲಿತ ಸಮುದಾಯದ ಒಂದು ಪ್ರಬಲ ಸಂಕೇತ. ತನ್ನವರನ್ನು ಎಲ್ಲ ರೀತಿಯ ಶೋಷಣೆಗಳಿಂದ ಮುಕ್ತಗೊಳಿಸಲು ಭೂಗತ ಜಗತ್ತಿನಂಥ ವಿಭಿನ್ನ ಹಾದಿ ಹಿಡಿದವನು. ಇದು ಈತನ ಸ್ವಂತ ಇಚ್ಛೆಯೇ ನಲ್ಲ, ಹೋರಾಟದ ಬದುಕಿನ ನಡುವೆ ವಿಧಿಯಿಲ್ಲದೆ ಹಾಯ್ದುಕೊಂಡ ಹಾದಿ. ಆದರೆ ಇದು ಕ್ಷಣಕ್ಷಣಕ್ಕೂ ಮುಳ್ಳುಗಳ ಮಾರ್ಗ. ಇಲ್ಲಿ ನಡೆಯುತ್ತಾ ಹೋರಾಡುತ್ತಾ ಹೊರಟವನ ವೈಯಕ್ತಿಕ ಬದುಕೂ ಹೇಗೆ ಬಿರುಗಾಳಿಗೆ ಸಿಲುಕಿ ತತ್ತರಿಸಿಹೋಗುತ್ತದೆ ಎಂಬುದನ್ನೂ ಚಿತ್ರ ಚಿತ್ರಿಸುತ್ತದೆ.

ಇಂಥ ಒಂದು ಕಥೆಯನ್ನು ಹೇಳಲು ನಿರ್ದೇಶಕ ಪ. ರಂಜಿತ್ ತುಸು ಹೊಸತು ಎನಿಸುವ ಸಿನಿಮಾ ವ್ಯಾಕರಣ ಬಳಸಿದ್ದಾರೆ. ಆದ್ದರಿಂದಲೇ ಎಂದಿನ ರಜನಿ ಸಿನಿಮಾದ ಪರಿಭಾಷೆಯನ್ನು ಕಾಣಲು ಹೊರಟವರಿಗೆ 'ಕಬಾಲಿ' ನಿರಾಶೆ ಉಂಟು ಮಾಡಬಹುದು. ಆದರೆ ಈ ಎಲ್ಲ ಪೂರ್ವಾಗ್ರಹ ನಿರೀಕ್ಷೆಗಳನ್ನು ಬದಿಗಿಟ್ಟು ನೋಡಿದರೆ ಇದು ಒಂದು ಉತ್ತಮ ಸಿನಿಮಾ.

ಬಹುದೊಡ್ಡ ಸ್ಟಾರ್ ವ್ಯಾಲ್ಯೂ ಇರುವಂಥ ರಜನೀಕಾಂತ್ ಅಂಥವರನ್ನು ತಾರಾಗಣದಲ್ಲಿ ಇಟ್ಟುಕೊಂಡು ಅವರ ಎಂದಿನ ಮ್ಯಾನರಿಸಂಗಳು, ಪದೇಪದೇ ಹೊಮ್ಮುವ ಪಂಚಿಂಗ್ ಡೈಲಾಗ್ಸ್ ಇಲ್ಲದೇ ಇಂಥ ಒಂದು ಸಿನಿಮಾ ನಿರೂಪಿಸಲು ಹೊರಡುವುದು ಕಷ್ಟದ ಕೆಲಸ. ಆದರೆ ಇಂಥ ಸವಾಲು ಸ್ವೀಕರಿಸಿರುವ ನಿರ್ದೇಶಕ ಪ. ರಂಜಿತ್ ಗೆದ್ದಿದ್ದಾರೆ.

ಬಿಗಿಯಾದ ಚಿತ್ರಕಥೆ

ಮಲೇಶಿಯಾದ ತಮಿಳು ದಲಿತರ ಹಿಂದಿನ-ಇಂದಿನ ಸ್ಥಿತಿಗತಿಗಳನ್ನು ನಿರ್ದೇಶಕ, ಅಧ್ಯಯನ ಮಾಡಿದ್ದಾರೆ ಎಂಬುದು ಚಿತ್ರಕಥೆಯಲ್ಲಿಯೇ ಗೊತ್ತಾಗುತ್ತದೆ. ಸಿನಿಮಾ ಕೆಲವೊಮ್ಮೆ ನಿಧಾನಗತಿಯಲ್ಲಿ ಸಾಗುತ್ತದೆ. ಇದಕ್ಕೆ ಕಾರಣ ಚಿತ್ರಕಥೆ. ಉದ್ದೇಶಪೂರ್ವಕವಾಗಿಯೇ ಹೀಗೆ ಮಾಡಲಾಗಿದೆ. ಮುಖ್ಯವಾಗಿ ಅಲ್ಲಿನ ತಮಿಳು ದಲಿತ ಮಕ್ಕಳು, ಯುವಜನತೆ, ಇಂಥವರ ಪೋಷಕರ ತೊಳಲಾಟಗಳನ್ನು ಮುಟ್ಟಿಸಲು ಹೀಗೆ ಮಾಡಲಾಗಿದೆ.

ಸೂಕ್ಷ್ಮತೆಗಳು

ನೂರಾರು ಮಾತುಗಳು, ಅನೇಕ ಫ್ರೇಮುಗಳಲ್ಲಿ ಹೇಳಬೇಕಾದ ವಿಷಯಗಳನ್ನು ಒಂದೇ ಫ್ರೇಮಿನಲ್ಲಿ, ಕೆಲವೊಮ್ಮೆ ಮಾತಿಲ್ಲದೆಯೇ ಕಟ್ಟಿಕೊಡಲಾಗಿದೆ. ಜೈಲಿನಲ್ಲಿ 25 ವರ್ಷ ಕಳೆದ ಕಬಾಲಿ ಬಿಡುಗಡೆಯಾಗಿದೆ. ಜೈಲಿನ ಅಧಿಕಾರಿಗಳು ಆತನನ್ನು ಹೊರಗೆ ಕರೆದೊಯ್ಯಲು ಬಂದಿದ್ದಾರೆ. ಆಗ ಕಬಾಲಿ, ಆಂಧ್ರದ ವಿಶ್ವವಿದ್ಯಾಲಯದ ಪ್ರಾಧ್ಯಾಪಕ ಇಂಗ್ಲಿಷಿನಲ್ಲಿ ಬರೆದ 'ಮೈ ಫಾದರ್ ಬಾಲಯ್ಯ' ಓದುತ್ತಾ ಕುಳಿತಿರುತ್ತಾನೆ. ನಂತರ ಎದ್ದು ಹೊರಹೋಗುವಾಗ ಬಾಗಿಲ ಮೇಲಿನ ಬಾರ್ ಹಿಡಿದು ಪುಲ್ ಅಪ್ ವ್ಯಾಯಾಮ ಮಾಡುತ್ತಾನೆ.

ಇವೆಲ್ಲ ಕಬಾಲಿ ಅಧ್ಯಯನಶೀಲತೆ, ಭಾರತದಲ್ಲಿನ ದಲಿತರ ಸ್ಥಿತಿಗತಿಗಳನ್ನು ತಿಳಿದುಕೊಂಡಿರುವಿಕೆ, ಜೊತೆಗೆ ತನ್ನ ದೇಹವನ್ನು ಸದಾ ಹುರಿಗಟ್ಟಿಸಿದಂತೆ ಇಟ್ಟುಕೊಂಡಿರುವ ಮನಸ್ಥಿತಿ, ದೇಹಸ್ಥಿತಿಯನ್ನು ಸೂಚಿಸುತ್ತದೆ. ಮೈಮನಸುಗಳನ್ನು ಸದಾ ಎಚ್ಚರದಲ್ಲಿ, ಶಕ್ತಿಯುತವಾಗಿ ಇಟ್ಟುಕೊಂಡಿರಬೇಕೆಂಬ ಪ್ರಜ್ಞೆ ಕಬಾಲಿಗಿದೆ ಎಂಬುದನ್ನೂ ಸಂಕೇತಿಸುತ್ತದೆ.

ಕಬಾಲಿ ಪತ್ನಿ ಕುಮುದವಲ್ಲಿ ತೀರಾ ಸಣ್ಣಮನೆ ಮುಂದೆ ನಿಂತು ಗಂಡನೊಂದಿಗೆ ಮಾತನಾಡುತ್ತಿದ್ದಾಳೆ, ಮತ್ತೆ ಮೊದಲ ಮನೆಗಿಂತ ಉತ್ತಮ ಸ್ಥಿತಿ ಇರುವ ಮನೆ ಮುಂದೆ ನಿಂತು ಹೇಳುತ್ತಾಳೆ. ನಂತರ ಬೆಲೆಬಾಳುವ ಕಾರು ನಿಂತಿರುವ ದೊಡ್ಡ ಮನೆಯೊಂದರ ಮುಂದೆ ನಿಂತು ಮಾತನಾಡುತ್ತಾಳೆ. ಈ ಮೂರರಲ್ಲಿಯೂ ಆಕೆಯ ವೇಷಭೂಷಣ ಹಿನ್ನೆಲೆಗೆ ತಕ್ಕಂತೆ ಬದಲಾಗುತ್ತದೆ. ಇದರ ಮೂಲಕ ಕಬಾಲಿಯ ಆರ್ಥಿಕ ಸ್ಥಿತಿಯಲ್ಲಾದ ಬದಲಾವಣೆಗಳನ್ನು ಒಂದೇ ಒಂದು ಫ್ರೇಮಿನಲ್ಲಿ ಹೇಳಲಾಗಿದೆ. ಇದು ಸಿನಿಮಾ ಸಾಧ್ಯತೆಯನ್ನು ದುಡಿಸಿಕೊಳ್ಳುವ ರೀತಿ.

ಉಡುಪು ಮತ್ತು ಭಾಷೆ

ದಲಿತರು ತಮ್ಮನ್ನು ಮೇಲುಜಾತಿಗಳು ಇರಿಸಿರುವ ಸ್ಥಿತಿಗತಿಯಿಂದ ವಿಮೋಚನೆಗೊಳ್ಳಲು ವಿದ್ಯೆ ಜೊತೆಗೆ ಉಡುಪು ಮತ್ತು ಭಾಷೆಯೂ ಸಹಕಾರಿ ಅಂಶಗಳು ಎಂದು ಕಬಾಲಿ ನಂಬಿರುತ್ತಾನೆ. ಈ ಪ್ರಜ್ಞೆಯಿಂದಲೇ ಉತ್ತಮವಾದ ಇಂಗ್ಲಿಷ್ ಮಾತನಾಡುತ್ತಾನೆ. ಆಧುನಿಕ ಶೈಲಿಯ ಸೂಟು-ಬೂಟು ತೊಡುತ್ತಾನೆ. ಈತನ ವೇಷಭೂಷಣಗಳು ಸಹ ಪಟ್ಟಭದ್ರ ಹಿತಾಸಕ್ತಿಗಳಿಗೆ ಸಹಿಸಲು ಆಗುವುದಿಲ್ಲ. ಇದಕ್ಕಾಗಿ ಮತ್ತೆಮತ್ತೆ ಈತನನ್ನು ಎದುರಾಳಿ ವೀರಶೇಖರನ್ ವ್ಯಂಗ್ಯವಾಡುತ್ತಾನೆ, ಹೀಯಾಳಿಸುತ್ತಾನೆ. ಆತನ ದಾಳಿಗೆ ಮೊದಲು ಕಬಾಲಿಯ ಕೂಲಿಂಗ್ ಗ್ಲಾಸ್, ಸೂಟು ಗುರಿಯಾಗುತ್ತದೆ. ಇದನ್ನು ಬಲವಂತವಾಗಿ ಬಿಚ್ಚಿಸಲಾಗುತ್ತದೆ. ಇವೆಲ್ಲ ದಲಿತರು ಒಳಗಾಗುತ್ತಿರುವ ಕ್ರೌರ್ಯ, ಶೋಷಣೆಯನ್ನು ಸಮರ್ಥವಾಗಿ ಚಿತ್ರಿಸುತ್ತದೆ.

ಕಾರ್ಮಿಕ

ರಬ್ಬರ್ ಪ್ಲಾಂಟೇಶನ್‌ನಲ್ಲಿ ಕಬಾಲಿ ಕೂಡ ಓರ್ವ ಕಾರ್ಮಿಕ. ವೇತನ ತಾರತಮ್ಯದ ವಿರುದ್ಧ ಸಿಡಿದೆದ್ದವನು. ಈ ಹೋರಾಟದಲ್ಲಿ ಈತನ ಬೌದ್ಧಿಕ ಶಕ್ತಿಯೂ ಹೇಗೆ ನೆರವಾಗುತ್ತದೆ ಎಂದು ಬಹುಸೂಚ್ಯವಾಗಿ ಹೇಳಲಾಗಿದೆ. ಇಂಥ ಬುದ್ಧಿಶಕ್ತಿಯ ನೆರವಿನಿಂದಲೇ ಆತ ದಲಿತರನ್ನು ಕಾಡುತ್ತಿರುವ ಪಿಡುಗುಗಳಿಂದ ಪಾರು ಮಾಡಲು ತನ್ನದೇ ಆದ ರೀತಿಯಲ್ಲಿ ಪ್ರಯತ್ನಿಸುತ್ತಾನೆ.

ಡ್ರಗ್ಸ್ ರಾಕೆಟ್‌ಗಳು ತಮಿಳು ದಲಿತ ಬಾಲಕ, ಬಾಲಕಿಯರನ್ನ, ಯುವಜನತೆಯನ್ನ ದುರುಪಯೋಗಮಾಡಿಕೊಳ್ಳುವುದನ್ನು ತಡೆಯಲು ಯತ್ನಿಸುತ್ತಾನೆ. ಬಲಿಪಶುಗಳಾದ ಇಂಥವರನ್ನು ಸರಿದಾರಿಗೆ ತರಲು ವಸತಿಸಹಿತ ಶಾಲೆಗಳನ್ನು ಕೂಡ ಸ್ಥಾಪಿಸುತ್ತಾನೆ. ಇಂಥವರ ಜೊತೆ ತಾನೋರ್ವ ದೊಡ್ಡ ಡಾನ್ ಎಂಬ ಬಿಂಕ ತೋರದೆ ಸರಳವಾಗಿ, ಆತ್ಮೀಯವಾಗಿ ಸಂವಾದಿಸುತ್ತಾನೆ. ಇದೆಲ್ಲ ಮಲೇಶಿಯಾದಲ್ಲಿನ ಸ್ಥಿತಿಯನ್ನು ವಿವರವಾಗಿ ಹೇಳುವುದೇ ಆಗಿದೆ. ಈ ಶಾಲೆಯಲ್ಲಿ ಬರುವ ಒಂದೊಂದು ಪಾತ್ರವೂ ಮಲೇಶಿಯಾದಲ್ಲಿನ ಇಂಥ ಸಾವಿರಾರು, ಲಕ್ಷಾಂತರ ಪಾತ್ರಗಳನ್ನು ಪ್ರತಿನಿಧಿಸುತ್ತವೆ.

ಎಲ್ಲ ರೀತಿಯ ಶೋಷಣೆ ವಿರುದ್ಧ ಹೋರಾಡುತ್ತಲೇ ಮಾದಕ ಪದಾರ್ಥಗಳು, ವೇಶ್ಯಾವಾಟಿಕೆಗಳನ್ನು ಚೈನ್ ಲಿಂಕ್ ಮಾದರಿ ನಡೆಸುವ ಡಾನ್ ಅನ್ನು ಕೊಲ್ಲುತ್ತಾನೆ. ಅದಕ್ಕಿಂತಲೂ ಬಹುಮುಖ್ಯವಾಗಿ ತಾರತಮ್ಯ ನೀತಿ ಪ್ರತಿಪಾದಿಸುವ ವೀರಶೇಖರ್‌ನನ್ನು ಬಲಿ ತೆಗೆದುಕೊಳ್ಳುತ್ತಾನೆ.

ಈ ಘಟನೆಗಳೆಲ್ಲ ನಡೆಯುವುದು ಬಹು ಅಂತಸ್ತಿನ ಕಟ್ಟಡವೊಂದರ ಅಲಂಕೃತ ತಾರಸಿ ಹೋಟೆಲಿನಲ್ಲಿ. ಇಲ್ಲಿಂದ ಡಾನ್ ಶವವನ್ನು ಒದ್ದು ಕೆಳಗೆ ತಳ್ಳುತ್ತಾನೆ. ಇದು ಬಹು ಸಾಂಕೇತಿಕವಾಗಿ ಗೋಚರಿಸುತ್ತದೆ. ಈ ದೃಶ್ಯಗಳನ್ನು ಎಲ್ಲಿ ಬೇಕಾದರೂ ಚಿತ್ರಿಸಬಹುದಿತ್ತು. ಆದರೆ ಬಹುಮಹಡಿ ಕಟ್ಟಡ ಶ್ರೇಣೀಕೃತ ವ್ಯವಸ್ಥೆಯನ್ನು, ಡಾನ್ ಮತ್ತು ವೀರಶೇಖರನ್ ಆ ವ್ಯವಸ್ಥೆಯ ಉತ್ತುಂಗದಲ್ಲಿರುವ ಪಟ್ಟಭದ್ರ ಹಿತಾಸಕ್ತಿಗಳೆಂದು ಹೇಳಲ್ಪಟ್ಟಿವೆ. ಡಾನ್‌ನನ್ನು ಕೆಳಗೆ ತಳ್ಳಿ ಕಬಾಲಿ ಅಲ್ಲಿ ವಿರಾಜಮಾನನಾಗುವುದು ದಲಿತರು ಹಿಡಿಯಬೇಕಾದ ಸ್ಥಾನಮಾನಗಳನ್ನು ಸೂಚಿಸುತ್ತದೆ.

ಅಭಿನಯ

'ಕಬಾಲಿ'ಯಲ್ಲಿ ಬರುವ ಪಾತ್ರಗಳ ಪೋಷಣೆ ಉತ್ತಮ. ಯಾವ ಪಾತ್ರಕ್ಕೆ ಎಷ್ಟು ಪ್ರಾಮುಖ್ಯತೆ ಕೊಡಬೇಕೊ ಅಷ್ಟು ನೀಡಲಾಗಿದೆ. ಇನ್ನು ಅಭಿನಯಕ್ಕೆ ಬರುವುದಾದರೆ ಎಲ್ಲ ಪಾತ್ರಧಾರಿಗಳು ಕೂಡ ತಮ್ಮ ಪಾತ್ರಗಳ ಇತಿಮಿತಿ ಅರಿತು ನಟಿಸಿದ್ದಾರೆ ಎಂದು ಹೇಳಬಹುದು. ಇದೇ ಮಾತು ಮಲೇಶಿಯಾ, ತೈವಾನ್‌ಗಳ ನಟನಟಿಯರಿಗೂ ಅನ್ವಯಿಸುತ್ತದೆ.

ಕುಮುದವಲ್ಲಿ ಪಾತ್ರ ಮಾಡಿರುವ ರಾಧಿಕಾ ಆಪ್ಟೆ ಅವರ ಅಭಿನಯ ಮನೋಜ್ಞವಾಗಿದೆ. ಸಿನಿಮಾದಲ್ಲಿ ಅವರು ಕುಮುದವಲ್ಲಿ ಪಾತ್ರದೊಳಗೆ ಪರಕಾಯ ಪ್ರವೇಶ ಮಾಡಿದ್ದಾರೆ. ತುಂಬ ಭಾವುಕ ಸನ್ನಿವೇಶಗಳಲ್ಲಿಯೂ ಓವರ್ ಆ್ಯಕ್ಟಿಂಗ್ ಇರದಂತೆ ಎಚ್ಚರ ವಹಿಸಲಾಗಿದೆ. ತನ್ನ ಮಗಳನ್ನು ಆಕಸ್ಮಿಕವಾಗಿ ಭೇಟಿಯಾಗುವ ಕಬಾಲಿ ಪಾತ್ರಧಾರಿ ರಜನಿ ಕಣ್ಣುಗಳ ಮೂಲಕವೇ ತನ್ನ ಆಶ್ಚರ್ಯವನ್ನು, ದಿಗ್ಭ್ರಮೆಯನ್ನು, ಪ್ರೀತಿಯನ್ನು ಹೊರಹೊಮ್ಮಿಸುವ ರೀತಿ ಮೆಚ್ಚುಗೆಗೆ ಕಾರಣವಾಗುತ್ತದೆ. ಇದು ರಜನಿ ಅಭಿನಯದ ಶಕ್ತಿಯನ್ನೂ ತೋರಿಸುತ್ತದೆ.

ಮೈತುಂಬ ಚಿನ್ನಾಭರಣ ಧರಿಸಿರುವ, ಸದಾ ದ್ವೇಷವನ್ನೇ ಉಸಿರಾಡುವ ಡಾನ್ ವೀರಶೇಖರನ್ ಪಾತ್ರದಲ್ಲಿ ಅಭಿನಯಿಸಿರುವ ಕಿಶೋರ್, ಡಾನ್ ಟೋನಿ ಲೀ ಪಾತ್ರಧಾರಿ ವಿನ್ಸ್‌ಟನ್ ಚಾವೋ, ಜೀವಾ ಪಾತ್ರಧಾರಿ ದಿನೇಶ್ ರವಿ, ಕಬಾಲಿ ಮಗಳು ಯೋಗಿ ಪಾತ್ರಧಾರಿ ಧನಿಷ್ಕಾ, ಅಮೀರ್ ಪಾತ್ರಧಾರಿ ಜಾನ್ ವಿಜಯ್ ಅಭಿನಯವೂ ಗಮನ ಸೆಳೆಯುತ್ತದೆ.


ತಂತ್ರಜ್ಞರು

ಈ ಮೊದಲೇ ಹೇಳಿದಂತೆ ನಿರ್ದೇಶಕ ಪ. ರಂಜಿತ್, ಚಿತ್ರಕಥೆ ತಯಾರಿಕೆಯಲ್ಲಿ, ನಿರ್ದೇಶನದಲ್ಲಿ ಅಪಾರ ಪರಿಶ್ರಮ ವಹಿಸಿದ್ದಾರೆ. ಕ್ಯಾಮೆರಾಮನ್ ಜಿ.ಮುರುಳಿ ಅವರು ಚಿತ್ರಕಥೆ ಬೇಡುವ ಮಾದರಿಯ ಛಾಯಾಗ್ರಹಣ ಮಾಡಿದ್ದಾರೆ. ಒಂದು ವೇಳೆ ಇವರು ರಮ್ಯತೆಗೆ ಶರಣಾಗಿದ್ದರೆ ಚಿತ್ರ ಖಂಡಿತ ಡಲ್ ಆಗುತ್ತಿತ್ತು. ತುಸು ಹೊಸ ವ್ಯಾಕರಣದ ಸಿನಿಮಾ ಕೇಳುವ ಮಾದರಿಯಲ್ಲಿಯೇ ಪ್ರವೀಣ್ ಕೆ.ಎಲ್. ಸಂಕಲನ ಮಾಡಿದ್ದಾರೆ. ಸಂಗೀತ ನಿರ್ದೇಶಕ ಸಂತೋಷ್ ನಾರಾಯಣ್ ಸೂಕ್ತ ಹಿನ್ನೆಲೆ ಸಂಗೀತ ನೀಡಿದ್ದಾರೆ. ಹೊಸ ರೀತಿಯ ಸಿನಿಮಾ ನಿರ್ಮಾಣಕ್ಕೆ ಬಹುಕೋಟಿ ವೆಚ್ಚ ಮಾಡಿರುವ ವಿ. ಕ್ರಿಯೇಷನ್ಸ್ ಸಂಸ್ಥೆ ಪ್ರಯತ್ನವನ್ನು ಮೆಚ್ಚಲೇಬೇಕು.

ಸಾವಿರಾರು ವರ್ಷಗಳಿಂದ ದಲಿತರ ಮೇಲೆ ದೌರ್ಜನ್ಯಗಳು ನಡೆಯುತ್ತಲೇ ಇವೆ. ಅವರ ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ಹಕ್ಕುಗಳನ್ನು ದಮನ ಮಾಡಲಾಗಿದೆ. ಇದೀಗ ಅವರ ಹಕ್ಕಿನ ಆಹಾರದ ತಟ್ಟೆಗೂ ಕೈಇಟ್ಟು ಕಿತ್ತುಕೊಳ್ಳಲಾಗುತ್ತಿದೆ. ಇಂಥ ಸಂದರ್ಭದಲ್ಲಿ ದಲಿತ ನಾಯಕ ಕಬಾಲಿ ನಡೆಸುವ ಹೋರಾಟ ಹೊಸ ಮಾದರಿ ಸಂಕೇತಿಸುತ್ತಿದೆಯೇ? ಈ ಪ್ರಶ್ನೆ ಮತ್ತೆಮತ್ತೆ ಕಾಡುತ್ತಿದೆ. ಅಂದಹಾಗೆ ತಮಿಳು ದಲಿತರು ಮಾತ್ರ ಇಟ್ಟು ಕೊಳ್ಳುವ ಹೆಸರು 'ಕಬಾಲಿ' ಇಂದು ವಿಶ್ವದಾದ್ಯಂತ ಬೇರೆ ಬೇರೆ ಕಾರಣಗಳಿಂದ ಮೆರೆದಾಡುತ್ತಿದೆ. ಇದು ದಲಿತರ ಮುಂಬರುವ ಭವಿಷ್ಯದ ಸಾಧ್ಯತೆಯೂ ಆಗಿರಬಹುದಲ್ಲವೆ???

● ಕುಮಾರ್ ರೈತ

ಜೆಡಿಎಸ್ ಭಿನ್ನರ ಪಾಲಿಗೆ 'ಮೂರು' ದಾರಿ 'ನಾಲ್ಕು' ಆಯ್ಕೆ!



ಜೆಡಿಎಸ್ ಈಗ ಕುಸಿದ ಮನೆ. ಅದರಲ್ಲಿ ಎರಡು ಮಾತಿಲ್ಲ. ಆದರೆ ಆ ಕುಸಿದ ಛಾವಣಿಯಡಿಯೇ ನಡೆಯುತ್ತಿರುವ ರಾಜಕೀಯ ಕದಲಿಕೆಗಳಿವೆಯಲ್ಲ, ಅವು ಆಡಳಿತಾರೂಢ ಕಾಂಗ್ರೆಸ್‌ನ ಕಾಲೆಳೆದಾಟಕ್ಕಿಂತಲೂ, ಬಿಜೆಪಿಯ ಬೇಗುದಿಗಿಂತಲೂ ಹೆಚ್ಚು ಕುತೂಹಲ ಕೆರಳಿಸುತ್ತಿವೆ. ಒಂದು ಕಾಲಕ್ಕೆ ರಾಷ್ಟ್ರೀಯ ಪಕ್ಷವಾಗಿ ದೇಶಕ್ಕೆ ಪ್ರಧಾನಿಯ ಕೊಡುಗೆ ಕೊಟ್ಟಿದ್ದ ಪಕ್ಷವೊಂದನ್ನು 'ಪ್ರಾದೇಶಿಕ' ಪಕ್ಷಕ್ಕೆ ಇಳಿಸಿದ ಖ್ಯಾತಿ ದೇವೇಗೌಡರಿಗೆ ಸಂದರೆ, ಅಂತಹ ಜೆಡಿಎಸ್‌ನ್ನು ಹಳೇ ಮೈಸೂರು ಪ್ರಾಂತ್ಯಕ್ಕಷ್ಟೇ ಸೀಮಿತವಾಗಿಸಿದ ಗೌರವ ಮಾಜಿ ಮುಖ್ಯಮಂತ್ರಿ ಕುಮಾರಣ್ಣನಿಗೆ ಸಲ್ಲಬೇಕು. ಅದೇನು ತನೆಹೊತ್ತ ಹೆಂಗಸಿನ ದುರ್ವಿಧಿಯೋ ಏನೊ, ರೇವಣ್ಣನ ಕಾಲಕ್ಕೆ ಅದು ಏಕ್‌ದಮ್ ಹಾಸನಕ್ಕಷ್ಟೇ ಬಿಗಿದುಕೊಳ್ಳುವ ಲಕ್ಷಣಗಳು ಗೋಚರಿಸುತ್ತಿವೆ. ಜಮ್ಮೀರು, ಚೆಲುವಣ್ಣ, ಮಾಗಡಿ ಬಾಲಣ್ಣ, ಲೇಟೆಸ್ಟ್ ಗೋಪಾಲಣ್ಣನಂತಹ ಈ ಭಾಗದ ಜೆಡಿಎಸ್ ಬೇರುಗಳೇ ನೆಲಬಿಟ್ಟು ಮೇಲೆದ್ದಿರುವುದು ಹಾಗೂ ಖುದ್ದು ಹಾಸನದಲ್ಲೇ ಮಂತ್ರಿ ಮಂಜಣ್ಣನ ಪಟ್ಟಿಗೆ ಜಿ.ಪಂ. ಅಧ್ಯಕ್ಷಗಾದಿ ಭವಾನಮ್ಮನ ಕೈತಪ್ಪಿ ಗೌಡರು ಕೈಕೈ ಹಿಸುಕಿಕೊಳ್ಳುವಂತಾದದ್ದು- ಇವೆಲ್ಲವೂ ಜೆಡಿಎಸ್‌ನ ಇಳಿಜಾಡನ್ನು ಸ್ಪಷ್ಟವಾಗಿ ತೆರೆದಿಡುತ್ತವೆ.

ಆದರೆ ದೊಡ್ಡಗೌಡರು ಅಷ್ಟು ಸುಲಭಕ್ಕೆ ಸೋಲೊಪ್ಪಿಕೊಳ್ಳುವ ಜಾಯಮಾನದವರಲ್ಲ. ಇತ್ತ ಅವರ ಗರಡಿಯಲ್ಲಿ ಪಳಗಿದ ರೆಬೆಲ್ ಚೆಲುವಣ್ಣನ ಟೀಮೂ ತೆಪ್ಪಗೆ ಕುಳಿತುಕೊಳ್ಳಲು ಸಿದ್ಧವಿಲ್ಲ. ಹಾಗಾಗಿ ಜೆಡಿಎಸ್ ಪಾರ್ಟಿಯಲ್ಲೀಗ 'ಫಂಕ್ಷನ್' ನೆಪದಲ್ಲಿ ಪೊಲಿಟಿಕಲ್ ಕಸರತ್ತುಗಳು ರಂಗೇರುತ್ತಿವೆ. ಮೊನ್ನೆ ಜುಲೈ 24ರ ಭಾನುವಾರ ಮಂಡ್ಯದ ಸ್ಟೇಡಿಯಂನಲ್ಲಿ ನಡೆದ ಚೆಲುವರಾಯಸ್ವಾಮಿಯ ಮಗ ಸಚಿನ್ ನಾಯಕನಾಗಿರೊ 'ಹ್ಯಾಪಿ ಬರ್ತ್‌ಡೇ' ಸಿನಿಮಾದ ಆಡಿಯೋ ರಿಲೀಸ್ ಫಂಕ್ಷನ್ ಕೂಡಾ ಯಥಾಶೈಲಿಯ ಸಿನಿಮಾ ಕಾರ್ಯಕ್ರಮವಾಗಿರದೆ ಗೌಡರ ಹಟ್ಟಿಗೆ ಚೆಲುವಣ್ಣ ಎಸೆದ 'ಪರಾಕ್ರಮ'ದ ಸವಾಲಿನಂತಿತ್ತು. ಅಂಬರೀಶ್, ಯಶ್, ಶ್ರೀನಗರ ಕಿಟ್ಟಿ, ಹರಿಪ್ರಿಯ, ದೊಡ್ಡಣ್ಣ, ರಾಕ್‌ಲೈನ್ ವೆಂಕಟೇಶ್, ಬುಲೆಟ್ ಪ್ರಕಾಶ್‌ರಂತಹ ಸ್ಟಾರ್ ನಟರುಗಳನ್ನು ಗುಡ್ಡೆಹಾಕಿ, ಸಂಗೀತ ನಿರ್ದೇಶಕ ವಿ.ಹರಿಕೃಷ್ಣ ಟೀಮ್‌ನಿಂದ ಮ್ಯೂಸಿಕ್ ನೈಟ್ ಕಾರ್ಯಕ್ರಮ ಏರ್ಪಡಿಸಿ ಬರೋಬ್ಬರಿ ಇಪ್ಪತ್ತೈದು-ಮೂವತ್ತು ಸಾವಿರ ಜನರನ್ನು ಜಮಾಯಿಸಿದ್ದ ನಾಗಮಂಗಲದ ಚೆಲುವಣ್ಣ ಎರಡು ದಿನ ಮೊದಲೇ "ಈ ಕಾರ್ಯಕ್ರಮ ಮಗ ಸಚಿನ್‌ನ ಆಡಿಯೋ ಲಾಂಚ್ ವಿನಾ ಯಾವುದೇ ರಾಜಕೀಯ ಶಕ್ತಿ ಪ್ರದರ್ಶನದ ವೇದಿಕೆಯಲ್ಲ, ರಾಜಕೀಯ ಮಾಡೋದು ನಮಗೂ ಗೊತ್ತಿದೆ ಅದನ್ನು ಮಾಡಬೇಕಾದಾಗ ಮಾಡ್ತಿವಿ" ಅಂತ ಹೇಳಿದ್ದರೂ ವೇದಿಕೆ ಮೇಲಿನ ಜಮ್ಮೀರ್ ಅಹ್ಮದ್ ಸರಿದಾಟಗಳು ಸತ್ಯದ ಮತ್ತೊಂದು ಮಗ್ಗುಲನ್ನು ಅರ್ಥಮಾಡಿಸುತ್ತಿದ್ದವು. ಇಡೀ ಕಾರ್ಯಕ್ರಮದಲ್ಲಿ ಎಲ್ಲೂ ಪೊಲಿಟಿಕ್ಸ್ ಸುಳಿದಾಡದಿದ್ದರು ಆ ಕಾರ್ಯಕ್ರಮಕ್ಕೂ ಇಪ್ಪತ್ತೈದು ದಿನ ಮೊದಲು ಅದೇ ಮಂಡ್ಯದಲ್ಲಿ ಗೌಡರು ನಡೆಸಿದ್ದ 'ಜೆಡಿಎಸ್ ವಿಜಯ ಸಂಕಲ್ಪ ಸಮಾವೇಶ'ಕ್ಕೆ ಜನಬಲದ ಪ್ರತ್ಯುತ್ತರ ಕೊಡುವ ಇರಾದೆ ಚೆಲುವಣ್ಣ-ಜಮ್ಮೀರು ಮುಖದಲ್ಲಿ ಎದ್ದು ಕಾಣುತ್ತಿತ್ತು.

ಫಂಕ್ಷನ್ ಪರ್ವ

ರಾಜ್ಯಸಭೆ ಚುನಾವಣೆಯಲ್ಲಿ ಗೌಡರಿಗೆ ಸೆಡ್ಡುಹೊಡೆದು ಕಾಂಗ್ರೆಸ್ ಅಭ್ಯರ್ಥಿಗೆ ಮತಹಾಕುವ ಮೂಲಕ ಅಧಿಕೃತವಾಗಿ ಭಿನ್ನಮತವನ್ನು ಹೊರಗೆಡವಿದ ನಂತರ ತಮ್ಮತಮ್ಮ ಕ್ಷೇತ್ರಗಳಲ್ಲಿ ಮತಬ್ಯಾಂಕ್‌ಗಳನ್ನು ಗಟ್ಟಿಮಾಡಿಕೊಳ್ಳುವುದು 'ಅಷ್ಟ' ಬಂಡಾಯಗಾರರಿಗೆ ಎಷ್ಟು ಮುಖ್ಯವಾಗಿದೆಯೋ, ಅವರ ಕ್ಷೇತ್ರಗಳಲ್ಲಿ ಜೆಡಿಎಸ್ ಬೇರುಗಳು ಗಟ್ಟಿಯಾಗಿವೆ ಅನ್ನೋದನ್ನು ಸಾಬೀತುಮಾಡುವುದು ಗೌಡರಿಗೂ ಅಷ್ಟೇ ಮುಖ್ಯವಾಗಿದೆ. ಹಾಗಾಗಿ ದೊಡ್ಡಗೌಡರು ಕೈ-ಕಮಲ ಪಾರ್ಟಿಗಳನ್ನು ಕೊಂಚ ಪಕ್ಕಕ್ಕಿಟ್ಟು ಭಿನ್ನರ ಮೇಲೆ ಭೀಮಾಸ್ತ್ರ ಪ್ರಯೋಗಿಸುವುದಕ್ಕೇ ತಲೆ ಕೆಡಿಸಿಕೊಂಡಿದ್ದಾರೆ. ಅದರಲ್ಲೂ ದಕ್ಷಿಣ ಪದವೀಧರ ಕ್ಷೇತ್ರಕ್ಕೆ ನಡೆದ ವಿಧಾನ ಪರಿಷತ್ ಚುನಾವಣೆಯಲ್ಲಿ ಜೆಡಿಎಸ್ ಅಧಿಕೃತ ಅಭ್ಯರ್ಥಿ ಕೆ.ಟಿ.ಶ್ರೀಕಂಠೇಗೌಡರಿಗೆ ಎದುರಾಗಿ ಬಿಜೆಪಿಯ ರವಿಶಂಕರ್ ಪರ ಚೆಲುವರಾಯಸ್ವಾಮಿ ಬ್ಯಾಟಿಂಗ್ ಮಾಡಿದಾಗಲೇ ಗೌಡರ ಸಿಟ್ಟು ಇನ್ನಿಲ್ಲದಂತೆ ಕೆರಳಿತ್ತು. ಆ ಚುನಾವಣೆ ಕೇವಲ ಜೆಡಿಎಸ್ ಮತ್ತು ಭಿನ್ನಮತರ ನಡುವಿನ ಕಾಳಗವಲ್ಲ, ಬದಲಾಗಿ ಇಡೀ ಒಕ್ಕಲಿಗ ಸಮುದಾಯದ ಏಕೀಕರಣದ ಪ್ರಶ್ನೆ ಅಂತ ಬಿಂಬಿಸುವಲ್ಲಿ ಯಶಸ್ವಿಯಾದ ಗೌಡರು ಕೊನೆಗೂ ಶ್ರೀಕಂಠೇಗೌಡರನ್ನು ಗೆಲ್ಲಿಸಿಕೊಂಡಿದ್ದರು.

ಯಾವಾಗ ಚೆಲುವರಾಯಸ್ವಾಮಿ, ಶ್ರೀರಂಗಪಟ್ಟಣದ ರಮೇಶ್ ಬಂಡಿಸಿದ್ದೇಗೌಡ, ಮಾಗಡಿಯ ಬಾಲಕೃಷ್ಣರಂತವರು ಉಲ್ಟಾ ಹೊಡೆದಾಗಲೂ ಕೆ.ಟಿ.ಶ್ರೀಕಂಠೇಗೌಡ ವಿಜಯಪತಾಕೆ ಹಾರಿಸಿದರೊ ಆಗ ದೊಡ್ಡಗೌಡರಿಗೆ ಇವರ ಹೊರತಾಗಿಯೂ ಈ ಭಾಗದಲ್ಲಿ ಜೆಡಿಎಸ್ ನೆಲೆ ಹರಡಿಕೊಂಡಿರುವುದು ಖಾತ್ರಿಯಾಗಿತ್ತು. ಅದೇವೇಳೆ, ನಾವಿಲ್ಲದೆ ಹೋದ್ರೆ ಮಂಡ್ಯ-ಮೈಸೂರು ಭಾಗದಲ್ಲಿ ಜೆಡಿಎಸ್ ಶಿಥಿಲವಾಗಿಬಿಡುತ್ತೆ ಅಂದುಕೊಂಡಿದ್ದ ಚೆಲುವಣ್ಣಾದಿ ಭಿನ್ನರಿಗೂ ಮುಖಭಂಗವಾಗಿತ್ತು. ಕಬ್ಬಿಣ ಕಾದಾಗಲೇ ಬಡಿದುಬಿಡಬೇಕು ಅನ್ನೋದನ್ನು ಚೆನ್ನಾಗಿಯೇ ಅರ್ಥಮಾಡಿಕೊಂಡಿರುವ ಚಾಣಾಕ್ಷ ರಾಜಕಾರಣಿ ದೇವೇಗೌಡರು, ಭಿನ್ನರಿಗಾದ ಈ ಮುಖಭಂಗವನ್ನೇ ನೆಪಮಾಡಿಕೊಂಡು ಪಕ್ಷಕ್ಕೊಂದು ಹೊಸರೂಪ ಕೊಡಲು ಸಕ್ರಿಯವಾಗಿ ಸರಿದಾಡಲು ಶುರು ಮಾಡಿದರು.

ಎಂಟೂ ಜನ ಭಿನ್ನರಲ್ಲಿ ಅತಿ ವೀಕ್ ಬಂಡಾಯಪ್ಪನೆಂದರೆ ಶ್ರೀರಂಗಪಟ್ಟಣದ ಎಂಎಲ್ಲೆ ರಮೇಶ್ ಬಂಡಿಸಿದ್ದೇಗೌಡ. ಆತ ಗೊಂದಲದಲ್ಲೇ ಭಿನ್ನಮತದ ಹಾದಿ ತುಳಿದಂತಿತ್ತು. ಪಕ್ಷಕ್ಕೆ ವಿರುದ್ಧವಾಗಿ ಮತಹಾಕಿದ ಮರುಘಳಿಗೆಯಲ್ಲೇ ತಾನು ತಪ್ಪು ಮಾಡಿಬಿಟ್ಟೆನೇನೊ ಎಂಬ ಮಾತುಗಳನ್ನು ಆಡಿದ್ದರು. ಹಾಗಾಗಿ ಆತನಿಂದಲೇ ಭಿನ್ನರ ಮೇಲಿನ ದಾಳಿಗೆ ಗೌಡರು ಸಜ್ಜಾಗಿದ್ದರು. ಪಟ್ಟಣದಲ್ಲಿ ರಮೇಶ್ ಬಂಡಿಸಿದ್ದೇಗೌಡನಿಗೆ ಎದುರಾಳಿಯಾಗಿಯೇ ಗುರುತಿಸಿಕೊಂಡು ಬಂದಿರುವ ಕಾಂಗ್ರೆಸ್‌ನ ಇಂಡವಾಳು ಸಚ್ಚಿ ಮನೆಯ ಖಾಸಗಿ ಕಾರ್ಯಕ್ರಮವೊಂದರಲ್ಲಿ ಕಾಣಿಸಿಕೊಂಡ ದೇವೇಗೌಡರು ಎಲ್ಲರಲ್ಲೂ ಅಚ್ಚರಿ ಮೂಡಿಸಿದ್ದರು. ಅದು ಗೌಡರು ರಮೇಶ್‌ಗೆ ಕೊಟ್ಟ ಶಾಕ್ ಟ್ರೀಟ್‌ಮೆಂಟ್‌ನ ಮೊದಲ ಎಪಿಸೋಡು!

ಅದಾದಮೇಲೆ ಗೌಡರು ಆಯ್ದುಕೊಂಡದ್ದು 'ವಿಜಯ ಸಂಕಲ್ಪ ಸಮಾವೇಶ' ಎಂಬ ಫಂಕ್ಷನಾಸ್ತ್ರವನ್ನು. ಎಂಎಲ್‌ಸಿ ಎಲೆಕ್ಷನ್‌ನಲ್ಲಿ ಜೆಡಿಎಸ್‌ನಿಂದ ಗೆದ್ದು ಬಂದಿದ್ದ ಶ್ರೀಕಂಠೇಗೌಡ ಮತ್ತು ಬಸವರಾಜ್ ಹೊರಟ್ಟಿಗೆ ಸನ್ಮಾನ ಮಾಡುವ ನೆಪದಲ್ಲಿ ಬಂಡಾಯಗಾರರಿಗೆ ಬಿಸಿ ಮುಟ್ಟಿಸುವ ಲೆಕ್ಕಾಚಾರ ಗೌಡರಿಗಿತ್ತು. ಹಾಗಾಗಿ ಅವರು ಕಾರ್ಯಕ್ರಮಕ್ಕೆಂದು ಆಯ್ಕೆ ಮಾಡಿಕೊಂಡದ್ದು ಚೆಲುವರಾಯಸ್ವಾಮಿಯ ಕರ್ಮಭೂಮಿ ಮಂಡ್ಯವನ್ನು. ಜೂನ್ 30 ರಂದು ಸಿಲ್ವರ್ ಜೂಬಿಲಿ ಪಾರ್ಕ್‌ನಲ್ಲಿ ಮಂಡ್ಯದ ಸಂಸದ ಸಿ.ಎಸ್.ಪುಟ್ಟರಾಜು ನೇತೃತ್ವದಲ್ಲಿ ನಡೆದ ಆ ಕಾರ್ಯಕ್ರಮಕ್ಕೆ ಭಿನ್ನರ ಕ್ಷೇತ್ರಗಳಿಂದಲೇ ಅತಿಹೆಚ್ಚು ಕಾರ್ಯಕರ್ತರನ್ನು ಕರೆತರುವ ಯೋಜನೆ ಗೌಡರದಾಗಿತ್ತು. ಶ್ರೀರಂಗಪಟ್ಟಣದ ಮಟ್ಟಿಗೆ ಆ ವಿಚಾರದಲ್ಲಿ ಯಶಸ್ವಿಯೂ ಆದರು. ಶ್ರೀರಂಗಪಟ್ಟಣದ ಎಲ್ಲಾ ತಾಲ್ಲೂಕು ಪಂಚಾಯ್ತಿ, ಜಿಲ್ಲಾ ಪಂಚಾಯ್ತಿ ಜೆಡಿಎಸ್ ಸದಸ್ಯರು ಕಾರ್ಯಕ್ರಮದಲ್ಲಿ ಭಾಗವಹಿಸುವಂತೆ ನೋಡಿಕೊಂಡ ಗೌಡರು ರಮೇಶ್ ಬಂಡಿಸಿದ್ದೇಗೌಡನಿಗೆ ಎರಡನೇ ಶಾಕ್ ಟ್ರೀಟ್‌ಮೆಂಟ್ ನೀಡಿದ್ದರು. ಆದರೆ ಚೆಲುವರಾಯಸ್ವಾಮಿಯ ವಿಚಾರದಲ್ಲಿ ಹಾಗಾಗಲಿಲ್ಲ. ಪಕ್ಷವನ್ನೂ ಮೀರಿ ವೈಯಕ್ತಿಕ ಹಿಡಿತ ಸಾಧಿಸಿಕೊಂಡಿರುವ ಚೆಲುವರಾಯಸ್ವಾಮಿಯ ನಾಗಮಂಗಲದಿಂದ ಯಾವೊಬ್ಬ ತಾಲ್ಲೂಕು-ಜಿಲ್ಲಾ ಪಂಚಾಯ್ತಿ ಸದಸ್ಯನೂ ಭಾಗವಹಿಸಿರಲಿಲ್ಲ. ಮೊದಲೇ ಗೊಂದಲಕ್ಕೆ ಸಿಲುಕಿ ಒದ್ದಾಡುತ್ತಿದ್ದ ರಮೇಶ್ ಬಂಡಿಸಿದ್ದೇಗೌಡ ದೇವೇಗೌಡರ ಈ ಪಟ್ಟಿಗೆ ಅಕ್ಷರಶಃ ನಲುಗಿಹೋದ ದೇವೇಗೌಡರ ಎರಡನೇ ಎಪಿಸೋಡು ಮುಗಿಯುತ್ತಿದ್ದಂತೆಯೇ 'ಗೊತ್ತಿಲ್ಲದೆ ತಪ್ಪು ಮಾಡಿದ್ದೀನಿ, ಕುಮಾರಣ್ಣನ ಜೊತೆ ಮಾತನಾಡುತ್ತಿನಿ, ಮರಳಿ ದಳದಿಂದ್ಲೇ ಟಿಕೆಟ್ ತರುತ್ತೇನೆ' ಅಂತೆಲ್ಲಾ ರಮೇಶ್ ಬಡಬಡಿಸುತ್ತಿರುವುದು ಇದೇ ಕಾರಣಕ್ಕೆ.


ದೇವೇಗೌಡರಿಂದ ಮೊದಲ್ಗೊಂಡು ಶ್ರೀಕಂಠೇಗೌಡರವರೆಗೆ ಅಂದಿನ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಪ್ರತಿಯೊಬ್ಬರು ಮತಹಾಕಿ ಗೆಲ್ಲಿಸಿದ ಮತದಾರರಿಗೆ ಧನ್ಯವಾದ ಹೇಳಿದ್ದಕ್ಕಿಂತ ಹೆಚ್ಚಾಗಿ ಬಂಡಾಯಗಾರರ ಮೇಲೆ ಹರಿಹಾಯುವುದಕ್ಕೇ ತಮ್ಮ ವಾಕ್ಚಾತುರ್ಯವನ್ನು ಮೀಸಲಿಟ್ಟದ್ದು ಇಡೀ ಕಾರ್ಯಕ್ರಮದ ರಣ ಉದ್ದೇಶವನ್ನು ಸ್ಪಷ್ಟವಾಗಿ ಬಿಚ್ಚಿಟ್ಟಿತ್ತು.

ಒಂದುಕಡೆ ಶ್ರೀಕಂಠೇಗೌಡ ಗೆಲುವಿನಿಂದಾದ ಮುಖಭಂಗ, ಮತ್ತೊಂದುಕಡೆ ವಿಜಯ ಸಂಕಲ್ಪ ಕಾರ್ಯಕ್ರಮದ ಮೂಲಕ ಗೌಡರ ಬಲಪ್ರದರ್ಶನದ ಸವಾಲು. ಇವುಗಳಿಗೆ ಭಿನ್ನರ ಲೀಡರ್ ಚೆಲುವರಾಯಸ್ವಾಮಿ ಹೇಗಾದರು ಒಂದುರೀತಿ ಪ್ರತ್ಯುತ್ತರ ನೀಡಲೇಬೇಕಿತ್ತು. ತನಗೂ ಜನಬಲವಿದೆ ಅನ್ನೋದನ್ನು ಸಾಬೀತು ಮಾಡಿ ಆತ್ಮವಿಶ್ವಾಸ ಕಾಯ್ದುಕೊಳ್ಳಬೇಕಿತ್ತು. ಅಂತ ಸಂದರ್ಭದಲ್ಲಿ ಚೆಲುವಣ್ಣನಿಗೆ ಅಸ್ತ್ರವಾಗಿ ಕಂಡಿದ್ದೇ ಮಗ ಸಚಿನ್‌ನ 'ಹ್ಯಾಪಿ ಬರ್ತ್‌ಡೇ' ಸಿನಿಮಾ. ಹೇಗೂ ಅದರ ಆಡಿಯೋ ರಿಲೀಸ್ ಕಾರ್ಯಕ್ರಮ ಬಾಕಿ ಇತ್ತಾದ್ದರಿಂದ ಅದನ್ನು ಮಂಡ್ಯದಲ್ಲೇ ಭರ್ಜರಿಯಾಗಿ ನಡೆಸಿದರೆ ಮಗನಿಗೆ ಒಳ್ಳೇ ಓಪನಿಂಗ್ ಕೊಟ್ಟಂತೆಯೂ ಆಗುತ್ತೆ, ಗೌಡರಿಗೆ ಸಣ್ಣದಾಗಿ ಬಿಸಿ ಮುಟ್ಟಿಸಿದಂತೆಯೂ ಆಗುತ್ತೆ ಅನ್ನೋ ತೀರ್ಮಾನಕ್ಕೆ ಬಂದಿದ್ದರು. ಇತ್ತ ಅಂತದೇ ಬೇಗುದಿಯಲ್ಲಿದ್ದ ಚಾಮರಾಜಪೇಟೆಯ ಜಮ್ಮೀರ್ ಖಾನ್ ಕೂಡಾ ಚೆಲುವಣ್ಣನಿಗೆ ಸಾಥ್ ನೀಡಿ ಫಂಕ್ಷನ್ ನಡೆಸಿಯೇಬಿಟ್ಟಿದ್ದಾರೆ. ಅಂದಹಾಗೆ, ಜಮ್ಮೀರ್ ಅಹ್ಮದ್ ಖಾನ್ ಮಗ ಝೈದ್ ಖಾನ್ ಕೂಡಾ ಹೀರೊ ಆಗಿ ಇಂದ್ರಜಿತ್ ಲಂಕೇ[ಶ್]
ನಿರ್ದೇಶನದ ಸಿನಿಮಾವೊಂದರಲ್ಲಿ ಅಭಿನಯಿಸುತ್ತಿದಾ[...]
ಹಾಗಾಗಿ ಸದ್ಯದಲ್ಲೇ ಜಮ್ಮೀರ್ ಕಡೆಯಿಂದ ಮತ್ತೊಂ[...]
ಪೊಲಿಟಿಕಲ್ ಪ್ರೇರಿತ ಸಿನಿ ಕಾರ್ಯಕ್ರಮ ಅದ್ದೂರಿಯ[...]
ಆಯೋಜಿಸಲ್ಪಟ್ಟರೂ ಅಚ್ಚರಿಯಿಲ್ಲ. ಅಷ್ಟೇಅಲ್ಲ ಕುಮಾರ[...]
ಮಗ ನಿಖಿಲ್ ನಟಿಸಿರೋ 'ಜಾಗ್ವಾರ್' ಸಿನಿಮಾ ಫಂಕ್ಷ[...]
ಇನ್ನೂ ಬಾಕಿ ಉಳಿದಿರುತ್ತೆ!

ಮೂರು ದಾರಿ ನಾಲ್ಕು ಆಯ್ಕೆ

ಜೆಡಿಎಸ್ ಭಿನ್ನರಿಗೆ ಹಾದಿ ಆರಂಭದಲ್ಲಿದ್ದಷ್ಟು ಸಲೀಸ[...]
ಸಾಗುತ್ತಿಲ್ಲ. ಜೆಡಿಎಸ್‌ನಿಂದ ಕಾಲುಗಳನ್ನು ಹೊರಗಿಟ್ಟಾಗ[...]
ಆದರೆ ಈಗ ಎಲ್ಲಿ ನೆಲೆ ಕಂಡುಕೊಳ್ಳಬೇಕೆನ್ನುವುದೇ ಅ[...]
ಪಾಲಿನ ಮಿಲಿಯನ್ ಡಾಲರ್ ಪ್ರಶ್ನೆ. ಜೆಡಿಎಸ್ ಭಿನ್ನ[...]
ಹೋಲ್‌ಸೇಲಾಗಿ ಕಾಂಗ್ರೆಸ್ ತೂರಿಕೊಳ್ಳುತ್ತಾರೆ ಅಂತ[...]
ಲೆಕ್ಕ ಹಾಕಲಾಗಿತ್ತಾದರೂ, ನಿಧಾನಕ್ಕೆ ಆ ಸಾಧ್ಯತೆ ಕ್ಷೀಣಿಸು[...]
ಸಾಗಿದೆ. ಕಾಂಗ್ರೆಸ್‌ನೊಳಗೆ ನಡೆಯುತ್ತಿರುವ ಅಂತ[...]
ವಿದ್ಯಮಾನಗಳು ಮತ್ತು ಕೋಮುವಾದಿಗಳ ಪಿತ[...]
ರಾಜಕಾರಣದಿಂದ ಕಾಂಗ್ರೆಸ್ ಸರ್ಕಾರ ಜನರಿಂದ ದೂ[...]
ಸರಿಯುತ್ತಿರುವ ವಾತಾವರಣ ಸೃಷ್ಟಿಯಾಗುತ್ತಿದೆ. ಈ[...]
ಗೌಡರನ್ನು ಎದುರು ಹಾಕಿಕೊಂಡು ಜಿದ್ದಿನ ರಾಜಕಾರ[...]
ಪಾದಾರ್ಪಣೆ ಮಾಡಿರುವುದರಿಂದ ಮುಂಬರುವ ಎಲೆಕ್ಷ[...]
ತರುವಾಯ ಯಾವುದಾದರೊಂದು ಅಧಿಕಾರ ಗಿ[...]
ಕೊಂಡರಷ್ಟೇ ಗೌಡರ ಚಕ್ರವ್ಯೂಹದಿಂದ ಪಾರಾಗಲು ಸಾ[...]
ಮಂತ್ರಿಗಿರಿಯೊ ನಿಗಮ ಮಂಡಳಿ ಅಧ್ಯಕ್ಷಗಾದಿಯೋ ಇ[...]
ಕೇವಲ ಶಾಸಕನಾಗಿ ಕೂರಬೇಕಾಗಿ ಬಂದರೆ ಗೌಡ[...]
ಮಟ್ಟಹಾಕಿ ಬಿಡುತ್ತಾರೆನ್ನುವ ಆತಂಕ ಅವರಲ್ಲಿ[...]
ಮುಖ್ಯವಾಗಿ ಚೆಲುವರಾಯಸ್ವಾಮಿಯಲ್ಲಿ ಈ ಲೆಕ್ಕಾಚಾ[...]
ಮಿಸುಗಾಡುತ್ತಲೇ ಇದೆ. ಹಾಗಾಗಿ ಕಾಂಗ್ರೆಸ್ ಪಕ್ಷ[...]
ಹೊರತಾಗಿ ಬಿಜೆಪಿಯನ್ನು ತಮ್ಮ ಎರಡನೇ ದಾರಿಯ[...]
ಮುಂದಿರಿಸಿಕೊಂಡಿದ್ದಾರೆ.

ಇತ್ತೀಚೆಗೆ ಸಿಎಂ ಸಿದ್ದರಾಮಯ್ಯ ತಮ್ಮ ಸಂಪು[...]
ಪುನರ್ರಚನೆ ಸಂದರ್ಭದಲ್ಲಿ ಅಂಬಿಯನ್ನು ವಸತಿಮಂತ್ರಿ[...]
ಯಿಂದ ಕೈಬಿಟ್ಟಾಗ ಚೆಲುವರಾಯಸ್ವಾಮಿ ನೇತೃ[...]
ಬಂಡಾಯಗಾರರ ಟೀಮು ಕಾಂಗ್ರೆಸ್ ಉಸ್ತುವಾರಿ ಹೊ[...]
ರುವ ದಿಗ್ವಿಜಯ್ ಸಿಂಗ್‌ರನ್ನು ಸಂಪರ್ಕಿಸಿ ಅಂಬಿಯ[...]
ಸಚಿವಸಂಪುಟದಿಂದ ಕೈಬಿಡದಂತೆ ಮನವಿ ಮಾ[...]
ಕೊಂಡಿದ್ದು ಕೂಡಾ ತೂಗಾಡುತ್ತಿರುವ ತಮ್ಮ ಪೊಲಿಟಿಕ[...]
ಭವಿಷ್ಯದ ಕಾಳಜಿಯಿಂದಲೇ. ಆಡಳಿತದಲ್ಲಿ ಅಂಬಿ ಅದ[...]
ನಿರುತ್ಸಾಹಿ, ನಿರ್ಲಕ್ಷ್ಯದ ರಾಜಕಾರಣಿ ಅಂತ ಅಪಖ್ಯಾ[...]
ಈಡಾಗಿದ್ದರೂ ಈಗಲೂ ಮಂಡ್ಯದಲ್ಲಿ ಅಂಬಿಗೆ ಒಂ[...]
ಸಿನಿ ವರ್ಚಸ್ಸು ಇದ್ದೇಇದೆ. ಎಲೆಕ್ಷನ್ ಟೈಮಿಗೆ ಸರಿಯ[...]
ರಾಜಕಾರಣಿಗಳ ಸಕಲಷ್ಟು ಪಾಪಗಳನ್ನು ಮನ್ನಿಸುವ ಮಹಾ[...]
ಮತದಾರರಿರುವ ನಮ್ಮ ದೇಶದಲ್ಲಿ ಹಣ, ಜಾತಿ[...]





ಕಳಸಾ-ಬಂಡೂರಿ ಹೋರಾಟ

ನೀರಿಗಾಗಿ ಮೂಗು ಹಿಡಿದು ಬಾಯಿ ತೆರೆಸಬೇಕು



ಕರ್ನಾಟಕಕ್ಕೆ ಇವತ್ತು (ಜುಲೈ 27) ದೊಡ್ಡ ಅನ್ಯಾಯ ಆಗಿದೆ. ಮಹದಾಯಿ ನ್ಯಾಯಮಂಡಳಿಯು ತನ್ನ ಮಧ್ಯಂತರ ವರದಿಯಲ್ಲಿ ಆ ನದಿಯ 7.56 ಟಿಎಂಸಿ ಅಡಿ ನೀರನ್ನು ಬಳಕೆ ಮಾಡಿಕೊಳ್ಳಲು ಅನುವು ಮಾಡಿಕೊಡಬೇಕೆಂದು ಕರ್ನಾಟಕ ಸಲ್ಲಿಸಿದ್ದ ಅರ್ಜಿಯನ್ನು ತಿರಸ್ಕರಿಸಿದೆ. ನಾಲ್ಕು ಜಿಲ್ಲೆಗಳಲ್ಲಿ ಜನರಿಗೆ ಕುಡಿಯುವ ನೀರನ್ನು ಒದಗಿಸಲು ಮಹದಾಯಿ ನೀರನ್ನು ಬಳಕೆ ಮಾಡಿಕೊಳ್ಳಲು ಅವಕಾಶ ನೀಡಲು ಸಾಧ್ಯವಿಲ್ಲ ಎಂದು ನ್ಯಾಯಮಂಡಳಿ ಸ್ಪಷ್ಟಪಡಿಸಿದೆ.

ಇದರಿಂದಾಗಿ ಕಳೆದ ಒಂದು ವರ್ಷದಿಂದ ತೀವ್ರವಾದ ಮತ್ತು ದಿಟ್ಟ ಹೋರಾಟ ಮಾಡಿಕೊಂಡು ಬಂದಿದ್ದ ಜನರ ಪ್ರಯತ್ನಗಳೆಲ್ಲ ವಿಫಲವಾಗಿವೆ.

ಈಗ ಕರ್ನಾಟಕ ಸರ್ಕಾರ ಮತ್ತು ಹೋರಾಟಗಾರರು ಏನು ಮಾಡಬೇಕು? ಕಾಂಗ್ರೆಸ್ ಮತ್ತು ಬಿಜೆಪಿ ಪಕ್ಷಗಳ ಮೂಗು ಹಿಡಿದು ಬಾಯಿ ತೆರೆಯುವಂತೆ ಮಾಡಬೇಕಿದೆ.

ವಿವಾದದ ಮುಖ್ಯಾಂಶಗಳು

ಮಹದಾಯಿ ನದಿಯಲ್ಲಿ ಹರಿಯುವ ಒಟ್ಟು ಸರಾಸರಿ 200 ಟಿಎಂಸಿ ನೀರಿನಲ್ಲಿ ಕರ್ನಾಟಕದಿಂದ ಸರಾಸರಿ 45 ಟಿಎಂಸಿ ನೀರು ಸೇರ್ಪಡೆಯಾಗುತ್ತದೆ. ಇದರಲ್ಲಿ 36.5 ಟಿಎಂಸಿ ನೀರನ್ನು ಬಳಸಿಕೊಳ್ಳುವ ಪ್ರಸ್ತಾಪವನ್ನು ಕರ್ನಾಟಕ ಮುಂದಿಟ್ಟಿದೆ. 7.56 ಟಿಎಂಸಿಯ ಕಳಸಾ-ಬಂಡೂರಿ ಕುಡಿವ ನೀರಿನ ಯೋಜನೆಗಳೂ ಅದರಲ್ಲಿ ಸೇರಿವೆ.

ಕರ್ನಾಟಕವು ಮಹದಾಯಿಯಿಂದ ಎಷ್ಟು ಪ್ರಮಾಣದ ನೀರನ್ನೂ ಬಳಸಬಾರದು ಎಂಬ ಗೋವಾದ ವಾದ ನ್ಯಾಯವಾದುದಲ್ಲ. ಪರಿಸರಕ್ಕೆ ಹೆಚ್ಚು ಹಾನಿಯಾಗದಂತೆ ಎಚ್ಚರಿಕೆ ವಹಿಸಲು ಕರ್ನಾಟಕ ಸರ್ಕಾರಕ್ಕೆ ಅದು ಸಲಹೆ ಅಥವಾ ಮನವಿ ಮಾಡಬಹುದೇ ಹೊರತು, ಕರ್ನಾಟಕದ ಪಾಲಿನ ಹಕ್ಕನ್ನು ಸಂಪೂರ್ಣವಾಗಿ ನಿರಾಕರಿಸುವುದರಲ್ಲಿ ಯಾವುದೇ ನ್ಯಾಯವಿಲ್ಲ. ಎಂಥದೇ ವಿವಾದವಿದ್ದರೂ ಕುಡಿವ ನೀರಿನ ವಿಚಾರಕ್ಕೆ ಮೊದಲ ಆದ್ಯತೆ ನೀಡಬೇಕು ಎಂಬುದನ್ನು ಸುಪ್ರೀಂಕೋರ್ಟೇ ಸಂಶಯಕ್ಕೆಡೆ ಇಲ್ಲದಂತೆ ಘೋಷಿಸಿದೆ. ಎಂಥದೇ ನ್ಯಾಯಮಂಡಳಿ ಅಥವಾ ಯಾವುದೇ ಒಡಂಬಡಿಕೆಯೂ ಕರ್ನಾಟಕದ ಕೊಡುಗೆಯಲ್ಲಿ ಅದರ ಪಾಲನ್ನು ನಿರಾಕರಿಸಲು ಸಾಧ್ಯವಿಲ್ಲ. ಹಾಗಿರುವಾಗ ತುರ್ತು ಕುಡಿವ ನೀರಿಗಾಗಿ 7.56 ಟಿಎಂಸಿ ಅಡಿ ನೀರನ್ನೂ ಬಿಡುವುದಿಲ್ಲ ಎನ್ನುವುದು ಅನ್ಯಾಯದ ಪರಮಾವಧಿಯಾಗಿದೆ. ಅಂತರರಾಜ್ಯ ಸಂಬಂಧಗಳಲ್ಲೂ ಇದೊಂದು ಅತ್ಯಂತ ಅನಾರೋಗ್ಯಕರ ಪ್ರವೃತ್ತಿಯಾಗಿದೆ.

ಮಹದಾಯಿ ಯೋಜನೆ ಜಾರಿಯಾದಲ್ಲಿ ನದೀ ಕಣಿವೆಯ ಪರಿಸರದ ಮೇಲೆ ಮತ್ತು ಗೋವಾದ ಜಲಸಾರಿಗೆಯ ಮೇಲೆ ಪ್ರತಿಕೂಲ ಪರಿಣಾಮ ಉಂಟಾಗುತ್ತದೆ ಎಂಬುದರಲ್ಲಿ ತಥ್ಯವಿಲ್ಲದೆ ಇಲ್ಲ. ಹಾಗೆಂದು ಬೆಳೆಯುತ್ತಿರುವ ಜನಸಂಖ್ಯೆಯ ಅಗತ್ಯಕ್ಕೂ ನಾವು ಕುರುಡಾಗುವಂತಿಲ್ಲ. ಪರಿಸರ ಮತ್ತು ಜನರ ಅಗತ್ಯ ಇವೆರಡರ ನಡುವೆ ಯಾವಾಗಲೂ ಒಂದು ವೈರುಧ್ಯ ಇದ್ದೇ ಇರುತ್ತದೆ. ಅದರಲ್ಲಿ ಪ್ರಜ್ಞಾಪೂರ್ವಕವಾಗಿ ಒಂದು ಸಮತೋಲನ ಕಂಡುಕೊಳ್ಳಬೇಕು. ಪರಿಸರಕ್ಕಾಗುವ ಹಾನಿ ಆದಷ್ಟೂ ಕನಿಷ್ಠ ಮಟ್ಟಕ್ಕೆ ಇರುವಂತೆ ನೋಡಿಕೊಂಡು ಯೋಜನೆಗಳನ್ನು ಕೈಗೊಳ್ಳಬೇಕು. ಇದೊಂದೇ ಈ ಸಮಸ್ಯೆಗೆ ಇರುವ ಪರಿಹಾರ.

ಒಟ್ಟಾರೆ ನೀರಿನ ಹಂಚಿಕೆಯನ್ನು ನ್ಯಾಯಮಂಡಳಿಯ ಪೂರ್ಣ ಪರಿಶೀಲನೆಗೆ ಬಿಟ್ಟು ಕನಿಷ್ಠ 7.56 ಟಿಎಂಸಿ ಅಡಿ ನೀರನ್ನು ಬಳಸುವ ಮಧ್ಯಂತರ ತೀರ್ಪಿಗಾಗಿ ಈ ಮೊದಲೇ ಕರ್ನಾಟಕ ಸರ್ಕಾರಗಳು ಒತ್ತಾಯಿಸಬೇಕಿತ್ತು. ಅದನ್ನು ಮಾಡದೆ, ಇಡೀ ರಾಜ್ಯದ ಜನ ಒತ್ತಾಯ ಮಾಡಿದ ನಂತರ ಕೊಸರಾಡಿ ತೀರ್ಮಾನ ತೆಗೆದುಕೊಂಡಿರುವುದು ಜವಾಬ್ದಾರಿಯುತ ಸರ್ಕಾರದ ಲಕ್ಷಣವಲ್ಲ.

ಈ ಸಮಸ್ಯೆಯಾಗಲಿ ಅಥವಾ ಇಂತಹ ಅನೇಕ ಅಂತರರಾಜ್ಯ ಜಲವಿವಾದಗಳಾಗಲೀ ಬಗೆಹರಿಯದೆ ಮುಂದುವರಿಯಲು ಕಾರಣ ಕೇಂದ್ರ ಸರ್ಕಾರಗಳು ಇದುವರೆಗೂ ಅಂತರರಾಜ್ಯ ಜಲವಿವಾದ ಪರಿಹಾರ ನೀತಿಯನ್ನೇ ರೂಪಿಸಿಲ್ಲದಿರುವುದು. ಪ್ರಪಂಚದಾದ್ಯಂತ ಮನ್ನಣೆ ಪಡೆದಿರುವ 'ಹೆಲ್ಸಿಂಕಿ ಒಡಂಬಡಿಕೆ'ಯಂತಹ ಅಂತರರಾಷ್ಟ್ರೀಯ ನೀತಿಗಳನ್ನು ನಮ್ಮ ದೇಶದ ಪರಿಸ್ಥಿತಿಗೆ ಅನುಗುಣವಾಗಿ ಮಾರ್ಪಡಿಸಿ ನೀರು ಹಂಚಿಕೆಯ ಸೂಕ್ತ ಮಾನದಂಡಗಳನ್ನು ರೂಪಿಸುವ ಕಷ್ಟವನ್ನೇ ನಮ್ಮ ಸರ್ಕಾರಗಳು ತೆಗೆದುಕೊಂಡಿಲ್ಲ. ಹೊಣೆಗೇಡಿ ಅಲ್ಲಿಕೆಗೆ ಇದೊಂದು ಒಳ್ಳೆಯ ಉದಾಹರಣೆ.

ರಾಷ್ಟ್ರೀಯನೀತಿ ಇಲ್ಲದಿದ್ದರೂ ಕನಿಷ್ಠ ಮಾತುಕತೆ ಮೂಲಕ ಸಮಸ್ಯೆಯನ್ನು ಬಗೆಹರಿಸಬೇಕು. ಅಂತರ ರಾಜ್ಯ ವಿವಾದಗಳು ಬಂದಾಗ ಅವನ್ನು ಬಗೆಹರಿಸುವ ಪ್ರಧಾನ ಹೊಣೆಗಾರಿಕೆ ಕೇಂದ್ರ ಸರ್ಕಾರದ್ದಾಗಬೇಕು. ಆದರೆ ಕೇಂದ್ರ ಸರ್ಕಾರಗಳು ಅಂತಹ ಯಾವ ಜವಾಬ್ದಾರಿಯುತ ಹೆಜ್ಜೆಗಳನ್ನೂ ಇಟ್ಟಿಲ್ಲ.

ಇದಕ್ಕೆ ಕಾರಣ - ಕೇಂದ್ರದಲ್ಲಿ ಅಧಿಕಾರ ನಡೆಸಿದ 'ರಾಷ್ಟ್ರೀಯ'ವೆಂದು ಕರೆಸಿಕೊಳ್ಳುವ ಪಕ್ಷಗಳು ಅಂತರರಾಜ್ಯ ವಿವಾದಗಳು ಬಂದಾಗ ನಿಷ್ಪಕ್ಷಪಾತ, ನ್ಯಾಯೋಚಿತ ನೀತಿ ಆಧಾರಿತ ರಾಷ್ಟ್ರೀಯ ಪಕ್ಷಗಳಂತೆ ನಡೆದುಕೊಳ್ಳದೆ ಸ್ಥಳೀಯ ಹಿತಾಸಕ್ತಿಯನ್ನು ಪ್ರತಿನಿಧಿಸುವ, ಅವಕಾಶವಾದಿ ಹಾಗೂ ದುರಭಿಮಾನಿ ಪಕ್ಷಗಳಂತೆ ನಡೆದುಕೊಳ್ಳುತ್ತಾ ಬಂದಿವೆ. ಅಂದರೆ ಆಯಾ ರಾಜ್ಯಗಳಲ್ಲಿ ಅಲ್ಲಲ್ಲಿನ ಓಟು ಬಾಚಲಿಕ್ಕೆ ಬೇಕಾದ ನಿಲುವನ್ನು ಅವು ತಾಳಿವೆಯೇ ಹೊರತು ಸಮಸ್ಯೆಯನ್ನು ಬಗೆಹರಿಸಿ ಜನರ ಬದುಕನ್ನು ಹಸನುಗೊಳಿಸುವ ಇರಾದೆಯೇ ಅವಕ್ಕಿಲ್ಲ. ಮಹದಾಯಿ- ಕಳಸಾ-ಬಂಡೂರಿ ವಿವಾದದ ವಿಚಾರದಲ್ಲಿ ಬಿಜೆಪಿ-ಕಾಂಗ್ರೆಸ್‌ಗಳಿಗೆ ಅವುಗಳ ರಾಜಕೀಯ ಲೆಕ್ಕಾಚಾರದ ಪ್ರಕಾರವೇ ನೋಡಿದರೂ ಗೋವಾಕ್ಕಿಂತ ಕರ್ನಾಟಕವೇ ಮುಖ್ಯವೆನ್ನಿಸಬೇಕು. ಆದರೂ ಯಾಕೆ ಗೋವಾದ ಹಿತಾಸಕ್ತಿಯೇ ಈವರೆಗೂ ಮೇಲುಗೈ ಪಡೆಯುತ್ತಾ ಬಂದಿದೆ? ಎನ್ನುವುದು ಆಶ್ಚರ್ಯ ಮೂಡಿಸುವ ಪ್ರಶ್ನೆ.

ಇದಕ್ಕಿರುವ ಒಂದು ಪ್ರಮುಖ ಕಾರಣವೆಂದರೆ ಕರ್ನಾಟಕದ ರಾಜಕಾರಣಿಗಳ ನಿಷ್ಕಾಳಜಿಯ ಜೊತೆಗೆ ತಮ್ಮ ಪಕ್ಷಗಳ ಹೈಕಮಾಂಡುಗಳೆದುರು ಅವರ ಪುಕ್ಕಲುತನ, ದೈನೇಸಿತನ. ರಾಜ್ಯದ ಮತ್ತು ಜನತೆಯ ಹಿತಾಸಕ್ತಿಯನ್ನು ತಮ್ಮ ಹೈಕಮಾಂಡ್ ಎದುರು ಪಟ್ಟುಹಿಡಿದು ಸಾಧಿಸಿಕೊಂಡು ಬರುವ ದಿಟ್ಟತನವನ್ನು ಅವರು ಎಂದೂ ತೋರಿಸಿಲ್ಲ. ತಮಿಳುನಾಡಿನ ಜೊತೆಗಿನ ನೀರಿನ ವಿವಾದ ಇರಲಿ, ಕೇರಳ-ಮಹಾರಾಷ್ಟ್ರಗಳೊಂದಿಗಿನ ಗಡಿವಿವಾದದ ವಿಚಾರದಲ್ಲಿರಲಿ, ಕರ್ನಾಟಕದ ರೈಲ್ವೆ ಮತ್ತಿತರ ನೈಜ ಅಭಿವೃದ್ಧಿಗೆ ಸಂಬಂಧಿಸಿದ ಯೋಜನೆಗಳಿರಲಿ, ಬರಗಾಲ- ನೈಸರ್ಗಿಕ ವಿಕೋಪದಂತಹ ಪರಿಸ್ಥಿತಿಗಳ ವಿಚಾರವಿರಲಿ - ಅಂಥ ಎಲ್ಲಾ ಸಂದರ್ಭಗಳಲ್ಲೂ ಕೇಂದ್ರ ಸರ್ಕಾರದೆದುರು ಅಥವಾ ತಮ್ಮ ಪಕ್ಷದ ಕೇಂದ್ರ ನಾಯಕತ್ವದೆದುರು ನಮ್ಮ ರಾಜಕೀಯ ನಾಯಕರ ಅಡಿಯಾಳುತನ (subordination) ಮತ್ತೆಮತ್ತೆ ಕಣ್ಣಿಗೆ ರಾಚುತ್ತ ಬಂದಿದೆ.

ಈ ಎಲ್ಲ ನಿಟ್ಟಿನಿಂದ ನೋಡಿದಾಗ ಇಂದು ಕಳಸಾ-ಬಂಡೂರಿ ವಿಚಾರದಲ್ಲಿ ಅತ್ಯಗತ್ಯವಾಗಿ ಆಗಬೇಕಿರುವುದು ರಾಜಕೀಯ ತೀರ್ಮಾನ ಎನ್ನುವುದು ಸ್ಪಷ್ಟ. ಈಗಲಾದರೂ ಬಿಜೆಪಿ ಮತ್ತು ಕಾಂಗ್ರೆಸ್ ಎರಡೂ ತಮ್ಮ ಸ್ವಾರ್ಥ ರಾಜಕಾರಣ ಬದಿಗಿಟ್ಟು, ಇಷ್ಟು ವಿಸ್ತಾರ ಪ್ರದೇಶದ ಅಪಾರ ಸಂಖ್ಯೆಯ ಜನ-ಜಾನುವಾರುಗಳ ಹಿತದ ರಕ್ಷಣೆಗೆ ಮುಂದಾಗಬೇಕು. ಅದರಲ್ಲೂ ಬಿಜೆಪಿ ಮುಂದಾಳುಗಳ ಮೇಲೆ ವಿಶೇಷ ಜವಾಬ್ದಾರಿ ಇದೆ. ಏಕೆಂದರೆ ಇಂದು ಕೇಂದ್ರ ಹಾಗೂ ಗೋವಾದಲ್ಲಿ ಅಧಿಕಾರದಲ್ಲಿರುವುದು ಅವರದೇ ಪಕ್ಷ. ಅವರು ತಮ್ಮ ಪ್ರಧಾನಮಂತ್ರಿಯ ಮುಂದೆ ತುಟಿ ಬಿಚ್ಚುವ ಧೈರ್ಯ ವಹಿಸಬೇಕು. ಕಡೇಪಕ್ಷ ಕುಡಿವ ನೀರಿನ ಯೋಜನೆಗಾಗಿ 7.56 ಟಿಎಂಸಿ ಅಡಿ ನೀರಿಗಾದರೂ ಅಡ್ಡಿಪಡಿಸದಂತೆ ಗೋವಾ ಮತ್ತು ಮಹಾರಾಷ್ಟ್ರ ಸರ್ಕಾರಗಳಿಗೆ ತಮ್ಮ ಹೈಕಮಾಂಡ್‌ನಿಂದಲೇ ಆದೇಶ ಕೊಡಿಸಿ, ನ್ಯಾಯಮಂಡಳಿಯ ಹೊರಗೇ ಈ ವಿಚಾರ ಇತ್ಯರ್ಥವಾಗಲು ಶ್ರಮಿಸಬೇಕು. ಇತ್ತ ಕಾಂಗ್ರೆಸಿಗರೂ ಅಷ್ಟೇ. ಆ ಎರಡೂ ರಾಜ್ಯಗಳಲ್ಲಿ ವಿರೋಧ ಪಕ್ಷವಾಗಿರುವ ತಮ್ಮ ಪಕ್ಷದವರು ಕ್ಯಾತೆ ತೆಗೆಯದಂತೆ ತಮ್ಮ ಹೈಕಮಾಂಡ್ ಸಹ ಕಟ್ಟುನಿಟ್ಟಿನ ಆದೇಶ ಹೊರಡಿಸುವಂತೆ ಒತ್ತಾಯ ತರಬೇಕು. ಹೋರಾಟನಿರತ ಜನತೆ, ಸಂಘಟನೆಗಳು ಈ ಎರಡೂ ಜನವಿರೋಧಿ, ಅಧಿಕಾರದಾಹಿ ಪಕ್ಷಗಳ ಕೊರಳಪಟ್ಟಿ ಹಿಡಿದು ಈ ಕೆಲಸವನ್ನು ಮಾಡಿಸಬೇಕು.

ಮೂಗು ಹಿಡಿದರೆ ಬಾಯಿ ತೆರೆಯುತ್ತದೆ


"ಬಾಯಿ ತೆರೆಸಬೇಕೆಂದರೆ ಮೂಗು ಹಿಡಿಯಬೇಕು" ಎನ್ನುವುದು ನಮ್ಮ ಹಿರಿಯರ ಅನುಭವದ ಮಾತು. ಕಳಸಾ-ಬಂಡೂರಿ ಯೋಜನೆಗೆ ಬಿಜೆಪಿ ಹೈಕಮಾಂಡ್‌ನಿಂದ 'ಅಸ್ತು' ಎನ್ನಿಸಬೇಕೆಂದರೆ ಕರ್ನಾಟಕದಲ್ಲಿರುವ ಆ ಪಕ್ಷದ ಮೂಗು ಒತ್ತಿ ಹಿಡಿಯಬೇಕು. ಒಂದು ಕಾಲಮಿತಿ ನೀಡಿ, ಆ ಗಡುವಿನೊಳಗೆ ಅದು ಬಾಯಿ ತೆರೆಯದಿದ್ದರೆ ಆ ಪಕ್ಷದ ಕಚೇರಿಗಳಿಗೆ ಬೀಗ ಜಡಿಯುವುದು ಮತ್ತಿತರ ಗಂಭೀರ ಸ್ವರೂಪದ ಚಳವಳಿ ಆರಂಭವಾಗಬೇಕು. ಮೂಗು ಹಿಡಿದು ನೋಡಿ. ಬಾಯಿ ತೆರೆಯದಿದ್ದರೆ ಕೇಳಿ!


■ ಸಿರಿಮನೆ ನಾಗರಾಜ್


08 ⏮

ಜೊತೆಗೆ ಅಂಬರೀಷ್‌ಗಿರುವಂತಹ ವರ್ಚಸ್ಸುಗಳೂ ತಮ್ಮ ಕಾರ್ಯಸಾಧಿಸಿಬಿಡುತ್ತವೆ. ಯಾವ ಕಾಂಗ್ರೆಸ್ಸನ್ನು ನಂಬಿ ಗೌಡರ ವಿರುದ್ಧ ತೊಡೆತಟ್ಟಿ ಬಂದಿದ್ದೇವೆಯೋ ಅದೇ ಕಾಂಗ್ರೆಸ್ಸು ತಮ್ಮ ಪ್ರಾಂತ್ಯದ ಅಂಬಿಯಂತಹ ರಾಜಕಾರಣಿಯನ್ನು ಸುಖಾಸುಮ್ಮನೆ ದೂರಮಾಡಿಕೊಂಡರೆ ಅದರ ಪರಿಣಾಮವನ್ನು ನಾವು ಅನುಭವಿಸಬೇಕಾಗುತ್ತೆ ಅನ್ನೋದು ಅವರ ಬೇಗುದಿಯಾಗಿತ್ತು. ಒಂದೊಮ್ಮೆ ಅಂಬಿ, ಜೆಡಿಎಸ್ ಸೇರಿಬಿಟ್ಟರೆ ತಮ್ಮೆಲ್ಲರ ಅನುಪಸ್ಥಿತಿಯಿಂದ ಮಂಡ್ಯ-ಮೈಸೂರು ಭಾಗದಲ್ಲಿ ಜೆಡಿಎಸ್‌ಗೆ ಕಾಡುತ್ತಿರುವ ಸ್ಥಳೀಯ ಲೀಡರ್‌ಗಿರಿ ಆ ಪಕ್ಷಕ್ಕೆ ಸಿಗುತ್ತದೆ. ಗೌಡರಿಗೆ ಅಷ್ಟಾದರೆ ಸಾಕು ತಮ್ಮ ವಿರುದ್ಧ ಬಲಿಷ್ಠ ಸಮರ ಕಣವನ್ನೇ ಸಿದ್ಧ ಮಾಡಿಬಿಡುತ್ತಾರೆ, ಆಗ ಗೌಡರ ಚಕ್ರವ್ಯೂಹದ ಜೊತೆಗೆ ಅಂಬಿಯ ಸಿನಿವ್ಯೂಹಕ್ಕೂ ತಾವು ತಲೆಕೊಡಬೇಕಾಗುತ್ತೆ ಅನ್ನೋ ಆತಂಕದಿಂದಲೇ ಅವರು ಅಂಬಿ ಪರವಾದ ಮನವಿ ಮಾಡಿಕೊಂಡಿದ್ದು, ಆದರೆ ಆ ಮನವಿ ಬರ್ಕತ್ತೂ ಆಗಲಿಲ್ಲ, ಅವರೆಲ್ಲ ಊಹಿಸಿದ ಅನಾಹುತಕ್ಕೆ ಅಂಬಿಯೂ ಕೈಹಾಕಲಿಲ್ಲ.

ಆದರೂ ಮುಂದೆ ತಮಗೆ ಅಧಿಕಾರ ಸಿಗುತ್ತೋ ಇಲ್ಲವೋ ಎಂಬ ಅವರ ಮೂಲಭೂತ ಭಯ ಬಿಜೆಪಿಯನ್ನು ತಮ್ಮ ಎರಡನೇ ಆಯ್ಕೆಯನ್ನಾಗಿಸಿಕೊಂಡಿದೆ. ಇತ್ತೀಚೆಗೆ ನಡೆದ ದಕ್ಷಿಣ ಪದವೀಧರ ಎಂಎಲ್‌ಸಿ ಎಲೆಕ್ಷನ್‌ನಲ್ಲಿ ಬಿಜೆಪಿಯ ರವಿಶಂಕರ್‌ಗೆ ಮತ ನೀಡುವಂತೆ ಚೆಲುವರಾಯಸ್ವಾಮಿ ಪ್ರಚಾರ ಮಾಡಿದ್ದು ಕೂಡಾ ಇದೇ ಕಾರಣಕ್ಕೆ. ಅಂತಹ ಒಂದು ಸಭೆಯಲ್ಲಿ ತನ್ನ ಆಪ್ತರನ್ನು ಉದ್ದೇಶಿಸಿ ಮಾತನಾಡುತ್ತಾ 'ನಾನೀಗ ಯಾಕೆ, ಏನು ಅನ್ನೋ ಪ್ರಶ್ನೆಗಳಿಗೆ ಉತ್ತರ ಹೇಳುವ ಪರಿಸ್ಥಿತಿಯಲ್ಲಿಲ್ಲ, ಮುಂದೆ ಖಂಡಿತವಾಗ್ಲೂ ನಿಮಗೆ ತಿಳಿಸ್ತೀನಿ. ರಾಜಕಾರಣದಲ್ಲಿ ಏನು ಬೇಕಾದ್ರೂ ನಡೀಬಹುದು. ಆದ್ರೆ ಸದ್ಯಕ್ಕಂತು ಬಿಜೆಪಿಯ ರವಿಶಂಕರ್‌ಗೆ ನಿಮ್ಮ ಮತ ಹಾಕಿ. ಅಷ್ಟೆ ನಾನು ಕೇಳಿಕೊಳ್ಳೋದು' ಅಂತ ಚೆಲುವರಾಯಸ್ವಾಮಿ ನುಡಿದದ್ದು ಬಿಜೆಪಿ ಸೇರುವ ಆಯ್ಕೆಯನ್ನು ಮುಕ್ತವಾಗಿಟ್ಟುಕೊಳ್ಳುವ ಭಾಗವೇ ಆಗಿತ್ತು, ಚೆಲುವರಾಯಸ್ವಾಮಿಯಲ್ಲದೆ ಬೆಂಗಳೂರಿನ ಬಂಡಾಯ ಶಾಸಕರಾದ ಗೋಪಾಲಯ್ಯ ಮತ್ತು ಅಖಂಡ ಶ್ರೀನಿವಾಸಮೂರ್ತಿ ಸಹ ಬಿಜೆಪಿ ಸೇರುವ ಸಾಧ್ಯತೆಯನ್ನು ತಳ್ಳಿಹಾಕುವಂತಿಲ್ಲ, ಇವರಿಬ್ಬರಿಗೆ ಮೊನ್ನೆ ನಡೆದ ಬಿಬಿಎಂಪಿ ಎಲೆಕ್ಷನ್ ಫಲಿತಾಂಶವೇ ಮಾನದಂಡ!







ಈ ನಡುವೆ ಅಷ್ಟ ಭಿನ್ನರ ಮೂರನೇ ದಾರಿಯ ಬಗ್ಗೆಯೂ ದಟ್ಟವಾದ ಚರ್ಚೆ ಶುರುವಾಗಿದೆ. ಅದು, ಜೆಡಿಯು ಪಾರ್ಟಿ ಸೇರಿಕೊಳ್ಳುವುದು. ಇಂತಹದ್ದೊಂದು ಆಯ್ಕೆಯನ್ನು ಸ್ವತಃ ಜನತಾ ಪರಿವಾರದ ಹಿರಿಯರೇ ಶಿಫಾರಸ್ಸು ಮಾಡಿದ್ದಾರೆ. ಪ್ರಸಕ್ತ ರಾಜಕೀಯ ಬೆಳವಣಿಗೆಯಲ್ಲಿ ಕಾಂಗ್ರೆಸ್ ಅಥವಾ ಬಿಜೆಪಿ ಸೇರುವುದಕ್ಕಿಂತ ಜನತಾ ಪರಿವಾರದ ಭಾಗವಾದ ಜೆಡಿಯು ಸೇರುವುದು ಸೂಕ್ತ, ಹೇಗಿದ್ದರೂ ರಾಜ್ಯದಲ್ಲಿ ಜೆಡಿಯು ಘಟಕ ಇರುವುದರಿಂದ ಇದಕ್ಕೆ ತೊಂದರೆಯಾಗದು ಎಂಬ ಕಿವಿಮಾತು ಭಿನ್ನರನ್ನು ತಲುಪಿವೆ. ರಾಜ್ಯದಲ್ಲಿ ಜೆಡಿಯುಗೆ ನೆಲೆಯಿದೆ, ಆದರೆ ನಾಯಕರ ಕೊರತೆ ಎದ್ದು ಕಾಣುತ್ತಿದೆ. ಇಂತಹ ಸಮಯದಲ್ಲಿ ಚೆಲುವರಾಯಸ್ವಾಮಿ, ಜಮೀರ್ ಖಾನ್ ಟೀಮು ಆ ಪಕ್ಷಕ್ಕೆ ಸೇರಿದರೆ ಜೆಡಿಯು ಸಹ ಜೆಡಿಎಸ್‌ಗೆ ಪರ್ಯಾಯ ಶಕ್ತಿಯಾಗಲಿದೆ ಎಂಬ ಲೆಕ್ಕಾಚಾರ ಹಿರಿಯ ರಾಜಕಾರಣಿಗಳದ್ದು, 2018 ರ ಚುನಾವಣೆ ವೇಳೆಗೆ ಯಾವೊಂದು ಪಕ್ಷಕ್ಕೂ ಸ್ಪಷ್ಟ ಬಹುಮತ ಸಿಗದೆ ಮೈತ್ರಿ ಸರ್ಕಾರ ಅನಿವಾರ್ಯವಾದರೆ ಅಧಿಕಾರವೂ ದಕ್ಕುತ್ತೆ ಎಂಬ ಆಸೆ ಭಿನ್ನರನ್ನು ಇತ್ತ ಆಲೋಚಿಸುವಂತೆ ಮಾಡಿರುವುದು ಸುಳ್ಳಲ್ಲ.

ಅಂದಹಾಗೆ, ಇಂತಹದ್ದೊಂದು ಪೊಲಿಟಿಕಲ್ ಸಮಾಗಮಕ್ಕೆ ಜೆಡಿಎಸ್‌ನಲ್ಲಿದ್ದೂ ಇಲ್ಲದಂತಾಗಿರುವ ಮಾಜಿ ಸಚಿವ ಪಿ.ಜಿ.ಆರ್.ಸಿಂಧ್ಯಾ, ಎಂ.ಸಿ.ನಾಣಯ್ಯರಂತಹ ಹಿರಿಯ ರಾಜಕಾರಣಿಗಳ ಮಧ್ಯಸ್ಥಿಕೆ ಇದೆ ಎನ್ನಲಾಗುತ್ತಿದ್ದು ಈಗಾಗಲೇ ಜೆಡಿಯುನಲ್ಲಿ ಗುರುತಿಸಿಕೊಂಡಿರುವ ಮಾಜಿ ಮುಖ್ಯಮಂತ್ರಿ ದಿ. ಜೆ.ಹೆಚ್. ಪಟೇಲ್‌ರ ಪುತ್ರ ಮಹಿಮಾ ಪಟೇಲ್ ಜೊತೆ ಚೆಲುವರಾಯಸ್ವಾಮಿ ಮತ್ತು ಜಮೀರ್ ಅಹ್ಮದ್ ಮಾತನಾಡಿದ್ದಾರಂತೆ. ಜೆಡಿಯು ಸೇರಲು ಭಿನ್ನಮತೀಯರು ಒಪ್ಪಿದರೆ ಸದ್ಯದಲ್ಲೇ ಬಿಹಾರ ಮುಖ್ಯಮಂತ್ರಿ ನಿತೀಶ್ ಕುಮಾರ್ ಹಾಗೂ ಜೆಡಿಯು ವರಿಷ್ಠ ಶರದ್ ಯಾದವ್ ಅವರನ್ನು ಭೇಟಿ ಮಾಡಿಸುವ ಪ್ರಯತ್ನಗಳೂ ಶುರುವಾಗಿವೆ. ಅಂತಹ ಮಾತುಕತೆ ನಡೆದರೂ ಸದ್ಯಕ್ಕಿನ್ನು ಇವರನ್ನು ಜೆಡಿಎಸ್‌ನಿಂದ ಉಚ್ಛಾಟಿಸಿಲ್ಲವಾದ್ದರಿಂದ ಈಗಲೇ ಜೆಡಿಯುಗೆ ಸೇರುವುದು ಡೌಟು. ಆದರೆ ಚುನಾವಣೆ ಹತ್ತಿರ ಇದೆ ಎನ್ನುವಾಗ ಜೆಡಿಯು ಸೇರ್ಪಡೆಗೆ ಅಧಿಕೃತ ವೇದಿಕೆ ಸಿದ್ಧವಾಗಲಿದೆ. ಜೆಡಿಎಸ್ ಭಿನ್ನರು ಬಯಸಿದರೆ ಅವರಲ್ಲೇ ಒಬ್ಬರಿಗೆ ರಾಜ್ಯದ ನಾಯಕತ್ವ ವಹಿಸುವುದರ ಜೊತೆಗೆ ಅವರು ಸೂಚಿಸಿದವರನ್ನೇ ರಾಜ್ಯಾಧ್ಯಕ್ಷರನ್ನಾಗಿ ಮಾಡುವುದಕ್ಕೂ ನಿತೀಶ್ ಕುಮಾರ್ ಪಾಳಯದಿಂದ ಗ್ರೀನ್ ಸಿಗ್ನಲ್ ಸಿಕ್ಕಿದೆಯಂತೆ. ಹಾಗೊಮ್ಮೆ ಬಂಡಾಯಗಾರರು ಜೆಡಿಯು ಸೇರುವುದೇ ಆದಲ್ಲಿ, ಕೇವಲ ತಾವು ಎಂಟು ಜನ ಮಾತ್ರವಲ್ಲದೇ ಜೆಡಿಎಸ್‌ನಲ್ಲಿರುವ ಕೆಲವು ನಾಯಕರನ್ನೂ ಕರೆದೊಯ್ಯುವುದರಲ್ಲಿ ಅನುಮಾನವಿಲ್ಲ.

ಕಾಂಗ್ರೆಸ್, ಬಿಜೆಪಿ, ಜೆಡಿಯುನ ಹೊರತಾಗಿ ಭಿನ್ನರ ಮುಂದೆ ಇನ್ನೂ ಒಂದು ಹೆಚ್ಚುವರಿ ನಾಲ್ಕನೇ ಆಯ್ಕೆಯೂ ಇದೆ. ಆದರೆ ಅದಕ್ಕೆ ದಾರಿ ಸಂಪೂರ್ಣ ಬಂದ್ ಆಗಿಹೋಗಿದೆ. ಅದು ಜೆಡಿಎಸ್‌ನಲ್ಲೇ ಉಳಿಯುವುದು. ಇಷ್ಟೆಲ್ಲ ಆದಮೇಲೂ ಯಾವ 'ಭಿನ್ನ' ನಾಯಕನೂ ಜೆಡಿಎಸ್ ತೊರೆದು ಹೋಗುವ ಮಾತನಾಡುತ್ತಿಲ್ಲ. ಬೇಕಿದ್ದರೆ ತಮ್ಮನ್ನು ಪಕ್ಷದಿಂದ ಉಚ್ಛಾಟನೆ ಮಾಡಲಿ ಅಂತ ಚೆಂಡನ್ನು ಗೌಡರ ಅಂಗಳಕ್ಕೆ ತಳ್ಳುತ್ತಲೇ 'ಈಗಲೂ ನಮಗೆ ಕುಮಾರಸ್ವಾಮಿಯ ಮೇಲೆ ವಿಶ್ವಾಸವಿದೆ. ಗೌಡರು ಕುಮಾರಸ್ವಾಮಿಯನ್ನು ನಮ್ಮ ಕೈಗೆ ಕೊಡಲಿ. ಅವರನ್ನು ಮುಂದಿನ ಮುಖ್ಯಮಂತ್ರಿ ಮಾಡಿ ತೋರಿಸುತ್ತೇವೆ' ಅಂತ ಹೇಳುತ್ತಾ ಗೊಂದಲವನ್ನು ಹುಟ್ಟುಹಾಕುತ್ತಿದ್ದಾರೆ. ಸೂಕ್ಷ್ಮವಾಗಿ ಗಮನಿಸಿದ್ದೇ ಆದಲ್ಲಿ ಎಂಎಲ್‌ಸಿ ಎಲೆಕ್ಷನ್ ನಂತರದಲ್ಲಿ ಬಂಡಾಯ ಶಾಸಕರಲ್ಲಿ ಮಾಗಡಿಯ ಬಾಲಕೃಷ್ಣ ಹೊರತುಪಡಿಸಿದರೆ ಇನ್ಯಾರೂ ಕುಮಾರಸ್ವಾಮಿಯ ವಿರುದ್ಧ ಹರಿಹಾಯುತ್ತಿಲ್ಲ. ಐದು ಕೋಟಿಯ ಮನೆಯ ವಿಚಾರಕ್ಕೆ ಚೆಲುವರಾಯಸ್ವಾಮಿ, ಕುಮಾರಸ್ವಾಮಿ ಪರಸ್ಪರ ಕಾಲೆಳೆದುಕೊಂಡದ್ದು ಬಿಟ್ಟರೆ ಸ್ವತಃ ಚೆಲುವರಾಯಸ್ವಾಮಿಯೇ ಗೌಡರು ಬಿಟ್ಟುಕೊಟ್ಟರೆ ಕುಮಾರಸ್ವಾಮಿಯನ್ನು ಮತ್ತೆ ಸಿಎಂ ಮಾಡುವ ಮಾತನಾಡಿದ್ದು ವಿಶೇಷ. ಒಟ್ಟಿನಲ್ಲಿ ಈ ನಾಲ್ಕನೇ ಹಾದಿ ಸದ್ಯಕ್ಕಂತು ಸಂಪೂರ್ಣ ಮುಚ್ಚಿಹೋಗಿದೆ. ಈ ಆಯ್ಕೆ ಫಲಿಸುವ ಸಾಧ್ಯತೆ ತುಂಬಾನೇ ಕ್ಷೀಣ. ಆದರೆ ರಾಜಕಾರಣದಲ್ಲಿ ಏನು ಬೇಕಾದರು ಘಟಿಸಬಹುದೆಂಬ ಸೂತ್ರದ ಕಾರಣಕ್ಕೆ ನಾಲ್ಕನೇ ಆಯ್ಕೆಯನ್ನು ವ್ಯಂಗ್ಯದ ರೂಪದಲ್ಲಾದರೂ ಜೀವಂತವಾಗಿಡುವ ಪ್ರಯತ್ನ ಬಂಡಾಯ ಪಾಳಯದಿಂದ ನಡೆಯುತ್ತಿದೆ.

■ ಗಿರೀಶ್ ತಾಳಿಕಟ್ಟೆ

ಅಡುಗೆಯವಳ ತಪ್ಪೊಪ್ಪಿಗೆ



ಲಿಂಗಾನಂದರನ್ನು ವಿಷ ಹಾಕಿ ಕೊಂದೆ!



1995 ರ ಜೂನ್ 30 ರಂದು ಹಿರಿಯೂರಿನಲ್ಲಿ ಪ್ರವಚನ ನೀಡುತ್ತಿದ್ದ ವೇದಿಕೆಯಲ್ಲೇ ಹೃದಯಾಘಾತಕ್ಕೀಡಾಗಿ ಲಿಂಗಾನಂದರ ದುರ್ಮರಣವಾದಾಗ ಮಾತೆ ಮಹಾದೇವಿ ಜೊತೆಗೇ ಇದ್ದರು. ಆ ಹೊತ್ತಿಗಾಗಲೇ ಮಾತೆ ಮಹಾದೇವಿಯವರನ್ನು ತಮ್ಮ ಉತ್ತರಾಧಿಕಾರಿಯೆಂದು ಲಿಂಗಾನಂದರ ಘೋಷಣೆಯಾಗಿತ್ತು. ಆಗ ಲಿಂಗಾನಂದರು ಮತ್ತವರ ತಂಡದ ಪ್ರಸಾದ ಅಂದರೆ ಅಡುಗೆಯ ಹೊಣೆ ಹೊತ್ತಿದ್ದ ರಾಜೇಶ್ವರಿ ಕಾಲಕ್ರಮೇಣ ಮಾತೆ ಮಹಾದೇವಿಯವರಿಗೂ ಅಡುಗೆ ಮಾಡಿಕೊಂಡಿದ್ದವಳೆ. ತಾನು ಮಾತೆ ಮಹಾದೇವಿ ಮತ್ತು ಲಿಂಗಾನಂದರಿಗೆ ವಿಷ ಹಾಕಿ ಕೊಟ್ಟಿದ್ದೇನೆಂದು ದಯಾನಂದ ಸ್ವಾಮಿಯೆದುರು ರಾಜೇಶ್ವರಿ ಬಾಯಿಬಿಟ್ಟಿದ್ದೇಕೆ? ಗಂಗಾ ಮಾತಾಜಿಯ ಖಾಸಾ ತಂಗಿ ಮುಕ್ತಾಯಕ್ಕ ಮತ್ತು ಸಂಬಂಧಿ ಶ್ರೀದೇವಿಯವರೇ ಔಷಧಿ ತಂದು ಕೊಡುತ್ತಿದ್ದರೆಂದೇಕೆ ಹೇಳುತ್ತಿದ್ದಾಳೆ. ಹಾಗೊಮ್ಮೆ ಆಕೆ ಸುಳ್ಳು ಹೇಳಿದ್ದರೆ ಗಂಗಾ ಮಾತಾಜಿಯೇಕೆ ತನ್ನ ಡ್ರೈವರ್ ಯೋಗೇಶ್‌ನನ್ನು ಮೈಸೂರಿಗೆ ಕಳಿಸಿ ಆಕೆಯನ್ನು ತನ್ನಲ್ಲಿಗೆ ಕರೆಸಿಕೊಂಡು ಬಚ್ಚಿಡಬೇಕು? ತನಗೇ ವಿಷ ಹಾಕಿದ್ದು ಗೊತ್ತಾದರೂ ತನ್ನದೇ ದುಡ್ಡನ್ನು ಕದ್ದೊಯ್ದಿದ್ದರೂ ಬಸವಾಂಜಲಿ ಮಾತೆಯೇಕೆ ಪೊಲೀಸರಿಗೆ ದೂರು ಕೊಟ್ಟಿಲ್ಲ? ಅಂದರೆ ಮಾತೆ ಮಹಾದೇವಿಗೆ ಕಳಂಕ ತಟ್ಟಬಹುದೆಂದು ಬಸವಾಂಜಲಿ ವಿಷಯ ಮುಚ್ಚಿಡುತ್ತಿದ್ದಾರಾ? ಮಾತೆ ಮಹಾದೇವಿಗಿದು ಗೊತ್ತಾಗಿಯೂ ಏಕೆ ಮುಗುಮ್ಮಾಗಿದ್ದಾರೆ? ಲಿಂಗಾನಂದರನ್ನು ವಿಷ ಹಾಕಿ ಕೊಲ್ಲಲಾಯಿತೆಂದು ಹೊರಜಗತ್ತಿಗೆಲ್ಲಿ ಗೊತ್ತಾದೀತೋ ಎಂಬ ಅಳುಕೆ? ಯಾವುದೂ ಸ್ಪಷ್ಟವಿಲ್ಲ.

ನಾನು ಪಾಪ ಮಾಡಿಬಿಟ್ಟೆ. ಶ್ರೀದೇವಿಯ ಹತ್ತು ಸಾವಿರದ ಆಸೆಗೆ ಬಿದ್ದು ಅಪ್ಪಾಜಿಗೆ ವಿಷ ಹಾಕಿಬಿಟ್ಟೆ. ನಾನು ಪ್ರಸಾದದಲ್ಲಿ ಬೆರೆಸಿಕೊಡುತ್ತಿದ್ದ ವಿಷದಿಂದಾಗಿಯೇ ಅಪ್ಪಾಜಿ ತೀರಿಕೊಂಡರು. ಮಾತಾಜಿಗೂ ನಾನು ಮೂರು ವರ್ಷಗಳ ಕಾಲ ವಿಷ ಹಾಕಿದ್ದೇನೆ. ಆಗಾಗ ಮಠಕ್ಕೆ ಬಂದು ಹೋಗುತ್ತಿದ್ದ ಶ್ರೀದೇವಿಯೇ ನನಗೆ 'ಅಪ್ಪಾಜಿಗೆ ಊಟದಲ್ಲಿ ಬೆರೆಸಿಕೊಡು' ಎಂದು ವಿಷ ತಂದುಕೊಡುತ್ತಿದ್ದಳು. ಅಪ್ಪಾಜಿ ತೀರಿಕೊಂಡ ವಿಷಯ ಗೊತ್ತಾದಾಗಲಂತೂ ಶ್ರೀದೇವಿ ತುಂಬಾನೇ ಖುಷಿಪಟ್ಟಳು. ಅಪ್ಪಾಜಿ ಹೋಗಿಬಂದಲ್ಲೆಲ್ಲ ನಾನೇ ಅಡುಗೆ ಮಾಡುತ್ತಿದ್ದೆ ನೋಡಿ, ಪ್ರಸಾದದಲ್ಲಿ ವಿಷ ಹಾಕುತ್ತಿದ್ದದ್ದು ನನ್ನ ಮತ್ತು ಶ್ರೀದೇವಿಗೆ ಬಿಟ್ಟರೆ ಬೇರೆ ಯಾರ ಗಮನಕ್ಕೂ ಬರಲೇ ಇಲ್ಲ, ಆರೆಂಟು ವರ್ಷಗಳ ಕಾಲ ನಾನು ಹಾಕಿದ ಔಷಧಿಯ ಫಲವಾಗೇ ಅಪ್ಪಾಜಿ ತೀರಿಕೊಂಡರು, ಮಾತಾಜಿಯೂ ಹಾಸಿಗೆ ಹಿಡಿದರು.....!

ಹೀಗೆ ತಾನು ಆಹಾರಕ್ಕೆ ವಿಷ ಬೆರೆಸಿ ಕೊಂದೆನೆಂದು ಈ ಹೆಂಗಸು ಹೇಳುತ್ತಿರುವ 'ಅಪ್ಪಾಜಿ' ಬೇರೆ ಯಾರೂ ಅಲ್ಲ, ಬಸವಧರ್ಮ ಪೀಠದ ಸಂಸ್ಥಾಪಕರೂ, ನಾಡು ಕಂಡ ಮಹಾನ್ ಬಸವತತ್ವ ಪ್ರಚಾರಕರೂ ಆದ ಶಿವೈಕ್ಯ ಲಿಂಗಾನಂದ ಸ್ವಾಮೀಜಿ. ಮಾತೆ ಮಹಾದೇವಿಯವರ ಪೂರ್ವ ಪೀಠಾಧಿಪತಿಗಳೂ, ಲಿಂಗಾಯತ ಧರ್ಮವೆಂಬುದನ್ನು ಪ್ರತಿಪಾದಿಸಿಕೊಂಡೇ ಬಂದ ಲಿಂಗಾನಂದ ಸ್ವಾಮೀಜಿಯವರನ್ನು ತಾನು ವಿಷ ಹಾಕಿ ಕೊಂದೆ ಎಂದು ಈಕೆ ಹೇಳಿಕೊಳ್ಳುತ್ತಿರುವ ವೀಡಿಯೋ ತುಣುಕೊಂದು ಸದ್ಯ ವಾಟ್ಸಪ್‌ನಲ್ಲಿ ಬೇಕಾಬಿಟ್ಟಿ ಹರಿದಾಡುತ್ತಿದೆ.

ಗೋರಕ್ಷಣಾ ಆಯೋಗದ ಮಾಜಿ ಅಧ್ಯಕ್ಷನೂ, ಬಸವಧರ್ಮ ಮಹಾಮನೆಯ ಪೀಠಾಧಿಪತಿಯೂ ಆದ ದಯಾನಂದ ಸ್ವಾಮೀಜಿಯವರ ಎದುರು ಕೂತು ತನ್ನ ತಪ್ಪೊಪ್ಪಿಗೆ ಎಂಬಂತೆ ಮೇಲ್ಕಂಡ ಮಾತುಗಳನ್ನು ಹೇಳುತ್ತಿರುವ ರಾಜೇಶ್ವರಿ ಎಂಬಾಕೆಯ ವೀಡಿಯೋ ಬಹುಶಃ ಹೊರಜಗತ್ತಿಗೆ ಗೊತ್ತೇ ಇಲ್ಲವೇನೋ. ರಾಜ್ಯದ ಲಿಂಗಾಯತ ಸಮೂಹ, ವೀರಶೈವರು, ಕ್ರಾಂತಿಯೋಗಿ ಬಸವಣ್ಣನ ಲಕ್ಷಲಕ್ಷ ಮಂದಿ ಅನುಯಾಯಿಗಳ್ಯಾರಿಗೂ ಗೊತ್ತಾಗದ ಹಾಗೇ ಯಾವುದೋ ಸಂಧಿಯಿಂದ ಇಣುಕುತ್ತಿರುವ ಲಿಂಗಾನಂದರ ಅಡುಗೆಯಾಕೆ ರಾಜೇಶ್ವರಿಯ ತಪ್ಪೊಪ್ಪಿಗೆಯ ವೀಡಿಯೋ ನಿಜಕ್ಕೂ ಆಘಾತಕಾರಿ ಮತ್ತು ಕನ್ನಡಿಗರ ಪಾಲಿಗೆ ಸಾಂಸ್ಕೃತಿಕ ವೈಪರೀತ್ಯವೇ ಸರಿ.



ಬಯಲಾದ ವೀಡಿಯೋ

ಹೆಚ್ಚೂಕಮ್ಮಿ ಇಪ್ಪತ್ತು ನಿಮಿಷದ ಈ ವೀಡಿಯೋ ತುಣುಕಿನಲ್ಲಿ ದಯಾನಂದ ಸ್ವಾಮೀಜಿಯ ಎದುರು ಕೂತು ಈಕೆ ಹೊರಗೆಡಹುತ್ತಿರುವ ಸತ್ಯಗಳು(?) ಸದ್ಯ ಬಸವಧರ್ಮ ಪೀಠದ ಮಾತೆ ಮಹಾದೇವಿಯವರನ್ನೂ, ಅವರ ಉತ್ತರಾಧಿಕಾರಿ ಗಂಗಾ ಮಾತಾಜಿಯವರನ್ನೂ, ಅದರ ಲಕ್ಷಾಂತರ ಮಂದಿ ಅನುಯಾಯಿಗಳನ್ನು ಪ್ರತ್ಯಕ್ಷವೋ ಪರೋಕ್ಷವೋ ಬೆಚ್ಚಿಬೀಳಿಸಲೇಬೇಕು. ಜೊತೆಗೆ ಸರ್ಕಾರಕ್ಕೂ ಕನ್ನಡಿಗರಿಗೂ ಅರಗಿಸಿಕೊಳ್ಳಲಸಾಧ್ಯವಾದ ದಾರುಣವೊಂದನ್ನು ತೆರೆದಿಡುವ ಈ ವೀಡಿಯೋ ತುಣುಕನ್ನು ಕಲೆ ಹಾಕಿದ ಪತ್ರಿಕೆ ಈ ಬಗ್ಗೆ ನಡೆಸಿದ ತನಿಖೆಯ ಚಿತ್ರವಿಚಿತ್ರ ಸತ್ಯಗಳು ನಿಜಕ್ಕೂ ಕುತೂಹಲಕಾರಿಯಾಗಿದೆ.

ಲಿಂಗಾನಂದರ ಧರ್ಮಪ್ರಚಾರಕ ತಂಡದಲ್ಲಿ ಪ್ರಸಾದದ ಹೊಣೆ ಹೊತ್ತಿದ್ದ ರಾಜೇಶ್ವರಿ ಎಂಬ ಅಡುಗೆಯವಳನ್ನು ಕೂರಿಸಿಕೊಂಡು ಒಂದರಮೇಲೊಂದರಂತೆ ಪ್ರಶ್ನೆಗಳನ್ನು ಹಾಕಿ ಬಾಯಿ ಬಿಡಿಸುತ್ತಿರುವುದು ಮಾತೆ ಮಹಾದೇವಿಯವರ ಶಿಷ್ಯರಲ್ಲೊಬ್ಬರಾದ ದಯಾನಂದ ಸ್ವಾಮೀಜಿ. ಯಡಿಯೂರಪ್ಪ ಮುಖ್ಯಮಂತ್ರಿಯಾಗಿದ್ದಾಗ ರಾಜ್ಯ ಗೋರಕ್ಷಾ ಆಯೋಗದ ಅಧ್ಯಕ್ಷನೂ ಆಗಿದ್ದ ದಯಾನಂದ ಸ್ವಾಮೀಜಿ ಮೂಲತಃ ಆರೆಸ್ಸೆಸ್ ಹಿನ್ನೆಲೆಯವನೆಂಬ ಬಗ್ಗೆ ಯಾರಿಗೂ ಅನುಮಾನಗಳಿಲ್ಲ, ಆಗಾಗ ಪ್ರಾಣಿಹಿಂಸೆ ವಿರುದ್ಧದ ಹೋರಾಟಗಳಲ್ಲೂ ಕಾಣಿಸಿಕೊಳ್ಳುವ ದಯಾನಂದ ಸ್ವಾಮೀಜಿ ಯಾವ ಪರಿಸ್ಥಿತಿಯಲ್ಲಿ, ಹೇಗೆ, ಏಕೆ ಇಂಥಾದ್ದೊಂದು ವೀಡಿಯೋ ಮಾಡಿಕೊಂಡರೋ ಗೊತ್ತಿಲ್ಲ, ಬಹುಶಃ ಅವರೇ ಇದನ್ನು ವಾಟ್ಸಪ್ಪಿಗೆ ಹಾಕಿರಬೇಕು ಅಥವಾ ದಯಾನಂದರ ಪತ್ನಿ ಸುನಂದಾ ಎಂಬುವವರೇ ರಾಜೇಶ್ವರಿಯ ತಪ್ಪೊಪ್ಪಿಗೆಯನ್ನು ವೀಡಿಯೋ ಮಾಡಿ ವಾಟ್ಸಪ್ಪಿಗೆ ಬಿಟ್ಟಿರಬೇಕು!

ಈ ರಾಜೇಶ್ವರಿ ಎಂಬ ಐವತ್ತರ ಹೆಂಗಸು ಲಿಂಗಾನಂದರು ಬದುಕಿದ್ದಾಗ ಅವರ ಧರ್ಮಪ್ರಚಾರಕ ತಂಡದಲ್ಲಿ ಅಡುಗೆಯವಳಾಗಿದ್ದದ್ದು ಸತ್ಯವೆ. ಬಸವ ಕಲ್ಯಾಣ ಮತ್ತು ಕೂಡಲಸಂಗಮಗಳನ್ನು ಕೇಂದ್ರವಾಗಿಸಿಕೊಂಡು ಲಿಂಗಾನಂದ ಸ್ವಾಮೀಜಿಯವರು ರಾಜ್ಯಾದ್ಯಂತ ಧರ್ಮಪ್ರಚಾರಕ್ಕೆ ಹೊರಟರೆಂದರೆ ಊರೂರಲ್ಲೂ ಪ್ರವಚನಗಳನ್ನು ನೀಡುವುದೇ ಅವರ ಮುಖ್ಯ ಕಾಯಕವಾಗಿತ್ತು, ಹಾಗೇ ಊರೂರು ಸುತ್ತುತ್ತಿದ್ದ ಅವರ ತಂಡದಲ್ಲಿ ಕಮ್ಮಿಯೆಂದರೂ ಇಪ್ಪತ್ತು ಮಂದಿ ಇದ್ದೇ ಇರುತ್ತಿದ್ದರು. ಅವರಲ್ಲಿ ಮುಖ್ಯವಾದವರು ಮಾತೆ ಮಹಾದೇವಿ ಮತ್ತವರ ಆಪ್ತ ಸಹಾಯಕಿ ಗಂಗಾ ಮಾತಾಜಿ.


ಬಸವಾಂಜಲಿ ಮಾತಾಜಿ

1995 ರ ಜೂನ್ 30 ರಂದು ಹಿರಿಯೂರಿನಲ್ಲಿ ಪ್ರವಚನ ನೀಡುತ್ತಿದ್ದ ವೇದಿಕೆಯಲ್ಲೇ ಹೃದಯಾಘಾತಕ್ಕೀಡಾಗಿ ಲಿಂಗಾನಂದರ ದುರ್ಮರಣವಾದಾಗ ಮಾತೆ ಮಹಾದೇವಿ ಜೊತೆಗೇ ಇದ್ದರು. ಆ ಹೊತ್ತಿಗಾಗಲೇ ಮಾತೆ ಮಹಾದೇವಿಯವರನ್ನು ತಮ್ಮ ಉತ್ತರಾಧಿಕಾರಿಯೆಂದು ಲಿಂಗಾನಂದರ ಘೋಷಣೆಯಾಗಿತ್ತು. ಆಗ ಲಿಂಗಾನಂದರು ಮತ್ತವರ ತಂಡದ ಪ್ರಸಾದ ಅಂದರೆ ಅಡುಗೆಯ ಹೊಣೆ ಹೊತ್ತಿದ್ದ ರಾಜೇಶ್ವರಿ ಕಾಲಕ್ರಮೇಣ ಮಾತೆ ಮಹಾದೇವಿಯವರಿಗೂ ಅಡುಗೆ ಮಾಡಿಕೊಂಡಿದ್ದವಳೆ. ಮಾತೆ ಮಹಾದೇವಿ ಬೆಂಗಳೂರಿನ ರಾಜಾಜಿನಗರದ ಬಸವಕೇಂದ್ರದಲ್ಲಿ ವಾಸ್ತವ್ಯ ಹೂಡಲಾರಂಭಿಸಿದ ನಂತರವೂ ಇದೇ ರಾಜೇಶ್ವರಿಯೇ ಅಡುಗೆಯವಳಾಗಿದ್ದಳು. ಮಾತೆ ಮಹಾದೇವಿಯವರ ಉತ್ತರಾಧಿಕಾರಿಯಾಗಿದ್ದ ಅಲ್ಲಮ್ಮಪ್ರಭು ಸ್ವಾಮೀಜಿ ಅದ್ಯಾವುದೋ ಕಾರಣಕ್ಕೆ ಮನಸ್ತಾಪಗೊಂಡು ಬಸವಧರ್ಮ ಪೀಠ ತೊರೆದರು. ಆಗ ವಿಧಿಯಿಲ್ಲದೆ ತನ್ನ ಬಹುಕಾಲದ ಆಪ್ತ ಸಹಾಯಕಿಯಾಗಿದ್ದ ಗಂಗಾ ಮಾತಾಜಿಯನ್ನು ತನ್ನ ಉತ್ತರಾಧಿಕಾರಿ ಎಂದು ಮಹಾದೇವಿ ಘೋಷಿಸಬೇಕಾಯಿತು.

ಬಸವಧರ್ಮ ಪೀಠದಲ್ಲಿ ಬೇರೆಲ್ಲರಿಗಿಂತಲೂ ಉತ್ತರಾಧಿಕಾರಿ ಗಂಗಾ ಮಾತಾಜಿಗೇ ಆತ್ಮೀಯಳಾಗಿದ್ದ ರಾಜೇಶ್ವರಿ ಇಲ್ಲಿಗೆ ಮೂರು ವರ್ಷದ ಹಿಂದೆ ಮೈಸೂರಿನ ನಂಜನಗೂಡು ರಸ್ತೆಯ ಬಸವಜ್ಞಾನಮಂದಿರಕ್ಕೆ ತನ್ನ ವಾಸ್ತವ್ಯ ಬದಲಿಸಿದಳು. ಈ ಬಸವ ಜ್ಞಾನಮಂದಿರಕ್ಕೆ ಪೀಠಾಧಿಕಾರಿಣಿಯಾಗಿರುವುದು ಬಸವಾಂಜಲಿ ಮಾತಾಜಿ. ಈಕೆಯೂ ಮಾತೆ ಮಹಾದೇವಿಯ ಶಿಷ್ಯೆಯೆ. ಬೆಂಗಳೂರಿನ ಬಸವಕೇಂದ್ರದಲ್ಲಿ ಗಂಗಾಮಾತಾಜಿಯ ಜೊತೆಗೇ ಮಹಾದೇವಿಯ ಸೇವೆ ಮಾಡಿಕೊಂಡಿದ್ದ ಬಸವಾಂಜಲಿ ಮಾತಾಜಿ ತನ್ನದೇ ಸ್ವಂತ ಪೀಠ ಶುರುವಿಟ್ಟು ಅಲ್ಲಿನ ಅಡುಗೆಗೆ ಎಂದು ಕರೆತಂದಿದ್ದು ರಾಜೇಶ್ವರಿಯನ್ನೇ.

ಹೆಚ್ಚೂಕಮ್ಮಿ ಎರಡೂವರೆ ವರ್ಷ ಕಾಲ ತಾನಾಯಿತು ತನ್ನ ಅಡುಗೆಯಾಯಿತು ಎಂಬಂತಿದ್ದ ರಾಜೇಶ್ವರಿಯ ವಿಷ ಪ್ರಯೋಗ ಬಸವಾಂಜಲಿಗೂ ಗೊತ್ತಿರಲಿಲ್ಲ. ಆದರೆ ಮೂರು ತಿಂಗಳಿಂದೀಚೆಗೆ ಬಸವಾಂಜಲಿ ಪದೇಪದೇ ಅನಾರೋಗ್ಯಕ್ಕೀಡಾಗಿದ್ದಾರೆ. ಏನೇ ತಿಂದರೂ ವಾಂತಿ, ಪದೇಪದೇ ತಲೆ ಸುತ್ತು, ಮೈಸೂರಿನ ಅನೇಕ ಕ್ಲಿನಿಕ್‌ಗಳಾಗಿ ಕೊನೆಗೆ ಜೆಎಸ್‌ಎಸ್ ಆಸ್ಪತ್ರೆಗೆ ದಾಖಲಾದಾಗಲೂ ಅಲ್ಲಿನ ವೈದ್ಯರಿಂದ ಬರುತ್ತಿದ್ದ ಒಂದೇ ಉತ್ತರ ಫುಡ್ ಪಾಯ್ಸನ್!

ಒಮ್ಮೆ ಸರಿ, ಎರಡನೇ ಬಾರಿ ಸರಿ. ಪ್ರತಿ ಬಾರಿಯೂ ಫುಡ್ ಪಾಯ್ಸನ್ ಎಂದರೆ ಏನರ್ಥ? ಆಗಲೇ ಬಸವಾಂಜಲಿಗೆ ಅನುಮಾನ ಬಂದು ಆಶ್ರಮದ ಅಡುಗೆ ಮನೆಯನ್ನು ಪರಿಶೀಲಿಸಿದ್ದಾರೆ. ಚಿಕ್ಕ ಡಬ್ಬದಲ್ಲೊಂದು ಬೂದು ಬಣ್ಣದ ಪುಡಿ ಪತ್ತೆಯಾಗಿದೆ. ಇದೇನೆಂದು ಪ್ರಶ್ನಿಸಲಾಗಿ ರಾಜೇಶ್ವರಿ ತಡಬಡಾಯಿಸಿದ್ದಾಳೆ. ಇದನ್ನು ನಿನಗೆ ಕೊಟ್ಟಿದ್ದು ಯಾರು ಎಂದು ಕೇಳಲಾಗಿ ರಾಜೇಶ್ವರಿಯ ಬಾಯಿಂದ ಶ್ರೀದೇವಿ ಎಂಬ ನಿಗೂಢ ಹೆಂಗಸೊಬ್ಬಳ



ಬಂದಿದೆ. ಆಕೆಯೇ ಮೂರು ತಿಂಗಳಿಗೊಮ್ಮೆ ಔಷಧಿಯೆಂದು ಈ ಪುಡಿ ಕೊಟ್ಟು ಇದನ್ನು ...ಜ ಪ್ರಸಾದದಲ್ಲಿ ಬೆರೆಸಿಕೊಡು ಎಂದು ...ಳೆಂದು ರಾಜೇಶ್ವರಿ ಬಾಯಿ ಬಿಟ್ಟಿದ್ದಾಳೆ.

...ಶ್ರೀದೇವಿ ಬೇರೆ ಯಾರೂ ಅಲ್ಲ, ಮಾತೆ ಮಹಾ...ಯವರ ಉತ್ತರಾಧಿಕಾರಿ ಗಂಗಾ ಮಾತಾಜಿಯವರ ...!

...ದರೆ ಮಾತೆ ಮಹಾದೇವಿಯವರ ಉತ್ತರಾಧಿಕಾರಿಯ ...ಧಿಯೇ ಮಾತೆ ಬಸವಾಂಜಲಿಗೆ ವಿಷ ...ತ್ತಿದ್ದಾಳೆ? ರಾಜೇಶ್ವರಿ ಇಷ್ಟು ಬಾಯಿ ಬಿಡುತ್ತಿದ್ದಂತೆ ...ಾದ ಬಸವಾಂಜಲಿ ರಾಜೇಶ್ವರಿಗೆ ಇನ್ನಾವತ್ತೂ ಅಡುಗೆ ...ೋಳಕ್ಕೆ ಕಾಲಿಡದಂತೆ ಮಾಡಿ ಅಡುಗೆಗೆ ಬೇರೊಬ್ಬ...ನ್ನು ನೇಮಿಸಿದ್ದಾರೆ. ಇಷ್ಟಾಗ್ಯೂ ಬಸವಾಂಜಲಿ ಈ ...ಪೊಲೀಸರಿಗೆ ದೂರು ನೀಡಲಿಲ್ಲ, ರಾಜೇಶ್ವರಿಯನ್ನು ...ದಿಂದಲೂ ಹೊರದಬ್ಬಲಿಲ್ಲ, ಕ್ಷಮಿಸಿ ಆಶ್ರಮದಲ್ಲೇ ...ಕೆಲಸ ವಹಿಸಿ ಸುಮ್ಮನಾಗಿದ್ದಾರೆ. ಇದಾಗಿದ್ದು 2016 ...ವರಿ ತಿಂಗಳಲ್ಲಿ ಇದಾಗಿ ಎರಡೂವರೆ ತಿಂಗಳ ...ರ ಅಂದರೆ ಮೇ 23 ಕ್ಕೆ ಇದ್ದಕ್ಕಿದ್ದಂತೆ ...ಜ್ಞಾನಮಂದಿರಕ್ಕೆ ದಯಾನಂದ ಸ್ವಾಮೀಜಿಯ ...ವಾಗಿದೆ.

...ದೂ ಇದೂ ಮಾತಾಡುತ್ತ ಬಸವಾಂಜಲಿ ತನ್ನ ...ೋಗ್ಯ ಮತ್ತು ರಾಜೇಶ್ವರಿ ಹಾಕುತ್ತಿದ್ದ ವಿಷದ ಬಗ್ಗೆ ...ನಂದ ಸ್ವಾಮೀಜಿಯ ಬಳಿ ಹೇಳಿಕೊಂಡಿದ್ದಾರೆ. ಆಗ ...ಸಿಕೊಂಡ ದಯಾನಂದ ಸ್ವಾಮೀಜಿ ರಾಜೇಶ್ವರಿಯನ್ನು ವಿಚಾರಿಸಿದರೆ ತನ್ನ ಸುದೀರ್ಘ ವಿಷಲೀಲೆಯನ್ನೇ ...ಬಿಟ್ಟಿದ್ದಾಳೆ. ಆಕೆಯ ಪ್ರಕಾರ ಲಿಂಗಾನಂದರು ...ಕಿದ್ದಾಗಿನಿಂದ ಹಿಡಿದು ತದನಂತರ ಮಾತೆ ...ದೇವಿಗೂ ತಾನು ವಿಷ ಹಾಕಿದ್ದೇನೆ ಮತ್ತು ...ಯೆಂದು ಅದನ್ನು ಆಗಾಗ ಬಂದುಕೊಟ್ಟು...ತ್ತಿದ್ದವಳು ಗಂಗಾಮಾತಾಜಿಯ ಸಂಬಂಧಿ ಶ್ರೀದೇವಿ. ವಿಶೇಷವೆಂದರೆ ಬಸವಮಂಟಪದ ದೆಹಲಿ ಘಟಕದ ...ಾರಿ ಹೊತ್ತ ಗಂಗಾ ಮಾತಾಜಿಯ ಖಾಸಾ ತಂಗಿ ...ಮುಕ್ತಾಯಕ್ಕನೇ ಆಗಾಗ ಶ್ರೀದೇವಿಯನ್ನು ಕರೆತಂದು ...ಶ್ವರಿಯನ್ನು ಭೇಟಿ ಮಾಡಿಸುತ್ತಿದ್ದದ್ದೂ ಉಂಟು! ...ದರರ್ಥ ಮಾತೆ ಮಹಾದೇವಿಯ ಉತ್ತರಾಧಿಕಾರಿ

ಗಂಗಾ ಮಾತಾಜಿಯ ಕರ್ಮ, ಚನ್ನಬಸವಾನಂದನ ಮರ್ಮ!

ಲಿಂಗಾನಂದರ ಆಚಾರ ಪರಿಶ್ರಮ ಮತ್ತು ಸಾಧನೆಗಳ ಉತ್ತರಾಧಿಕಾರಿಯಾದ ಮಾತೆ ಮಹಾದೇವಿ ತಾತ್ವಿಕವಾಗಿ ಲಿಂಗಾನಂದರ ಸಮರ್ಥ ವಾರಸುದಾರರೆಂಬ ಬಗ್ಗೆ ಎರಡು ಮಾತಿಲ್ಲ, ಆದರೆ ಗಂಗಾ ಮಾತಾಜಿಯ ಬಗೆಗಿನ ಅವರ ಅತಿಯಾದ ಆತ್ಮವಿಶ್ವಾಸ ಮತ್ತು ಹಿತ್ತಾಳೆಕಿವಿಯಿಂದಾಗಿ ಒಂದರ ಮೇಲೊಂದು ಯಡವಟ್ಟುಗಳಾಗುತ್ತಲೇ ಬಂದವು. ಅದೇನು ದೌರ್ಬಲ್ಯವೋ ಗೊತ್ತಿಲ್ಲ ಗಂಗಾ ಮಾತಾಜಿಯ ಮಾತುಕೇಳಿ ಈ ಹಿಂದೆ ಉತ್ತರಾಧಿಕಾರಿಯಾಗಿದ್ದ ಅಲ್ಲಮ ಪ್ರಭು ಸ್ವಾಮೀಜಿಯನ್ನು ವಿನಾಕಾರಣ ಅನುಮಾನಿಸತೊಡಗಿದರು. ಇದರಿಂದ ಮನನೊಂದ ಅಲ್ಲಮಪ್ರಭುಗಳು ಪೀಠವನ್ನೇ ತ್ಯಜಿಸಿ ಹೊರನಡೆದರು. ಹಾಗೆ ಅಲ್ಲಮಪ್ರಭುಗಳಿಂದ ತೆರವಾದ ಉತ್ತರಾಧಿಕಾರಿ ಪದವಿಗೆ ಮಾತೆ ಮಹಾದೇವಿ ತಂದಿದ್ದು ಗಂಗಾ ಮಾತಾಜಿಯನ್ನೇ!

ಹಾಗೆ ನೋಡಿದರೆ ಗಂಗಾ ಮಾತಾಜಿ ಅಲ್ಲಮ ಪ್ರಭುಗಳಷ್ಟು ಸಮರ್ಥೆಯಲ್ಲ, ಮಾತೆ ಮಹಾದೇವಿಯಂತೆ ಸಂಘಟಕಿಯಲ್ಲ, ಹೆಚ್ಚೆಂದರೆ ಪ್ರವಚನ ನೀಡಬಹುದೇ ಹೊರತು ತಾತ್ವಿಕವಾಗಿ ಲಿಂಗಾಯತ ಧರ್ಮ ಬಸವ ಧರ್ಮಗಳನ್ನು ಮುನ್ನಡೆಸುವಷ್ಟು ಶಕ್ತರಲ್ಲ, ಯಾವತ್ತು ಗಂಗಾ ಮಾತಾಜಿ ಉತ್ತರಾಧಿಕಾರಿಯೆಂದು ಘೋಷಣೆಯಾಯಿತೋ ವಿಲಕ್ಷಣ ಆಸಾಮಿಯೊಬ್ಬನ ಪ್ರವೇಶವಾಯಿತು. ಆತನೇ ಶಿವಕುಮಾರ್ ಡಾಕುಳಕಿ ಅರ್ಥಾತ್ ಚನ್ನಬಸಬಸವಾನಂದ ಸ್ವಾಮೀಜೀ!

ಮೂಲತಃ ಬೀದರ್‌ನವನಾದ ಶಿವಕುಮಾರ್ ಡಾಕುಳಕಿ ಪುಡಿ ಪತ್ರಕರ್ತನಾಗಿದ್ದ, ಜಾತಿಯಿಂದ ಪಂಚಪೀಠದ ಐನೋರು. ಬೀದರ್‌ನಲ್ಲಿದ್ದಾಗ ಸಂಘ ಪರಿವಾರದ ನಂಟೂ ಇತ್ತಂತೆ. ಪಕ್ಷೇತರನಾಗಿ ಚುನಾವಣೆಗೂ ನಿಂತಿದ್ದ. ಮಾಜಿ ಮಂತ್ರಿ ನಾಗಪ್ಪನವರನ್ನು ವೀರಪ್ಪನ್ ಅಪಹರಿಸಿದಾಗ ಬಸವದಳ ಮತ್ತು ಮಾತೆ ಮಹಾದೇವಿಯವರ ಭಕ್ತರ ತಂಡವೊಂದು ನಾಗಪ್ಪನವರನ್ನು ಬಿಡಿಸಿ ತರಲೆಂದು ಕೊಳ್ಳೇಗಾಲದ ಕಾಡು ಹೊಕ್ಕಿತ್ತಲ್ಲ; ಆ ತಂಡದಲ್ಲಿ ಡಾಕುಳಕಿಯೂ ಇದ್ದ. ವೀರಪ್ಪನ್ ಜೊತೆ ಸಂಧಾನಕ್ಕೆಂದು ಕಾಡು ಹೊಕ್ಕಿದ್ದ ಬಸವದಳದ ತಂಡಕ್ಕೊಬ್ಬ ಮರಿಸ್ವಾಮಿ ಬೇಕಿತ್ತಂತೆ. ಅಂದರೆ ಕಾಡಿನಲ್ಲಿ ಖುಬ್ಬಾಪಟ್ಟೆ ಮೈಕಿನಲ್ಲಿ ಕೂಗುತ್ತಾ ಹೊರಟರೆ ಎಲ್ಲಾದರೂ ಒಂದು ಕಡೆ ವೀರಪ್ಪನ್ ಸಿಕ್ಕಾನು ಎಂಬ ಭ್ರಮೆ!

ಆಗ ಬಸವದಳದ ತಂಡದಲ್ಲೊಬ್ಬ ತಮಿಳನಿದ್ದ. ಆತನಿಗೆ ಮಾತೆಯೇ ಬಸವರಸನ್ ಎಂದು ನಾಮಕರಿಸಿ ಆತನಿಗೇ ಖಾವಿ ತೊಡಿಸಿ ಸ್ವಾಮೀಜಿ ಎಂದು ಕಾಡಿನಲ್ಲಿ ನಟಿಸಿ ವೀರಪ್ಪನ್ ಜೊತೆ ಸಂಧಾನಗೈಯುವುದು ಮಾತೆ ಮಹಾದೇವಿಯ ಉದ್ದೇಶವಾಗಿತ್ತು. ಆದರೆ ಬಸವರಸನ್ ಖಾವಿ ತೊಡಲು ಒಪ್ಪಲಿಲ್ಲ, ಸನ್ಯಾಸ ಬೇಕಿರಲಿಲ್ಲ. ಹೇಗೂ ತಂಡದಲ್ಲಿ ಡಾಕುಳಕಿಯಿದ್ದನಲ್ಲ; ಇದೇ ಛಾನ್ಸ್ ಎಂದು 'ನಾನು ಸ್ವಾಮಿಯಾಗ್ತೀನಿ....!' ಎಂದುಬಿಟ್ಟ. ಕೇಡುಗಾಲಕ್ಕೆ ಯಾರು ಸ್ವಾಮಿಯಾದರೇನಂತೆ. ತಲೆ ಚಚ್ಚಿಕೊಂಡ ಮಾತೆ ವೀರಪ್ಪನ್‌ಗೆ ತಲೆಕೊಡಲು ಯಾರಾದರೇನಂತೆ ಎಂದಿದ್ದೇ ತಡ ಕಳಿಸಿದ್ದ ಖಾದಿ, ಲಿಂಗದ ಕರಡಿಗೆಯನ್ನು ತಾನೇ ಧರಿಸಿಬಿಟ್ಟ ಡಾಕುಳಕಿ. ವೀರಪ್ಪನ್ ಸಿಗಲಿಲ್ಲ; ನಾಗಪ್ಪ ಬರಲಿಲ್ಲ, ಕಾಡಿಗೆ ನುಗ್ಗಿದ್ದ ಬಸವದಳಕ್ಕೆ ಮಣ್ಣಾಂಗಟ್ಟಿಯೂ ಬರಕತ್ತಿಲ್ಲ; ಬರಿಗೈಯಿಂದ ಕಾಡು ಬಿಟ್ಟು ಬಂದ ಬಸವದಳ ನಿಟ್ಟುಸಿರಿಟ್ಟಿತಾದರೂ ಡಾಕುಳಕಿಗೆ ಸ್ವಾಮಿಪಟ್ಟದ ಬಂಪರ್ ಲಾಟರಿ ಹೊಡೆದಿತ್ತಲ್ಲ-

ಇವನಿಗೆ ಗತಿಯಿಲ್ಲ ಮಾತೆಗೆ ವಿಧಿಯಿಲ್ಲ ಎಂಬಂತೆ ಡಾಕುಳಕಿಗೆ ಚನ್ನಬಸವಾನಂದ ಎಂಬ ಹೆಸರು ಕೊಟ್ಟರು ಮಹಾದೇವಿ ಮಾತೆ. ಪಂಚಪೀಠದ ಐನೋರಾದರೂ ತಾನು ಬಸವಾನುಯಾಯಿ ಲಿಂಗಾಯತ ಎಂದುಕೊಂಡೇ ಬಸವಮಂಟಪಕ್ಕೆ ವಕ್ಕರಿಸಿದ ಚನ್ನಬಸವಾನಂದ ಸ್ವಭಾವತಃ ಶೋಕಿಲಾಲ. ಪ್ರಚಾರಪ್ರಿಯ ಮತ್ತು ದುರಾಸೆಯ ಪೊಟ್ಟಿ. ಮಾತೆ ಮಹಾದೇವಿಗೆ ವೃದ್ಧಾಪ್ಯ, ನೂರಾರು ಕೋಟಿಯ ಬಸವಧರ್ಮ ಪೀಠಕ್ಕೊಬ್ಬ ಸಮರ್ಥ ಸೂತ್ರಧಾರನಿಲ್ಲ, ಇಂಥಾ ಸಮಯ ಸಾಧಿಸಿ ತಾನು ಲಾಭ ಮಾಡಿಕೊಳ್ಳಬೇಕೆಂಬ ಷಡ್ಯಂತ್ರ ಹೆಣೆಯುತ್ತಲೇ ಬಂದ. ಅದಕ್ಕೆ ಮೊದಲು ಬಲಿಯಾಗಿದ್ದು ಉತ್ತರಾಧಿಕಾರಿ ಗಂಗಾಮಾತಾಜೀ. ಏಕೆಂದರೆ ಡಾಕುಳಕಿಯಂತೆ ಗಂಗಾ ಮಾತಾಜಿಯೂ ಮೂಲತಃ ಬೀದರ್‌ನವರು. ಹಿಂದಿ, ಮರಾಠಿ ಸಲೀಸಿತ್ತಾದ್ದರಿಂದ ಚನ್ನಬಸವಾನಂದನನ್ನು ಮಾತೆ ಕೊಂಚ ಸಲುಗೆ ಕೊಟ್ಟುಕೊಂಡೇ ಬಂದಿದ್ದರು. ಫ್ರೀ ಬಿಟ್ಟಿದ್ದರು.

ಇದನ್ನೇ ಸ್ವಾರ್ಥಸಾಧನೆಗೆ ಬಳಸಿಕೊಂಡ ಚನ್ನಬಸವಾನಂದ ಗಂಗಾ ಮಾತಾಜಿಯನ್ನು ತನ್ನ ತಾಳಕ್ಕೆ ತಕ್ಕಂತೆ ಕುಣಿಸಲಾರಂಭಿಸಿದ್ದ. ಪೀಠದ ಆಧಾರಸ್ತಂಭಗಳಂತಿದ್ದ ಬಸವ ಕಲ್ಯಾಣದ ಬಸವಪ್ರಭು ಸ್ವಾಮೀಜಿ, ಸಿದ್ಧರಾಮೇಶ್ವರ ಸ್ವಾಮೀಜಿ, ಕೂಡಲಸಂಗಮ ಮಾದೇಶ್ವರ ಸ್ವಾಮೀಜಿ, ಬೆಂಗಳೂರಿನ ಬಸವಕುಮಾರ ಸ್ವಾಮೀಜಿಯವರಂಥ ಕ್ರಿಯಾಶೀಲರು, ಕಾರ್ಯಸಮರ್ಥರ ಮೇಲೆಲ್ಲ ಮಾತೆಗೆ ಚಾಡಿ ಚುಚ್ಚಿದ. ಉತ್ತರಾಧಿಕಾರಿಯಾಗಿದ್ದ ಅಲ್ಲಮಪ್ರಭುಗಳನ್ನು ಹೊರದಬ್ಬಿದ ಹಾಗೆ ಇಂಥ ಹಿರಿಯ ಸ್ವಾಮಿಗಳನ್ನೂ ಹೊರಹಾಕಿಬಿಟ್ಟರೆ ಅವರ ಜಾಗಕ್ಕೆಲ್ಲ ತನ್ನ ಚೇಲಾಗಳನ್ನೇ ತರುವುದು ಚನ್ನಬಸವಾನಂದನ ಹುನ್ನಾರವಾಗಿತ್ತು.

ಬರುಬರುತ್ತ ಮಾತೆ ಮಹಾದೇವಿಯೂ ಈತನನ್ನೇ ಅವಲಂಬಿಸುತ್ತಿದ್ದಂತೆ ಪೀಠದ ತತ್ವ ಮತ್ತು ಸಿದ್ಧಾಂತದಲ್ಲೇ ಬದಲಾವಣೆಗಳಾದವು. ಲಿಂಗಾಯತ ಧರ್ಮ ಹಿಂದೂ ಧರ್ಮಕ್ಕಿಂತ ಭಿನ್ನವಾದ ಪ್ರತ್ಯೇಕ ಧರ್ಮವೆಂದು ಒಪ್ಪದ ಪಂಚಪೀಠದವರು ವೀರಶೈವ ಮಹಾಸಭಾದವರೆಲ್ಲ ಬಸವಪೀಠದ ಕಾರ್ಯಕ್ರಮಗಳ ವೇದಿಕೆಗಳಲ್ಲಿ ಕಾಣಿಸತೊಡಗಿದರು. ಕುಂಬಳಗೋಡಿನಲ್ಲಿ ಈತನಿಗೆಂದೇ ಮಾತೆ ಚನ್ನಬಸವಜ್ಞಾನ ಪೀಠ ಸ್ಥಾಪಿಸಿಕೊಟ್ಟರೆ ತಾನದರ ಜಗದ್ಗುರು ಎಂಬಂತೆ ದೌಲತ್ತಿಗೆ ಬಿದ್ದ. ತನ್ನ ಪೀಠಾರೋಹಣ ಮಹೋತ್ಸವಕ್ಕೆ ಬಸವೋತ್ಸವ ಎಂದು ಪ್ರತಿವರ್ಷ ಅದ್ಧೂರಿಯಾಗಿ ಕಾರ್ಯಕ್ರಮ ನಡೆಸಲಾರಂಭಿಸಿದ. ಇದಕ್ಕೂ ವೀರಶೈವ, ಪಂಚಪೀಠದವರನ್ನು ವೇದಿಕೆಗೆ ಏರಿಸಿದ್ದ.

ಸದ್ಯ ಮಾತೆ ಮಹಾದೇವಿ ಸೇರಿದಂತೆ ಉತ್ತರಾಧಿಕಾರಿ ಗಂಗಾ ಮಾತಾಜಿ ಎಲ್ಲರೂ ಚನ್ನಬಸವಾನಂದನ ತಾಳಕ್ಕೆ ತಕ್ಕಂತೆ ಕುಣಿಯುತ್ತಿದ್ದಾರೆ. ಇಡೀ ಬಸವ ಪೀಠವನ್ನು ಚನ್ನಬಸವಾನಂದ ನಿಯಂತ್ರಿಸುತ್ತಿದ್ದಾನೆ. ವೀರಶೈವರಾಗಲಿ, ಪಂಚಪೀಠದವರಾಗಲಿ ತಾವು ಲಿಂಗಾಯತರೆಂದೂ ತಮ್ಮದೇ ಪ್ರತ್ಯೇಕ ಧರ್ಮವೆಂದು ಒಪ್ಪುವುದಿಲ್ಲ, ಹಿಂದೂ ಧರ್ಮದ ಸಪ್ತ ಶೈವಗಳ ಒಂದು ಪಂಥವಾಗಿ ಗುರುತಿಸಿಕೊಳ್ಳುವ ವೀರಶೈವರಿಗೂ ತಮ್ಮದೇ ಪ್ರತ್ಯೇಕ ಧರ್ಮವೆನ್ನುವ ಲಿಂಗಾಯತರಿಗೂ ವ್ಯತ್ಯಾಸವಿದೆ. ಈಗ ಲಿಂಗಾನಂದರ ಪ್ರತಿಪಾದನೆಗೆ ಒದಗಿದ ದುರ್ಗತಿ ನೋಡುತ್ತಿದ್ದರೆ ಮಾತೆ ಮಹಾದೇವಿಯ ನಂತರ ಇಡೀ ಬಸವಧರ್ಮ ಪಂಥವನ್ನೇ ವೈದಿಕ ಧರ್ಮ ನುಂಗಿಹಾಕುತ್ತಾ? ಲಿಂಗಾಯತರೆಂಬ ಪ್ರತ್ಯೇಕ ಧಾರ್ಮಿಕ ವಿಭಾಗವೇ ಇಲ್ಲವಾಗಿ ಹಿಂದೂ ಧರ್ಮದೊಳಗೆ ಜೀರ್ಣವಾಗುತ್ತಾ?

ಇಂಥಾದ್ದೊಂದು ಉದ್ದೇಶವಿಟ್ಟುಕೊಂಡೇ ಗಂಗಾ ಮಾತಾಜಿ ಚನ್ನಬಸವಾನಂದನನ್ನು ಪ್ರೋತ್ಸಾಹಿಸುತ್ತಾ ಬಂದರೆ? ಲಿಂಗಾನಂದರು ಬದುಕಿದ್ದಾಗಲೇ ತನ್ನ ಆಪ್ತ ಗೆಳತಿಯಂತಿದ್ದ ಮಾತೆ ಮಹಾದೇವಿಯವರ ಹಿಡಿತಕ್ಕೆ ಪೀಠ ಒಳಪಡುವಂತೆ ಮಹಾದೇವಿಯವರ ಅರಿವಿಗೂ ಬಾರದ ಹಾಗೆ ಅಡುಗೆಯವಳಾದ ರಾಜೇಶ್ವರಿಯನ್ನು ಪಳಗಿಸಲಾಗಿತ್ತೆ? ತಾನು ಲಿಂಗಾನಂದರಿಗೂ ಪ್ರಸಾದದಲ್ಲಿ ವಿಷ ಹಾಕುತ್ತಿದ್ದೆ ಎಂಬ ರಾಜೇಶ್ವರಿಯ ತಪ್ಪೊಪ್ಪಿಗೆ ನಿಜಕ್ಕೂ ಗಂಗಾ ಮಾತಾಜಿಗೆ ಆಘಾತಕಾರಿಯಾಗಿ ಪರಿಣಮಿಸಿದೆಯೆ?

ಗಂಗಾ ಮಾತಾಜಿಗೂ ಈ ವಿಷವೃತ್ತಾಂತಕ್ಕೂ ನಿಗೂಢ ಸಂಬಂಧ ಇದೆಯೇ? ವಿಷದ ಪುಡಿ ತಂದುಕೊಡುತ್ತಿದ್ದ ಶ್ರೀದೇವಿ ಗಂಗಾಮಾತಾಜಿಯ ಸಂಬಂಧಿಯಾದರೆ ಆಕೆಯ ಜೊತೆ ಪದೇಪದೇ ಬಸವಮಂಟಪಕ್ಕೆ ಬರುತ್ತಿದ್ದ ಮುಕ್ತಾಯಕ್ಕ ಗಂಗಾ ಮಾತಾಜಿಯ ಖಾಸಾ ತಂಗಿ!

ದಯಾನಂದ ಸ್ವಾಮೀಜಿ ರಾಜೇಶ್ವರಿಯ ಹೇಳಿಕೆ ವೀಡಿಯೋ ಮಾಡಿಕೊಂಡು ವಾಟ್ಸಪ್ಪಿಗೆ ಬಿಡುತ್ತಿದ್ದಂತೆಯೇ ಬೆಂಗಳೂರಿನ ಬಸವಮಂಟಪಕ್ಕೆ ಅಕ್ಷರಶಃ ಬೆಂಕಿ ಬಿದ್ದಂತಾಗಿದೆ. ಎತ್ತಿಂದೆತ್ತ ಲೆಕ್ಕ ಹಾಕಿದರೂ ವಿಷದ ಪಾಪ ಬಂದು ನಿಲ್ಲುತ್ತಿದ್ದದ್ದು ಮಾತೆ ಮಹಾದೇವಿಯವರ ಉತ್ತರಾಧಿಕಾರಿ ಗಂಗಾಮಾತಾಜಿಯ ಪಾದದ ಬಳಿಗೇ. ಈ ಬಗ್ಗೆ ಬಸವಾಂಜಲಿ ಮಾತಾಜಿಯೇ ನೇರವಾಗಿ ಗಂಗಾಮಾತಾಜಿಗೆ ಫೋನ್ ಮಾಡಿ ರಾಜೇಶ್ವರಿ ಬಾಯಿಬಿಟ್ಟ ಸಂಗತಿ ತಿಳಿಸಿದರೆ ಗಂಗಾ ಮಾತಾಜಿಯ ಬಳಿ ಉತ್ತರವಿಲ್ಲ, ಇದಾಗಿ ವಾರಕ್ಕೇ ಗಂಗಾ ಮಾತಾಜಿಯ ಡ್ರೈವರ್ ಯೋಗೇಶ ಮೈಸೂರಿಗೆ ಬಂದು ರಾಜೇಶ್ವರಿಯನ್ನು ಸಿನಿಮೀಯ ರೀತಿಯಲ್ಲಿ ಕಾರಿಗೆ ಕೂರಿಸಿಕೊಂಡು ಪರಾರಿಯಾಗಿದ್ದ. ಹಾಗೆ ಮೈಸೂರಿನ ಆಶ್ರಮದಿಂದ ಕದ್ದೂ ಮುಚ್ಚಿ ಗಂಗಾಮಾತಾಜಿಯ ಕಾರಲ್ಲಿ ಡ್ರೈವರ್ ಯೋಗೇಶನ ಜೊತೆ ನಾಪತ್ತೆಯಾದ ರಾಜೇಶ್ವರಿ ಹೋಗುವಾಗ ಬಸವಾಂಜಲಿ ಮಾತಾಜಿಯ ತಿಜೋರಿಯಲ್ಲಿದ್ದ ಐವತ್ತೊಂಭತ್ತು ಸಾವಿರ ರೂಪಾಯಿಗಳನ್ನು ಕದ್ದೊಯ್ದಿದ್ದಾಳೆ.

ಅಂಥಾದ್ದೇನೂ ಇಲ್ಲವೆಂದಿದ್ದರೆ ಡ್ರೈವರ್ ಯೋಗೇಶನೊಂದಿಗೆ ತಾನು ಹೊರಡುತ್ತೇನೆಂದು ಬಸವಾಂಜಲಿ ಮಾತಾಜಿಗೊಂದು ಮಾತು ಹೇಳಿಹೋಗಲು ಕಷ್ಟವೇನಿತ್ತು? ಆವತ್ತು ಅಂದರೆ ಜೂನ್ 29 ರಂದು ಗಂಗಾ ಮಾತಾಜಿಯ ಡ್ರೈವರ್ ಯೋಗೇಶನ ಜೊತೆ ಪರಾರಿಯಾದ ರಾಜೇಶ್ವರಿ ಆನಂತರ ಏನಾದಳು, ಎಲ್ಲಿದ್ದಾಳೆಂದು ಯಾರಿಗೂ ಗೊತ್ತಿಲ್ಲ. ಆದರೆ ಗಂಗಾ ಮಾತಾಜಿಯೇ ರಾಜೇಶ್ವರಿಯನ್ನು ಬಚ್ಚಿಟ್ಟಿದ್ದಾರೆಯೇ? ಗೊತ್ತಿಲ್ಲ.

ತಾನು ಮಾತೆ ಮಹಾದೇವಿ ಮತ್ತು ಲಿಂಗಾನಂದರಿಗೆ ವಿಷ ಹಾಕಿ ಕೊಟ್ಟಿದ್ದೇನೆಂದು ದಯಾನಂದ ಸ್ವಾಮಿಯೆದುರು ರಾಜೇಶ್ವರಿ ಬಾಯಿಬಿಟ್ಟಿದ್ದೇಕೆ? ಗಂಗಾ ಮಾತಾಜಿಯ ಖಾಸಾ ತಂಗಿ ಮುಕ್ತಾಯಕ್ಕ ಮತ್ತು ಸಂಬಂಧಿ ಶ್ರೀದೇವಿಯವರೇ ಔಷಧಿ ತಂದು ಕೊಡುತ್ತಿದ್ದರೆಂದೇಕೆ ಹೇಳುತ್ತಿದ್ದಾಳೆ. ಹಾಗೊಮ್ಮೆ ಆಕೆ ಸುಳ್ಳು ಹೇಳಿದ್ದರೆ ಗಂಗಾ ಮಾತಾಜಿಯೇಕೆ ತನ್ನ ಡ್ರೈವರ್ ಯೋಗೇಶ್‌ನನ್ನು ಮೈಸೂರಿಗೆ ಕಳಿಸಿ ಆಕೆಯನ್ನು ತನ್ನಲ್ಲಿಗೆ ಕರೆಸಿಕೊಂಡು ಬಚ್ಚಿಡಬೇಕು? ತನಗೇ ವಿಷ ಹಾಕಿದ್ದು ಗೊತ್ತಾದರೂ ತನ್ನದೇ ದುಡ್ಡನ್ನು ಕದ್ದೊಯ್ದಿದ್ದರೂ ಬಸವಾಂಜಲಿ ಮಾತೆಯೇಕೆ ಪೊಲೀಸರಿಗೆ ದೂರು ಕೊಟ್ಟಿಲ್ಲ? ಅಂದರೆ ಮಾತೆ ಮಹಾದೇವಿಗೆ ಕಳಂಕ ತಟ್ಟಬಹುದೆಂದು ಬಸವಾಂಜಲಿ ವಿಷಯ ಮುಚ್ಚಿಡುತ್ತಿದ್ದಾರಾ? ಮಾತೆ ಮಹಾದೇವಿಗಿದು ಗೊತ್ತಾಗಿಯೂ ಏಕೆ ಮುಗುಮ್ಮಾಗಿದ್ದಾರೆ? ಲಿಂಗಾನಂದರನ್ನು ವಿಷ ಹಾಕಿ ಕೊಲ್ಲಲಾಯಿತೆಂದು ಹೊರಜಗತ್ತಿಗೆಲ್ಲಿ ಗೊತ್ತಾದೀತೋ ಎಂಬ ಅಳುಕೆ? ಯಾವುದೂ ಸ್ಪಷ್ಟವಿಲ್ಲ.

ಮಾತೆ ಮಹಾದೇವಿಯವರಿಗೀಗ 72ರ ಇಳಿವಯಸ್ಸು. ಆಗಾಗ ಆರೋಗ್ಯ ಕೈಕೊಡುತ್ತಿರುತ್ತದೆ. ಲಿಂಗಾನಂದರು ಸ್ಥಾಪಿಸಿದ ಬಸವ ಧರ್ಮ ಕೇಂದ್ರ ಮತ್ತು ಬಸವ ಮಂಟಪಗಳು ದೇಶದ ಬೇರೆ ಬೇರೆ ಭಾಗಗಳಲ್ಲಿವೆ. ಬಸವ ಕಲ್ಯಾಣ, ಕೂಡಲ ಸಂಗಮ, ಬೆಂಗಳೂರು, ಕುಂಬಳಗೋಡು, ಹೈದರಾಬಾದ್, ದೆಹಲಿ ಮುಂತಾದೆಡೆಗಳ ಬಸವ ಮಂಟಪದ ಒಟ್ಟು ಆಸ್ತಿಯೇ ಐನೂರು ಕೋಟಿಗೂ ಅಧಿಕ. ಲಿಂಗಾನಂದರು ತೀರಿಕೊಂಡು ಇವತ್ತಿಗೆ 21 ವರ್ಷಗಳಾಗಿವೆ. ನಿಜಕ್ಕೂ ವಿಷಪ್ರಾಶನದಿಂದಲೇ ಲಿಂಗಾನಂದರು ಅಕಾಲ ಮೃತ್ಯುವಿಗೀಡಾಗಿದ್ದರೆ ಅದಕ್ಕಿಂತ ದೊಡ್ಡ ದುರಂತ ಮತ್ತೊಂದಿಲ್ಲ, ಕರ್ನಾಟಕದ ಶರಣ ಪರಂಪರೆಯಲ್ಲಿ ತನ್ನದೇ ವಿಶಿಷ್ಟ ಹೆಜ್ಜೆ ಗುರುತುಗಳನ್ನು ಬಿಟ್ಟುಹೋದ ಲಿಂಗಾನಂದರದ್ದು ಕೊಲೆಯೇ ಆಗಿದ್ದರೆ ಈ ಬಗ್ಗೆ ತನಿಖೆಯಾದರೂ ನಡೆಯಬೇಕಲ್ಲವೇ? ಮಾತೆ ಮಹಾದೇವಿಗೆ ವಿಷ ಹಾಕಿದ್ದು ಕೂಡ ತನಿಖೆಯಾಗಬೇಕಾದ ಸಂಗತಿಯಲ್ಲವೇ?

■ ರಾ. ಸೋಮನಾಥ್



ಹೊಲೆ ಮಾದಿಗರು ಯಾರು ?



ಕೊಲುವನೇ ಮಾದಿಗ
ಹೊಲಸು ತಿಂಬವನೇ ಹೊಲೆಯ
ಕುಲವೇನೋ ಆವದಿರ ಕುಲವೇನೋ?
ಸಕಲಜೀವಾತ್ಮರಿಗೆ ಲೇಸನೆ ಬಯಸುವ
ನಮ್ಮ ಕೂಡಲಸಂಗನ ಶರಣರೆ ಕುಲಜರು.

– ಬಸವಣ್ಣ

ಇಂಥ ವಚನಗಳು ಮತ್ತು ವಚನಗಳಲ್ಲಿ ವಿವಿಧ ಕಡೆ ಬರುವ ಹೊಲೆ ಮಾದಿಗ ಶಬ್ದಗಳು ಹಾಗೂ ತಳಸಮುದಾಯದ ವಿವಿಧ ದೈವಗಳ ಬಗ್ಗೆ ಬಸವಣ್ಣನವರು ತಿರಸ್ಕರಿಸುವ ರೀತಿಯಿಂದ ಅನೇಕ ದಲಿತ ವಿದ್ವಾಂಸರು ಕೂಡ ಸಿಡಿಮಿಡಿಗೊಂಡಿದ್ದನ್ನು ಕಂಡಿದ್ದೇನೆ, ಕೇಳಿದ್ದೇನೆ. ಮೊನ್ನೆ ಒಬ್ಬರು ದೂರವಾಣಿ ಮೂಲಕ ಸಂಪರ್ಕಿಸಿ ಮೇಲಿನ ವಚನದ ಬಗ್ಗೆ ಸಿಡಿಮಿಡಿಗೊಂಡರು. ತಮ್ಮದು ಮಾದಿಗ ಜಾತಿ. ತಮ್ಮ ಮಗನ ಸಹಪಾಠಿಗಳು 'ಕೊಲ್ಲುವವರು ಮಾದಿಗರು' ಎಂದು ಹೀಯಾಳಿಸುತ್ತಾರೆ ಎಂದು ಹೇಳಿದರು. ಬೃಹನ್ಮಠವೊಂದರ ಗೋಡೆಯ ಮೇಲೆ ಕೂಡ ಈ ವಚನವನ್ನು ಬರೆದದ್ದಕ್ಕೆ ಅಸಮಾಧಾನ ವ್ಯಕ್ತಪಡಿಸಿದರು. ನಿಮ್ಮ ಅಭಿಪ್ರಾಯವೇನು ಎಂದು ಕೇಳಿದರು. ನನ್ನ ಅಭಿಪ್ರಾಯ ಏನು ಎಂಬುದನ್ನು ಕೇಳುವುದಕ್ಕೂ ಅವರಿಗೆ ತಾಳ್ಮೆ ಇರಲಿಲ್ಲ. "ಮಾದಿಗರು ಎಂದಾದರೂ ಕೊಲ್ಲುವುದನ್ನು ನೋಡಿದ್ದೀರಾ? ಹೊಲೆಯರು ಹೊಲಸು ತಿಂಬುವುದನ್ನು ನೋಡಿದ್ದೀರಾ?" ಎಂದು ಕೇಳಿದೆ. "ಇಲ್ಲ" ಎಂದರು. "ಹಾಗಾದರೆ ಕೊಲುವನೇ ಮಾದಿಗ ಹೊಲಸು ತಿಂಬವನೇ ಹೊಲೆಯ ಎಂದು ಬಸವಣ್ಣನವರು ಹೇಳಿದ್ದರಲ್ಲಿ ತಪ್ಪೇನಿದೆ?" ಎಂದು ಪ್ರಶ್ನಿಸಿದೆ. "ಯಜ್ಞದಲ್ಲಿ ಪ್ರಾಣಿವಧೆ ಮಾಡುವವರ ಮತ್ತು ಕಾಯಕ ಮಾಡದೆ ಯಜ್ಞದೂಟದಲ್ಲೇ ಬದುಕುವವರ ಕುರಿತು ಬಸವಣ್ಣನವರು ಈ ವಚನ ಬರೆದಿದ್ದಾರೆ" ಎಂದು ವಿವರಿಸಿದೆ. ಆದರೂ ಆ ವ್ಯಕ್ತಿಗೆ ತೃಪ್ತಿಯಾಗಲಿಲ್ಲ. ಜನರಲ್ಲಿ ದಲಿತರ ಬಗ್ಗೆ ಕೀಳುಭಾವನೆ ಹುಟ್ಟಿಸುವ ಇಂಥ ವಚನಗಳ ಬಳಕೆ ನಿಲ್ಲಬೇಕು ಎಂದೇ ವಾದಿಸಿದರು.

ಯಜ್ಞದಲ್ಲಿ ಕೊಲ್ಲುವವನೇ ಮಾದಿಗ. ಕಾಯಕ ಮಾಡದೆ ತಿನ್ನುವವನೇ ಹೊಲೆಯ. 'ಕುಲವೇನೋ ಆವದಿರ' ಅಂದರೆ ಕೊಲ್ಲದವರನ್ನು ಮಾದಿಗರು ಎನ್ನುವ ಮತ್ತು ದುಡಿದು ತಿನ್ನುವವರನ್ನು ಹೊಲೆಯರು ಎಂದು ಕರೆಯುವ ಆ ವೈದಿಕರ ಕುಲವೇನೋ ಎಂದು ಬಸವಣ್ಣನವರು ಈ ವಚನದಲ್ಲಿ ಸಾತ್ವಿಕ ಕೋಪ ವ್ಯಕ್ತಪಡಿಸಿದ್ದಾರೆ. ಹಲವು ಹದಿನೆಂಟು ಜಾತಿಗಳ ಕಾಯಕಜೀವಿಗಳು ತಮ್ಮ ಜಾತಿಗಳ ಕುರುಹುಗಳನ್ನು ಕಳೆದುಕೊಂಡು, ಸಕಲಜೀವಾತ್ಮರಿಗೆ ಲೇಸನೆ ಬಯಸುತ್ತ, ನಿರ್ಜಾತಿ ಶರಣಸಂಕುಲದಲ್ಲಿ ಒಂದಾಗಿ ಬದುಕುತ್ತಿರುವ ಕೂಡಲಸಂಗನ ಶರಣರೇ ಕುಲಜರು ಹೊರತಾಗಿ ಇಂಥವರನ್ನು ನಿಂದಿಸುವವರು ಕುಲಜರಲ್ಲ. ಹಾಗೆ ನಿಂದಿಸುತ್ತ, ಯಜ್ಞದ ಮೂಲಕ ಹೊಟ್ಟೆಹೊರೆಯುವವರೇ ಹೊಲೆ ಮಾದಿಗರು ಎಂದು ಬಸವಣ್ಣನವರು ಸೂಚಿಸಿದ್ದಾರೆ.

ರಾಜರು ಯಜ್ಞಗಳನ್ನು ವರ್ಷಗಟ್ಟಲೆ ಮಾಡುತ್ತಿದ್ದರು. ವೈದಿಕರು ವರ್ಷಗಟ್ಟಲೆ ಅಲ್ಲೇ ಉಳಿದು ದಕ್ಷಿಣೆ ಪಡೆಯುತ್ತ ಮಾಂಸದೂಟ ಸವಿಯುತ್ತ ಕೂಡುತ್ತಿದ್ದರು. ಇಂಥ ಒಂದು ಪ್ರಸಂಗ ಕಾಳಿದಾಸನ ಮೇಘದೂತ ಖಂಡಕಾವ್ಯದಲ್ಲಿ ಬರುತ್ತದೆ. ರಂತಿದೇವ ಎಂಬ ರಾಜನ ಯಜ್ಞಕ್ಕಾಗಿ ವೈದಿಕರು ಪ್ರತಿದಿನ ಪಶುಗಳನ್ನು ಕೊಂದು ಅವುಗಳ ಚರ್ಮವನ್ನು ರಾಶಿ ಹಾಕುತ್ತಿದ್ದರು. ವರ್ಷಗಟ್ಟಲೆ ನಡೆದ ಈ ಯಜ್ಞದ ಕೊನೆಯ ದಿನದ ಕೊನೆಯ ಗಳಿಗೆಯಲ್ಲಿ ಬಹುದೂರದಿಂದ ವೈದಿಕರ ಗುಂಪೊಂದು ಬಂದಿತು. ಆಗ ಮಾಂಸದ ತುಂಡುಗಳು ಖಾಲಿಯಾಗಿ ಬರಿ ಸೂಪ್ (ಸಂಸ್ಕೃತದ ಈ ಸೂಪ್ ಇಂಗ್ಲಿಷ್ ಭಾಷೆ ಸೇರಿದೆ) ಮಾತ್ರ ಉಳಿದಿತ್ತು. ಇದರಿಂದ ಕೆಂಡಾಮಂಡಲವಾದ ವೈದಿಕರು ರಂತಿದೇವನಿಗೆ ಶಾಪ ಕೊಡಲು ಮುಂದಾದರು. ಆಗ ಭಯಭೀತನಾದ ರಂತಿದೇವ "ತಾವು ತಡಮಾಡಿ ಬಂದಿದ್ದೀರಿ. ಈ ದೀರ್ಘಕಾಲದ ಯಜ್ಞದಲ್ಲಿ ಆದೆಷ್ಟು ಪಶುಗಳ ಬಲಿ ಕೊಡಲಾಗಿದೆ ಎಂಬುದಕ್ಕೆ ಈ ಚರ್ಮಗಳ ರಾಶಿಯನ್ನು ನೋಡಿರಿ. ಇವುಗಳ ರಕ್ತದಿಂದಲೇ ಹರಿಯುತ್ತಿರುವ ನದಿಯನ್ನು ನೋಡಿರಿ. ಇದು ಚರ್ಮಣ್ವತಿ ನದಿ ಎಂದು ಹೆಸರು ಪಡೆದಿದೆ" ಎಂದು ಮನವಿ ಮಾಡಿದ. (ಆ ಚರ್ಮಣ್ವತಿ ನದಿಯೇ ಇಂದಿನ ಚಂಬಲ್ ನದಿ.)

ಈ ರಾಜರು ಇಷ್ಟೊಂದು ಪಶುಗಳನ್ನು ಎಲ್ಲಿಂದ ತರುತ್ತಿದ್ದರು ಎಂಬುದಕ್ಕೆ ಧರ್ಮಾನಂದ ಕೋಸಂಬಿಯವರ 'ಭಗವಾನ ಬುದ್ಧ' ಗ್ರಂಥದಲ್ಲಿ ಮಾಹಿತಿ ದೊರೆಯುತ್ತದೆ. ರಾಜರು, ಶ್ರೀಮಂತರು ಮತ್ತು ವೈದಿಕರು ಯಜ್ಞಕ್ಕಾಗಿ ರೈತರ ಸಾಕುಪ್ರಾಣಿಗಳನ್ನು ಯಾವುದೇ ಹಣ ಕೊಡದೆ ತರುತ್ತಿದ್ದರು. ರೈತಾಪಿ ಜನರಿಗೆ ದನವೇ ಧನವಾಗಿತ್ತು. (ದನ ಎಂಬುದು ಧನದಿಂದ ಬಂದಿದೆ. ದನವೇ ಧನ. ಇಂಗ್ಲಿಷ್‌ನಲ್ಲಿ ಕ್ಯಾಟಲ್‌ನಿಂದ ಕ್ಯಾಪಿಟಲ್ ಬಂದಿದೆ.) ಆದ್ದರಿಂದ ರಾಜ ಮುಂತಾದ ಬಲಾಢ್ಯರು ಮಹಾಯಜ್ಞ ಆರಂಭಿಸಿದರೆ ರೈತಾಪಿ ಜನ ಒಬ್ಬರಿಗೊಬ್ಬರು ತಬ್ಬಿಕೊಂಡು ಅಳುತ್ತಿದ್ದರು. ರೈತರು ತಮ್ಮ ದನಗಳನ್ನು ಯಜ್ಞಕ್ಕೆ ಬಲಿಪಶುಗಳಾಗಿ ಕೊಡದಿದ್ದಾಗ ಅವರ ಮೇಲೆ ಹಲ್ಲೆ ಮಾಡಿ ತೆಗೆದುಕೊಂಡು ಹೋಗುತ್ತಿದ್ದರು! ದೀರ್ಘಕಾಲದ ಆ ಮಹಾಯಜ್ಞಕ್ಕೆ ಬೇಕಾದ ಬಲಿಪಶುಗಳನ್ನು ಸೈನಿಕರು ಬಂದು ಕಂಡಕಂಡ ರೈತರ ಮನೆಗಳ ಮುಂದೆ ಕಟ್ಟಿದ ಪಶುಗಳನ್ನು ಹೊಡೆದುಕೊಂಡು ಹೋಗುತ್ತಿದ್ದರು. ಹಾಗೆ ದನಗಳನ್ನು ಹೊಡೆದುಕೊಂಡು ಹೋಗುವುದನ್ನು ಬುದ್ಧ ಗಮನಿಸಿದ್ದರಿಂದಲೇ ಯಜ್ಞಹಿಂಸೆಯನ್ನು ತಡೆಯಲು ನಿರ್ಧರಿಸಿದ. ದೊಡ್ಡವರ ಯಜ್ಞಕ್ಕಾಗಿ ತಮ್ಮ ದನಕರುಗಳನ್ನು ಪುಕ್ಕಟೆ ಕೊಡಬೇಕಾಗಿ ಬಂದದ್ದರಿಂದಲೇ ಬಡವರು ಮತ್ತು ರೈತಾಪಿ ಜನರು ಸಹಜವಾಗಿಯೇ ಯಜ್ಞವಿರೋಧಿಯಾಗಿದ್ದರು. ಜನ ಬೆಂಬಲವಿದ್ದ ಕಾರಣದಿಂದಲೇ ಬುದ್ಧನ ಯಜ್ಞವಿರೋಧಿ ನಿಲುವಿಗೆ ಮಾನ್ಯತೆ ದೊರೆಯಿತು.

ಮಹಾ ಮೇಧಾವಿ ಧರ್ಮಾನಂದ ಕೋಸಂಬೀ ಅವರು ಮರಾಠಿಯಲ್ಲಿ ರಚಿಸಿದ 'ಭಗವಾನ್ ಬುದ್ಧ' ಗ್ರಂಥವನ್ನು ಆದ್ಯ ರಂಗಾಚಾರ್ಯ(ಶ್ರೀರಂಗ)ರು ಕನ್ನಡಕ್ಕೆ ಅನುವಾದ ಮಾಡಿದ್ದಾರೆ. ಕೇಂದ್ರ ಸಾಹಿತ್ಯ ಅಕಾಡೆಮಿ 1956 ರಲ್ಲಿ ಈ ಅನುವಾದ ಗ್ರಂಥವನ್ನು 1956 ರಲ್ಲಿ ಪ್ರಕಟಿಸಿದೆ. ಆ ಗ್ರಂಥದ ಯಜ್ಞಯಾಗ ಅಧ್ಯಾಯದಲ್ಲಿನ 'ಜನರಿಗೆ ಗೋಹಿಂಸೆ ಬೇಕಿದ್ದಿಲ್ಲ' ಎಂಬ ಉಪಶೀರ್ಷಿಕೆಯಲ್ಲಿ ಕೆಳಗಿನ ವಿಚಾರ ವ್ಯಕ್ತವಾಗಿದೆ.

"ಈ ದಾಸ, ದೂತ ಮತ್ತು ಆಳುಗಳು ಯಜ್ಞದ ಕೆಲಸಗಳನ್ನು ಅಳುತ್ತ ಅಳುತ್ತ ಯಾಕೆ ಮಾಡುತ್ತಿರಬಹುದಾಗಿದೆ? ಯಾಕೆಂದರೆ ಈ ಯಜ್ಞದಲ್ಲಿ ದನಗಳನ್ನು ಕೊಲ್ಲಲಾಗುತ್ತಿತ್ತು, ಅದನ್ನು ಬಡ ರೈತರಿಂದ ಕಸಿದುಕೊಳ್ಳಲಾಗುತ್ತಿತ್ತು, ಅದಕ್ಕಾಗಿ ರೈತರಿಗೆ ಬಹಳ ಕೆಡುಕೆನಿಸುತ್ತಿತ್ತು.

ರಾಜರು ಮತ್ತು ಶ್ರೀಮಂತ ಜನರು ಸ್ವಂತ ತಮ್ಮ ಪಶುಗಳನ್ನೆ ಕೊಲ್ಲುತ್ತಿದ್ದರೆ ದಾಸರೂ ಆಳುಗಳೂ ಅಳುವ ಪ್ರಸಂಗಗಳು ಕಡಿಮೆ ಪ್ರಮಾಣದಲ್ಲಿ ಬರಬಹುದಾಗಿತ್ತು, ಆದರೆ ಈ ದನಗಳನ್ನು ತಮ್ಮಂತಹ ಬಡ ರೈತರ ಮೇಲೆ ಒತ್ತಾಯ ಮಾಡಿ ಕಸಿದುಕೊಳ್ಳುತ್ತಿದ್ದುದಕ್ಕಾಗಿ ಅವರಿಗೆ ಹೇಳದಷ್ಟು ದುಃಖವಾಗುವುದು ಸಹಜವಾಗಿದೆ.

ಯಜ್ಞಯಾಗದಂತೆ ಉದರ ನಿರ್ವಾಹದ ಸಲುವಾಗಿಯೂ ಆ ಕಾಲದಲ್ಲಿ ಅನೇಕ ಪ್ರಾಣಿಗಳು ಕೊಲ್ಲಲ್ಪಡುತ್ತಿದ್ದವು. ಪಶುವನ್ನು ವಧಿಸಿ ಅದರ ಮಾಂಸವನ್ನು ಕೂಟದಾರಿಯಲ್ಲಿ ಮಾರುವ ರೂಢಿ ಹೆಚ್ಚಾಗಿತ್ತು, ಈ ಮಾತು ಸತಿ ಪಟ್ಠಾನ ಸುತ್ತದಲ್ಲಿ ಬರುತ್ತದೆ? ಬುದ್ಧನು ಯಜ್ಞ ಯಾಗವನ್ನು ನಿಷೇಧಿಸಿದಷ್ಟು ಈ ಕೃತ್ಯಗಳನ್ನು ನಿಷೇಧಿಸಿದಂತೆ ಕಾಣುವುದಿಲ್ಲ. ಕೂಟದಾರಿಯಲ್ಲಿ ಮಾಂಸವನ್ನು ಮಾರುವ ಪದ್ಧತಿ ಬುದ್ಧನಿಗೆ ಸರಿಬರುತ್ತಿತ್ತು ಎಂದು ತಿಳಿಯಬಾರದು. ಆದರೆ ಒಂದು ಯಜ್ಞಯಾಗದ ಮುಂದೆ ಅದಕ್ಕೆ ಏನೂ ಬೆಲೆ ಇರಲಿಲ್ಲ, ಕಟುಕನ ಕೈಗೆ ಬಿದ್ದ ಪಶು ಹಾಲನ್ನು ಕೊಡುತ್ತಿರಲಿಲ್ಲ, ಎತ್ತು ವ್ಯವಸಾಯಕ್ಕೆ ನಿರುಪಯೋಗದ್ದಿರುತ್ತಿತ್ತು, ಅದಕ್ಕಾಗಿ ಯಾರೂ ಕಣ್ಣೀರನ್ನು ಸುರಿಸುತ್ತಿರಲಿಲ್ಲ, ಯಜ್ಞದ ಮಾತು ಬೇರೆಯಾಗಿದ್ದಿತು. ಆಯ್ನೂರು ಇಲ್ಲವೆ ಏಳುನೂರು ಮಣಕಗಳನ್ನು ಇಲ್ಲವೆ ಹೋರಿಗಳನ್ನು ಒಂದು ಯಜ್ಞದಲ್ಲಿ ವಧಿಸುವುದೆಂದರೆ ಒಕ್ಕಲುತನಕ್ಕೆ ಹಾನಿ ಎಷ್ಟಾಗುತ್ತಿರಬೇಕು? ಆ ಬಗ್ಗೆ ರೈತರು ಎಷ್ಟು ದುಃಖಿತರಾಗುತ್ತಿದ್ದರು ಎಂಬುದನ್ನು ಕಲ್ಪನೆಯಲ್ಲಿ ಮಾತ್ರವೆ ತಿಳಿಯಬೇಕು! ಇಂತಹ ಬಲುಮೆಯನ್ನು ಬುದ್ಧನು ನಿಷೇಧಿಸಿದರೆ ಅವನಿಗೆ ವೇದನಿಂದಕ ಎಂದು ಯಾಕೆ ಹೇಳಬೇಕು?"

ಇದೇ ಅಧ್ಯಾಯದ 'ಯಜ್ಞವು ಪಾಪವೇಕೆ?' ಎಂಬ ಉಪಶೀರ್ಷಿಕೆಯಲ್ಲಿ ಬುದ್ಧನು ಶ್ರಾವಸ್ತಿಯ ಜೇತವನದ ಅನಾಥಪಿಂಡಿಕಾರಾಮದಲ್ಲಿ ಇದ್ದಾಗ ಉದ್ಗತಶರೀರ ಎಂಬ ಬ್ರಾಹ್ಮಣ ಮಹಾಯಜ್ಞದ ಸಿದ್ಧತೆ ನಡೆಸಿದ್ದ. ಬುದ್ಧನು ಯಜ್ಞಹಿಂಸೆಯ ಕುರಿತು ತಿಳಿಹೇಳಿದ ಮೇಲೆ ಆತ ಹೀಗೆ



ನುಡಿಯುತ್ತಾನೆ: "ಭೋ ಗೋತಮಾ? ನಾನು ಯೂಪಸ್ತಂಭಗಳಿಗೆ ಕಟ್ಟಿದ್ದ ಬಡ ರೈತರ? ಅಯ್ನೂರು ಎತ್ತುಗಳನ್ನು, ಅಯ್ನೂರು ಹೋರಿಗಳನ್ನು, ಅಯ್ನೂರು ಮಣಕಗಳನ್ನು, ಅಯ್ನೂರು ಕುರಿ ಮತ್ತು ಅಯ್ನೂರು ಆಡುಗಳನ್ನು - ಎಲ್ಲ ಪ್ರಾಣಿಗಳನ್ನು ಯೂಪದಿಂದ ಬಿಚ್ಚಿಬಿಡುವೆ. ಅವಕ್ಕೆ ಜೀವದಾನ ಕೊಡುವೆ. ಹಚ್ಚನ್ನ ಹುಲ್ಲನ್ನು ಮೇಯ್ದು ತಣ್ಣೀರನ್ನು ಕುಡಿದು ಶೀತಲ ಛಾಯೆಯಲ್ಲಿ ಅವು ಆನಂದದಿಂದಿರಲಿ."

"ಹಿಂದೂ ಧರ್ಮಶಾಸ್ತ್ರಕ್ಕೆ ಬುನಾದಿಯಾಗಿರುವ ಮನುಸ್ಮೃತಿಯ ವಸ್ತುನಿಷ್ಠ ಸಮಗ್ರ ಅನುವಾದ" ಎಂದು ಹೇಳಿಕೊಂಡ ದಿವಂಗತ ಶೇಷ ನವರತ್ನ ಅವರು ಮನುಸ್ಮೃತಿಯ ಅನುವಾದವನ್ನು ನಿಜವಾಗಿಯೂ ನಿಷ್ಪಕ್ಷಪಾತಿಯಾಗಿ ಮಾಡಿದ್ದಾರೆ. ಮನು ಎಷ್ಟೊಂದು ಪಕ್ಷಪಾತಿ ಎಂಬುದಕ್ಕೆ ಆತನ ಮನುಸ್ಮೃತಿ ಗ್ರಂಥ ಸಾಕ್ಷಿಯಾಗಿದೆ.

ಮೇಲಿನ ಮೂರೂ ವರ್ಣದವರು ಮಾತ್ರ ಶುದ್ಧ ಮಾಂಸ ಭಕ್ಷಣೆ ಮಾಡಬೇಕು; ಶೂದ್ರರು ಮತ್ತು ಅತಿಶೂದ್ರರಿಗೆ ಇಂಥ ಮಾಂಸಾಹಾರ ಸೇವನೆಗೆ ಅವಕಾಶವಿರಬಾರದು ಎಂಬ ಕುತಂತ್ರದಿಂದ ಮನು ಅನೇಕ ಶ್ಲೋಕಗಳನ್ನು ರಚಿಸಿದ್ದಾನೆ. 'ಯಜ್ಞಹಿಂಸೆ ಎಂಬುದು ಹಿಂಸೆ ಅಲ್ಲ' ಎಂಬುದು ಅವನ ವಾದವಾಗಿದೆ. ಆದರೆ 'ಶೂದ್ರರು ಪ್ರಾಣಿಹಿಂಸೆ ಮಾಡಬಾರದು' ಎಂದು ಉಪದೇಶಿಸುತ್ತಾನೆ. ವೈದಿಕರು ಪ್ರಾಣಿಗಳನ್ನು ಯಜ್ಞದಲ್ಲಿ ಕೊಲ್ಲುವುದು ಧರ್ಮಸಮ್ಮತ. ಆದರೆ ಶೂದ್ರರು ಪ್ರಾಣಿವಧೆ ಮಾಡುವುದು ಧರ್ಮಬಾಹಿರ ಎಂದು ಎಚ್ಚರಿಸುತ್ತಾನೆ.

ಆಹಾರ ಸಂಸ್ಕೃತಿಯ ಮೇಲೆ ಪ್ರತಿಬಂಧ ಹೇರುವ ಕೆಳಗಿನ ಶ್ಲೋಕಗಳು ಮನುವಿನ ವರ್ಣಭೇದ ನೀತಿಗೆ ಕನ್ನಡಿ ಹಿಡಿಯುತ್ತವೆ.

ಪ್ರಾಣಸ್ಯಾನ್ನಮಿದಂ ಸರ್ವಂ ಪ್ರಜಾಪತಿರಕಲ್ಪಯತ್।
ಸ್ಥಾವರಂ ಜಂಗಮಂ ಚೈವ ಸರ್ವಂ ಪ್ರಾಣಸ್ಯ ಭೋಜನಂ॥

(ಮನುಸ್ಮೃತಿ ಅಧ್ಯಾಯ 5 ಶ್ಲೋಕ 28)

(ಈ ಜಗತ್ತಿನಲ್ಲಿರುವ ಸಮಸ್ತ ಸ್ಥಾವರ ... ಜೀವಜಂತುಗಳನ್ನು, ಚರಾಚರ ವಸ್ತುಗಳನ್ನು ತಿನ್ನ... ಪರಮಾತ್ಮನು ಸೃಷ್ಟಿಸಿದ್ದಾನೆ.)

ಚರಾಣಾಮನ್ನಮಚರಾ ದಂಷ್ಟ್ರಿಣಾಮಪ್ಯದಂಷ್ಟ್ರಿ...
ಅಹಸ್ತಾಶ್ಚ ಸಹಸ್ತಾನಾಂ ಶೂರಾಣಾಂ ಚೈವ ಭ...

(ಮನುಸ್ಮೃತಿ ಅಧ್ಯಾಯ 5 ಶ್ಲೋಕ 29)

(ಚಲಿಸುವ ಪಶುಪ್ರಾಣಿಗಳಿಗೆ ಚಲಿಸದಿರುವ ... ಸಸ್ಯಗಳು ಆಹಾರ. ಕೋರೆದಾಡೆಗಳಿರುವ ಸಿಂಹ ಹು... ಕೋರೆದಾಡೆಗಳಿರದ ಜಿಂಕೆ ಇತ್ಯಾದಿಗಳು ... ಕೈಗಳಿರುವ ಮನುಷ್ಯರಿಗೆ ಕೈಗಳಿಲ್ಲದ ಪಶುಪ... ಆಹಾರ. ಶೂರವಾದ ಕ್ರೂರವಾದ ಪ್ರಾಣಿಗಳಿಗೆ ಸಾ... ಭೀರುವಾದ ಪ್ರಾಣಿಗಳು ಆಹಾರ.)

ಮಧುಪರ್ಕೇ ಚ ಯಜ್ಞೇ ಚ ಪಿತೃದೈವತ ಕ...
ಅತ್ರೈವ ಪಶವೋ ಹಿಂಸ್ಯಾ ನಾನ್ಯತ್ರೇತ್ಯಬ್ರ ವೀ...

(ಮನುಸ್ಮೃತಿ ಅಧ್ಯಾಯ 5 ಶ್ಲೋಕ 41)

(ಮಧುಪರ್ಕದಲ್ಲಿ, ಯಜ್ಞದಲ್ಲಿ, ದೇವ-ಪಿತೃ ಕಾ... ಮಾತ್ರ ಪಶುಗಳನ್ನು ಕೊಲ್ಲಬೇಕೇ ಹೊರತಾಗಿ ... ಸಂದರ್ಭಗಳಲ್ಲಿ ಪಶುಹಿಂಸೆ ಸಲ್ಲದು ಎಂದು ... ಹೇಳಿದ್ದಾನೆ.)

ಏಷ್ವರ್ಥೇಷು ಪಶೂನ್ ಹಿಂಸನ್ ವೇದತತ್ತ್ವಾರ್ಥವಿ...
ಆತ್ಮಾನಂ ಚ ಪಶುಂ ಚೈವ ಗಮಯತ್ಯುತ್ತಮಾಂ ...

(ಮನುಸ್ಮೃತಿ ಅಧ್ಯಾಯ 5 ಶ್ಲೋಕ 42)

(ಹೀಗೆ ಯಜ್ಞ ಶ್ರಾದ್ಧ ಹಾಗೂ ಮಧುಪರ್ಕ ಮು... ಕಾರ್ಯಗಳಿಗಾಗಿ ಮಾತ್ರ ವೇದಜ್ಞನಾದ ಬ್ರಾಹ್ಮ... ಪಶುವನ್ನು ಕೊಂದರೆ ತನ್ನ ಜೊತೆಗೆ ಆ ಪಶು... ಉತ್ತಮ ಗತಿಯನ್ನುಂಟುಮಾಡುತ್ತಾನೆ.)

ಯಾ ವೇದ ವಿಹಿತಾ ಹಿಂಸಾ ನಿಯತಾಸ್ಮಿಂಶ್ಚರಾ...
ಅಹಿಂಸಾಮೇವ ತಾಂ ವಿದ್ಯಾದ್ವೇದಾದ್ಧರ್ಮೋ... ನಿರ್ಬಭೌ॥

(ಮನುಸ್ಮೃತಿ ಅಧ್ಯಾಯ 5 ಶ್ಲೋಕ 44)

(ವೇದವಿಹಿತವಾದ ಎಂದರೆ ವೇದಗಳಲ್ಲಿ 'ಯಜ್ಞ... ಹೇಳಿದ ಹಿಂಸೆಯು ಶಾಸ್ತ್ರನಿಯಮ. ... ನಡೆಯುವುದರಿಂದ ಅದನ್ನು ಅಹಿಂಸೆಯಂದೇ ಪರಿ... ಬೇಕು. ಏಕೆಂದರೆ ವೇದಗಳಿಂದಲೇ ಧರ್ಮ ಹು...

ಯಜ್ಞಾಯ ಜಗ್ಧಿರ್ಮಾಂಸಸ್ಯೇತ್ಯೇಷ ದೈವೋ ವಿಧಿಃ...
ಅತೋಽನ್ಯಥಾ ಪ್ರವೃತ್ತಿಸ್ತು ರಾಕ್ಷಸೋ ವಿಧಿರುಚ್ಯತೇ...

(ಮನುಸ್ಮೃತಿ ಅಧ್ಯಾಯ 5 ಶ್ಲೋಕ 31)

(ಯಜ್ಞಕ್ಕಾಗಿ ಪಶುವನ್ನು ಕೊಂದು ಮ... ಮಾಂಸಭಕ್ಷಣವು 'ದೈವಿಕರೀತಿ' ಎಂದು ಹೇಳ... ಇದಕ್ಕೆ ವಿರುದ್ಧವಾಗಿ ಅನ್ಯಸಂದರ್ಭಗಳಲ್ಲಿ ಮಾ... ಅಕಾರಣ ಪಶುವಧೆ ಮತ್ತು ಮಾಂಸಭಕ್ಷಣವು 'ರಾಕ್ಷಸ... ಎಂದು ಹೇಳಲ್ಪಟ್ಟಿದೆ.)

ವೇದ ಪ್ರಮಾಣವಾದ ಮನುಸ್ಮೃತಿಯ ... ಶೂದ್ರರಿಗೆ ಯಜ್ಞ ಮಾಡುವ ಹಕ್ಕಿಲ್ಲ. ಆದ್ದರಿಂದ ... ಪ್ರಾಣಿಹಿಂಸೆ ಮಾಡುವ ಹಾಗಿಲ್ಲ. (ಏನಿದ್ದರೂ ... ಸತ್ತದ್ದನ್ನೇ ತಿನ್ನಬೇಕು.) ಶೂದ್ರರು ಆಹಾರಕ್ಕಾಗಿ ಪ್ರಾ... ಮಾಡಿದರೆ ಅದು ರಾಕ್ಷಸೀಕೃತ್ಯ. ಸವರ್ಣೀಯರು ಯ... ಪ್ರಾಣಿಗಳನ್ನು ಕೊಂದು ತಿಂದರೆ ಅದು ದೈವೀ... ದೇವಮಾರ್ಗದಲ್ಲಿ ಪ್ರಾಣಿಗಳನ್ನು ಕೊಲ್ಲುವ ಹಕ್ಕು ವೈ... ಮಾತ್ರ ಇದೆ. ಶೂದ್ರರಿಗೆ ಪ್ರಾಣಿಗಳನ್ನು ಆಹಾರವಾ... ಹಕ್ಕಿಲ್ಲ. ಹೇಗಿದೆ ಮನುಧರ್ಮ ನ್ಯಾಯ?

ನುಡಿ ಲೇಸು ನಡೆ ಅಧಮವಾದಲ್ಲಿ ಬಿಡಿಸಲಾಗದ ' ಎಂದು ಮಾದಾರ ಚೆನ್ನಯ್ಯನವರು ಹೇಳುತ್ತಾರೆ. ...ವಾದಿಗಳು ಬಿಡಿಸಲಾಗದ ಹೊಲೆಯಲ್ಲಿ ...ುತ್ತಿದ್ದಾರೆ. ಹೊಲಗೇರಿಯಲ್ಲಿರುವವರು ಹೊಲೆಯರಲ್ಲ ...ವಾದಿಗಳೇ ಹೊಲೆಯರು ಎಂಬುದನ್ನು ಶರಣರು ... ಶತಮಾನದಲ್ಲೇ ತೋರಿಸಿಕೊಟ್ಟಿದ್ದಾರೆ.

...ಬೆಟ್ಟದ ಲಿಂಗವ ಹಿರಿದು ಮಾಡಿ ತನ್ನ ಇಷ್ಟಲಿಂಗವ ... ಮಾಡುವ ಮೂಳ ಹೊಲೆಯರಿರಾ' ಎಂದು ...ಗರ ಚೌಡಯ್ಯನವರು ಲಿಂಗವಂತರಾದ ಮೇಲೆ ಕೂಡ ...ಲಿಂಗಕ್ಕೆ ಎರಗುವವರನ್ನು ಟೀಕಿಸಿದ್ದಾರೆ. 'ಊರೊಳಗಣ ...ಲೆಯ, ಊರ ಹೊರಗಣ ಕುಲಜ' ಎಂದು ...ಸಂಗಣ್ಣ ಅಸ್ಪೃಶ್ಯರನ್ನು ಎತ್ತಿ ಹಿಡಿದಿದ್ದಾರೆ. ...ದನೆಳವನೆತ್ತಾ ಹೊಲೆಯ ಹೊತ್ತು ತಂದು ನೀವು ...ುವಿರಿ' ಎಂದು ಬಸವಣ್ಣನವರು ವೈದಿಕರಿಗೆ ...ಸಿದ್ದಾರೆ. 'ಸವಣನ ಮನದ ಕೊನೆಯ ಮೊನೆಯ ...ರೆ ಹೊಲೆಯಿದ್ದಿತ್ತಾಗಿ ಜಿನನಿಲ್ಲ' ಎಂದು ಸಕಳೇಶ ...ದರಸ ತಿಳಿಸುತ್ತಾರೆ. 'ಅನೀತಿ ದೇವರುಗಳ ಎಡೆಯ ...ವಂತಹ ಮಾದಿಗರು ನೀವು ಕೇಳಿರೊ' ಎಂದು ...ಗರ ಚೌಡಯ್ಯನವರು ಹೇಳುತ್ತಾರೆ. 'ಚತುರ್ವೇದಿ ...ದಡೇನು ಲಿಂಗವಿಲ್ಲದವನೆ ಹೊಲೆಯ' ಎಂದು ...ವಣ್ಣನವರು ಸ್ಪಷ್ಟಪಡಿಸುತ್ತಾರೆ.

'ಹೊಲೆಯರ ಬಾವಿಯಲೊಂದು ಎಲು ನಟ್ಟಿದ್ದಡೆ
ಹೊಲೆಯೆಂಬುದು ಲೋಕವೆಲ್ಲ.
ಹಲವೆಲುವಿದ್ದ ಬಾಯಿ ಒಲವರ?
ಪಕ್ಷಪಾತಿಯಾಗಿ? ನುಡಿದಡೆ
ಹೊಲೆಯರ ಬಾವಿಯಿಂದ ಕರಕಷ್ಟ ಕಾಣಾ ರಾಮನಾಥ'

...ದು ಜೇಡರ ದಾಸಿಮಯ್ಯನವರು ಮಾನಸಿಕವಾಗಿ ...ಾದವರ ಕುರಿತು ತಿಳಿಸುತ್ತಾರೆ.


'ಹೊಲೆಯ ಹೊಲೆಯನೆಂದು
ಹೊರಗಿರು ಎಂದೆಂಬರು
ಹೊಲೆಯನೆಂತವನಯ್ಯಾ?
ತನ್ನ ಹೊಲೆಯ ತಾನರಿಯದೆ
ಮುನ್ನಿನವರ ಹೊಲೆಯನರಸುವ
ಭ್ರಷ್ಟರಿಗೆ ಏನೆಂಬೆನಯ್ಯಾ
ಮಹಾದಾನಿ ಕೂಡಲಚೆನ್ನಸಂಗಮದೇವಾ' ಎಂದು

...ಬಸವಣ್ಣನವರು ಸವರ್ಣೀಯರ ಮಾನಸಿಕ ಭ್ರಷ್ಟತೆಯನ್ನು ... ತೋರಿಸುತ್ತಾರೆ.

ಹೀಗೆ ವಚನಕಾರರು ಬರಿ ದಾರ್ಶನಿಕರಾಗಿರದೆ ಅರ್ಥ, ...ಮಾಜ, ಭಾಷಾ ಮತ್ತು ಮನೋವಿಜ್ಞಾನಿಗಳೂ ಆಗಿದ್ದರು. ...ೇದಾಸ ಹೇಳುವಂತೆ ಶಬ್ದ ಮತ್ತು ಅರ್ಥಗಳ ಸಂಬಂಧ ...ರ್ವತೀಪರಮೇಶ್ವರರ ಹಾಗೆ ಇಲ್ಲ. ಶಬ್ದವೆಂಬ ...ಮೇಶ್ವರನಿಗೆ ಅರ್ಥಗಳೆಂಬ ಅನೇಕ ಪಾರ್ವತಿಯರಿದ್ದಾರೆ. ...ಣರ ಪ್ರಕಾರ ಶಬ್ದವು ಅನೇಕ ಅರ್ಥಗಳನ್ನು ಆಯಾ ...ಲದ, ಪರಿಸರದ ಮತ್ತು ಪರಿಸ್ಥಿತಿಯ ಹಿನ್ನೆಲೆಯಲ್ಲಿ ...ವಿಧಾರ್ಥಗಳನ್ನು ಸ್ಫುರಿಸುತ್ತಲೇ ಇರುತ್ತದೆ. ಒಂದೇ ಶಬ್ದ ...ವಿಧ ವಚನಗಳಲ್ಲಿ ವಿವಿಧ ಅರ್ಥಗಳನ್ನು ಧ್ವನಿಸುವ ...ೀತಿಯಲ್ಲಿ ವಚನಕಾರರು ಶಬ್ದಗಳ ಪ್ರಯೋಗ ಮಾಡಿದ್ದಾರೆ. ...ವು ಬರಿ ಶಬ್ದಾರ್ಥಕ್ಕೆ ಮಾತ್ರ ಸೀಮಿತವಾಗದೆ ಲಕ್ಷಣಾರ್ಥ, ...ವ್ಯಾರ್ಥ ಮತ್ತು ತತ್ತ್ವಾರ್ಥಗಳನ್ನು ಒಳಗೊಂಡಿವೆ.

ಶರಣರು ಹೊಲೆ ಮಾದಿಗ ಶಬ್ದಗಳನ್ನು ಬಳಸಿದ ...ು ವಿನೂತನವಾಗಿದೆ. ಆ ಬಳಕೆಯ ಹಿಂದೆ ಸಾಮಾಜಿಕ ...ಯವಿದೆ. ಶಬ್ದಗಳನ್ನು ಲೀಲಾಜಾಲವಾಗಿ ಬಳಸುವ ...ಜನಶೀಲತೆ ಇದೆ. ಯಾರು ಬಹುಜನರನ್ನು ಕೀಳಾಗಿಸುತ್ತ ...ವು ಉನ್ನತ ಕುಲದವರೆಂದು ಸಾವಿರಾರು ವರ್ಷಗಳಿಂದ ...ಗುತ್ತಿದ್ದರೋ ಅಂಥವರನ್ನು ಕೀಳಾಗಿ ನೋಡುವ ನೈತಿಕ ...ರ್ಯವಿದೆ. 'ಕುಲಕ್ಕೆ ತಿಲಕ ನಮ್ಮ ಮಾದಾರ ಚೆನ್ನಯ್ಯ ...ನ್ಮಿಂದಧಿಕ ನೋಡಾ ಕೂಡಲಸಂಗಮದೇವಾ' ಎಂದು ...ಳಿತಕ್ಕೊಳಗಾದವರನ್ನು ದೇವರಿಗಿಂತಲೂ ಮೇಲೆತ್ತಿ ...ೋರಿಸುವ ಸೈದ್ಧಾಂತಿಕ ಸಾಮರ್ಥ್ಯವಿದೆ.

ಬಸವಣ್ಣನವರು ಯಾರ ವಿರೋಧಿಗಳೂ ಅಲ್ಲ, ಅವರು ...ನ್ಯಾಯದ ವಿರೋಧಿಗಳು. ಎಲ್ಲರೂ ಜಾತ್ಯತೀತರಾಗಿ ...ಜಮಾನವರಾಗಬೇಕೆಂಬ ಆಶಯ ಹೊಂದಿದ್ದರು. ಅವರು ...ದಿಕ ದೇವತೆಗಳನ್ನು ಅಲ್ಲಗಳೆದಂತೆ ಶೂದ್ರದೈವಗಳನ್ನೂ




ಅಲ್ಲಗಳೆದರು. ಏಕದೇವೋಪಾಸನೆಯ ಮೂಲಕ ನಮ್ಮೆಲ್ಲರೊಳಗೆ ಇರುವ ದೇವರು ಒಬ್ಬನೇ, ಒಂದೇ ವಿಶ್ವ, ಒಂದೇ ಮಾನವ ಜನಾಂಗ ಎಂಬ ಸತ್ಯದ ಅರಿವು ಮೂಡಿಸಿದರು.

■ ರಂಜಾನ್ ದರ್ಗಾ

ಕಲ್ಲಪ್ಪ ಆತ್ಮಹತ್ಯೆ ಗಣಪತಿಯನ್ನೂ ಆತ್ಮಹತ್ಯೆಗೆ ದೂಡಿತು





ಒಂದು ಪತ್ರ

ಚಿಕ್ಕಮಗಳೂರಿನ ಕೊಪ್ಪದಲ್ಲಿ ದಾದ್ರಿ ಮಾದರಿಯಲ್ಲಿ ಬಜರಂಗಿಗಳು ಎರಡು ದಲಿತ ಕುಟುಂಬದ ಮನೆಗೆ ದಾಳಿ ಮಾಡಿ ಅಲ್ಲಿ ಗೋಮಾಂಸ ಇಟ್ಟಿದ್ದಾರೆ ಎಂದು ಆರೋಪಿಸಿ ಅವರ ಮೇಲೆ ಭೀಕರ ಹಲ್ಲೆ ಮಾಡಿದ್ದಾರೆ. ಡಿವೈಎಸ್‌ಪಿ ಕಲ್ಲಪ್ಪ ಆತ್ಮಹತ್ಯೆ ಮಾಡಿಕೊಂಡಿದ್ದು ಜುಲೈ ನಾಲ್ಕಕ್ಕೆ. ಕಲ್ಲಪ್ಪರನ್ನು ಆತ್ಮಹತ್ಯೆಗೆ ದೂಡಿದ್ದು ಬಜರಂಗ ದಳದ ಕ್ರಿಕೆಟ್ ಬೆಟ್ಟಿಂಗ್ ಮಾಫಿಯಾ. ಇದರಿಂದಾಗಿ ಸಮಸ್ತ ಕನ್ನಡನಾಡು ಬಜರಂಗಿಗಳನ್ನು ದ್ವೇಷಿಸಲು ತೊಡಗಿದ್ದರಿಂದ ಜನರ ಗಮನ ಬೇರೆ ಕಡೆ ತಿರುಗಿಸಲು ಅದೇ ಜಿಲ್ಲೆಯ ಕೊಪ್ಪದ ಬಜರಂಗಿಗಳು ದಲಿತರ ಮೇಲೆ ಜುಲೈ ಹತ್ತರಂದು ಹಲ್ಲೆ ಮಾಡಿರುವುದು ಸ್ಪಷ್ಟವಾಗಿದೆ. ಜುಲೈ 11ರಂದು ಗುಜರಾತಿನ ಊನಾದ ದಲಿತರ ಮೇಲಿನ ಹಲ್ಲೆಯ ಘಟನೆ ಭಾರತದ ಎಲ್ಲೆಡೆ ಪ್ರತಿಧ್ವನಿಸಿತು. ಆದರೆ ಅದೇ ತರಹದ ಕರ್ನಾಟಕದ ಕೊಪ್ಪದ ಘಟನೆಗೆ ರಾಷ್ಟ್ರಮಟ್ಟದಲ್ಲಿ ಪ್ರಗತಿಪರರಿಂದ ಸರಿಯಾದ ಸ್ಪಂದನೆ ಸಿಗದಿರುವುದು ಆಶ್ಚರ್ಯ.

ಇನ್ನೊಂದು ಮುಖ್ಯ ವಿಷಯವೇನೆಂದರೆ ಕಲ್ಲಪ್ಪನವರ ಆತ್ಮಹತ್ಯೆಯೇ ಗಣಪತಿಯನ್ನೂ ಆತ್ಮಹತ್ಯೆಗೆ ದೂಡಿರಬಹುದು ಎಂಬ ಕೋನದಿಂದ ಯಾಕೆ ಯಾರೂ ಆಲೋಚಿಸುತ್ತಿಲ್ಲ? ಅಮಾಯಕ ಕಲ್ಲಪ್ಪನವರ ಆತ್ಮಹತ್ಯೆಗೆ ಏಕೈಕ ಕಾರಣ ಕ್ರಿಕೆಟ್ ಬೆಟ್ಟಿಂಗ್ ಮಾಫಿಯಾ. ಈ ಮಾಫಿಯಾದವರೆಲ್ಲಾ ಬಜರಂಗದಳದವರು. ಇವರಲ್ಲಿ ನವೀನ್ ಶೆಟ್ಟಿ ಮಂಗಳೂರು ಮೂಲದವನು. ಮಂಗಳೂರಿನಲ್ಲಿಯೂ ಕ್ರಿಕೆಟ್ ಬೆಟ್ಟಿಂಗ್ ಮಾಫಿಯಾ ಬಹಳ ಜೋರಾಗಿದೆ ಎಂದು ಕಳೆದ ವರ್ಷ ಪಡಿಲಿನ ಕ್ರಿಕೆಟ್ ಜುಗಾರಿಪ್ರಿಯ ಡಾಕ್ಟರ್ ಒಬ್ಬರು ಆತ್ಮಹತ್ಯೆ ಮಾಡಿಕೊಂಡಾಗ ಜಗಜ್ಜಾಹೀರವಾಗಿತ್ತು. ಚಿಕ್ಕಮಗಳೂರಿನ ಕ್ರಿಕೆಟ್ ಬೆಟ್ಟಿಂಗ್ ಮಾಫಿಯಾ ಬಜರಂಗದಳದ ಕೈಯಲ್ಲಿ ಇರುವಾಗ ಮಂಗಳೂರಿನ ಕ್ರಿಕೆಟ್ ಮಾಫಿಯಾವೂ ಬಜರಂಗ ದಳ ಅಥವಾ ಸಂಘಪರಿವಾರದ ಯಾವುದಾದರೂ ಅಂಗದ ಕೈಯಲ್ಲೇ ಇರುವುದು ಖಚಿತ. ಕಲ್ಲಪ್ಪರ ಮರಣದ ನಂತರ ಸಿಐಡಿ ತನಿಖೆಯಲ್ಲಿ ಸತ್ಯ ಹೊರಬಂದು ಮಂಗಳೂರಿನ ಪೊಲೀಸರೂ ಸಂಘಿ ಕ್ರಿಕೆಟ್ ಬೆಟ್ಟಿಂಗ್ ಜಾಲದ ರಕ್ಷಣೆಯಲ್ಲಿ ತೊಡಗಿದ್ದಾರೆ ಎಂಬ ಅಂಶ ಹೊರಬರುತ್ತದೆ ಎಂದು ಸಂಘ ಪರಿವಾರಕ್ಕೆ ಹತ್ತಿರದವರಾದ ಡಿವೈಎಸ್‌ಪಿ ಗಣಪತಿಗೆ ಭಯ ಹುಟ್ಟಿ ಅವರೂ ಮೂರು ದಿನಗಳ ನಂತರ ಆತ್ಮಹತ್ಯೆ ಮಾಡಿಕೊಂಡಿರುವ ಸಾಧ್ಯತೆಗಳೇ ಹೆಚ್ಚು. ಈ ಕೋನದಿಂದ ತನಿಖೆ ಕೈಗೊಂಡು ಈ ಎರಡೂ ಆತ್ಮಹತ್ಯೆಗಳೂ ಒಂದಕ್ಕೊಂದು ಹೆಣೆದುಕೊಂಡಿವೆ ಹಾಗೂ ಎರಡರ ಹಿಂದೆಯೂ ಬಜರಂಗದಳದ ಕ್ರಿಕೆಟ್ ಬೆಟ್ಟಿಂಗ್ ಮಾಫಿಯಾದ ನೆರಳಿದೆ ಎಂಬುದನ್ನೂ ಹೊರಗೆಡವಬೇಕು. ಮಂಗಳೂರು ಮೂಲದ ನವೀನ್ ಶೆಟ್ಟಿ ಸಿಕ್ಕಿ ಬಿದ್ದರೆ ವಿಷಯ ಸ್ಪಷ್ಟವಾಗಲಿದೆ.

ಖಾಂಡ್ಯಾ ಪ್ರವೀಣ್ ಭಟ್ ಮತ್ತು ನವೀನ ಶೆಟ್ಟಿಯನ್ನು ಪೊಲೀಸರು ತಕ್ಷಣ ಹುಡುಕಿ ತೆಗೆಯಬೇಕು. ಕರಾವಳಿಯ ಧಾರ್ಮಿಕ ಮಾಫಿಯಾಗಳು ಭಟ್ಟ-ಶೆಟ್ಟಿಗಳ ಕೈಯಲ್ಲಿ ಇರುವಂತೆ ಕ್ರಿಕೆಟ್ ಜುಗಾರಿ ಮಾಫಿಯಾವೂ ಭಟ್ಟ-ಶೆಟ್ಟಿಗಳ ಕೈಯಲ್ಲಿಯೇ ಇರುವಂತೆ ತೋರುತ್ತಿದೆ. ಧರ್ಮದ ಹೆಸರಲ್ಲಿ ಜನರೊಳಗೆ ದ್ವೇಷ ಹಬ್ಬಿಸಿ ಲಾಭ ಮಾಡಿಕೊಳ್ಳುತ್ತಿರುವ ಸಮಯಸಾಧಕರ ಕರಾಳ ಮುಖಗಳು ಬೇಗ ಹೊರಬರಲಿ.

-ಪಿ. ಶಿವರಾಮ್ ಶೆಟ್ಟಿ, ಮಂಗಳೂರು

ಮೇಗುಂದ - ಶಾಂತಿಪುರ ಸ್ವಾಭಿಮಾನಿ ಸಂಘಟನೆಗಳ ಒಕ್ಕೂಟ ಕುಂದೂರಿನಲ್ಲಿ ದಲಿತರ ಮೇಲಿನ ದೌರ್ಜನ್ಯವನ್ನು ಖಂಡಿಸಿ

'ಜೈಪುರ ಚಲೋ'

ತಾರೀಖು: 28-7-2016 ಗುರುವಾರ.
ಸಮಯ: ಬೆಳಗ್ಗೆ 10:30 ಕ್ಕೆ.
ಮೆರವಣಿಗೆ ಹೊರಡುವ ಸ್ಥಳ: ಬಸ್ ನಿಲ್ದಾಣ, ಜಯಪುರ.
ಪ್ರತಿಭಟನಾ ಸಮಾವೇಶ ಶೃಂಗೇರಿ - ಕೊಪ್ಪ ವೃತ್ತ.

ಆತ್ಮೀಯ ನಾಗರಿಕ ಬಂಧುಗಳೇ,

ಜುಲೈ 10, 2016ರ ರಾತ್ರಿ, ಶಾಂತಿಪುರದ ಕೆಲವು ದಲಿತ ಕುಟುಂಬಗಳಿಗೆ ಕರಾಳ ರಾತ್ರಿಯಾಗಿ ಮಾರ್ಪಟ್ಟಿತು. ಆರ್ಭಟಿಸುವ ಮಳೆಯ ನಡುವೆ ಶಾಂತವಾಗಿ ಮಲಗಿ ನಿದ್ರಿಸಬೇಕಾದ ಪಾಲರಾಜ್ ಕುಟುಂಬದಲ್ಲಿ ಆಕ್ರಂದನ ಮಡುಗಟ್ಟಿತು. ಶಾಂತಿಪುರ ಗ್ರಾಮದಲ್ಲಿ ತಡರಾತ್ರಿ 11:30ರ ಸುಮಾರಿಗೆ 40 ರಿಂದ 50 ಜನರಿದ್ದ ಸಂಘಪರಿವಾರದ ಭಜರಂಗದಳದ ಕಿಡಿಗೇಡಿಗಳು ಇದ್ದಕ್ಕಿದ್ದಂತೆ ಪಾಲರಾಜ್ ಮನೆಗೆ ದಾಳಿ ಮಾಡಿದ್ದಾರೆ. ಅಕ್ರಮವಾಗಿ ದನದ ಮಾಂಸ ಮನೆಯಲ್ಲಿ ಇಟ್ಟುಕೊಂಡಿದ್ದಾರೆಂದು ಆರೋಪಿಸಿ ಕಬ್ಬಿಣದ ರಾಡು ಮತ್ತು ಕತ್ತಿಯಿಂದ ಹೊಡೆದಿದ್ದಾರೆ. ಸುನಂದ ಎನ್ನುವ ದಲಿತ ಮಹಿಳೆಯನ್ನು ಅವಾಚ್ಯವಾಗಿ ಪುಂಡರ ಗುಂಪು ನಿಂದಿಸಿದೆ. ಪಾಲರಾಜ್ (56), ಧನುಷ್ (26), ಮುತ್ತಪ್ಪ (25) ಮಾರಣಾಂತಿಕವಾಗಿ ದಾಳಿಗೊಳಗಾದರು. ಪಾಲರಾಜ್ ಅಂಗವಿಕಲ ಎಂದು ಗೊತ್ತಿದ್ದೂ ಕೂಡ ಹಿಗ್ಗಾಮುಗ್ಗಾ ಥಳಿಸಿ ಆರೆಸ್ಸೆಸ್ ತನ್ನ ನೀಚತನವನ್ನು ಪ್ರದರ್ಶಿಸಿದೆ. ಇವರ ಮನೆಯಲ್ಲಿದ್ದ ರಮೇಶ್, ಸಂದೀಪ್ ಎಂಬ ಯುವಕರಿಗೆ ಸಣ್ಣಪುಟ್ಟ ಗಾಯಗಳಾಗಿವೆ. ಇದೆಲ್ಲವೂ ನಡೆದದ್ದು ಪೊಲೀಸರ ಸಮಕ್ಷಮದಲ್ಲಿಯೇ.

ಹಲ್ಲೆ ಮಾಡಿದ ಆರೋಪಿಗಳನ್ನು ಬಂಧಿಸಿ ಮೊಕದ್ದಮೆ ದಾಖಲು ಮಾಡುವ ಬದಲು ಗಾಯಾಳುಗಳನ್ನೇ ಪೊಲೀಸರು ಬಂಧಿಸಿದ್ದಾರೆ. ದೌರ್ಜನ್ಯಕ್ಕೊಳಗಾದವರ ಪರ ನಾಗರಿಕರು ಒತ್ತಡ ಹೇರಿದನಂತರ ಸಂಘಪರಿವಾರದವರ ಮೇಲೆ ಜಾತಿ ದೌರ್ಜನ್ಯದ ಕಾಯ್ದೆಯಡಿ ಪ್ರಕರಣ ದಾಖಲಾಗಿದೆ. ಮನುಷ್ಯರು ತಲೆತಗ್ಗಿಸಬೇಕಾದ ಈ ಘಟನೆಯ ಬಗ್ಗೆ ಮರುಕಪಟ್ಟು ಸಾಂತ್ವನ ಹೇಳದೇ ಈ ಕೃತ್ಯವನ್ನೆಸಗಿದ ಸಮಾಜಘಾತುಕ ಪಡೆಗಳ ಪರವಾಗಿ ಕ್ಷೇತ್ರದ ಶಾಸಕ ಡಿ.ಎನ್.ಜೀವರಾಜ್ ತಾನೊರ್ವ ಜನಪ್ರತಿನಿಧಿ ಎಂಬುದನ್ನೂ ಮರೆತು ಪ್ರತಿಭಟನೆ ನಡೆಸಿರುವುದು ನಾಚಿಕೆಗೇಡಿನ ಸಂಗತಿಯಾಗಿದೆ. ಚಿಕ್ಕಮಗಳೂರು ಜಿಲ್ಲಾ ಪೊಲೀಸರು ಇಂತಹ ಅಮಾನವೀಯ ಕ್ರೌರ್ಯ ನಡೆದರೂ ಕಿಡಿಗೇಡಿಗಳ ವಿರುದ್ಧ ಕೊಲೆ ಯತ್ನದ ಪ್ರಕರಣದಡಿ ದೂರು ದಾಖಲಿಸದಿರುವುದು ಹಲವು ಗುಮಾನಿಗಳಿಗೆ ಕಾರಣವಾಗಿದೆ.

2006ರಲ್ಲಿ ಇದೇ ದೂಬಳ (ಶಾಂತಿಪುರ) ಗ್ರಾಮದಲ್ಲಿ ದನದ ಮಾಂಸ ಮಾರಾಟ ಮಾಡುತ್ತಿದ್ದಾರೆಂದು ಆರೋಪಿಸಿ ಕುಂಞ ಮೊಹಮ್ಮದ್, ಮೊಹಿದ್ ಭಾವ ಮತ್ತು ಜಯಂತ್ ಎಂಬುವವರನ್ನ ಬೆತ್ತಲೆಗೊಳಿಸಿ ಮಾಂಸವನ್ನು ಅವರ ತಲೆಮೇಲೆ ಹೊರಿಸಿ, ಮಾರಕಾಸ್ತ್ರಗಳಿಂದ ಥಳಿಸಿ, ರಸ್ತೆಯಲ್ಲಿಯೇ ಅವಮಾನಪಡಿಸಲಾಗಿತ್ತು, ಈ ಪ್ರಕರಣದಲ್ಲಿ ಹೋರಾಟ ನಡೆಸಿದರೂ ಅಪರಾಧಿಗಳಿಗೆ ಶಿಕ್ಷೆ, ಸಂತ್ರಸ್ತರಿಗೆ ನ್ಯಾಯ ಸಿಗಲಿಲ್ಲ. ಶಾಂತಿಪುರ ಘಟನೆಯಲ್ಲಿ ಆರೋಪಿಸಲಾದ ವ್ಯಕ್ತಿಗಳು ನಿಜಕ್ಕೂ ದನವನ್ನು ಕಾನೂನುರೀತಿಯಲ್ಲಿ ಖರೀದಿಸಿ ಅನುಮತಿ ಪಡೆದ ವಧಾಗೃಹದ ಮೂಲಕ ಮಾಂಸ ತರದಿದ್ದರೆ ನಮಗೂ ತಕರಾರುಗಳಿವೆ. ಹೀಗೆಂದಾಕ್ಷಣ ಕಾನೂನನ್ನು ಕೈಗೆತ್ತಿಕೊಳ್ಳಲು ಅಧಿಕಾರವನ್ನು ನೀಡಿದವರ್‍ಯಾರು? ಜಾನುವಾರು ಸಾಗಾಟ, ಮಾಂಸ ಮಾರಾಟದಂತಹ ಯಾವುದೇ ಪ್ರಕರಣಗಳಲ್ಲೂ ಪೊಲೀಸರು ನಿಷ್ಪಕ್ಷಪಾತ ತನಿಖೆ ನಡೆಸಿ ಕಾನೂನುಕ್ರಮ ಕೈಗೊಳ್ಳದಿರುವುದು ಇಂತಹ ಪ್ರಕರಣಗಳು ಮರುಕಳಿಸುತ್ತಿವೆ. ದೇಶಾದ್ಯಂತ ಜಾನುವಾರು ವ್ಯಾಪಾರ, ಚರ್ಮ ಸುಲಿಯುವಿಕೆ, ಮಾಂಸ ಸೇವಿಸಿದ ಪ್ರಕರಣಗಳನ್ನು ನೆಪವಾಗಿಟ್ಟುಕೊಂಡು ಸಂಘಪರಿವಾರಧ ವಿಚ್ಛಿದ್ರಕಾರಿ ಶಕ್ತಿಗಳು ದಲಿತರು ಮತ್ತು ಅಲ್ಪಸಂಖ್ಯಾತರ ಮೇಲೆ ದಾಳಿ, ಸಾಮೂಹಿಕ ಹತ್ಯೆ, ಕೋಮುಗಲಭೆಗಳನ್ನು ನಡೆಸಿದ ಇತಿಹಾಸವೇ ಇದೆ. ಹರ್‍ಯಾಣದ ಜಜ್ಜರ್, ಉತ್ತರ ಪ್ರದೇಶದ ದಾದ್ರಿ, ಗುಜರಾತಿನ ಊನ, ಕರ್ನಾಟಕದ ಆದಿ ಉಡುಪಿ, ತನಿಕೋಡು ಕಬೀರ್ ಎನ್‌ಕೌಂಟರ್ ಪ್ರಕರಣ ಈ ರೀತಿ ಇನ್ನೂ ಹಲವು ಬೆಳಕಿಗೆ ಬಾರದ ಘಟನೆಗಳು ವಿವಿಧ ರಾಜ್ಯಗಳಲ್ಲಿ ಮತ್ತೆ ಮತ್ತೆ ಮರುಕಳಿಸುತ್ತಿವೆ.

ಈ ಎಲ್ಲ ವಿದ್ಯಮಾನಗಳನ್ನು ಅವಲೋಕಿಸಿದರೆ ಇಂತಹ ಘಟನೆಗಳು ಸ್ವಯಂಸ್ಫೂರ್ತಿಯಿಂದ ನಡೆಯುತ್ತಿರುವುದಲ್ಲ, ಇದರ ಹಿಂದೆ ದಲಿತ ವಿರೋಧಿ, ಮಹಿಳಾ ವಿರೋಧಿ, ಅಲ್ಪಸಂಖ್ಯಾತ ವಿರೋಧಿ ನಿಲುವು ಪುರೋಹಿತಶಾಹಿ ಸಂಘಪರಿವಾರಕ್ಕಿದೆ. ಹೀಗಾಗಿಯೇ ದಲಿತ ಮಹಿಳೆ ಎನ್ನುವ ಕಾರಣಕ್ಕೆ ಬಿಎಸ್ಪಿ ನಾಯಕಿ ಮಾಯಾವತಿಯವರ ಕುರಿತು ಬಿಜೆಪಿ ಶಾಸಕ ದಯಾಶಂಕರ್ ಸಿಂಗ್ ಅಶ್ಲೀಲವಾಗಿ ನಿಂದಿಸಿದ್ದು. ಈ ಪುರೋಹಿತಶಾಹಿ ಷಡ್ಯಂತ್ರಗಳನ್ನು ದಲಿತರು, ಅಲ್ಪಸಂಖ್ಯಾತರು, ಬಡವರು ಸರಿಯಾಗಿ ಅರ್ಥಮಾಡಿಕೊಳ್ಳಬೇಕು. ನಮ್ಮಗಳನ್ನೇ ಒಡೆದಾಳುವ ರಾಜಕಾರಣವನ್ನು ತಿರಸ್ಕರಿಸಬೇಕು.

ಮಲೆನಾಡಿನ ಸೌಹಾರ್ದ ಬಂಧುಗಳೇ, ಕುವೆಂಪು ಆಶಿಸಿದ ಸರ್ವಜನಾಂಗದ ಶಾಂತಿಯ ತೋಟವಾದ ಈ ನಾಡಿನಲ್ಲಿ ಈ ರೀತಿಯ ದೌರ್ಜನ್ಯಗಳನ್ನ ಕಠಿಣ ಶಬ್ದಗಳಲ್ಲಿ ಖಂಡಿಸಬೇಕಿದೆ. ಶೋಷಿತ ಸಮುದಾಯಗಳ ಮೇಲೆ ದಬ್ಬಾಳಿಕೆ ನಡೆಸಿದರೆ ನಾವು ಸುಮ್ಮನಿರುವುದಿಲ್ಲ ಎಂಬ ಎಚ್ಚರಿಕೆ ನೀಡೋಣ. ಕಲ್ಲಪ್ಪ ಹಂಡಿಭಾಗ್ ಆತ್ಮಹತ್ಯೆಯ ರುವಾರಿಯಲ್ಲಿ ಒಬ್ಬನಾದ ಪ್ರವೀಣ್ ಖಾಂಡ್ಯನಂತ ಸಮಾಜ ವಿರೋಧಿ ಶಕ್ತಿಗಳು ಬೆಳೆಯದಂತೆ ನಿಗಾ ಇಡೋಣ. ಹಿಂಸೆಯನ್ನು ಖಂಡಿಸುವ ಸಲುವಾಗಿ ಮತ್ತು ಶಾಂತಿಪುರದಲ್ಲಿ ಅಶಾಂತಿಯ ಕಿಡಿ ಹತ್ತಿಸುವ ಸಂಘಟನೆಗಳ ವಿರುದ್ಧ ಎಲ್ಲರೂ ಒಂದಾಗಬೇಕೆಂದು ಕಳಕಳಿಯಿಂದ ಮನವಿ ಮಾಡಿಕೊಳ್ಳುತ್ತೇವೆ.

ದಲಿತರ ಮೇಲಿನ ಹಿಂಸೆಯನ್ನು ವಿರೋಧಿಸುವ ಯಾವುದೇ ಪಕ್ಷ, ಸಂಘಟನೆ, ವ್ಯಕ್ತಿಗಳು ಜುಲೈ 28 ರಂದು ಜಯಪುರಕ್ಕೆ ಬಂದು ದನಿಗೂಡಿಸಬೇಕೆಂದು ಕೇಳಿಕೊಳ್ಳುತ್ತೇವೆ.

ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ:

ಸುಧೀರ್‌ಕುಮಾರ್ ಮುರೊಳ್ಳಿ: 94482 45172, ರಾಮು ಕೌಳಿ: 87620 83085, ಗೌಸ್ ಮೊಹಿದ್ದೀನ್: 94482 20998, ಕೆ.ಎಲ್.ಅಶೋಕ್: 94482 56516

ಸಂತಾನೋತ್ಪತ್ತಿ

ಒಂದಷ್ಟು ವಿಜ್ಞಾನ, ಮತ್ತೊಂದಷ್ಟು...

ಜೋರು ಮಳೆ ಶುರುವಾಗಿ ಒಂದು ತಿಂಗಳ ಮೇಲಾಯಿತು. ಅವರವರ ಅವಶ್ಯಕತೆಗೆ ತಕ್ಕ ತಯಾರಿಯಲ್ಲಿ ಅವರನರು ತೊಡಗಿದ್ದಾರೆ. ಮಳೆಗಾಲವೆಂದರೆ ಬೇಗ ಒಣಗುವ ಕಾಟನೇತರ ಬಟ್ಟೆ ಧರಿಸುವುದು; ಒಣಗದ ಬಟ್ಟೆಗಳ ಇಸ್ತ್ರಿ ಮಾಡಿ ಬಲವಂತವಾಗಿ ಒಣಗಿಸಿ ಹಾಕಿಕೊಳ್ಳುವುದು; ಹೊಟ್ಟೆ ಜಡವಾಗದ ಹಾಗೆ ಬಿಸಿ, ಲಘು ಆಹಾರ ತೆಗೆದುಕೊಳ್ಳುವುದು; ಒದ್ದೆ ಕೈಯಲ್ಲಿ ಏನನ್ನೂ ಮುಟ್ಟದಿರುವುದು; ಮಕ್ಕಳನ್ನು ಮಳೆಥಂಡಿಯಲ್ಲಿ ಎಬ್ಬಿಸಿ, ತಯಾರು ಮಾಡಿ ಶಾಲೆಗೆ ಕಳಿಸುವುದು ಇತ್ಯಾದಿ. ಮೀನುಪ್ರಿಯರ ಬವಣೆ ಬೇರೆ: ಸಂತಾನೋತ್ಪತ್ತಿ ಕಾಲವೆಂದು ಒಂದೂವರೆ ತಿಂಗಳ ಕಾಲ ಮಾನ್ಸೂನ್‌ಗಾಗಿ ಮೀನುಗಾರಿಕೆ ನಿಷೇಧ ಆಗುವುದರಿಂದ ಬೇರೆ ಆಹಾರಗಳಿಗೆ ಒಗ್ಗಿಕೊಳ್ಳುವ ಅನಿವಾರ್ಯ ಸಂಕಟ ಅವರದು. ಹೊರಗೆ ಕಚೇರಿ, ವ್ಯಾಪಾರವೆಂದು ತಿರುಗುವವರಿಗೆ ಕೊಡೆ ಹಿಡಿದೇ ತಿರುಗುವ, ಸೂಡಿಕೊಂಡು ಹೋದ ಕೊಡೆಯನ್ನು ನಂತರ ನೆನಪಿಟ್ಟು ಮರಳಿ ತರುವ ಜವಾಬ್ದಾರಿ. ಜಪ್ಪಿ ಹುಯ್ದು ಥಂಡಿ ಹುಟ್ಟಿಸುವ ಮೃಗಶಿರಾ-ಆರಿದ್ರಾಗಳೆಂಬ ಎರಡು ನಕ್ಷತ್ರಗಳ ಮಳೆ ಕಳೆದರೆ ಇನ್ನೊಂದು ವರ್ಷ ಬದುಕಿಯೇನು ಎಂಬ ಚಿಂತೆ ಪ್ರಾಯ ಹೋದವರದು.

ಹೀಗೆ ಜನವರ್ಗ ತನ್ನ ಸ್ಥಳ, ಉದ್ಯೋಗ, ಅವಶ್ಯಕತೆಗೆ ಅನುಗುಣವಾಗಿ ತೊಡಗಿರುವ ಬದಲಾವಣೆಗಳದು ಒಂದು ತೂಕವಾದರೆ ಮನುಷ್ಯೇತರ ಜೀವಸಾಮ್ರಾಜ್ಯದ ಅಸಂಖ್ಯಾತ ಜೈವಿಕಕ್ರಿಯೆಗಳದು ಸಾವಿರ ಪಟ್ಟು ತೂಕ. ಮನುಷ್ಯನಿಗೆ ಆಹಾರೋತ್ಪಾದನೆ ಹಾಗೂ ದೈನಂದಿನ ಚಟುವಟಿಕೆಗಳ ನಡೆಸಿಕೊಂಡು ಹೋಗಲು ಒಂದು ತೆರನ ಚಟುವಟಿಕೆ ಅವಶ್ಯವಾದರೆ; ನಮ್ಮ ಎದುರು, ಅಕ್ಕಪಕ್ಕ, ಸಂದಿಗೊಂದಿ ಸುಳಿವ ಪಶುಪಕ್ಷಿ ಕ್ರಿಮಿಕೀಟಗಳಲ್ಲಿ ಅತ್ಯಂತ ವೇಗದ, ವಿಶಿಷ್ಟ ಚಟುವಟಿಕೆಗಳು ನಮ್ಮ ಗಮನಕ್ಕೇ ಬರದೆ ನಡೆದುಹೋಗುತ್ತಿರುತ್ತವೆ. ಕೇವಲ ಒಂದು ಮಳೆ, ಒಂದೇ ಒಂದು ಮಳೆ ಸೃಷ್ಟಿಸಿಬಿಡುವ ಅದ್ಭುತಗಳನ್ನು ಗಮನಿಸಿದರೆ ಪ್ರಕೃತಿ ಎಂಥ ವಿಸ್ಮಯವೆಂಬ ಅರಿವಾಗುತ್ತದೆ.


ಪ್ರಾಣಿಲೋಕಕ್ಕೆ ಮಳೆಗಾಲವೆಂದರೆ ಕನ್ಯಾಮಾಸ, ಕನ್ನಿ ತಿಂಗ್ಳ್. ಮಕ್ಕಳುಮರಿ ಮಾಡಿಕೊಳ್ಳುವ ತುರ್ತುಪರಿಸ್ಥಿತಿಯ ಕಾಲವೂ ಹೌದು. ಭವಿಷ್ಯದಲ್ಲಿ 2-3 ವರ್ಷ ಸೂಕ್ತ ಪರಿಸ್ಥಿತಿ ಪೂರಕವಾಗಿ ಒದಗದಿರಬಹುದು ಎಂದು ಆದಷ್ಟು ತುರ್ತಾಗಿ ಸಂತಾನೋತ್ಪತ್ತಿ ನಡೆಸುತ್ತವೆ. ಇದರಲ್ಲಿ ವಿಸ್ಮಯವೇನಿಲ್ಲ, ಮನರಂಜನೆ-ಬೇಸರ-ಯುದ್ಧ ಗೊತ್ತಿರದ ಜೀವಿಗಳು ನಡೆಸುವ ಎಲ್ಲ ಅಂದರೆ ಎಲ್ಲ ಕ್ರಿಯೆಗಳು ಕೇವಲ ಸಂತಾನೋತ್ಪತ್ತಿಗಾಗಿ, ತಮ್ಮ ಉಳಿವಿಗಾಗಿಯೇ ಇವೆ. ಮನುಷ್ಯ ತಾನೂ ಉಳಿದ ಜೀವಿಗಳಂತೆ ಕೇವಲ ಒಬ್ಬ ಜೀವಿ ಎಂದುಕೊಳ್ಳುವ ಮನಸ್ಥಿತಿ ದಕ್ಕಬೇಕಾದರೆ ಮತ್ತೆಮತ್ತೆ ಪ್ರಾಣಿಲೋಕದತ್ತ ಕಣ್ಣುಹಾಯಿಸುತ್ತಿರಬೇಕಾಗುತ್ತದೆ. ಅಂಥ ಕೆಲ ನೋಟಗಳು, ಅದರಲ್ಲೂ ಸಂತಾನೋತ್ಪತ್ತಿ ಚಟುವಟಿಕೆ ಕುರಿತ ಅವಲೋಕನಗಳು ಇಲ್ಲಿವೆ:

ಕಪ್ಪೆ-ಜೀರುಂಡೆ ನ್ಯಾಯ: ಗೆದ್ದರೆ ಸದ್ದು, ಸೋತರೆ ಸುಮ್ಮನಿರು!

ಬೇಸಿಗೆಯ ಸದ್ದುಗಳೇ ಬೇರೆ. ಅಲ್ಲಿ ಬಲು ಸದ್ದು ಮಾಡುವುದು ಬಿಸಿಲು. ಮನುಷ್ಯನ ಸುಳಿವಿರದ ಪ್ರಕೃತಿಯೆದುರು ನಿಂತರೆ ಬೇಸಿಗೆಯಲ್ಲಿ ಮೌನದ ಸದ್ದೇ ಹೆಚ್ಚು. ಆದರೆ ಮಳೆಗಾಲದ ಖದರೇ ಬೇರೆ. ಎಲ್ಲ ಜೀವರಾಶಿಗಳ ಸರ್ವಾಂಗಗಳೂ ಬಾಯಿಗಳೇನೋ ಎನ್ನುವಷ್ಟು ಸದ್ದು ಕೇಳಿಸುತ್ತದೆ. ಅದರಲ್ಲೂ ನೀವು ಮಲೆನಾಡಿನ ಮಳೆಕಾಡಿನ ಸನಿಹದಲ್ಲಿದ್ದರೆ ಈ ಮಾತು ಹೆಚ್ಚು ಅರ್ಥವಾಗುತ್ತದೆ.

ಸದ್ದುಗದ್ದಲ ಎಬ್ಬಿಸುವುದರಲ್ಲಿ ಮೊದಲ ಸ್ಥಾನಕ್ಕೆ ಪೈಪೋಟಿ ನಡೆಸುವವರು ಕಪ್ಪೆ ಹಾಗೂ ಜೀರುಂಡೆ. ಮಳೆಬಂದನಂತರ ನಿಂತ ನೀರಿನ ಬಳಿ ನಾನಾ ಲಯ, ಶೃತಿಯಲ್ಲಿ ಅವು ವರಲುವುದು ಕೇಳಿದರೆ ಮಳೆಯೊಡನೆ ಭೂಮಿಗೆ ಎಷ್ಟು ಬಾಯಿ, ಗಂಟಲು ಮೂಡಿದೆಯೊ ಅನಿಸದೆ ಇರದು. ಇಲ್ಲೊಂದು ವಿಶೇಷವಿದೆ: ಇವೆರಡೂ ಸದ್ದು 'ಹಾಡು' ಅಲ್ಲ, ಸಂಗಾತಿಯನ್ನು ಕರೆವ 'ಕರೆ'ಗಳು. ಯಾಕೆಂದರೆ ಸದ್ದು ಬಾಯಿಂದ ಬಂದಿದ್ದಲ್ಲ, ಬದಲಾಗಿ ಬೇರೆ ಅಂಗಾಂಗಗಳಿಂದ ಹೊರಡಿಸಿದ್ದು. ಅಷ್ಟೇ ಅಲ್ಲ, ಆ ಸದ್ದನ್ನು ಮಾಡುವವರು ಕೇವಲ ಗಂಡುಗಳು!

ಸದ್ದು ಶುರು ಮಾಡುವವರಲ್ಲಿ ಕಪ್ಪೆಯೆ ಮೊದಲು. ಆದರದು ಮಳೆ ಸುರಿವ ಮುನ್ನ ಮೋಡದ ಊಹೆಗೇ ಶುರುವಾಗುವ ಸದ್ದು. ಕಪ್ಪೆ ಶೀತರಕ್ತ ಪ್ರಾಣಿ. ಗಾಳಿಯಲ್ಲಿರುವ ನೀರು, ಆಮ್ಲಜನಕ ಹೀರಿಕೊಂಡು ಬದುಕಬಲ್ಲ, ನೀರು-ನೆಲ ಎರಡೂ ಕಡೆಯಲ್ಲು ಬದುಕುವ ಉಭಯಜೀವಿ. ಎಲ್ಲೊ ಹುದುಗಿಕೊಂಡಿರುವ ಕಪ್ಪೆಗೆ ಆಗಸದ ಮೋಡ ಕಾಣಲು ಬೆನ್ನಿನಲ್ಲಿ ಕಣ್ಣಿಲ್ಲ, ಆದರೆ ಅದರ ಚರ್ಮವೆಲ್ಲ ಕಣ್ಣೇ. ಒಂದು ಮಳೆ ಬಿದ್ದರೆ ಸಾಕು, ಚಿತ್ರ ವಿಚಿತ್ರ ಸದ್ದುಗಳಲ್ಲಿ ವಟರಗುಟ್ಟಲು ಶುರು ಮಾಡುತ್ತದೆ. ಗಂಡುಗಳು ಸಂತಾನೋತ್ಪತ್ತಿಗೆ ಪ್ರಶಸ್ತವಾದ ತೇವವಿರುವ ಸ್ಥಳವನ್ನು ಹುಡುಕಿಕೊಂಡು ಬರುತ್ತವೆ. ಹಲವು ಗಂಡುಗಳು ಅಂಥ ಜಾಗಗಳಲ್ಲಿ ನೆಲೆಯಾಗಿ ತಮ್ಮ ಭೌಗೋಳಿಕ ಪ್ರದೇಶದ



ವ್ಯಾಪ್ತಿಯನ್ನು ತಿಳಿಸಲು; ಹೆಣ್ಣನ್ನು ಶೃತಿ-ಲಯಗಳೊಂದಿಗೆ ಆಕರ್ಷಿಸಲು ಬಾಯಿ ತೆಗೆಯದೆ ಸದ್ದು ಹೊರಡಿಸಿ ಹೆಣ್ಣುಗಳ ಕರೆಯತೊಡಗುತ್ತವೆ. ಸದ್ದು ಹೊರಡಿಸಲಾರದಂಥವು ಈಗಾಗಲೇ ಗದ್ದಲ ಇರುವ ಜಾಗಗಳಲ್ಲಿ, ಎಂದರೆ ಹರಿವ ನೀರಿನ ಪಕ್ಕ ನೆಲೆಯಾಗಿ ಬಣ್ಣ ಆಕಾರ, ಜಿಗಿತ ಮೊದಲಾದ ಬೇರೆ ವಿಧಾನಗಳಲ್ಲಿ ಹೆಣ್ಣನ್ನು ಆಕರ್ಷಿಸುತ್ತವೆ.


ಚ್ಯೂಯಿಂಗ್ ಗಂ ಜಗಿದ ಮಕ್ಕಳು ಬಾಯಿ ಎದುರು ಮಾಡುವ ಗುಳ್ಳೆಯಂತಹ ಚೀಲ ಕಪ್ಪೆಯ ಗಂಟಲ ಕೆಳಗಿರುವುದನ್ನು ಬಹಳಷ್ಟು ಜನ ನೋಡಿರಬಹುದು. ಅದು ಗಂಟಲ ಕೆಳಗಿನ ಗಾಳಿಚೀಲ. ಗಾಳಿಚೀಲದ ಜೊತೆ ಗಂಟಲೂ ಜೊತೆಗೂಡಿ ಎಷ್ಟು ಜೋರು ಸದ್ದು ಹೊರಡಿಸುತ್ತವೆಂದರೆ ಒಂದು ಮೈಲು ದೂರದವರೆಗೆ ಕೇಳುತ್ತದೆ. ಅದರಲ್ಲಿ ಗಾಳಿಯನ್ನು ಇಷ್ಟಿಷ್ಟೆ ತುಂಬಿಕೊಂಡು ಕಂಪಿಸಲು ಶುರು ಮಾಡುವ ಮೂಲಕ ಗಂಡು ತನ್ನ ಶಕ್ತಿ, ಸಾಮರ್ಥ್ಯ, ಪ್ರೀತಿ, ತಾನಿರುವ ಸ್ಥಳ ಎಲ್ಲವನ್ನು ಹೆಣ್ಣಿಗೆ ತಿಳಿಸುತ್ತದೆ. ಈ ಸದ್ದಿಗೆ ಹೆಣ್ಣು ಪ್ರತಿಕ್ರಿಯೆಯ ಉತ್ತರ ನೀಡುತ್ತದೆ. ಉತ್ತರವು ಗಂಡನ್ನು ಸಂತಾನೋತ್ಪತ್ತಿ ಪ್ರಕ್ರಿಯೆಗೆ ಇನ್ನಷ್ಟು ಪ್ರಚೋದಿಸುತ್ತದೆ. ಹೆಣ್ಣುಗಳು ಗಟ್ಟಿಯಾಗಿ ಆದರೆ ಕಡಿಮೆ ವೇಗದಲ್ಲಿ ಹಾಡುವ ಗಂಡುಗಳನ್ನು ಹೆಚ್ಚು ಸಮರ್ಥ ಎಂದು ಭಾವಿಸುತ್ತವೆ. ಗಂಡುಗಳ ಸಂಖ್ಯೆ ಹೆಣ್ಣಿಗಿಂತ ಜಾಸ್ತಿ. ನೂರಾರು ಗಂಡಿದ್ದರೇನು, ಯಾರದು ಗಟ್ಟಿಧ್ವನಿ ಎಂದು ತನಗನಿಸುವುದೋ ಅದನ್ನೆ ಹೆಣ್ಣು ಆಯ್ದುಕೊಳ್ಳುತ್ತದೆ.

ಕಪ್ಪೆಗಳಲ್ಲಿ ಹೆಣ್ಣುಗಂಡಿನ ನಡುವೆ ಸ್ಪರ್ಶ ಸಂಪರ್ಕವಿದೆ, ಆದರೆ ಲೈಂಗಿಕ ಸಂಪರ್ಕವಿಲ್ಲ; ಅಲ್ಲಿ ಸಂತಾನೋತ್ಪತ್ತಿ ಬಾಹ್ಯ. ಎಂದರೆ ಹೆಣ್ಣು ಮೊಟ್ಟೆಗಳನ್ನು ಹೊರಗೆ ಬಿಡುಗಡೆ ಮಾಡುತ್ತದೆ, ಗಂಡು ವೀರ್ಯವನ್ನು ಬಿಡುಗಡೆಯಾದ ಮೊಟ್ಟೆಗಳ ಮೇಲೆ ಸ್ರವಿಸಿ ಫಲಿತಗೊಳಿಸುತ್ತದೆ. ಮೊಟ್ಟೆಗಳ ಹೊರಸುರಿಸುವಂತೆ ಹೆಣ್ಣನ್ನು ಒಪ್ಪಿಸಲು ಗಂಡು ಹೆಣ್ಣಿನ ಬೆನ್ನುಸವಾರಿ ಮಾಡುತ್ತದೆ. ಅದನ್ನು 'ಅಂಪ್ಲೆಕ್ಸ್' ಎಂದು ವಿಜ್ಞಾನ ಭಾಷೆಯಲ್ಲಿ, ಅಪ್ಪುಗೆ ಎಂದು ಕನ್ನಡದಲ್ಲಿ ಹೇಳಬಹುದು. ಸಾಧಾರಣವಾಗಿ ಗಂಡುಗಳು ಹೆಣ್ಣಿನ ಗಾತ್ರದ ಅರ್ಧದಷ್ಟಿರುತ್ತವೆ. ಹೆಣ್ಣಿನ ಬೆನ್ನ ಮೇಲೆ ಕುಳಿತು ತನ್ನ ಮುಂಗಾಲುಗಳಿಂದ ಹೆಣ್ಣಿನ ಕುತ್ತಿಗೆ ಕೆಳಭಾಗ ಒತ್ತಿಹಿಡಿಯುತ್ತದೆ. ಭದ್ರವಾದ ಹಿಡಿತಕ್ಕೆಂದೇ ಗಂಡಿನ ಮುಂಗಾಲ ಒಳಭಾಗದಲ್ಲಿ ವಿಶಿಷ್ಟ ಪ್ಯಾಡುಗಳಿರುತ್ತವೆ. ಈ ಹಿಡಿತ ಹೆಣ್ಣಿಗೆ ಅಂಡವನ್ನು ಸ್ರವಿಸಲು ಪ್ರಚೋದಿಸುತ್ತದೆ. ಇದು ಕೆಲವೊಮ್ಮೆ ದಿನಗಟ್ಟಲೆ ತೆಗೆದುಕೊಳ್ಳಬಹುದು. ಹೆಣ್ಣು ಲೋಳೆಯಿಂದಾವೃತವಾದ ಅಂಡಗಳನ್ನು ನೀರಿನಲ್ಲಿ ಅಥವಾ ಒದ್ದೆ ಜಾಗದಲ್ಲಿ ಬಿಡುಗಡೆ ಮಾಡಿದ್ದೇ ಗಂಡು ಮೂತ್ರನಾಳದ ಮೂಲಕ ಮೊಟ್ಟೆಗಳ ಮೇಲೆ ವೀರ್ಯ ಸುರಿಸುತ್ತದೆ.

ಹೆಣ್ಣುಗಳು ಇನ್ನೂ ಹೆಚ್ಚು 'ಸಮರ್ಥ' ಗಂಡು ಸಿಕ್ಕರೆ ಇರಲಿ ಎಂದು ಅರ್ಧದಷ್ಟು ಅಂಡಗಳನ್ನು ಮಾತ್ರ ಹೊರಸುರಿಸಿ ಉಳಿದವನ್ನು ಹಾಗೇ ಇಟ್ಟುಕೊಂಡಿರುತ್ತವೆ. ಇದಕ್ಕೆ ವ್ಯಭಿಚಾರ ಎಂದು ಹೆಸರಿಟ್ಟುಬಿಡಬೇಡಿ; ತಳಿ ರಕ್ಷಣೆಗಾಗಿ, ಉತ್ತಮ ತಳಿ ಸೃಷ್ಟಿಗಾಗಿ ಈ ಕಾಯ್ದಿರಿಸುವಿಕೆ. ಹೆಣ್ಣು ತನ್ನ ಕೆಲಸ ಮುಗಿದದ್ದೇ ಜಾಗ ಖಾಲಿ ಮಾಡಿದರೆ ಗಂಡು ಸುರಿದ ವೀರ್ಯವನ್ನು, ಫಲಿತಗೊಂಡ ಅಂಡಗಳನ್ನು ಕೆಲಕಾಲ ತನ್ನ ಭೌಗೋಳಿಕ ಪ್ರದೇಶ ರಕ್ಷಿಸಿಕೊಳ್ಳುತ್ತ ಕಾಯುತ್ತದೆ. ಕೆಲ ಗಂಡುಗಳಂತೂ ತಮ್ಮ ಹಿಂಗಾಲ ನಡುವೆ ಫಲಿತ ಮೊಟ್ಟೆಗಳನ್ನಿಟ್ಟುಕೊಂಡು ಕಾಯುತ್ತವೆ. ಇನ್ನು ಕೆಲ ಗಂಡುಗಳು ಫಲಿತ ಮೊಟ್ಟೆಗಳ ಮೇಲೆ ಜೆಲ್ಲಿ ಸ್ರವಿಸಿ ತಮ್ಮನ್ನು ತಾವು ಅದರ ನಡುವೆ ಮುಳುಗಿಸಿ ಕೊಂಡುಬಿಡುತ್ತವೆ!

ಇಂತಿಪ್ಪ ಮಂಡೂಕ ಸಂತಾನೋತ್ಪತ್ತಿ ಪುರಾಣಂ ಸಂಪೂರ್ಣಂ!!

ಮಳೆಗಾಲದ ಮತ್ತೊಬ್ಬ ಗಲಾಟೆಕೋರ ಜೀರುಂಡೆಗಳ ಕತೆಯೇನು? ಮಲೆನಾಡಿನ ಇರುಳುಗಳಲ್ಲಿ ಜೀರುಂಡೆ ಸದ್ದಿದ್ದರೆ ಮಾತ್ರ ಮರುಬೆಳಗು ಸೂರ್ಯ ಹುಟ್ಟುವುದು. ಕಿವಿಯೊಳಗೆ ಭೈರಿಗೆ ಹಾಕಿ ಕೊರೆದಂಥ ಸದ್ದು ಅವುಗಳದ್ದು. ಎಲ್ಲಿದ್ದಾವೆಂದು ಕಣ್ಣಿಗೇ ಕಾಣಿಸದ ಕೀಟವನ್ನು ನೋಡಿದವರು



ಕಮ್ಮಿ, 'ಕೇಳಿದವರು' ಬಹಳ. ಜೀರುಂಡೆ ಗಂಟಲಿನಿಂದ ಕೂಗುವುದಿಲ್ಲ, ತನ್ನ ದೇಹಕ್ಕೂ ತ ಗಿ... ರೆಕ್ಕೆಯನ್ನು ಅದುರಿಸಿ ಸದ್ದು ಹೊರಡಿಸುತ್ತದೆ. ... ತಂತಿಕಡ್ಡಿಗಳ ಜಾಲರಕಂಟಿಸಿದ ಚರ್ಮದ ... ರೆಕ್ಕೆಗಳನ್ನು ಒಂದು ಕೋನದಲ್ಲಿ ಮೇಲೆತ್ತಿ ಎ... ಕಂಪಿಸುವಂತೆ ಮಾಡಿದಾಗ ರೆಕ್ಕೆ ನಡುವಿನ ... ಗಾಳಿ, ಕಂಪನ ಎಲ್ಲ ಸೇರಿ ಒಂದು ಕರ್ಣಕಠೋ... ಉತ್ಪತ್ತಿಯಾಗುತ್ತದೆ.

ಈ ಸದ್ದು ಸೃಷ್ಟಿಸುವವರು ಗಂಡುಗಳು. ... ಯುವ, ಮನವೊಲಿಸುವ, ವಿಜಯೋತ್ಸವ ... ಒಂದು ಮಿಲನದ ಬಳಿಕ ಮತ್ತುಳಿದ ಮೊ... ಇಲ್ಲಿ ಫಲಿತಗೊಳಿಸು ಎಂದು ಹೆಣ್ಣನ್ನು ಮನವ... ಸದ್ದು.

ಮಳೆಗಾಲ, ತಂಪು ಕಾಲ ಬಂದದ್ದೆ ಮಿ... ಉಳಿದವರೊಡನೆ ಗುದ್ದಾಡಿ ಗಂಡು ಜೀರುಂಡೆ ತ... ಗುರುತಿಸಿಕೊಳ್ಳುತ್ತದೆ. ಗೆದ್ದವ ಸದ್ದು ಮಾಡುತ್ತಾನೆ... ಸುಮ್ಮನಾಗುತ್ತಾನೆ. ಮೀಸೆಯಿಂದಲೆ ಬಳಿಬಂದ... ಒಲೈಕೆ ಶುರುವಾಗುತ್ತದೆ. ಗಂಡು ವೀರ್ಯ ... ಒಂದು ಪುಟ್ಟಚೀಲದಲ್ಲಿ ತುಂಬಿಸಿ ಅದನ್ನು ಬೆ... ಇಟ್ಟುಕೊಂಡಿರುತ್ತದೆ. ಅದರ ಮೇಲೆ ಒಲಿದ... ಕೂರುತ್ತದೆ. ತನ್ನ ಅಂಡಕೋಶದಲ್ಲಿ ವೀರ್ಯಚೀಲ... ಸುರಿದು ಖಾಲಿಯಾಗತೊಡಗಿದ ಮೇಲೆ, ಚೀ... ದೇಹದೊಳಗಿರುವಂತೆಯೇ ಬೇರೆಬೇರೆಯಾಗುತ್ತ... ಅಂಡಗಳು ಫಲಿತಗೊಳ್ಳುತ್ತವೆ. ಗಂಡು ಮನವೊಲಿ... ತನ್ನ ಒಳಾಂಗದಲ್ಲಿ ಸೇರಿಹೋಗಿರುವ ವೀರ್ಯಚ... ಹೆಣ್ಣು ತಿಂದು ಹಾಕುತ್ತದೆ! ಆ ಅರ್ಧಖಾ... ವೀರ್ಯಚೀಲ ಹೆಣ್ಣಿಗೆ ಆಹಾರವೂ ಹೌದು. ಹೆಣ್ಣು ಹೊಸಹೊಸ ಗಂಡುಗಳ ಕರೆ ಹುಡು... ಹೋಗುತ್ತದೆ. ಕೊನೆಗೆ ಫಲಿತಗೊಂಡ ಮ... ಒದ್ದೆಜಾಗದ ಸಂದುಗೊಂದು, ತೋಡುಗಳಲ್ಲಿಟ್ಟು ...

ಹೆಣ್ಣುಗಳು 'ಚಂಚಲೆ'ಯರೆನಿಸುವುದೆ? ಹೊಸತನಕ್ಕಾಗಿ, ತಳಿನಾಶ ತಪ್ಪಿಸುವ ಸಲುವಾಗಿ ಅ... ವಾಗಿ ಪಾಲಿಸಲೇಬೇಕಾದ ಪ್ರಕೃತಿ ನಿಯಮ ಅದ... ಇರಲಿ, ನಿಜವೆಂದರೆ ಹೆಣ್ಣಿಗೆ ಗಂಡು ಮಾಯೆ, ಹೆಣ್ಣು ಮಾಯೆ. ತಳಿ-ಸಂತಾನೋತ್ಪತ್ತಿ-ಪ್ರೇಮ ಎಲ್ಲ... ಹಳಹಳಿಕೆಗಳು..

ಬೆಕ್ಕಿನ ಫ್ಯಾಮಿಲಿ ಪ್ಲಾನಿಂಗ್

ಬೆಕ್ಕಿನ ಪ್ರೇಮಿ ಮಗಳು ಗಟಾರದಲ್ಲಿತ್ತೆಂದು ... ಮಾಡಿ ತಂದ ಮರಿಬೆಕ್ಕು ಒಂದು ವರ್ಷ ಪ್ರಾ... ಕೂಡಲೇ ಮರಿ ಹಾಕಲು ಶುರುಮಾಡಿತು. ... ವರ್ಷಗಳಲ್ಲಿ ಪ್ರತಿ ಸಲ 3-4 ಮರಿಯಂತೆ ಐದ... ಮರಿ ಹಾಕಿತು. ಅವನ್ನು ಮೋಳ(=ಬಾವುಗ=ಗಂ... ಕೊಲ್ಲದಂತೆ ಕಾದು, ಸ್ವಲ್ಪ ದೊಡ್ಡವಾದ ಮೇಲೆ ... ಬೇಕೋ ಅವರಿಗೆ ವಿಲೇವಾರಿ ಮಾಡಿ ನಾವು ... ಬಿಡುವುದರಲ್ಲಿ ನಮ್ಮ ಅಮ್ಮನವರು ಮತ್ತೊಮ್ಮೆ ... ಹಾಕಲು ಸಿದ್ಧವಾಗುತ್ತಿದ್ದರು! ಮರಿಗಳನ್ನು ಈದು... ಬೆಕ್ಕು ಸವೆದು ಸತ್ತು ಹೋಗುವುದೆನಿಸಿತು. ... ಸಲದ ಎಳೆಮರಿಗಳನ್ನಂತೂ ಮೋಳ ಕೊಂದು... ಅಲ್ಲದೆ ಗಂಡಿನೊಡನೆ ಗುದ್ದಾಡಿ ನಮ್ಮ ಬೆಕ್ಕಿನ ... ಗಾಯಗಳಾದವು. ಬೆಕ್ಕು ಬಾವುಗರ ತಾರಾಮಾರಿ ... ರಕ್ಷಣೆಗಾಗಷ್ಟೇ ಅಲ್ಲ; ಬೆಕ್ಕು ಬೆದೆಗೆ ಬಂದಾಗ... ತೋರಿಸುವ ಪ್ರತಿರೋಧದಿಂದಲೂ ಆಗುತ್ತಿತ್ತು...

ಹೇಣ್ಣು ಬೆಕ್ಕಿಗೆ ಮೋಳಗಳಿಂದ ಮೋಕ್ಷ ... ಏನು ಮಾಡುವುದು? ಬೆಕ್ಕಿಗೆ ಕುಟುಂಬ ... ಆಪರೇಷನ್ ಮಾಡಿಸುವುದು. ಮಾಡಿಸಿಬಿಟ್ಟೆವು. ... ಮೋಳಗಳ ಕಾಟವಿಲ್ಲದೆ ಇದು ಆರಾಮ... ಎಂದುಕೊಂಡು ನಾವು ನೆಮ್ಮದಿಯಾದೆವು. ... ಮೂರ್ಖರೋ ನಾವು! ಆಪರೇಷನ್ ಆಗಿ ಗರ್ಭ... ತೆಗೆದಿದ್ದರು. ಆದರೆ ಅಂಡಕೋಶ ಇತ್ತು. ಹೆ... ಬೆದೆ ಬರುವುದು ನಿಲ್ಲಲಿಲ್ಲ, ಮೋಳಗಳ ಕಾಟವೂ ...

ತೋಬಾ, ತೋಬಾ. ಕಾಟ ಎಂಬು... ಉಪಯೋಗಿಸುವುದು ತಪ್ಪು. ಯಾಕೆಂದರೆ ನಮ್ಮ ... ಅದೇ ಬೇಕಿತ್ತು!

ಗಡವನಂತೆ ಕೆನ್ನೆಯುಬ್ಬಿರುವ, ಗಂಟಲುಬ್ಬಿಸಿ... ದನಿಯಲ್ಲಿ ಕರೆಯುವ ಮೋಳ (ಬಾವುಗ) ಬ... ಒಂದೊಂದೇ ತಲಾಯಿಸತೊಡಗಿದವು. ಗಂಡಿನಿಂದ... ಮುದ್ದು ಬೆಕ್ಕನ್ನು ಕಾಪಾಡಬೇಕೆಂಬ 'ಇನ್‌ಸ್ಟಿಂಕ್ಟ್' ನಮ... ಮೋಳನ ಕರೆ ಕೇಳಿದ್ದೇ ನಮ್ಮ ಬೆಕ್ಕು ವಯಸ್ಸ... ಎದ್ದು ಮೈ ನೆಕ್ಕಿಕೊಂಡು ಹೊರಟುಬಿಟ್ಟಿತು. ಅದು... ಹಿಂದೆ ಸುತ್ತುವುದು, ಇದು ಅದರ ಹಿಂದೆ... ಸುಳಿಯುವುದು. ಕೊನೆಗೊಬ್ಬ ಅಳಿಯ ಬಾವುಗರು... ದಿನ ಹಿಂದೆ ಮುಂದೆ ತಿರುಗಿ ಸಾಧನೆ ಮಾಡಿಯೇ... ಹಾಗೆಂದು ಬೆಕ್ಕು ವಂಯ್ಯ ವಂಯ್ಯ ಎಂದು ಕೂಗಿ... ಗೊತ್ತಾದದ್ದು. ಬೆಕ್ಕಿನ ಕಾಲು, ಕಿವಿ, ಬೆನ್ನಿನ ... ಗೀರು ಗಾಯ. ಅವತ್ತಿಡೀ ದೇಹದ ಮೂಲೆಮೂಲೆ... ನೆಕ್ಕಿಕೊಂಡದ್ದೇ ಕೆಲಸ ಬೆಕ್ಕಿಗೆ.

ತ್ತ ಮರುಬೇಗಾಗುವ ದರಲ್ಲಿ ಮತ್ತೊಂದು ಮೋಕ
! ಗಾಯಗೊಂಡಿದ್ದರೂ ಇದು ಎದ್ದು ಬಿಂಕದಿಂದ
ಡೆಯಿತು! ಅದರೆದುರೇ ಕೂತಿತು. ಗಂಡು ಒಂದು
ಮುಂದೆ ಬಂದರೆ ಇದು ಪಂಜಾ ಎತ್ತಿ
ಯುತ್ತಿತ್ತು, ಎದುರಿರಬೇಕು, ಆದರೆ ಮುಟ್ಟಬಾರದು.
ವಾಗಿದ್ದ ಟಿವಿ ಹಾಲಿನಲ್ಲಿ ಒಂದು ದಿನವಿಡೀ ಇದೇ
ಯಚ್ಚಾಲೆ ನಡೆಯಿತು. ನಮ್ಮ ಬೆಕ್ಕು ತನ್ನ
ಡಿಕ್ಷನ್ನಿನ ಸೋಫಾ ಮೇಲೆ ಅರೆನಿಮೀಲಿತ
ವಾಗಿ ಮಲಗಿದ್ದರೆ ಮೋಳ ಕೆಳಗೆ ನೆಲದ ಮೇಲೆ,
ಎದುರೇ ಧ್ಯಾನಸ್ಥವಾಗಿ ಕೂತಿತು. ಅದು ಸಖಿಯ
ದಾಸ. ಹೀಗೆ ಟೆರೇಸಿನಲ್ಲಿ, ಕಿಟಕಿಯ ಚಡಿಯಲ್ಲಿ,
ಳಗೆ, ಕಾಂಪೌಂಡ್ ಗೋಡೆಯ ಮೇಲೆ
ದುರು ಇನ್ನೊಬ್ಬರು ಕುಳಿತು ಉರುಟಣೆ ಆಯಿತು.
ನಾದರೇನು, ಮುಟ್ಟಲು ಕೊಡದ ಹೆಣ್ಣಿನಿಂದ ಬೇಸತ್ತ
ವಾಪಸು ಹೋಯಿತು. ಅದು ಹೋದದ್ದೇ ನಮ್ಮ
ರಾಣಿಯವರಿಗೆ ವಿರಹವೇದನೆ. ಗೊಗ್ಗರು ಸ್ವರದಲ್ಲಿ
ಕರೆದಿದ್ದೇ ಕರೆದಿದ್ದು!


ದುರಿರುವಾಗ ಬಿಂಕ, ತಿರಸ್ಕಾರ; ದೂರ ಇರುವಾಗ
ಕ. ಬಿಟ್ಟೇನೆಂದರೂ ಬಿಡದ ಮಾಯೆ!

ವು ದಿನನಿತ್ಯ ನೋಡುವ ಪ್ರಾಣಿಗಳಲ್ಲೇ ಬೆಕ್ಕುಗಳ
ಯ ಸಮಾಗಮ ಅತಿ ಪ್ರತಿರೋಧದ ನಡುವೆ
ವಂಥದ್ದು. ಮೈಮೇಲೆ ಗಾಯವಿಲ್ಲದೆ ಹೆಣ್ಣು ಗರ್ಭ
ದೇ ಇಲ್ಲವೆನ್ನಬಹುದು. ಒಂದನ್ನೊಂದು ಬೆರಸುತ್ತ
ಹೆದರಿಸುತ್ತಲಿರುವುದು ಗಂಡುಹೆಣ್ಣುಗಳ ಸರಸವೋ,
ವೋ ಒಂದೂ ತಿಳಿಯುವುದಿಲ್ಲ. ಒಟ್ಟಾರೆ ಹೆಣ್ಣಿನ
ಪ್ರತಿರೋಧದ ನಡುವೆ ಅಲ್ಲಿ ಸಂತಾನೋತ್ಪತ್ತಿ
ಯುತ್ತದೆ. ಆದರೆ ಹೆಣ್ಣಿನಿಂದೇಕೆ ಪ್ರತಿರೋಧ?
ಣೆ?

ಮಾಗಮದ ಹೊತ್ತಿಗೆ ತನಗೆ ಅನುಕೂಲಕರ ಭಂಗಿ
ಕೊಳ್ಳಲು ಗಂಡು ಹೆಣ್ಣಿನ ಕುತ್ತಿಗೆ ಮೇಲಿನ ಚರ್ಮ
ಡಿದಾಗ ಗಂಡಿನ ಹಲ್ಲು, ಉಗುರುಗಳಿಂದ ಹೆಣ್ಣು
ಗೊಳ್ಳುತ್ತದೆ. ಜೊತೆಗೆ ಸಮಾಗಮದ ಬಳಿಕ
ಬೆಕ್ಕು ತನ್ನ ಲೈಂಗಿಕ ಅಂಗವನ್ನು ಹೊರಗೆಳೆಯುವಾಗ
ತೀವ್ರ ನೋವನುಭವಿಸುತ್ತದೆ. ಯಾಕೆಂದರೆ ಗಂಡಿನ
ದಲ್ಲಿ 10-15 ಚೂಪಾದ ಮೊಳೆಯಂತಹ
ಗಳಿದ್ದು ಅವು ಯೋನಿಗೋಡೆಗಳನ್ನು ಗೀರುತ್ತ
ಗುತ್ತವೆ. ಪ್ರತಿ ಸಂಭೋಗದ ಕೊನೆಗೆ ಹೆಣ್ಣುಬೆಕ್ಕು
ಕೊಳ್ಳುವುದು, ಗಂಡಿನ ಮೇಲೆ ದಾಳಿಗೆ
ದಾಗುವುದು ಇದೇ ಕಾರಣಕ್ಕೆ.

ಆದರೆ ಯೋನಿಗೋಡೆಗಳ ಗೀರುವಿಕೆ ಅನಿವಾರ್ಯ,
ಎಂದರೆ ಅದೇ ಹೆಣ್ಣಿನಲ್ಲಿ ಅಂಡ ಬಿಡುಗಡೆಯಾಗುವಂತೆ,
ನದ ಹಾರ್ಮೋನುಗಳು ಬಿಡುಗಡೆಯಾಗುವಂತೆ
ವುದು. ಪ್ರಾಣಿಸಂಗ್ರಹಾಲಯದಲ್ಲಿರುವ ಎಷ್ಟೋ
ಗಳು ಸಂಭೋಗವಿಲ್ಲದ ಕೃತಕ ಗರ್ಭಧಾರಣೆಯಿಂದ
ಧರಿಸದಿರುವುದಕ್ಕೆ, ಹಾಗೆ ಪಡೆದ ಮರಿಗಳ ಮೇಲೆ
ಲೇಶ ಮೋಹವಿಲ್ಲದೆ ಕಾಳಜಿ ವಹಿಸಲು
ರಿಸುವುದಕ್ಕೆ ಇದೇ ಕಾರಣ. ಒಂದುಬಾರಿಯ
ರ್ಗದಿಂದ ಅಂಡ/ಹಾರ್ಮೋನು ಬಿಡುಗಡೆಯಾಗದಿರ
ದು, ಆದ್ದರಿಂದ ಮತ್ತೆಮತ್ತೆ ಬೇರೆ ಗಂಡುಗಳೂ
ರ್ಗ ನಡೆಸಲು ಹೆಣ್ಣು ಅವಕಾಶ ನೀಡುತ್ತದೆ.

ಹೆಣ್ಣಿನ ಪ್ರತಿರೋಧಕ್ಕೆ ಮತ್ತೊಂದು ಕಾರಣ ಕುಟುಂಬ
ಜನೆ. ಇಲ್ಲದಿದ್ದರೆ ಆರೋಗ್ಯವಂತ ಹೆಣ್ಣುಬೆಕ್ಕು ಪ್ರತಿ



ಬೆದೆಯಲ್ಲಿ ಯಶಸ್ವಿಯಾಗಿ ಗರ್ಭ ಕಟ್ಟಿದ್ದರೆ, ಹಾಕಿದ ಎಲ್ಲ ಮರಿಗಳೂ ಉಳಿದುಬಿಟ್ಟರೆ ಜೀವಮಾನದಲ್ಲಿ 150 ಮರಿಗಳನ್ನು ತಯಾರು ಮಾಡುತ್ತದೆ! ಭೂಮಿ ಬೆಕ್ಕುಗಳಿಂದ ತುಂಬಿಹೋಗುತ್ತಿತ್ತು. ಅದರ ವಿರುದ್ಧ ಪ್ರಕೃತಿಯ ಮೊದಲ ನಿಯಂತ್ರಣ ಬಾವುಗನ ದೂರವಿಡುವಂತೆ ಬೆಕ್ಕಿಗೆ ಕಲಿಸಿದ್ದೇ ಆಗಿರಬೇಕಲ್ಲವೆ?

ಬೆಕ್ಕೇಕೆ? ಹಳೆಯ ಕಾಲದ ಎಷ್ಟು ಅಜ್ಜಂದಿರು ತನ್ನ ಹೆಂಡತಿ ಬಾಣಂತನಕ್ಕೆ ತವರಿಗೆ ಹೋದದ್ದು ಮತ್ತೆ ಬರಲೇ ಇಲ್ಲವೆಂದೂ; ಅದನ್ನು ಕರೆತರಲು ತಾನು ಸರ, ಬಳೆ, ದನ ಅಂತ ಎಷ್ಟೆಷ್ಟು ವಸ್ತುಗಳ ತಂದುಕೊಟ್ಟು ಉಪಚಾರ ಮಾಡಬೇಕಾಯಿತೆಂದೂ; ಮತ್ತೆ ಕೆಲವರು ಪಂಚಾಯ್ತಿ-ಹೊಡೆತಬಡಿತಕ್ಕಿಳಿದೆವೆಂದೂ ಹೇಳಿದ್ದನ್ನು ನೀವು ಕೇಳಿಲ್ಲವೇ? ಬಾಣಂತನ ಮುಗಿಸಿ ಬರುವುದರೊಳಗೆ ಕಾವಲಿಯ ಮೇಲಿನ ನೀರಗುಳ್ಳೆಯಂತೆ ಕಾದಿರುತ್ತಿದ್ದ ಗಂಡ ಮತ್ತೆ ವರ್ಷ ತುಂಬುವುದರೊಳಗೆ ಹೊಟ್ಟೆ ಬರಿಸುವುದರಿಂದ ಬೇಸತ್ತು ಅಜ್ಜಿಮುತ್ತಜ್ಜಿಯರು ಹಾಗೆ ಮಾಡಿರಬಹುದು. ಗಂಡಿನಿಂದ ದೂರ ಇರುವುದೂ ಒಂದು ತೆರನ ಕುಟುಂಬ ಯೋಜನೆಯೇ ಅಲ್ಲವೆ?!

*****

ನಾ ಕೂರುವ ಕಿಟಕಿ ಪಕ್ಕ ಇರುವ ಸಂಪಿಗೆ ಮರದ ಎಲೆ ಮೇಲೆ ಒಂದು ಗೊದ್ದದಷ್ಟು ಪುಟ್ಟ ಜೇಡ ಚಿತ್ರವಿಚಿತ್ರವಾಗಿ ಬಲೆ ನೇಯ್ದಿತ್ತು. ಅದರಲ್ಲಿ ಕೂತು ಬಲೆಯೂ ತಾನೂ ಒಟ್ಟಿಗೇ ಕಂಪಿಸುವಂತಹ ಚಲನೆ ಹೊರಡಿಸುತ್ತಿತ್ತು. ಮೊನ್ನೆ ಅದಕ್ಕಿಂತ ಹತ್ತುಪಟ್ಟು ದೊಡ್ಡ ಜೇಡ ಹತ್ತಿರ ಬಂತು. ಅದರ ಅಮ್ಮನಿರಬೇಕು, ಮೊಟ್ಟೆಯಿಂದ ಹೊರ ಬಂದದ್ದು ಹೇಗಿದೆ ನೋಡಿಹೋಗಲು ಬಂದಿರಬೇಕೆಂದು ಊಹಿಸಿದೆ. ಆದರೆ ಅದು ಬಂದದ್ದೇ ಪುಟ್ಟ ಜೇಡನ ಕಂಪನದ ರೀತಿಯೇ ಬದಲಾಯಿತು. ಎಲ್ಲ ಕಾಲುಗಳನ್ನೂ ಹಿಂದೆಳೆದುಕೊಂಡು ವಿಚಿತ್ರವಾಗಿ ಕುಣಿಯಲು ಶುರುಮಾಡಿತು. ದೊಡ್ಡ ಜೇಡ ಅದನ್ನು ತಿಂದು ಹಾಕುವುದೇನೋ, ಈ ಬೇಟೆಯನ್ನು ಹೇಗೆ ನೋಡುವುದು ಎಂಬ ತಳಮಳದೊಂದಿಗೇ ನೋಡುತ್ತ ಹೋದೆ. ದೊಡ್ಡದು ತನ್ನ ಕಡ್ಡಿ ಮುಂಗಾಲುಗಳಿಂದ ಸಣ್ಣಜೇಡವನ್ನು ಬಲೆಯಾಚೆ ಎಳೆಯತೊಡಗಿತು. ತೆಕ್ಕೆಗೆಳೆದುಕೊಳುವ ಮನುಷ್ಯರಂತೆ. ಸಣ್ಣದೂ ನಿಧಾನ ಕಂಪನ ನಿಲ್ಲಿಸಿ ದೊಡ್ಡ ಜೇಡ ನಿರ್ದೇಶನ ಮಾಡುವಲ್ಲಿ ಬಿಟ್ಟು ಎಲ್ಲೆಲ್ಲೋ ಸುತ್ತತೊಡಗಿತು. ಆದರ ಬೆನ್ನ ಮೇಲೇರಿತು. ಆಡಿ ಹೋಯಿತು. ಮುಖದ ಬಳಿ ಬಂತು. ಓಹ್, ಈಗ ಇದು ತಿಂದು ಹಾಕುತ್ತದೆ ಎಂದು ನನ್ನ ಊಹೆ. ಇಲ್ಲ, ಇದು ತಾಸುಗಟ್ಟಲೆ ನಡೆದು ಕೊನೆಗೆ ಗೊತ್ತಾಯಿತು, ಪುಟ್ಟದು ಗಂಡು, ಅದಕ್ಕಿಂತ ಹತ್ತು ಪಟ್ಟು ದೊಡ್ಡದು ಹೆಣ್ಣು. ಬಹುಪಾಲು ಹೆಣ್ಣುಜೇಡಗಳು ಸಮಾಗಮದ ಬಳಿಕ ಗಂಡನ್ನು ತಿಂದುಹಾಕುತ್ತವೆ. ಎಷ್ಟೋ ಗಂಡುಗಳು ಮೊದಲ ಸಮಾಗಮದ ವೇಳೆ ಸತ್ತು ಹೋಗುತ್ತವೆ. ಕೆಲವು ಪ್ರಬೇಧಗಳು ಹೆಣ್ಣು ತನ್ನನ್ನು ತಿನ್ನದಂತೆ ಏನೇನೋ ರಕ್ಷಣಾ ಉಪಾಯವನ್ನು ಮಾಡಿಕೊಳ್ಳುತ್ತವೆ. ಮೊದಲೆ ವೀರ್ಯವನ್ನು ಸಿರಿಂಜಿನಂತಹ ರಚನೆಯಲ್ಲಿ ತುಂಬಿಟ್ಟುಕೊಂಡು, ಹೆಣ್ಣು ಬಂದುಹೋಗುವ ಜಾಗದ ಗುರುತು ಹಿಡಿದು ಅಲ್ಲಿ ಕಾದು, ಕೊಳವೆಯಂತಹ ರಚನೆ ಮೂಲಕ ಅದನ್ನು ಹೆಣ್ಣಿನ ದೇಹಕ್ಕೆ ಸೇರಿಸಿ ತಮ್ಮನ್ನು ಕಾಪಾಡಿಕೊಳ್ಳುತ್ತವೆ!

ಕೀಟ ಸಾಮ್ರಾಜ್ಯದಲ್ಲಿ ಹೆಚ್ಚು ಸಂಖ್ಯೆಯ ಸಂತತಿ ಜನಿಸುತ್ತದೆ. ಅದರಲ್ಲಿ ಮೊಟ್ಟೆಯಿಡಬಲ್ಲ ಬಲಿಷ್ಟ ಹೆಣ್ಣಿನ ಸಂಖ್ಯೆ ಕಡಿಮೆ ಇರುತ್ತದೆ. ಅವು ಆಕಾರದಲ್ಲೂ ದೊಡ್ಡವು. ಸಮಾಗಮದ ಬಳಿಕ ಗಂಡನ್ನು ತಿನ್ನುವ ಸ್ವಭಾವ ಮನುಷ್ಯನಿಗೆ ವಿಲಕ್ಷಣ ಎನಿಸುತ್ತದೆ. ಹೆಣ್ಣುಗಂಡನ್ನು ತಿನ್ನುವುದೇಕೆ? ವೀರ್ಯದಾನಿಗಳ ಸಂಖ್ಯೆ ಇಳಿಸಲೆಂದೇ? ಇದೂ ಪ್ರಕೃತಿದತ್ತ ಕುಟುಂಬ ಯೋಜನೆಯೇ?

ಗೊತ್ತಿಲ್ಲ. ಜೇಡವನ್ನೇ ಕೇಳಬೇಕು.

*****

ವಿಕಾಸದ ಅತ್ಯಂತ ಕೆಳಹಂತದ ಜೀವಿಗಳು, ಏಕಕೋಶ ಜೀವಿಗಳಲ್ಲಿ ಸಂತಾನೋತ್ಪತ್ತಿಗೆ ಮತ್ತೊಂದು ಜೀವಿಯ ಅವಶ್ಯಕತೆಯಿಲ್ಲ. ಕೆಲವು ಸಸ್ಯಗಳೂ ಸೇರಿದಂತೆ ಅವೆಲ್ಲ ಅಲೈಂಗಿಕ ವಿಧಾನದಿಂದ ತಂತಾವೆ ಸಂತಾನೋತ್ಪತ್ತಿ ನಡೆಸುತ್ತವೆ. ಅಂದರೆ ಒಂದು ಜೀವಿ ತನ್ನ ಜೀನುಗಳಿಂದ ತನ್ನಂಥದೇ ಮತ್ತಷ್ಟು ಜೀವಿಗಳ ಉತ್ಪಾದಿಸುತ್ತದೆ. ನಂತರದ ಹಂತದ ಕೆಲವು ಜೀವಿಗಳಲ್ಲಿ ಸಮಯ ಹೇಗೆ ಬಯಸುತ್ತದೋ ಹಾಗೆ - ಕೆಲವೊಮ್ಮೆ ಲೈಂಗಿಕವಾಗಿ, ಕೆಲವೊಮ್ಮೆ ನಿರ್ಲಿಂಗಿ ವಿಧಾನದಲ್ಲಿ (ಎ-ಸೆಕ್ಷುವಲ್) ಸಂತಾನೋತ್ಪತ್ತಿ ನಡೆಸುತ್ತವೆ. ಇನ್ನೂ ಕೊಂಚ ವಿಕಾಸ ಹೊಂದಿರುವ ಮೃದ್ವಂಗಿಗಳಂತಹ ಜೀವಿಗಳು ದ್ವಿಲಿಂಗಿಗಳು. ಅವು ಗಂಡು ಮತ್ತು ಹೆಣ್ಣು ಎರಡೂ ಆಗಿರುತ್ತವೆ. ಒಂದು [illegible] ವೀರ್ಯ ಪಡೆವಾಗ ತಾನೂ [illegible] ಫಲಿತಗೊಳ್ಳುತ್ತಲೇ ಫಲಿತಗೊಳಿಸಿರುತ್ತದೆ.

ಅಲ್ಲಿ ಅಮಿತ ಸಂಖ್ಯೆಯ ಸಂತತಿ ಹುಟ್ಟುತ್ತದೆ. ಜೇಡ ಒಮ್ಮೆಗೆ ಸರಾಸರಿ 30 ಸಾವಿರ ಮೊಟ್ಟೆಯಿಡುತ್ತದೆ! ವಿಕಾಸದ ಕೆಳ ಮಜಲುಗಳಲ್ಲಿ ಇರುವ ಜೀವಿಗಳೆಲ್ಲ ಬಹುಸಂಖ್ಯೆಯ ಸಂತತಿ ಉತ್ಪಾದಿಸುತ್ತವೆ. ಮೊಟ್ಟೆ ಒಡೆದು ಹೊರಬಂದ ಮೇಲೆ ಶಕ್ತವಾದವು ಉಳಿಯುವ ಅವಕಾಶ ಗಳಿಸಿಕೊಳ್ಳುತ್ತವೆ. ಬದುಕುವವರಿಗಿಂತ ಸಾಯುವವರ ಸಂಖ್ಯೆಯೇ ಹೆಚ್ಚಾಗಿರುತ್ತದೆ. ಎಂದೇ ಅಲ್ಲಿ ಪಾಲಕತನದ ಜವಾಬುದಾರಿ ಕಡಿಮೆ. ಸಾಂಗತ್ಯದ ಅವಧಿ ಕಡಿಮೆ. ಗಂಡುಹೆಣ್ಣುಗಳ ದೈಹಿಕ ಸಂಯೋಗದ ವಿಧಾನಗಳು ಬೇರೆ. ಅಂಥ ಸಂತಾನೋತ್ಪತ್ತಿ ಕ್ರಿಯೆ ನಡೆವಲ್ಲಿ ಅಮ್ಮನಿಗೆ ಮಕ್ಕಳ ಜವಾಬ್ದಾರಿ ಕಡಿಮೆ. ಆ ವಿಕಾಸದ ಏಣಿಯ ನಂತರದ ಹಂತದ ಜೀವಿಗಳಲ್ಲಿ ಗಂಡು ಹೆಣ್ಣು ಎಂಬ ಲಿಂಗಭೇದ ಸೃಷ್ಟಿಯಾಯಿತು. ಆದರೆ ಹೆಚ್ಚು ಶಕ್ತಿ ಬೇಡುವ, 50% ಜೀನುಗಳನ್ನಷ್ಟೆ ವರ್ಗಾಯಿಸಲು ಸಾಧ್ಯವಿರುವ, 50% ಜೀವಿಗಳಷ್ಟೆ 'ಉತ್ಪಾದಿಸಲು' ಸಾಧ್ಯವಾಗುವ ಲೈಂಗಿಕ ಸಂತಾನೋತ್ಪತ್ತಿ ವಿಧಾನಕ್ಕೆ ಏಕೆ ಜೀವಿಗಳು ಹೊರಳಿಕೊಂಡವು ಎನ್ನುವುದು ಜೀವಶಾಸ್ತ್ರಜ್ಞರು ಇನ್ನೂ ಬಿಡಿಸಲಾರದ ಒಗಟು. ಬಹುಶಃ ತಳಿವೈವಿಧ್ಯ ಕಾಪಾಡಿಕೊಳ್ಳಲು, ಸಂತಾನ ಮಿತಗೊಳಿಸಲು ಪ್ರಕೃತಿ ಹೂಡಿದ ಉಪಾಯ ಇದಾಗಿರಬೇಕು ಎಂಬ ಊಹೆಯಿದೆ.

ಅದೇನೇ ಇರಲಿ, ಲೈಂಗಿಕವಾಗಿ 'ಪ್ರಬುದ್ಧ'ವಾಗುತ್ತ ಹೋದಂತೆ ಜೀವಿಗಳ ಹಿಂಸಾಪ್ರವೃತ್ತಿಯೂ ಹೆಚ್ಚುತ್ತಾ ಹೋಗಿದೆ! ಒಂದು ಅಧ್ಯಯನದಿಂದ ಕುತೂಹಲಕರ ಅಂಶ ಪ್ರಾಣಿಗಳಲ್ಲಿ ಪತ್ತೆಯಾಗಿದೆ: ಹಿಂಸಾಪ್ರವೃತ್ತಿ ಮತ್ತು ಲೈಂಗಿಕ ಪ್ರಚೋದನೆಯನ್ನು ನಿಯಂತ್ರಿಸುವ ಮಿದುಳಿನ ಭಾಗ ಒಂದೇ ಆಗಿದೆ! ಎಂದರೆ ಹಿಂಸೆಗೂ, ಲೈಂಗಿಕತೆಗೂ ಸಂಬಂಧವಿದೆ. ಪ್ರಾಣಿಯು ಜೊತೆಗೂಡಲು ತಯಾರಾಗುವುದೊ, ಯುದ್ಧ ಮಾಡಲು ಸಿದ್ಧವಾಗುವುದೊ ಎನ್ನುವುದನ್ನು ಮಿದುಳಿನ ಆ ಭಾಗ ಪ್ರಚೋದನೆಗನುಗುಣವಾಗಿ ನಿರ್ಧರಿಸುತ್ತದೆ. ಮತ್ತೊಂದು ಅಧ್ಯಯನದ ಪ್ರಕಾರ ಲೈಂಗಿಕ ಅನುಭವವಿರುವ ಜೀವಿಗಳು ಹಿಂಸಾತ್ಮಕ ಸ್ವಭಾವ ಹೊಂದಿವೆ. ಕಪ್ಪೆ, ಜೀರುಂಡೆಗಳಂತಹ ಜೀವಿಗಳಿಗೆ ಲೈಂಗಿಕಾನುಭವವಿಲ್ಲ, ಅಲ್ಲಿ ಹಿಂಸೆ ಕಡಿಮೆ. ಅವು ಕೇವಲ ಸಂತಾನೋತ್ಪತ್ತಿಯನ್ನು ತಮ್ಮ ಜವಾಬ್ದಾರಿ ಹಾಗೂ ಜೀವಮಾನದ ಹೊಣೆಯಾಗಿ ನಿಭಾಯಿಸುತ್ತವೆ. ಆದರೆ ಬೆಕ್ಕಿನಂತಹ ಪ್ರಾಣಿಗಳು ಲೈಂಗಿಕ ಅನುಭವ ಹೊಂದಿವೆ, ಅಲ್ಲಿ ಹಿಂಸೆಯೂ ಹೆಚ್ಚು ಇದೆ.

ಹಾಗಾದರೆ ವಿಕಾಸದ ತುತ್ತತುದಿಯಲ್ಲಿರುವ ಮನುಷ್ಯರ ಕತೆ ಏನು? ಎಲ್ಲ ಅನುಭವ, ಸಂವೇದನೆಗಳ ಆತ್ಯಂತಿಕ ತುದಿ ಮುಟ್ಟಿದ ಜೀವಿ; ಅದನ್ನು ವ್ಯಕ್ತಪಡಿಸಲು ಭಾಷೆ-ಕಲೆ ಮುಂತಾದ ಅಭಿವ್ಯಕ್ತಿ ರೂಢಿಸಿಕೊಂಡಿರುವ ಮನುಷ್ಯನ ಲೈಂಗಿಕತೆಗೂ ಹಿಂಸಾಪ್ರವೃತ್ತಿಗೂ ಏನು ಸಂಬಂಧ? ಕೌಟುಂಬಿಕ ದೌರ್ಜನ್ಯಗಳು, ಅತ್ಯಾಚಾರಕ್ಕೂ ಅವನ ಸೂಕ್ಷ್ಮ ಸಂವೇದನೆಗೂ ಸಂಬಂಧ ಇದೆಯೆ?

ಸಂಬಂಧ ಇರಲೇಬೇಕು. ಅನುಭವಿಸುತ್ತಿರುವುದನ್ನು ಅಭಿವ್ಯಕ್ತಿಸಿದರೆ ಅಷ್ಟು ಪುರಾವೆ ಸಾಕು.



ಡಾ.ಎಚ್.ಎಸ್.ಅನುಪಮಾ



ಪಾಪದ ಜಾತಿಯ ಗೋಳಿನ ಹಾಡು

ಸೆಗಣಿ ಮಂಡಲ ಮಧ್ಯದೊಳಗೆ ।
ಮೆರೆಯುತಿಹ ಹವ್ಯಕ ಜಾತಿಯೊಳು।
ಇರುವ ಕಾಳಿಂಗ ವಿಷದ ಸ್ವಾಮಿಯ।
ಪರಿಯನೆಂತು ಹೇಳ್ವೆನು॥

ಅವಿಚ್ಛಿನ್ನದ ಪರಂಪರೆಯಲಿ
ಪೀಠವೇರಿದ ಕಳ್ಳಸ್ವಾಮಿಯು।
ಏಕಾಂತ ಮಾಡಲು ಭಕ್ತೆಯರನ್ನು
ಒಳಗೆ ಕರೆದನು ಹರುಷದಿ॥

ಅಶ್ವಿನಿ ಬಾರೆ ಗೀತ ಬಾರೆ
ಈಶ್ವರಿ ಬಾರೆ ಪಾರ್ವತಿ ಬಾರೆ
ಮಹಾಲಕ್ಷ್ಮಿ ನೀನು ಬಾರೆ।
ತಾಯಿ ಶಾಂತ ಮಗಳನ್ನು ಜೊತೆಗೆ ತಾರೆ
ಎಂದು ಕರೆದನು ಕಾಮಿಯು॥

ಕಳ್ಳ ಕರೆದ ಧ್ವನಿಯ ಕೇಳಿ
ಎಲ್ಲ ಅಕ್ಕಯ್ಯರು ಬಂದು ನಿಲ್ಲಲು।
ಮರಿಶಾಸ್ತ್ರತೆಯು ಮಂಪರು ಕವಿಸಿ
ಜೊಲ್ಲುಸುರಿಸಿ, ಕೌಪೀನ ಸರಿಸಲು
ಅಲ್ಲಿ ನಡೆಯಿತು ಹಾದರಾ॥

ಸಂಸ್ಕೃತಿಯೇ ಭಗವಂತನೆಂಬ
ಬ್ರಾಹ್ಮಣ ಜಾತಿಯ ವ್ಯಥೆ ಇದು॥

ಹಬ್ಬಿದಾ ಮಠಮಾನ್ಯದೊಳಗೆ
ಮುಷ್ಟಿಭಿಕ್ಷ ವರಾಡ ಪುಕ್ಕಟೆ ಬರುತಿರೆ
ಪಟಾಲಂಗಳೆಂಬ ಪುಂಡ ನರಿಗಳು
ಬಿಟ್ಟಿಕೂಳನು ಮುಕ್ಕಿಮುಕ್ಕುತ
ಕಳ್ಳಸ್ವಾಮಿಗೆ ಬೆಂಬಲಿಸುತ್ತಿದ್ದವು॥


ರಾಸಲೀಲೆಗೆ ರೋಸಿಹೋಗಿ
ನ್ಯಾಯಕೇಳಿದ ಮಹಿಳೆಯಿಂದ।
ಹರಾಜಾದ ಸ್ವಾಮಿ ಪಡೆಯು
ಬಾಯಿಬಡಿದರು ರೋಷದಿ॥

ಪೀಠಕೆ ನಡೆಯುವ ಪರಮ ಭಕ್ತರು।
ಪೀಠವನ್ನು ಬಿಡಲು ಆಗದೆ॥
ಅನಿವಾರ್ಯದಿಂದಲಿ
ಕಳ್ಳಸ್ವಾಮಿಯ ಸಹಿಸಿಕೊಳಲು।
ಜನಬೆಂಬಲ ತನ್ನದೆಂದು
ಪೀಠವಿಳಿಯದೆ ಕುಳಿತನು॥

ಸಂಸ್ಕೃತಿಯೇ ಭಗವಂತನೆಂಬ
ಬ್ರಾಹ್ಮಣ ಜಾತಿಯ ವ್ಯಥೆ ಇದು॥

(ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿರುವ ಪದ್ಯ)

ಗ್ಯಾಸ್ ಸಬ್ಸಿಡಿ ಉಳಿತಾಯ: ಮತ್ತೊಂದು ಪೊಳ್ಳು ಘೋಷಣ






ಈಗ ಕೆಲವು ಸಮಯದಿಂದ ಮನೆಯಲ್ಲಿ ಅಡುಗೆ ಗ್ಯಾಸ್ ಖಾಲಿಯಾದ ಸಂದರ್ಭದಲ್ಲಿ ಹೊಸ ಸಿಲಿಂಡರ್ ಬುಕ್ಕಿಂಗ್ ಮಾಡಲು ಫೋನ್ ತಿರುಗಿಸಿದಾಗಲೆಲ್ಲ ಮೊದಲು ನಮ್ಮ ಕಿವಿಗೆ ಬೀಳುವುದೆ ಸಬ್ಸಿಡಿ ಬಿಟ್ಟುಕೊಡುವಂತೆ ಕೋರುತ್ತಿರುವ ಮಹಿಳೆಯೊಬ್ಬಳ ಆಕರ್ಷಕ ಧ್ವನಿ. ಅನಿಲ ಸಬ್ಸಿಡಿಯನ್ನು ನೇರವಾಗಿ ಬ್ಯಾಂಕ್ ಖಾತೆಗಳಿಗೆ ಜಮೆ ಮಾಡುವ 'ಪಹಲ್' ಯೋಜನೆ ಮತ್ತು ಉಳ್ಳವರು ತಮ್ಮ ಸಬ್ಸಿಡಿ ಬಿಟ್ಟುಕೊಡುವಂತೆ ಕೇಳಿಕೊಳ್ಳುವ 'ಗಿವ್ ಇಟ್ ಅಪ್' ಆಂದೋಲನದ ಪಂಚತಾರಾ ಪ್ರಚಾರ ವೈಖರಿ ಇದು! ದೊಡ್ಡ ಬಾಜಾಬಜಂತ್ರಿಯೊಂದಿಗೆ ನವಂಬರ್ 2014ರಲ್ಲಿ ಪ್ರಾರಂಭಿಸಲಾದ 'ಪಹಲ್' ಯೋಜನೆಯ ಮುಖ್ಯ ಉದ್ದೇಶ ಗ್ರಾಹಕರ ಸಬ್ಸಿಡಿ ಪೋಲಾಗುತ್ತಿರುವುದನ್ನು ತಡೆಯುವುದಾಗಿದ್ದು ಅದಕ್ಕೋಸ್ಕರ ಸಬ್ಸಿಡಿ ಮೊತ್ತವನ್ನು ನೇರವಾಗಿ ಗ್ರಾಹಕರ ಬ್ಯಾಂಕ್ ಖಾತೆಗೆ ವರ್ಗಾಯಿಸುವ ಏರ್ಪಾಡು ಮಾಡಲಾಗಿದೆ ಎಂದು ಮೋದಿ ಸರ್ಕಾರ ಹೇಳಿಕೊಂಡಿತ್ತು. ಈಗ ಈ 'ಪಹಲ್' ಮತ್ತು 'ಗಿವ್ ಇಟ್ ಅಪ್' ಗಳಿಂದಾಗಿ ದೇಶಕ್ಕೆ 15,000 ಕೋಟಿ ರೂಪಾಯಿಗಳಷ್ಟು ಉಳಿತಾಯವಾಗಿದೆ ಎಂದು ಮೋದಿ ಹೇಳುತ್ತಿದ್ದಾನೆ. 2015ರ ಸ್ವಾತಂತ್ರ್ಯ ದಿನಾಚರಣೆಯಂದು ದಿಲ್ಲಿಯ ಕೆಂಪುಕೋಟೆಯಿಂದ ಮಾಡಿದ ಸಾಂಪ್ರದಾಯಿಕ ಭಾಷಣದ ವೇಳೆ ಆತ "ನಾವು ಅನಿಲ ಸಬ್ಸಿಡಿಯನ್ನು ಪಹಲ್ ಯೋಜನೆಯಡಿ ತಂದೆವು. ಜನ ಧನ ಯೋಜನೆ ಮತ್ತು ಆಧಾರ್ ಬಳಸಿದೆವು. ಪ್ರಕ್ರಿಯೆಯನ್ನು ಸರಿಪಡಿಸಿದೆವು. ಪರಿಣಾಮವಾಗಿ ಮಧ್ಯವರ್ತಿಗಳು ಹಾಗೂ ಕಾಳದಂಧೆಕೋರರ ದಂಧೆಗೆ ಹೊಡೆತ ಬಿದ್ದಿದೆ. ಹೀಗೆ ಪ್ರತಿವರ್ಷ ಸಬ್ಸಿಡಿ ಹೆಸರಲ್ಲಿ ಕದಿಯಲಾಗುತ್ತಿದ್ದ 15,000 ಕೋಟಿ ರೂಪಾಯಿಗಳನ್ನು ಉಳಿಸಿದೆವು" ಅಂತ ಕೊಚ್ಚಿಕೊಂಡಿದ್ದಾನೆ. ಅನಿಲ ಸಬ್ಸಿಡಿ ಕುರಿತಾದ ಸಂವಾದ ಕಾರ್ಯಕ್ರಮವೊಂದರಲ್ಲಿ ಭಾಗವಹಿಸಿದ್ದ ಪೆಟ್ರೋಲಿಯಂ ಸಚಿವ ಧರ್ಮೇಂದ್ರ ಪ್ರಧಾನ್ "ಪಹಲ್ ಇಲ್ಲದಿರುತ್ತಿದ್ದರೆ 2014-15ರಲ್ಲಿ ಸರ್ಕಾರಕ್ಕೆ ರೂ. 15,000 ಕೋಟಿಗಳಷ್ಟು ಹೆಚ್ಚುವರಿ ವೆಚ್ಚ ಬೀಳುತ್ತಿತ್ತು" ಎಂದಿದ್ದ. 2014-15 ಮತ್ತು 2015-16ರ ಸಾಲಿನಲ್ಲಿ ಒಟ್ಟು ರೂ. 22,000 ಕೋಟಿ ಉಳಿತಾಯ ಆಗಲಿದೆ ಎಂದು ಮೋದಿ ಸರ್ಕಾರ ಪ್ರಕಟಿಸಿದೆ.

ಆದರೆ ಜಿಡಿಪಿ ದರದ ಹಾಗೆ ಇದೂ ಕೂಡ ಜನರನ್ನು ಮೋಸಗೊಳಿಸುವ ಸಲುವಾಗಿ ಸೃಷ್ಟಿಸಲಾದ ಮತ್ತೊಂದು ಅಂಕಿಅಂಶವಾಗಿದೆ. ನಂಬಲರ್ಹ ಮೂಲಗಳ ಪ್ರಕಾರ ಭಾರತದ ಮಹಾಲೆಕ್ಕಪಾಲಕರು (ಸಿಎಜಿ) ಸದ್ಯದಲ್ಲೆ ಸಂಸತ್ತಿನಲ್ಲಿ ಮಂಡಿಸಲಿರುವ ವರದಿಯೊಂದು ಮೋದಿ ಸರ್ಕಾರದ ಸುಳ್ಳನ್ನು ಬಯಲುಗೊಳಿಸಲಿದೆ. ಅದು ಚುಚ್ಚಲಿರುವ ಸೂಜಿ ಮೋದಿ ಸರ್ಕಾರದ ಉತ್ಪ್ರೇಕ್ಷೆಯ ಬಲೂನನ್ನು ಠುಸ್ಸೆಂದು ಧರೆಗಿಳಿಸಲಿದೆ. ಸಿಎಜಿ ವರದಿಯ ಪ್ರಕಾರ ಜನರು ಸ್ವಯಂಪ್ರೇರಿತರಾಗಿ ಬಿಟ್ಟುಕೊಟ್ಟಿರುವ ಸಬ್ಸಿಡಿಗಳ ಮೊತ್ತ ಮತ್ತು ಬ್ಯಾಂಕು ಖಾತೆಗಳಿಗೆ ವರ್ಗಾವಣೆಯಾದ ಹಣವನ್ನು ಒಟ್ಟು ಸೇರಿಸಿದಾಗ ರೂ. 2000 ಕೋಟಿಯಷ್ಟೂ ಆಗುವುದಿಲ್ಲ! ಇದರರ್ಥ ಏನೆಂದರೆ ಸರ್ಕಾರ ಉಳಿತಾಯದ ಮೊತ್ತವನ್ನು ಇರುವುದಕ್ಕಿಂತ ಸುಮಾರು 11 ಪಟ್ಟು ಏರಿಸಿ ಉತ್ಪ್ರೇಕ್ಷಿತ ವರದಿಗಳನ್ನು ಬಿಡುಗಡೆ ಮಾಡಿದೆ. ವಾಸ್ತವ ಏನೆಂದರೆ ಸಬ್ಸಿಡಿಯಲ್ಲಿ ಉಳಿತಾಯ ಆಗಲು ಮುಖ್ಯ ಕಾರಣ ಭಾರತ ಆಮದು ಮಾಡಿಕೊಳ್ಳುತ್ತಿರುವ ಅನಿಲದ ಬೆಲೆಗಳಲ್ಲಿ ಜಾಗತಿಕ ಮಟ್ಟದಲ್ಲಿ ಆಗಿರುವ ಭಾರಿ ಇಳಿತ. ರೂ. 2000ಕ್ಕೆ ಮಿಕ್ಕಿದ ತಥಾಕಥಿತ ಉಳಿತಾಯವೆಲ್ಲವೂ - ಸುಮಾರು 20,000 ಕೋಟಿ ರೂಪಾಯಿಗಳು - ಆಗಿರುವುದು ಜಾಗತಿಕ ಮಾರುಕಟ್ಟೆಯಲ್ಲಿ ಆಗಿರುವ ಬೆಲೆ ಇಳಿತದಿಂದಾಗಿ! ಎಲ್‌ಪಿಜಿ ಅನಿಲದಲ್ಲಿ 60% ಬ್ಯೂಟೇನ್ ಮತ್ತು 40% ಪ್ರೋಪೇನ್ ಇರುತ್ತದೆ. ಮೇ 2014ರಲ್ಲಿ ಜಾಗತಿಕ ಮಾರುಕಟ್ಟೆಯಲ್ಲಿ ಬ್ಯೂಟೇನ್ ಬೆಲೆ ಟನ್ ಒಂದರ 825 ಡಾಲರು ಇದ್ದರೆ ಜುಲೈ 2016ರಲ್ಲಿ ಅದರ ಬೆಲೆ 310 ಡಾಲರುಗಳಿಗೆ ಇಳಿದಿದೆ. ಇನ್ನು ಅದೇ ಅವಧಿಯಲ್ಲಿ ಪ್ರೋಪೇನ್ ಬೆಲೆ 810 ಡಾಲರುಗಳಿಂದ 295 ಡಾಲರುಗಳಿಗೆ ಇಳಿದಿದೆ!

ಕೇಂದ್ರ ಸರ್ಕಾರದ ಪೆಟ್ರೋಲಿಯಂ ಯೋಜನೆ ಮತ್ತು ವಿಶ್ಲೇಷಣೆ ತಂಡದ ಪ್ರಕಾರ 2014-15ರಲ್ಲಿ ರೂ. 36,571 ಕೋಟಿಗಳಷ್ಟಿದ್ದ ಅನಿಲ ಆಮದು ವೆಚ್ಚ 2015-16ರಲ್ಲಿ ರೂ. 25,626 ಕೋಟಿಗಳಿಗೆ ಇಳಿಯಲಿದೆ. ಇದರಿಂದಾಗಿ ಒಂದು ವರ್ಷದಲ್ಲಿ 10,945 ಕೋಟಿ ರೂಪಾಯಿಗಳಷ್ಟು ಉಳಿತಾಯ ಆಗಲಿದೆ. ಇದು ಅನಿಲದ ಆಮದು ಪ್ರಮಾಣ ಕಡಿಮೆಯಾದುದರ ಫಲವಾಗಿ ಆದ ಉಳಿತಾಯವೆಂದು ಭಾವಿಸಬೇಕಾಗಿಲ್ಲ ಏಕೆಂದರೆ ಈ ಅವಧಿಯಲ್ಲಿ ಆಮದು ಪ್ರಮಾಣ ಹೆಚ್ಚೇ ಆಗಿದೆ! 2014-15ರಲ್ಲಿ ಆಮದು 8,313 ಟಿಎಂಟಿಯಷ್ಟಿದ್ದರೆ (1 ಟಿಎಂಟಿ = 1,000 ಟನ್) 2015-16ರಲ್ಲಿ ಅದು 8885 ಟಿಎಂಟಿಗೆ ಏರಿದೆ!

ಸಿಎಜಿ ತನಿಖೆಯ ವೇಳೆ ಪತ್ತೆಯಾಗಿರುವ ಮತ್ತೊಂದು ವಿಷಯ ಏನೆಂದರೆ 'ಪಹಲ್' ಯೋಜನೆಯಲ್ಲಿ ಪ್ರಕ್ರಿಯೆಗೆ ಸಂಬಂಧಿಸಿದಂತೆ ದೊಡ್ಡ ಪ್ರಮಾಣದ ಸಮಸ್ಯೆಗಳಿವೆ. ಉದಾಹರಣೆಗೆ ಮನೆಗಳಿಗೆ ನೀಡುವ ಸಬ್ಸಿಡಿಯನ್ನು




ವಾಣಿಜ್ಯೋಪಯೋಗಕ್ಕೆ ಬಳಸಲಾಗುತ್ತಿದೆ; ವಾಣಿಜ್ಯ
ರುವ ಅನಿಲವನ್ನು ಗೃಹಬಳಕೆಗೆ ಉಪಯೋಗಿಸಲಾ

ಮೋದಿ ಸರ್ಕಾರ ಬಂದು ಎರಡು ವರ್ಷಗಳು
"ಸಬ್ ಕಾ ಸಾಥ್ ಸಬ್ ಕಾ ವಿಕಾಸ್", "1
ಕಪ್ಪುಹಣ", "ಉತ್ತಮ ಆಡಳಿತ" ಮು
ಚುನಾವಣಾಪೂರ್ವ ಘೋಷಣೆ, ಭರವಸೆಗಳ
ನೆಲಕಚ್ಚಿವೆ. 2014ರ ನಂತರದಲ್ಲಿ ಒಂದ
ಅಗತ್ಯವಸ್ತುಗಳ ಬೆಲೆಗಳು ಗಗನಕ್ಕೇರಿ ಸಾಮಾನ್ಯ
ಬದುಕು ದುಸ್ತರವಾಗುತ್ತಿದ್ದರೆ ಇನ್ನೊಂದು ಕಡೆ
ಅಲ್ಪಸಂಖ್ಯಾತರ ಮೇಲೆ ದೌರ್ಜನ್ಯಗಳು ಮಿತಿ
ಇಂತಹ ಸನ್ನಿವೇಶದಲ್ಲಿ ಮೋದಿ ಸರ್ಕಾರ ತನ್ನ ವೈಫ
ಮುಚ್ಚಿಹಾಕುವುದಕ್ಕೋಸ್ಕರ ಕೋಟ್ಯಂತರ ರೂಪಾ
ವೆಚ್ಚದಲ್ಲಿ ಶತಪ್ರತಿಶತ ಉತ್ಪ್ರೇಕ್ಷಿತ ಘೋಷಣೆ, ಜಾಹಿ
ಹೇಳಿಕೆಗಳನ್ನು ನೀಡುತ್ತಿದೆ.

(ಆಧಾರ: ಜುಲೈ *20, 2016*ರ ದ ಹಿಂದೂ

■ ಸುರೇಶ್ ಭಟ್ ಬಾಕ್ರಬ

ಮೋದಿ ಸರ್ಕಾರದಲ್ಲಿ ಬದುಕನ್ನು ಕಳೆದುಕೊಂಡ ಶೋಷಿತರ




ಪ್ರಸ್ತುತ ಕೇಂದ್ರದಲ್ಲಿ ಆಡಳಿತ ನಡೆಸುತ್ತಿರುವ ನರೇಂದ್ರ ಮೋದಿ ನೇತೃತ್ವದ ಎನ್‌ಡಿಎ ಸರ್ಕಾರ ಭಾರತದ ಶೋಷಿತರ ಪಾಲಿಗೆ ನರಕದ ಕೂಪವಾಗಿದೆ. 2014ರಲ್ಲಿ ಉತ್ತರ ಪ್ರದೇಶ, ಬಿಹಾರ, ಮಧ್ಯಪ್ರದೇಶ, ರಾಜಸ್ಥಾನ, ಮಹಾರಾಷ್ಟ್ರ ಮತ್ತು ಗುಜರಾತ್ ರಾಜ್ಯಗಳಲ್ಲಿ ಇರುವ ಬಹುಜನ ಭಾರತೀಯರು ಯುಪಿಎ ಸರ್ಕಾರದ ನಿಷ್ಕ್ರಿಯತೆಯಿಂದ ಬೇಸತ್ತು ಹೊಸ ಭರವಸೆಯೊಂದಿಗೆ ಎನ್‌ಡಿಎ ಮೈತ್ರಿಕೂಟಕ್ಕೆ ಅತ್ಯಧಿಕ ಬಹುಮತವನ್ನು ನೀಡಿದರು. ಆದರೆ ಬಹುಜನರ ಆಹಾರ ಸ್ವಾತಂತ್ರ್ಯ ಮತ್ತು ಬದುಕುವ ಸ್ವಾತಂತ್ರ್ಯಗಳನ್ನು ರಾಷ್ಟ್ರೀಯ ಸ್ವಯಂಸೇವಕ ಸಂಘದ ನಿರ್ದೇಶನದಲ್ಲಿ ಅಧಿಕಾರ ನಡೆಸುತ್ತಿರುವ ಮೋದಿ ಸರ್ಕಾರ ಕಸಿದುಕೊಂಡು ಭಾರತದ ಇತಿಹಾಸದಲ್ಲಿ ಹಿಂದೆಂದೂ ಕಂಡರಿಯದ ಮೂಲಭೂತ ಮಾನವ ಹಕ್ಕುಗಳನ್ನು ಹರಣ ಮಾಡುತ್ತಿರುವುದಕ್ಕೆ ಬಹಳಷ್ಟು ನಿದರ್ಶನಗಳಿವೆ. ತಮ್ಮನ್ನು ನಂಬಿ ರಾಜ್ಯಾಧಿಕಾರ ನೀಡಿದ ಭಾರತದ ಬಹುಜನ ಬಂಧುಗಳನ್ನು ಪ್ರಧಾನಿ ಮೋದಿ ಅತ್ಯುಗ್ರ ಶೋಷಣೆಗೆ ಗುರಿಪಡಿಸಿದ್ದಾರೆ.

ಇತ್ತೀಚೆಗೆ ಗುಜರಾತಿನ ಊನಾ ಎಂಬ ಊರಿನಲ್ಲಿ ಸತ್ತ ದನವೊಂದರ ಚರ್ಮವನ್ನು ಹೊಟ್ಟೆಪಾಡಿಗಾಗಿ ಸುಲಿಯುತ್ತಿದ್ದ ಬಡ ದಲಿತರನ್ನು ಕೋಮುವಾದಿಗಳು ಅಮಾನುಷವಾಗಿ ಥಳಿಸಿರುವುದು ಮೋದಿ ಸರ್ಕಾರದಲ್ಲಿ ಸತ್ತ ದನಗಳಿಗಿರುವ ಬೆಲೆ ಜೀವಂತ ದಲಿತರಿಗೆ ಇಲ್ಲವೆಂಬುದನ್ನು ಸಾಬೀತುಪಡಿಸುತ್ತದೆ. ಕೆಲವು ವರ್ಷಗಳ ಹಿಂದೆ ಹರಿಯಾಣ ರಾಜ್ಯದ ಅಂಬಾಲ ನಗರದಲ್ಲಿ ಇದೇ ಕಾರಣಕ್ಕೆ ನಾಲ್ವರು ದಲಿತರ ಮಾರಣಹೋಮ ನಡೆಯಲು ಕೋಮುವಾದಿಗಳ ಪ್ರೇರಣೆ ಬಹುಮುಖ್ಯ ಕಾರಣವಾಗಿತ್ತು, ಗುಜರಾತನ್ನು ಮಾದರಿ ರಾಜ್ಯವೆಂದು ಪ್ರತಿಬಿಂಬಿಸುವ ಮೋದಿ ಸಾಹೇಬರ ಮೂಗಿನಡಿ ಕ್ಷುಲ್ಲಕ ಕಾರಣಕ್ಕೆ ಅಮಾಯಕ ದಲಿತರನ್ನು ದೌರ್ಜನ್ಯಕ್ಕೆ ಗುರಿಮಾಡಿರುವುದು ಪ್ರಜಾಸತ್ತೆಯ ಕಗ್ಗೊಲೆಯಾಗಿದೆ.

ಕೆಲವು ದಿನಗಳ ಹಿಂದೆ ದೇಶದ ಗೌರವಾನ್ವಿತ ಬಹುಜನರ ನಾಯಕಿಯಾದ ಮಾಯಾವತಿ ಅವರನ್ನು ಭಾರತೀಯ ಜನತಾಪಕ್ಷದ ಪದಾಧಿಕಾರಿಯೊಬ್ಬರು 'ರಾಜಕೀಯ ವೇಶ್ಯೆ' ಎಂದು ಜರಿದಿರುವುದು ಕೋಮುವಾದಿಗಳು ಮಹಿಳೆಯರು ಮತ್ತು ದಲಿತರನ್ನು ಎಷ್ಟು ಕೀಳಾಗಿ ಕಾಣುವಂತಹ ಮನುಷ್ಯ ರೂಪದ ಮೃಗಗಳು ಎಂಬುದಕ್ಕೆ ಪುರಾವೆಯಾಗಿದೆ. ಭೂರಹಿತರಿಗೆ ಭೂಮಿ ಕೊಟ್ಟ, ಖಾಸಗಿ ವಲಯದಲ್ಲಿ ಶೋಷಿತರಿಗೆ ಉದ್ಯೋಗದಲ್ಲಿ ಮೀಸಲಾತಿ ಬೇಕೆಂದು ವಾದಿಸಿದ, ಬಡವರಿಗೆ ತಲೆ ಮೇಲೆ ಸೂರು ನೀಡಿದ ಮತ್ತು ಬಹುಜನರಿಗೆ ಸಾಮಾಜಿಕ ಸುರಕ್ಷತೆಯನ್ನು ನೀಡಿದ ಮಾಯಾವತಿಯವರ ಸಾಮಾಜಿಕ ಬದ್ಧತೆ ಮತ್ತು ಜನಪರ ಕಾಳಜಿಗಳ ಮುಂದೆ ಮೋದಿ ಮತ್ತು ಬಳಗ ಅತ್ಯಂತ ಕುಬ್ಜರಾಗಿದ್ದಾರೆ. ಮಾಯಾವತಿಯವರನ್ನು ನಿಂದಿಸಿದ ರಾಜಕಾರಣಿಯನ್ನು ಪಕ್ಷದಿಂದ ಉಚ್ಚಾಟಿಸಿರುವುದು ಒಂದು ರಾಜಕೀಯ ನಾಟಕವೇ ಆಗಿದೆ. ಕೇಂದ್ರ ಸರ್ಕಾರಕ್ಕೆ ಸಂವಿಧಾನ ಮತ್ತು ಸಾಮಾಜಿಕ ನ್ಯಾಯಗಳ ಬಗ್ಗೆ ಕಿಂಚಿತ್ತಾದರೂ ಕಾಳಜಿ ಇದ್ದ ಪಕ್ಷದಲ್ಲಿ ಆ ದುರುಳನನ್ನು ಸೆರೆಮನೆಗೆ ತಳ್ಳಬೇಕಿತ್ತು.

ಇತ್ತೀಚೆಗೆ ಅರ್ಥಶಾಸ್ತ್ರದಲ್ಲಿ ನೊಬೆಲ್ ಪ್ರಶಸ್ತಿ ಪಡೆದ ವಿದೇಶಿ ಅರ್ಥಶಾಸ್ತ್ರಜ್ಞರು ಮೋದಿ ನೇತೃತ್ವದ ಸರ್ಕಾರಕ್ಕೆ ಅಂತರರಾಷ್ಟ್ರೀಯ ಮಟ್ಟದಲ್ಲಿ ಕಿಂಚಿತ್ತೂ ಕಿಮ್ಮತ್ತು ಉಳಿದಿಲ್ಲವೆಂದು ಹೇಳಿರುವುದು ನೂರಕ್ಕೆ ನೂರರಷ್ಟು ಸತ್ಯ. ಸ್ವತಂತ್ರ ಭಾರತದ ಇತಿಹಾಸದಲ್ಲಿ ಇಷ್ಟೊಂದು ಪ್ರಮಾಣದಲ್ಲಿ ರೈತರ ಆತ್ಮಹತ್ಯೆ, ಕಾರ್ಮಿಕರ ಶೋಷಣೆ, ಮಹಿಳೆಯರ ಮೇಲೆ ದೌರ್ಜನ್ಯ, ಅಲ್ಪಸಂಖ್ಯಾತರ ಮೇಲೆ ದಬ್ಬಾಳಿಕೆ, ದಲಿತರ ಮಾರಣಹೋಮ ಮೊದಲಾದವುಗಳು ಜರುಗಿಲ್ಲ. ದೇಶದ ಬಹುಜನರು ಸಾಮಾಜಿಕ ಸುರಕ್ಷತೆಯಿಂದ ವಂಚಿತರಾಗಿದ್ದಾರೆ. ದೇಶದ ಸಂಪತ್ತನ್ನು ಸೃಷ್ಟಿ ಮಾಡುವ ಮೂಲನಿವಾಸಿಗಳಿಗೆ ಆಹಾರ ಸ್ವಾತಂತ್ರ್ಯ ಆರೋಗ್ಯ ಸ್ವಾತಂತ್ರ್ಯ ಶಿಕ್ಷಣ ಸ್ವಾತಂತ್ರ್ಯ ಉದ್ಯೋಗ ಸ್ವಾತಂತ್ರ್ಯ ಮತ್ತು ಸಾಮಾಜಿಕ ಸುರಕ್ಷತೆ ಸ್ವಾತಂತ್ರ್ಯಗಳನ್ನು ನಿರಾಕರಿಸಿರುವ ಕೋಮುವಾದಿಗಳ ಕಪಿಮುಷ್ಟಿಯಲ್ಲಿರುವ ದೇಶದ ಪ್ರಧಾನಿ ಅಧಿಕಾರದಲ್ಲಿ ಮುಂದುವರೆಯುವ ನೈತಿಕ ಹಕ್ಕನ್ನು ಕಳೆದುಕೊಂಡಿದ್ದಾರೆ.

ದೇಶವು ಇಂತಹ ಹೀನಾಯಸ್ಥಿತಿಯನ್ನು ತಲುಪಿರಲು ಬಹುಜನರ ಐಕ್ಯತೆಯ ಕೊರತೆ, ಹೋರಾಟದ ಕೊರತೆ ಮತ್ತು ಪ್ರಜ್ಞಾವಂತಿಕೆಯ ಕೊರತೆ ಬಹುಮುಖ್ಯ ಕಾರಣಗಳಾಗಿವೆ. ಅಂಬೇಡ್ಕರ್ ಹೆಸರನ್ನು ಹೇಳಿಕೊಂಡು ರಾಜಕೀಯವಾಗಿ ಮುಂದೆ ಬಂದ ರಾಮದಾಸ್ ಅಠಾವಳೆ, ರಾಮವಿಲಾಸ್ ಪಾಸ್ವಾನ್,



ಉದಿತ್‌ರಾಜ್, ರಮೇಶ ಜಿಗಜಿಣಗಿ ಮೊದಲಾದವರು ರಾಜಕೀ
ಅಧಿಕಾರಕ್ಕೋಸ್ಕರ ತಮ್ಮ ಬಹುಜನ ಬಂಧುಗಳನ್ನು ನಿರ್ಲಕ್ಷಿಸಿ ಕು
ಅಂಬೇಡ್ಕರ್ ದ್ರೋಹಿಗಳಾಗಿ ಭಾರತದ ಇತಿಹಾಸದ ಕಸದಬುಟ್ಟಿಗೆ ಸೇ
ಹೊರಟಿರುವುದು ವಿಷಾದನೀಯ ಸಂಗತಿ. ಇಂದು ದಲಿತರು, ಹಿಂದುಳಿದ
ಅಲ್ಪಸಂಖ್ಯಾತರು ಸಾಮಾಜಿಕವಾಗಿ ಮತ್ತು ರಾಜಕೀಯವಾಗಿ ಬುದ್ಧ, ಬ
ಅಂಬೇಡ್ಕರ್, ಪೆರಿಯಾರ್, ಲೋಹಿಯಾ ಮೊದಲಾದ ಮಹಾತ್ಮರ ಸಿದ್ಧಾಂ
ಅಡಿಯಲ್ಲಿ ಒಗ್ಗೂಡಿ ತಾವು ಕಳೆದುಕೊಂಡಿರುವ ರಾಜ್ಯಾಧಿಕಾರವನ್ನು ಪ
ಪಡೆಯುವುದು ಅನಿವಾರ್ಯವಾಗಿದೆ. ಬಿಹಾರದ ಪ್ರಜ್ಞಾವಂತ ಬಹುಜ
ಕೋಮುವಾದಿಗಳಿಗೆ ಕಲಿಸಿರುವಂತಹ ಐತಿಹಾಸಿಕ ಪಾಠವನ್ನು ದೇಶದ
ರಾಜ್ಯಗಳಲ್ಲಿಯೂ ಮುಂದಿನ ಚುನಾವಣೆಗಳಲ್ಲಿ ಕಲಿಸಬೇಕು. ಬಹುಜನ ಚಿಂತ
ಸಂಘಟಕರು ಮತ್ತು ಚಳವಳಿಗಾರರು ಇಂದಿಗೂ ಕೂಡ ತಮ್ಮ ಪ್ರಜ್ಞಾವ
ಮತ್ತು ಹೃದಯವಂತಿಕೆಗಳನ್ನು ಉಳಿಸಿಕೊಂಡು ಸ್ವಾಭಿಮಾನಿಗಳಾಗಿ ಬದುಕುತ್ತಿ
ಆದರೆ, ನಾಯಕರೆನಿಸಿಕೊಂಡವರು ತಮ್ಮ ಸ್ವಾರ್ಥಪರತೆ ಮತ್ತು ಅಧಿ
ಲಾಲಸೆಗಳಿಂದಾಗಿ ಸಾಮಾಜಿಕ ನ್ಯಾಯಕ್ಕೆ ದ್ರೋಹ ಬಗೆದಿದ್ದಾರೆ. ಇ
ರೋಲ್‌ಕಾಲ್ ಮತ್ತು ಲೆಟರ್‌ಹೆಡ್ ನಾಯಕರನ್ನು ಬದಿಗೊತ್ತಿ ಪ್ರಗ
ಸಿದ್ಧಾಂತ ಮತ್ತು ಸಾಮೂಹಿಕ ನಾಯಕತ್ವದಡಿ ಬಹುಜನರು ಒಂದಾಗಿ ಇಂದಿ
ದೇಶವನ್ನು ಆಳಬೇಕೆಂಬುದು ನಮ್ಮೆಲ್ಲರ ಅಭಿಲಾಷೆಯಾಗಿದೆ.

■ ಪ್ರೊ.ಬಿ.ಪಿ.ಮಹೇಶ ಚಂದ್ರ ಗು



ಯೋಗೇಶ್ ಮಾಸ್ಟರ್

ಪುರಾಣದ ಹೂರಣ

ತಂತ್ರಗಳೆಂಬ ಉಪಾಯಗಳು

ಮೊದಲ ಕಳ್ಳನು ಮೊದಲ ಬೆಪ್ಪನಂ ಸಂಧಿಸಲು
ಭವಿಸಿತೆಂಬರೀ ಮತ ಎಂಬ ಮತಿವಿಕಾರಂ
...ರೆ ಪುರೋಹಿತರ್ ಅವಳಿಮೊಲೆಯೂಡಿ ಸಲಹಿದರುದಂ.
...ದ ಮದಿರೆಯನೀಂಟಿ ಮಂಕುಬಡಿದಿದೆ ಜನಕೆ.
...ಸೆ ದೊರೆಯ ಕೊರಳಿಗಾ ಕೊನೆ ಪುರೋಹಿತನ ಕರುಳ್
...ಯಣಾವುದಾವರೆಗೆ ಸುಖವಿಲ್ಲ ಈ ಧರೆಗೆ.

ಕುವೆಂಪು ತಾತ್ವಿಕವಾಗಿ ಮತ್ತು ಸಾಮಾಜಿಕವಾಗಿ ...ಸುವ ಪ್ರತಿಮೆ ಅವರ ಜಲಗಾರ ನಾಟಕವಾಗಿದೆ. ...ದಲ್ಲಿ ಅವರು ವೈಚಾರಿಕ ತರುಣನೊಬ್ಬನಿಂದ ಹೇಳಿಸುವ ...ತಿನಲ್ಲಿ ಮೊದಲ ಕಳ್ಳನು ಮೊದಲ ಮೂರ್ಖನ ...ಧಿಸಿದಾಗ ಮತ ಎಂಬ ತಿಕ್ಕಲುತನ ಶುರುವಾಯಿತು. ...ಮೊದಲ ಕಳ್ಳನು ಯಾರೆಂದರೆ ಪುರೋಹಿತ. ಬೆಪ್ಪನಾ...ವರೆ ಪ್ರಭುತ್ವದಲ್ಲಿರುವ ದೊರೆ. ಅವರಿಬ್ಬರೂ ಕೂಡಿ ...ಮತೋನ್ಮಾದವನ್ನು ಪೋಷಿಸಿದರು. ಮತದ ಅಮಲು ...ಕ್ಕೆ ಮಂಕುಕವಿದಿರುವಂತೆ ಮಾಡಿದೆ. ಪ್ರಭುತ್ವ ಮತ್ತು ...ರೋಹಿತಶಾಹಿಗಳ ಪ್ರತಿನಿಧಿಗಳಾದ ದೊರೆ ಅಥವಾ ...ಳುವವರ ಕೊರಳಿಗೆ ಪುರೋಹಿತಶಾಹಿಯ ಪ್ರತಿನಿಧಿಗಳ ...ಳು ನೇಣಿನ ಹಗ್ಗವಾಗುವವರೆಗೂ ಈ ಲೋಕಕ್ಕೆ ...ಖವಿಲ್ಲವೆಂದು ಹೇಳಿಸುತ್ತಾರೆ. ಈ ಮಾತು ದೇಶ ಮತ್ತು ...ಮೀರಿರುವ ಸತ್ಯ. ಇದಂತೂ ಪದೇ ಪದೇ ಎಲ್ಲಾ ...ರ್ಮಗಳ ವಿಷಯಗಳಲ್ಲೂ, ಎಲ್ಲಾ ದೇಶ ಗಳಲ್ಲೂ ಮತ್ತು ...ಲ್ಲಾ ಕಾಲಗಳಲ್ಲೂ ಸಂಭವಿಸುತ್ತಲೇ ಇದೆ.

ಎಲ್ಲಾ ಧರ್ಮಗಳಲ್ಲೂ ಪುರೋಹಿತ, ಪಾದ್ರಿ, ಮೌಲ್ವಿ ...ಥವಾ ಇನ್ನಾವುದೋ ಸ್ವಾಮೀಜಿ, ಜಗದ್ಗುರು ಅಂತ ...ದ ಏಜೆಂಟರು ಪಾಪದ ಜನರನ್ನು ಶೋಷಿಸುತ್ತಲೇ ...ದ್ದಾರೆ. ಅವರಿಗೆಲ್ಲರಿಗೂ ಮತೋನ್ಮಾದದ ಅಮಲನ್ನು ...ಸಲಾಗಿದೆ. ಧರ್ಮಕ್ಕೂ ದೇವರಿಗೂ ಏನೇನೂ ...ಬಂಧವೇ ಇಲ್ಲದಿದ್ದರೂ, ಸರ್ವಶಕ್ತ, ಸರ್ವಾಂತರ್ಯಾಮಿ ...ಬ ದೇವರನ್ನು (ಅಥವಾ ಪರಿಕಲ್ಪನೆಯನ್ನು) ಧರ್ಮದ ...ಕಟ್ಟಿಗೆ ಬಂಧಿಸಿ ಕುಬ್ಜನನ್ನಾಗಿಸಿದ್ದಾರೆ. ಅತಿದೊಡ್ಡ ...ಮಾಷೆಯೆಂದರೆ, ಬ್ರಹ್ಮನ ಕೆಲಸ ಸೃಷ್ಟಿ ಮಾಡುವುದು. ...ನು ಹಿಂದೂ ಬ್ರಾಂಡ್‌ನ ಜನರನ್ನು ಮಾತ್ರ ಉತ್ಪಾದನೆ ...ಡುತ್ತಾನೆಯೇ? ಅಥವಾ ಅಲ್ಲಾಹು ಎಂಬ ಸೃಷ್ಟಿಕರ್ತನ ...ವೋತ್ಪಾದನೆಯ ಕಾರ್ಖಾನೆಯಲ್ಲಿ ಬರಿಯ ಮುಸ್ಲಿಂ ...ರನ್ನು ಮಾತ್ರ ಸೃಷ್ಟಿಸ ಬೇಕಲ್ಲವೇ? ಜಗತ್ತಿನ ದೇವನಾದ ...ನು ಕಾಫೀರರನ್ನು ಸೃಷ್ಟಿಸುವುದಾದರೂ ಏಕೆ? ...ರಾಣಿಕ ವ್ಯಾಖ್ಯಾನಗಳನ್ನು ಗೊಡ್ಡು ನಂಬಿಕೆಗಳಲ್ಲಿ ...ರವಾಗಿ ಮಂಡಿಸಿದರೆ ಇಂಥಾ ತರಲೆ ಪ್ರಶ್ನೆಗಳನ್ನೇ ...ಬೇಕಾದೀತು.

ವಿಷಯ ಅದಲ್ಲ. ಸೃಷ್ಟಿಕರ್ತ ಎಂಬುದೋ ...ವಾ ಎಂಬುವವರೋ ಯಾರೂ ಇಲ್ಲ. ...ಯೆಂಬುದು ಇದೆ. ಅದೊಂದು ನಿರಂತರ ...ಯೆ.

ಅಬ್ರಾಹ್ಮಣ ವಿದೇಶಿಯರು ಸಂಸ್ಕೃತ ಹೇಗೆ ಕಲಿತರು?

ಸವರ್ಣೀಯರಲ್ಲದವರಿಗೆ ಅಥವಾ ...ಜಾತಿಯವರಿಗೆ ಸಂಸ್ಕೃತ ಕಲಿಸಬಾರದೆಂಬ ಕುಟಿಲ ...ಮವನ್ನಿಟ್ಟುಕೊಂಡಿದ್ದ ಬ್ರಾಹ್ಮಣರು ಸಂಸ್ಕೃತವನ್ನು ...ದೇಶಿಯವರಿಗೆ ಕಲಿಸುವ ಔದಾರ್ಯ ತೋರಿದ್ದರು. ...ಮ್ರಡನೆಯೇ ಬಾಳಿ ಬದುಕ ಜನಕ್ಕೆ ಸಂಸ್ಕೃತವಿರಲಿ, ...ರದಿಂದಲೇ ವಂಚಿಸುವ ಕಾಲಘಟ್ಟದಲ್ಲಿಯೇ ಜರ್ಮನಿ, ...ಗ್ಲೆಂಡ್ ಮೊದಲಾದ ದೇಶದಿಂದ ಬಂದಿದ್ದವರಿಗೆ ಸಂಸ್ಕೃತ ...ಗಳನ್ನು ಕಲಿಸಿ, ಆ ವಿದೇಶಿಯರೇ ಇಂಗ್ಲಿಷಿಗೆ ...ವಾದಿಸುವ ಮಟ್ಟಿಗೆ ಪ್ರೌಢತ್ವ ಮತ್ತು ಪ್ರಾವೀಣ್ಯತೆಯನ್ನು ...ಯುವಂತಹ ಮಟ್ಟಿಗೆ ಸಹಕರಿಸಿದ್ದರು. ಹಾಗೆ ಸಹಕರಿಸಲು ...ರ ಔದಾರ್ಯವೇನೂ ಕಾರಣವಲ್ಲ, ಆಳ್ವಿಕೆಯಲ್ಲಿದ್ದ ...ಭುತ್ವದ ತೊಗಲಿನವರು ಅವರಾಗಿದ್ದೇ ಮುಖ್ಯ ...ರಣವಷ್ಟೇ. ಇನ್ನೂ ಒಂದು ಮುಖ್ಯವಾಗಿ ...ನಿಸಬಹುದಾದ ಅಂಶವೆಂದರೆ, ಆಗ ವಿದ್ಯಾವಂತರಾಗಿದ್ದ ...ಲ್ಲಾತಿಯವರೇ ಪರಕೀಯರ ಭಾಷಿಕ ವ್ಯವಹಾರಗಳಲ್ಲಿ ...ಯಕರಾಗಬೇಕಿತ್ತು, ಹಾಗೆ ಅವರ ಹತ್ತಿರಕ್ಕೆ ಹೋದ ...ರಿಂದ ತಿಳಿಯುವ ಸಂಸ್ಕೃತಿ, ವಿಚಾರ ಮತ್ತು ವಿಷಯಗಳು ...ರ ಮೂಗಿನ ನೇರಕ್ಕೇ ಪರಿಚಯವಾಗುತ್ತಿತ್ತು. ಪಾಶ್ಚಾತ್ಯ ...ದ್ವಾಂಸರು ಉಪನಿಷತ್ತು, ಬ್ರಹ್ಮಸೂತ್ರ ಅಥವಾ ಇತರ ...ರಾಣ ಹಾಗೂ ದರ್ಶನಗಳನ್ನು ಅಭ್ಯಾಸ ಮಾಡಿದಂತೆ ...ಷದ ಕೃತಿಗಳನ್ನು ಆಗ ಅಭ್ಯಾಸವಾಗಲಿ, ...ಧ್ಯಯನವಾಗಲಿ ಮಾಡಲಾಗಲಿಲ್ಲ. ಭಾರತವೆಂದರೆ ಹಿಂದೂ ...ರ್ಮ, ಹಿಂದೂ ಧರ್ಮವೆಂದರೆ ವೈದಿಕತೆ ಎಂಬಂತಹ ... ಅಂದು ಹುಟ್ಟಿತ್ತು, ಅದು ಈಗ ಆ ಪ್ರಮಾಣದಲ್ಲಿ ...ದಿದ್ದರೂ, ವ್ಯಾಪಕವಾಗಿಯೇ ಇನ್ನೂ ಉಳಿದಿದೆ. ...ಸಿಯರ ಪ್ರಭುತ್ವದ ಚಮಚಾಗಳಾಗಿದ್ದ ವಿದ್ಯಾವಂತ, ಪಂಡಿತ ಸವರ್ಣೀಯರು ತಮ್ಮ ಬಕೆಟ್ ಹಿಡಿಯುವ ಕಾರ್ಯದಲ್ಲಿ ಯಾವತ್ತೂ ಯಶಸ್ವಿಯಾಗಿದ್ದರು. ಆದರೂ ಅವರ ಪ್ರಭಾವವನ್ನು ಮೀರಿದ ಅನೇಕ ಪಾಶ್ಚಾತ್ಯ ವಿದ್ವಾಂಸರು ಸ್ಥಳೀಯ ಸಂಸ್ಕೃತಿ ಮತ್ತು ಉಪಸಂಸ್ಕೃತಿಗಳ ಅಧ್ಯಯನ ಮಾಡಿದರು. ಆದರೆ ಅವು ಅಧ್ಯಯನಕ್ಕೆ, ಪಾಂಡಿತ್ಯಕ್ಕೆ ಸಂಬಂಧಿಸಿದ ಕಪಾಟುಗಳಿಗೆ ಮೀಸಲಾಯಿತು. ವೈದಿಕ ಕೃತಿಗಳಲ್ಲಿ ಮಾಡಿದ ಕೆಲಸಗಳು ಸಮಾಜದ ಮೇಲೆ ಧಾರ್ಮಿಕ ಪರಿಣಾಮಗಳನ್ನು ಉಂಟುಮಾಡಿದವು. ಆದರ ಫಲವೇ ಭಾರತವೆಂದರೆ ಹಿಂದೂ ಧರ್ಮ, ಹಿಂದೂ ಧರ್ಮವೆಂದರೆ ವೈದಿಕತೆ ಎಂಬ ಭ್ರಾಮಕ ಚಿತ್ರಣವನ್ನು ಇಂದಿಗೂ ಬಹುತೇಕ ವಿದೇಶಿಯರು ಹೊಂದಿರುವುದು.

ಎಲ್ಲವನ್ನೂ ವೈದಿಕ ಮೂಲವೆನ್ನುವುದು ಏಕೆ?


ಆರ್ಥರ್ ಅವಲಾನ್ ಅಥವಾ ಸರ್ ಜಾನ್ ವುಡ್ರೂಫ್ ಎಂಬ ಪಾಶ್ಚಾತ್ಯ ಪಂಡಿತ ಮಹಾನಿರ್ವಾಣ ತಂತ್ರವೆಂಬ ಕೃತಿಯನ್ನು ಇಂಗ್ಲಿಷ್‌ಗೆ ಅನುವಾದಿಸಿದ್ದು, ಆದರ ಮುನ್ನುಡಿಯಲ್ಲಿ ಹೀಗೆ ಹೇಳುತ್ತಾನೆ:



"ಅಸಂಖ್ಯವಾಗಿರುವ ಭಾರತೀಯ ತಂತ್ರಗಳು ಕಲಿಯುಗದ ಶಾಸ್ತ್ರವಾಗಿ ರಚಿತವಾಗಿದೆ. ಅಲ್ಲದೇ ಪ್ರಾಯೋಗಿಕವಾಗಿರುವಂತಹ ಹಿಂದೂ ಸಂಪ್ರದಾಯದ ಮೌಲಿಕ ಆಕರವಾಗಿದೆ. ಈ ತಂತ್ರಶಾಸ್ತ್ರವು ಐತಿಹಾಸಿಕ ಆಕರದಿಂದ ಹೇಳುವುದಾದರೆ ವೈದಿಕ ಕರ್ಮಕಾಂಡದ ಮುಂದುವರಿದ ಭಾಗವಾಗಿದೆ. ಅದು ಆಯಾ ಕಾಲದ ಅಗತ್ಯವಾಗಿದೆ."

ಈ ಮಾತಿನ ಮುಖ್ಯ ಕಾರಣವೆಂದರೆ, ಜಾನ್ ವುಡ್ರೂಫ್‌ಗೆ ತಂತ್ರಶಾಸ್ತ್ರದ ಪರಿಚಯವಾಗಿದ್ದು ವೈದಿಕತೆಯ ಹಿನ್ನೆಲೆಯಿಂದ. ಭಾರತದ ಪ್ರಾಚೀನ ಕೃತಿಗಳೆಂದರೆ ಅವರಿಗೆ ವೇದಗಳಷ್ಟೇ!

ಆದರೆ ಸಂಸ್ಕೃತದಲ್ಲಿ ದೊರಕಿದೆ ಎಂದಮಾತ್ರಕ್ಕೆ ತಂತ್ರಶಾಸ್ತ್ರವನ್ನು ವೈದಿಕವೆಂದು ಭಾವಿಸಬಾರದು. ಸಂಸ್ಕೃತ ಬಲ್ಲ ಆಸಕ್ತರು ಅವರ ಕಾಲಕ್ಕೇ ಪುರಾತನವಾಗಿದ್ದು ಸಾಧನೆಯಲ್ಲಿ ಬಳಕೆ ಇದ್ದುದ್ದನ್ನು ತಮಗೆ ತಿಳಿದಿರುವ ಭಾಷೆಯಲ್ಲಿ ದಾಖಲು ಮಾಡಿರುತ್ತಾರೆ. ಯಾವ ಸಾಕಾರ ದಾಖಲೆಗಳು ಮೊದಲು ಲಭ್ಯವಾಗುತ್ತದೆಯೋ ಅವನ್ನೇ ಮೂಲಕೃತಿ ಎಂಬ ತೀರ್ಮಾನಕ್ಕೆ ಬರುವುದು ಎಂದಿಗೂ



ಸರಿಯಲ್ಲ. ದಾಖಲಾಗುವುದಕ್ಕೆ ಮುನ್ನ ಬಳಕೆಯಲ್ಲಿದ್ದ ವಿಷಯ ಯಾವ ಯಾವ ಆಡು ಭಾಷೆಗಳಲ್ಲಿರುತ್ತದೆಯೋ ಯಾರು ಬಲ್ಲರು? ರಾಮಾಯಣ ಮತ್ತು ಮಹಾಭಾರತಗಳೂ ಇದಕ್ಕೆ ಹೊರತಲ್ಲ. ಸಂಸ್ಕೃತ ಭಾಷೆಯಲ್ಲಿರುವ ಆ ಎರಡೂ ಕೃತಿಗಳು ಒಮ್ಮಿಂದೊಮ್ಮೆಲೇ ರಚಿತವಾಗಿರುವುದೂ ಅಲ್ಲ. ಅವುಗಳು ದಾಖಲಾಗಿರುವ ಭಾಷೆಯಾದ ಸಂಸ್ಕೃತವು ಅದರ ಆಧಾರ ಭಾಷೆ ಖಂಡಿತ ಅಲ್ಲ. ಸ್ಥಳೀಯ ಭಾಷೆಯ ಮೌಖಿಕ ಪರಂಪರೆಯಲ್ಲಿ ಹರಿಯುತ್ತಾ ಬಂದಿರುವಂತಹ ಆ ಕಥೆ ಮತ್ತು ಕಾವ್ಯಗಳು ಸಂಸ್ಕೃತದಲ್ಲಿ ದಾಖಲಾದವು.

ಮೂಡಬಿದಿರೆಯ ಭಾಸ್ಕರ್ ಬಂಗೇರಾರವರು ಚೀನೀ ನಂಬುಗೆಯಲ್ಲಿ ಪ್ರಸ್ತಾಪವಾಗಿರುವ ನರಕಗಳ ಬಗ್ಗೆ ಉಲ್ಲೇಖಿಸುತ್ತಾ ಇದೇ ಅನುಮಾನ ವ್ಯಕ್ತಪಡಿಸಿದರು. ಫಾಹಿಯಾನ್, ಹ್ಯೂಯೆನ್‌ತ್ಸಾಂಗ್‌ರಂತಹ ಚೀನೀ ಪ್ರವಾಸಿಗರು ಈ ದೇಶದ ಅಡ್ಡಗಲ ಸಂಚರಿಸುವಾಗ ತಾವು ಭಾರತದಲ್ಲಿ ಸಂಗ್ರಹಿಸಿದ ನರಕ ಅಥವಾ ಇನ್ನಾವುದೇ ಪರಿಕಲ್ಪನೆಗಳ ಮಾಹಿತಿಗಳನ್ನು ತಮ್ಮ ದೇಶಕ್ಕೊಯ್ದರು ಮತ್ತು ಅಲ್ಲಿನ ಭಾಷೆಗಳಲ್ಲಿ ಮರುದಾಖಲೆ ಮಾಡಿರುತ್ತಾರೆ. ನಮಗೆ ಸಿಕ್ಕಿರುವ ಚೀನೀ ಭಾಷೆಯಲ್ಲಿ ಪ್ರಕಟವಾಗಿರುವ ಆ ಕೃತಿಗಳನ್ನು ನೋಡಿ ಚೀನೀ ಸಂಸ್ಕೃತಿಯಲ್ಲಿಯೂ ನಮ್ಮಲ್ಲಿರುವಂತೆಯೇ ಸಪ್ತ ನರಕಗಳಿವೆ ಎಂದೋ, ಎಲ್ಲೆಡೆಯೂ ವ್ಯಾಪಕವಾಗಿರುವ ಈ ಪರಿಕಲ್ಪನೆ ಸತ್ಯವೆಂದೋ ಅಥವಾ ಸಾರ್ವತ್ರಿಕವೆಂದೋ ತೀರ್ಮಾನಕ್ಕೆ ಬರುವುದು ಮೂರ್ಖತನವಾಗುತ್ತದೆ. ವಿಶ್ವದ ವಿವಿಧ ಮೂಲೆಗಳಿಂದ ಪಡೆಯುವ ವಿಷಯಗಳನ್ನು ಆಕರಗಳನ್ನು ಸ್ಮರಿಸದೇ ತಮ್ಮ ಸ್ಥಳೀಯ ಭಾಷೆಗಳಲ್ಲಿ ಮರುದಾಖಲೆ...ಯನ್ನು ಮಾಡಿದಾಗ ಇಂತಹ ಎಡವಟ್ಟುಗಳು ಉಂಟಾಗುತ್ತವೆ.

ಭಾರತದ ಅಧ್ಯಾತ್ಮ ಮಾರ್ಗವೆಂದರೆ ಯಾವುದು?


ಹೀಗಾಗಿಯೇ ಭಾರತದ ಅಧ್ಯಾತ್ಮವೆಂದರೆ ಹಿಂದೂ ಸಂಪ್ರದಾಯದ ದಾರಿ ಎಂಬ ನಂಬಿಕೆ ಪಾಶ್ಚಾತ್ಯರಲ್ಲಿ ವ್ಯಾಪಕವಾಗಿರುವುದು. ಅಧ್ಯಾತ್ಮವು ಯಾವ ಧಾರ್ಮಿಕತೆಯನ್ನೂ ಹೊಂದಿರುವುದೇ ಇಲ್ಲ. ಅದು ಬಹಳ ಪ್ರಾಕೃತಿಕವಾದುದು. ಅಂತಹ ಪ್ರಾಕೃತಿಕ ಶಕ್ತಿ ಮತ್ತು ಹರವನ್ನು ತಮ್ಮದಾಗಿಸಿಕೊಳ್ಳುವುದಕ್ಕೆ ಅಥವಾ ಒಲವಿನಿಂದ ಒಲಿಸಿಕೊಳ್ಳುವುದಕ್ಕೆ ಇನ್ನೂ ಹೇಳುವುದಾದರೆ ಆರಾಧನಾಭಾವದಿಂದ ಶರಣಾಗಿ ಅದರೊಟ್ಟಿಗೇ ಒಂದಾಗಿ ಬಿಡುವುದಕ್ಕೆ ಹೀಗೆ ನಾನಾರೀತಿಯಲ್ಲಿ ಪ್ರಕೃತಿಯೊಂದಿಗೆ ಪ್ರಕೃತಿಯಾಗಿ ಹೋಗುವುದಕ್ಕೆ ನಾನಾತಂತ್ರಗಳನ್ನು ಕಂಡುಕೊಳ್ಳಲು ಯತ್ನಿಸುತ್ತಿದ್ದರು. ಋಗ್ವೇದ, ಯಜುರ್ವೇದ, ಸಾಮವೇದ, ಅಥರ್ವಣವೇದಗಳು ದಾಖಲಾಗುವ ಮುನ್ನವೇ ಬುಡಕಟ್ಟಿನವರೂ, ಪ್ರಾಣಿ ಲಾಂಛನದ ಅರಣ್ಯಕರೂ ನಾನಾರೀತಿಗಳಲ್ಲಿ, ತಮಗೆ ಕಂಡಂತಹ ದಾರಿಗಳಲ್ಲಿ ನಡೆಯುತ್ತಾ ಪ್ರಕೃತಿಯೊಂದಿಗೆ ಒಂದಾಗುವ, ಅದನ್ನು ಒಲಿಸುವ, ಅದನ್ನು ಆರಾಧಿಸುವ ಪ್ರಕ್ರಿಯೆಯಲ್ಲಿದ್ದರು. ತಂತ್ರಗಳು ವೈದಿಕರ ಕೊಡುಗೆಯಲ್ಲ. ವೈದಿಕರು ತಂತ್ರಗಳನ್ನು ಬಳಸಿಕೊಂಡರು. ಆದರೆ ಪಾಶ್ಚಾತ್ಯ ವಿದ್ವಾಂಸರು ತಂತ್ರಗಳ ಆಕರವೆಂದು ವೈದಿಕರ ಗ್ರಂಥಗಳನ್ನೇ ಉಲ್ಲೇಖಿಸುತ್ತಾರೆ. ಭಾರತದ ಅಧ್ಯಾತ್ಮವೆಂದರೆ ಹಿಂದೂ ಧರ್ಮದಲ್ಲಿದೆ, ಓಂಕಾರದಲ್ಲಿದೆ ಅಥವಾ ರಾಮ ಕೃಷ್ಣ ಶಿವ ಎಂಬ ಪ್ರತಿಮಾರೂಪಗಳಲ್ಲಿವೆ ಎಂದು ಭಾವಿಸುತ್ತಾರೆ.

ಅಧ್ಯಾತ್ಮ ಎಂದರೇನು? ಈ ಪ್ರಶ್ನೆಯನ್ನು ಶ್ರೀ-ಶ್ರೀ ರವಿಶಂಕರ್ ಗುರೂಜಿಯನ್ನೋ ಅಥವಾ ಬಿಡದಿಯ ನಿತ್ಯಾನಂದರನ್ನೋ ಕೇಳಿದರೆ ಬಹುಶಃ ದೊಡ್ಡ ಪ್ರವಚನದೊಂದಿಗೆ ಸುದರ್ಶನ ಕ್ರಿಯೆ, ಕುಂಡಲಿನಿ ಜಾಗೃತಿ ಇತ್ಯಾದಿಗಳ ಕ್ರಿಯೆಗಳನ್ನೂ ಮುಂದಿಟ್ಟುಕೊಳ್ಳಲೂಬಹುದು.

ಆದರೆ ಇದೇ ಪ್ರಶ್ನೆಯನ್ನು ಮೂಡಬಿದ್ರೆಯ ಹಿರಿಯ ಚಿಂತಕರೂ, ಆಧ್ಯಾತ್ಮ ಸಾಧಕರೂ, ಸಾಮಾಜಿಕ ಕಳಕಳಿಯೊಂದಿಗೆ ತಮ್ಮದಲ್ಲದ ಮಕ್ಕಳನ್ನು ತಮ್ಮದಾಗಿಸಿಕೊಂಡು ಪೋಷಿಸುತ್ತಾ ಹೋಮಿಯೋಪತಿ ಚಿಕಿತ್ಸೆಯನ್ನೂ ನೀಡುತ್ತಿರುವ ನನ್ನ ಪ್ರೀತಿಯ ಭಾಸ್ಕರ್ ಬಂಗೇರಾರವರಿಗೆ ಕೇಳಿದರೆ ಬಹಳ ಸರಳವಾಗಿ ಒಂದೇ ಸಾಲಿನಲ್ಲಿ ಉತ್ತರಿಸಿಬಿಡುತ್ತಾರೆ. "ಪ್ರಕೃತಿಯಿಂದ ನಾಗರಿಕತೆಯನ್ನು ಕಳೆದಾಗ ಉಳಿಯುವುದೇ ಆಧ್ಯಾತ್ಮ" ಎಂದು. ನಾಗರಿಕತೆ ಎಂಬುದು ಮನುಷ್ಯನ ಶಿಷ್ಟಾಚಾರದ ವ್ಯಾವಹಾರಿಕ ಪರಿಕಲ್ಪನೆ. ವಿಧಿಸಿರುವಂತಹ ಶಿಷ್ಟಾಚಾರದ ಕ್ರಮಗಳಲ್ಲಿ ವ್ಯವಹರಿಸಿದರೆ ಮಾತ್ರವೇ ಅವನಿಗೆ ಸಮಾಜದಲ್ಲಿ ಸ್ಥಾನ ಮತ್ತು ಮಾನ. ಆದರೆ ಅದೆಷ್ಟು ನಮ್ಮನ್ನು ಪ್ರಕೃತಿಯಿಂದ ದೂರಕ್ಕೆ ಒಯ್ಯುತ್ತದೆ ಎಂಬುದನ್ನು ನಾವು ಗಮನಿಸುವುದೇ ಇಲ್ಲ.

ಮನುಷ್ಯನ ಆಂತರಿಕ ಶಕ್ತಿ ಮತ್ತು ಪ್ರಕೃತಿಯ ಅಸ್ತಿತ್ವದ ಶಕ್ತಿ ಈ ಎರಡರ ಸಾಮರಸ್ಯ ಅಥವಾ ಐಕ್ಯತೆಯ ಉಪಾಯಗಳನ್ನು ತಂತ್ರಗಳು ನೀಡುವ ಪ್ರಯತ್ನ ಮಾಡುತ್ತವೆ.

ಮಹಾನಿರ್ವಾಣ ತಂತ್ರ, ಕೌಲ ತಂತ್ರ, ವಾಮಕೇಶ್ವರ ತಂತ್ರ, ಜ್ಞಾನಾರ್ಣವ ತಂತ್ರ, ದಕ್ಷಿಣಾಮೂರ್ತಿ ಸಂಹಿತಾ, ಕಲ್ಪಸೂತ್ರ, ತಂತ್ರರಾಜ ತಂತ್ರ, ಭಾವನೋಪನಿಷದ್, ಮಾತೃಕಾಚಕ್ರವಿವೇಕ, ಕುಲಚೂಡಾಮಣಿ ತಂತ್ರ ಹೀಗೆ ಅನೇಕಾನೇಕ ಕೃತಿಗಳು ಪ್ರಕೃತಿ ಮತ್ತು ಪುರುಷದ ಶಕ್ತಿಯ ಗ್ರಹಿಸುವಿಕೆಯನ್ನು ರೂಪಕಗಳಲ್ಲಿ, ಸಾಧನಾಕ್ರಮಗಳಲ್ಲಿ ವಿವರಿಸಲು ಯತ್ನಿಸುತ್ತವೆ. ಇವುಗಳಲ್ಲಿ ಪೌರಾಣಿಕ



ಅಂಶಗಳೂ ನುಸುಳಿರುವುದು ಕೂಡ ಉಂಟು. ಎಲ್ಲಾ ರೂಪಕಗಳನ್ನೂ ಸೂಕ್ಷ್ಮ ಸ್ತರಕ್ಕೆ ಹೋಗಿ ಪರಿಶೀಲಿಸುವ ಅಥವಾ ಅರ್ಥ ಮಾಡಿಕೊಳ್ಳುವ ವ್ಯವಧಾನ ಮಾತ್ರ ಅತ್ಯಗತ್ಯ.

ಇದರಲ್ಲಿಯೂ ಕೂಡ ಪುರುಷ ಪ್ರಾಧಾನ್ಯತೆ ನುಸುಳಿ ಕೆಲವು ಶಾಸ್ತ್ರಗಳಲ್ಲಿ ಗಂಟೆ ಆಡಿಸಿದ್ದುಂಟು. ಆದರೆ ಅಂತಿಮ ...ಗಿ ಪ್ರಕೃತಿಯನ್ನು ಸ್ತ್ರೀರೂಪದಿಂದ ಹೊರಕ್ಕೆಳೆಯಲು ಸಾಧ್ಯವಾಗಲಿಲ್ಲ. ಅದಕ್ಕೆ ಪುರುಷ ರೂಪ ಕೊಡಲು ಪುರುಷ ಪ್ರಾಧಾನ್ಯತೆಯ ಪ್ರತಿನಿಧಿಗಳು ವಿಫಲರಾದರು.

ಸ್ತ್ರೀತತ್ವವೇ ಅಂತಿಮವಾಗಿ ಮೆರೆಯಿತು. ಭೂಮಿ, ಸೃಷ್ಟಿ, ಪ್ರಕೃತಿ, ಶಕ್ತಿ ಇವುಗಳೆಲ್ಲವೂ ತಂತ್ರಗಳಲ್ಲಿ ವಿವಿಧ ರೂಪಗಳಲ್ಲಿ ಸ್ತ್ರೀ ಪ್ರತಿಮೆಗಳಾಗಿಯೇ ರೂಪಿತವಾಗುತ್ತವೆ.

ತಾತ್ವಿಕ ಅಂಶಗಳನ್ನೆಲ್ಲಾ ಶಿವನೆಂಬ ಪುರುಷ ದೇವಿ ಎಂಬ ಸ್ತ್ರೀಗೆ ಅಧಿಕಾರವಾಣಿಯಲ್ಲಿ ಬೋಧಿಸುವ ಅಥವಾ ಪ್ರವಚನ ಮಾಡುವ ನಿರೂಪಣೆಗಳನ್ನು ಕುಲಚೂಡಾಮಣಿ ತಂತ್ರ ಎಂಬ ಕೃತಿಯ ಕಾಲಕ್ಕೆ ಬದಲಿಸಲಾಗುತ್ತದೆ.

ಕುಲ ಚೂಡಾಮಣಿ ತಂತ್ರ

ಕುಲ ಚೂಡಾಮಣಿ ತಂತ್ರವನ್ನು ನಿಗಮ ಎಂದು ಕರೆಯಲಾಗುತ್ತದೆ. ಸಾಮಾನ್ಯವಾಗಿ ಎಷ್ಟೆಷ್ಟೋ ಸಿದ್ಧಾಂತ ಪ್ರತಿಪಾದನೆಯ ಗ್ರಂಥಗಳಲ್ಲಿ ಪಾರ್ವತಿಯು ಶಿವನನ್ನು ಪ್ರಶ್ನಿಸುತ್ತಾಳೆ. ನಾಥಾ, ದೇವಾ, ಹಾಗೆಂದರೇನು? ಹೀಗೇಕೆ? ಇನ್ನಾವುದರ ಮೂಲವೇನು? ಈ ಮಾರ್ಗವು ಸೇರುವುದೆಲ್ಲಿಗೆ? ಎಂದು. ಅದೆಲ್ಲವೂ ಪುರುಷನು ತನ್ನ ದೃಷ್ಟಿಕೋನದಿಂದ ವಿಷಯವನ್ನು ವಿವರಿಸುತ್ತಾ ಹೋಗುವುದು. ಇದನ್ನು ಆಗಮ ಎನ್ನುತ್ತಾರೆ. ಆದರೆ ಕುಲ ಚೂಡಾಮಣಿ ತಂತ್ರವು ಇದಕ್ಕಿಂತ ಭಿನ್ನವಾಗಿದೆ. ಇದರಲ್ಲಿ ಶಿವನು ಪ್ರಶ್ನಿಸುತ್ತಾನೆ. ತನ್ನ ಅನುಮಾನಗಳನ್ನು ಹೊರಹಾಕುತ್ತಾನೆ. ದೇವಿಯು ಉತ್ತರಿಸುತ್ತಾಳೆ. ಹಾಗಾಗಿ ಇದು ಹೆಚ್ಚು ಪ್ರಾಕೃತಿಕವಾಗಿದೆ ಎಂದು ಭಾವಿಸುತ್ತೇನೆ. ಈ ತಂತ್ರದ ಅಧಿದೇವತೆಯು ಮಹಿಷಮರ್ದಿನಿ.

ಇದರಲ್ಲಿ ಏಳು ಅಧ್ಯಾಯಗಳಿದ್ದು, ದೇವಿಯು ತನ್ನನ್ನು ಆರಾಧಿಸುವುದರ ಔಚಿತ್ಯವೇನು ಎಂದು ವಿವರಿಸುತ್ತಾಳೆ. ದೇವಿ ಎನ್ನುವುದು ಪ್ರಕೃತಿಯ ಪ್ರತಿಮೆಯಾಗಿದ್ದು, ಆರಾಧನೆ ಎಂದರೆ ಪ್ರಕೃತಿಗೆ ಸಂಪೂರ್ಣ ಶರಣಾಗುವುದರ ಮಟ್ಟಿಗೆ ಪ್ರೀತಿಸುವುದು. ಮನುಷ್ಯನ ಬಹುದೊಡ್ಡ ಆಶೆಬುರುಕತನದ ವ್ಯಸನವೆಂದರೆ ತನಗೆ ಬೇಕಾದಂತೆ ಪ್ರಕೃತಿಯನ್ನು ಬಳಸಿಕೊಳ್ಳಲು, ಅಧಿಪತ್ಯ ಸಾಧಿಸಲು ಬಯಸುವುದು. ಅದರ ಕೊಡುಗೆ ಮತ್ತು ಅನುಗ್ರಹಗಳನ್ನು ಸ್ವೀಕರಿಸುವ ಬದಲು ಕಸಿದುಕೊಳ್ಳುವುದು. ಆದರೆ ದೊಡ್ಡ ತಮಾಷೆ ಎಂದರೆ, ಅದು ಉಚಿತವಾಗಿ, ಮುಕ್ತವಾಗಿ ಎಲ್ಲವನ್ನೂ ನಮಗೆ ಧಾರಾಳವಾಗಿ ತನ್ನ ಅಂತರ್ಗತಶಕ್ತಿ ಸಮೇತವಾಗಿ ನೀಡುತ್ತಿರುತ್ತದೆ. ಆದರೆ ಮನುಷ್ಯ ಧಾರಾಳವಾಗಿ ಕೊಡುವವರಿಂದಲೇ ಕದಿಯುವ ಮತ್ತು ಕಸಿಯುವ ಹುಚ್ಚುತನದಿಂದಾಗಿ ತಾನು ವಿಚಿತ್ರವಾದ ಸಂಕಷ್ಟಕ್ಕೆ ಗುರಿಯಾಗುತ್ತಾನೆ. ಮನುಷ್ಯನ ತಿಕ್ಕಲುತನದ ಪರಮಾವಧಿ ಎಂದರೇನೇ ಇದು, ತಾನು ಸಮೃದ್ಧವಾಗಿ, ಮುಕ್ತವಾಗಿ ಪಡೆಯಬೇಕಾದ ತೆರೆದಿಟ್ಟಿರುವ ಉಚಿತ ಸಂಪತ್ತನ್ನು ಹೊಂಚು ಹಾಕಿ ಕದಿಯಲು ಹೋಗುತ್ತಾನೆ. ಮಗುವಿಗೆಂದು ಬಟ್ಟಲಲ್ಲಿರಿಸಿರುವ ಹಾಲನ್ನು ಮಗುವೇ ಹೊಂಚುಹಾಕಿ ಕದ್ದು ಕುಡಿಯುವಂತೆ. ಅಥವಾ ಇನ್ನೂ ಗಟ್ಟಿಯಾಗಿ ಹೇಳಬೇಕೆಂದರೆ ಹಸಿದಾಗೆಲ್ಲಾ ಹಾಲೂಡುವ ಮೊಲೆಯನ್ನು ಹರಿದು ತಿನ್ನಲು ಹೋಗಿ ಕೊನೆಗೆ ಪ್ರಕೃತಿಗೆ (ವಿನಾಶಕ್ಕೆ) ಬಲಿಯಾಗುತ್ತಾನೆ. ಪ್ರಕೃತಿಗೆ ಶರಣಾದವರು ಬಲಿಯಾಗುವುದಿಲ್ಲ. ಇದು ಅವನಿಗೆ ತಿಳಿಯುವುದೇ ಇಲ್ಲ. ಸೃಷ್ಟಿ ಎಂಬುದು ಹೇಗೆ ಪ್ರಕೃತಿಯೋ, ಸ್ಥಿತಿ ಮತ್ತು ವಿನಾಶವೂ ಕೂಡ ಪ್ರಕೃತಿಯೇ.

ಇರಲಿ, ಕುಲ ಚೂಡಾಮಣಿಯು ಶಕ್ತಿಗಳೊಡನೆ ನಡೆಸುವ ಸಂಭೋಗದ ತಾಂತ್ರಿಕ ರಹಸ್ಯಗಳನ್ನು ಸುಂದರ ಭಾಷೆಗಳಲ್ಲಿ ವಿವರಿಸುತ್ತದೆ. ಸಿದ್ಧಿ ಎಂಬ ಪರಿಕಲ್ಪನೆ ಅಥವಾ ಅನುಗ್ರಹದ ಬಗ್ಗೆಯೂ ಸವಿಸ್ತಾರವಾದ ಒಳದೃಷ್ಟಿಗಳನ್ನು ನೀಡುತ್ತದೆ. ಬರಿಯ ಪೂಜೆ ಪುನಸ್ಕಾರ ಮಾಟಮಂತ್ರ ತಂತ್ರಗಳಂತಹ ವಿಷಯಗಳನ್ನು ಮನಸ್ಸಿನಲ್ಲಿಟ್ಟುಕೊಂಡು ಯಾವುದೇ ತಂತ್ರಶಾಸ್ತ್ರಗಳ ಗ್ರಂಥಗಳನ್ನು ಅವಲೋಕಿಸಿದರೆ ಅವನೊಬ್ಬ ಮಾಟ ಮಂತ್ರಾದಿಗಳನ್ನು ಕಂದಾಚಾರದ ರೀತಿಯಲ್ಲಿ ನಂಬುವ ಮೂರ್ಖನಾಗುತ್ತಾನೆ. ವಾಸ್ತವವಾಗಿ ಅವನಿಗೆ ಪ್ರಕೃತಿಯ ಪ್ರೇಮದ ಪರಿಚಯವಿರಬೇಕು. ಅಸ್ತಿತ್ವದ ಹರವಿನ ಬಗ್ಗೆ ಪ್ರಾರಂಭಿಕ ಪಾಠಗಳಾಗಿರಬೇಕು. ತರಂಗಗಳನ್ನು ಉಂಟುಮಾಡುವ ಮತ್ತು ಅವುಗಳೊಂದಿಗೆ ಚಲಿಸುವ ಕಣಗಳ ಬಗ್ಗೆ ಭೌತವಿಜ್ಞಾನದ ಕನಿಷ್ಠಪಕ್ಷದ ಬಾಲಪಾಠವಾಗಿರಬೇಕು. ತನ್ನ ಉನ್ಮತ್ತತೆ ಅಥವಾ ಮಾನಸಿಕ ಸ್ಥಿತಿಗತಿಗಳ ಬಗ್ಗೆ ಪರಾಮರ್ಶೆ ಮಾಡಿಕೊಳ್ಳುವಷ್ಟು ಆತ್ಮಜ್ಞಾನವಿರಬೇಕು. ಅಷ್ಟಾದರೂ ಇದ್ದರೆ ತಂತ್ರ ಶಾಸ್ತ್ರಗಳನ್ನು ಒಂದು ಹಂತಕ್ಕೆ ಅರ್ಥೈಸಿಕೊಳ್ಳಲು ಸಾಧ್ಯ ಮತ್ತು ಅವುಗಳನ್ನು ಅಭ್ಯಾಸ ಮಾಡಲೂ ಸಾಧ್ಯ.

ಅದೇನೇ ಇರಲಿ. ರೂಪಕಗಳಲ್ಲಿರುವ ಸಾಲುಗಳನ್ನು ನೇರವಾಗಿ ಅರ್ಥೈಸಿಕೊಳ್ಳುವಂತಹ ಪ್ರಯತ್ನ ಮಾಡದೇ ಅವುಗಳು ಧ್ವನಿಸುವ ವಿಷಯಗಳನ್ನು ಗ್ರಹಿಸಲು ಯತ್ನಿಸಬೇಕು.

ಪುರುಷ ಪ್ರತಿನಿಧಿಯಾಗಿ ಶಿವ ಏನು ಕೇಳಿದ, ತಾನೇ ಪ್ರಕೃತಿಯಾಗಿ, ಶಕ್ತಿಯ ಪ್ರತಿನಿಧಿಯಾಗಿ ದೇವಿ ಏನು ಹೇಳಿದಳು ಎಂದು ಮುಂದೆ ನೋಡೋಣ. ■

ಶಿವ ವ್ಯಾಘ್ರ ಚರ್ಮಾಂಭರಧಾರಿ, ಗಣಪತಿ ಗಜ ಚರ್ಮಾಂಭರಧಾ



ಗುಜರಾತಿನಲ್ಲಿ ಮೃತ ಆಕಳ ಚರ್ಮ ಸುಲಿಯುವುದು ಎಂದಿನಿಂದ ನಿಷಿದ್ಧವಾಯಿತೋ ಆ ಭೂಸುರರಿಗೇ ಗೊತ್ತು. ಹಿಂದೂ ಧರ್ಮದ ರಕ್ಷಕ ಎಂದು ಕರೆಸಿಕೊಳ್ಳುವವರೆಲ್ಲಾ ಹಿಂದೂ ಪುರಾಣ ಗ್ರಂಥಗಳನ್ನು ಓದಿಯೇ ಇಲ್ಲ ಎಂಬುದು ಮಾತ್ರ ಗ್ಯಾರಂಟಿ. ಹಿಂದೂ ವೇದಗಳಲ್ಲಿಯೇ ಚರ್ಮಕಾರ ಎಂಬ ವೃತಿಯ ಉಲ್ಲೇಖವಿದೆ. ಆಗಿನ ಕಾಲದಲ್ಲೂ ಜನರು ಕೇವಲ ಮರದ ಪಾದುಕೆ ಮಾತ್ರವಲ್ಲ ಚರ್ಮದ ಪಾದರಕ್ಷೆ ಸಹ ಧರಿಸುತ್ತಿದ್ದರು ಹಾಗೂ ಈ ಪಾದರಕ್ಷೆ ತಯಾರಿಸುವ ವೃತ್ತಿಯಲ್ಲಿದ್ದವರಿಗೆ ಪಾದುಕಾಚಾರಿ ಎಂದು ಕರೆಯುತ್ತಿದ್ದರು ಎಂದು ಹಿಂದೂ ಗ್ರಂಥಗಳಲ್ಲಿಯೇ ಉಲ್ಲೇಖ ಇದೆ. ಶಿವನು ವ್ಯಾಘ್ರ ಚರ್ಮಾಂಭರಧಾರಿಯಾದರೆ ಗಣಪತಿಯು ಗಜ ಚರ್ಮಾಂಭರಧಾರಿ, ಅಂದರೆ ಈ ದೇವರುಗಳು ಹುಲಿಯ ಹಾಗೂ ಆನೆಯ ಚರ್ಮ ಧರಿಸುತ್ತಿದ್ದರು. ಪಾರ್ವತಿಯೂ ಚರ್ಮಾಂಭರಧಾರಿ. ಎಲ್ಲಾ ಋಷಿ ಮುನಿಗಳು ಗೋವಿನ ಚರ್ಮವನ್ನೇ ಚಾಪೆಯಂತೆ ಸುತ್ತಿಕೊಂಡು ಹೋದಲ್ಲೆಲ್ಲಾ ಒಯ್ಯುತ್ತಿದ್ದರು. ಗೋವಿನ ಚರ್ಮದ ಮೇಲೆ ಕುಳಿತು ತಪಸ್ಸು ಮಾಡಿದರೇನೇ ಅವರಿಗೆ ಅದು ಫಲಿಸುತ್ತಿತ್ತಂತೆ. ನಾರದರ ತಂಬೂರಿ ಮತ್ತು ಸರಸ್ವತಿಯ ವೀಣೆಯ ತಂತಿಗಳೆಲ್ಲಾ ಗೋವಿನ ನರ ಮತ್ತು ಕರುಳಿನಿಂದ ಮಾಡಿದವುಗಳಾಗಿದ್ದವು. ಋಷಿಮುನಿಗಳೆಲ್ಲಾ ತಮ್ಮ ಆಶ್ರಮವನ್ನು ಆರಣ್ಯದಲ್ಲಿ ಕಟ್ಟುತ್ತಿದ್ದುದರಿಂದ ಅವರ ಆಶ್ರಮದ ಕಾಟೇಜ್‌ಗಳ ಛಾವಣಿಗೆ ಚರ್ಮದ ಹೊದಿಕೆಯನ್ನೇ ಹಾಕುತ್ತಿದ್ದರು.


ಚಳಿಗಾಲದಲ್ಲಿ ಈಗಿನ ಸ್ವೆಟರ್‌ಗಳಂತೆ ಪುರಾಣ ಕಾಲದಲ್ಲಿ ಜನರು ತಮ್ಮನ್ನು ಚಳಿಯಿಂದ ರಕ್ಷಿಸಿಕೊಳ್ಳಲು ತುಪ್ಪಳವುಳ್ಳ ಪ್ರಾಣಿಗಳ ಚರ್ಮವನ್ನೇ ಹೊದ್ದುಕೊಳ್ಳುತ್ತಿದ್ದರು. ಅದೇ ಚರ್ಮದ ಟೊಪ್ಪಿಗಳನ್ನು ಧರಿಸುತ್ತಿದ್ದರು. ಯೋಧರು ಬಾಣಗಳನ್ನು ಇಡಲು ಬತ್ತಳಿಕೆ ಹಾಗೂ ಖಡ್ಗಗಳನ್ನು ಇಡಲು ಒರೆಯನ್ನು ಚರ್ಮದಿಂದಲೇ ಮಾಡಿಸಿಕೊಳ್ಳುತ್ತಿದ್ದರು. ಯೋಧರ ಎದೆಯ ಮತ್ತು ತೋಳಿನ ರಕ್ಷಾಕವಚಗಳೂ ಚರ್ಮದ್ದಾಗಿರುತ್ತಿದ್ದವು. ರಾಜರು ಮತ್ತು ಯೋಧರು ಕುಳಿತುಕೊಳ್ಳುತ್ತಿದ್ದ ಕುದುರೆಯ ಸೀಟು ಲಗಾಮು ಎಲ್ಲಾ ಈಗಿನಂತೆಯೇ ಚರ್ಮದ್ದಾಗಿರುತ್ತಿದ್ದವು. ಆಗಿನ ಮಹಿಳೆಯರು ಮತ್ತು ಗಂಡಸರು ಮೈ ಮುಚ್ಚಿಕೊಳ್ಳಲು ಜಿಂಕೆ, ಮೊಲ, ನೀಲಗಾಯ್, ಸಿಂಹ, ಹುಲಿ, ಕರಡಿ ಇವುಗಳ ಸಂಸ್ಕರಿಸಿದ ತೊಗಲು ಧರಿಸುತ್ತಿದ್ದರು. ರಾಮನು ಗುಹಾನ ಹರಿಗೋಲಿನಲ್ಲಿ ನದಿ ದಾಟುತ್ತಾನೆ. ಇಂತಹ ಹರಿಗೋಲನ್ನು (ಸಣ್ಣ ದೋಣಿ) ರಾಮನ ಕಾಲದಲ್ಲೂ ಚರ್ಮದಿಂದಲೇ ತಯಾರಿಸುತ್ತಿದ್ದರು. ಸೀತೆ ಹೊಳೆಯಿಂದ ನೀರು ತರಲು ಜಿಂಕೆಯ ಚರ್ಮದಿಂದ ಮಾಡಿದ ಹೂಜಿಯನ್ನು ಬಳಸುತ್ತಿದ್ದಳು. (ಅರೇಬಿಯಾ ಮತ್ತು ಅಫಘಾನಿಸ್ತಾನದ ಮರುಳುಗಾಡಿನಲ್ಲಿ ಪ್ರಯಾಣಿಸುವಾಗ ಅಲ್ಲಿಯ ಮೂಲನಿವಾಸಿ ಗಳು ಈಗಲೂ ಆಡಿನ ಚರ್ಮದಿಂದ ಮಾಡಿದ ಉದ್ದನೆಯ ಚೀಲದಲ್ಲಿಯೇ ನೀರು ಒಯ್ಯುತ್ತಾರೆ, ಐತಿಹಾಸಿಕ ಹಾಲಿವುಡ್ ಚಲಚಿತ್ರಗಳಲ್ಲಿ ಈಗಲೂ ಅದನ್ನು ತೋರಿಸುತ್ತಾರೆ). ಹೀಗೆ ವೇದಕಾಲದಲ್ಲಿ ನೂಲಿನ ಬಟ್ಟೆಗಿಂತ ಪ್ರಾಣಿಗಳ ಚರ್ಮದ ಬಳಕೆಯೇ ಹೆಚ್ಚಿತ್ತು.

ಇಷ್ಟೊಂದು ವಿವಿಧ ರೀತಿಯಲ್ಲಿ ಬಳಕೆಯಾಗುವ ಚರ್ಮವನ್ನು ಆಗಿನ ಸಮಾಜದಲ್ಲಿ ಒದಗಿಸುತ್ತಿದ್ದವರು ಯಾರು ಗೊತ್ತೇ? ಅವರೇ ಈಗಿನ ಸಮಗಾರ ಅಥವಾ ಚರ್ಮಗಾರ ಜಾತಿಯವರು (ಚರ್ಮಕಾರ ಎಂಬ ಶಬ್ಧವೇ ಅಪಭ್ರಂಶ ಗೊಂಡು ಸಮಗಾರ ಅಥವಾ ಚಮಾರ್ ಆಯಿತು). ಸಮಾಜಕ್ಕೆ ಇಷ್ಟೊಂದು ಉಪಯುಕ್ತವಾದ ವೃತ್ತಿಯನ್ನು ಮಾಡುತ್ತಿದ್ದವರನ್ನು ಅಸ್ಪೃಶ್ಯರು ಎಂದು ಆಗಿನ ಸಮಾಜ ಬಹುಶಃ ನೋಡುತ್ತಿರಲಿಲ್ಲ. ಮೇಲಾಗಿ ಈ ಚರ್ಮಕಾರ ಕೆಲಸ ಅಷ್ಟು ಸುಲಭದ ಕೆಲಸವಲ್ಲ. ಮೊದಲು ಸತ್ತ ಪ್ರಾಣಿಯ ದೇಹದಿಂದ ಚರ್ಮ ಹಾಳಾಗದಂತೆ ಜೋಕೆಯಿಂದ ಸುಲಿಯಬೇಕು. ನಂತರ ಅದನ್ನು ಸಂಪೂರ್ಣವಾಗಿ ಉಪ್ಪು ಹಾಗೂ ರಸಾಯನಿಕಗಳನ್ನು ಬಳಸಿ ಮಾಂಸದ ತುಣುಕು ಮತ್ತು ಕೊಬ್ಬು ಚರ್ಮದ ಹಾಳೆಯಲ್ಲಿ ಉಳಿದಿದ್ದರೆ ಅದನ್ನು ಹೆರೆದು ತೆಗೆಯಬೇಕು. ಇಲ್ಲದಿದ್ದರೆ ಆ ಚರ್ಮ ಕೊಳೆತು ವಿಪರೀತ ವಾಸನೆ ಬರುತ್ತದೆ ಹಾಗೂ ಅದರ ಕ್ವಾಲಿಟಿ ಕಡಿಮೆಯಾಗುತ್ತದೆ. ನಂತರ ಅದನ್ನು ಕುಟ್ಟಿ ಹದ ಮಾಡಬೇಕು. ಈಗ ಇವನ್ನೆಲ್ಲಾ ಟ್ಯಾನರಿಯಲ್ಲಿ ಯಂತ್ರದಿಂದ ಮಾಡುತ್ತಾರೆ, ಆದರೆ ಹಿಂದಿನ ಕಾಲದಲ್ಲಿ ಅದನ್ನೆಲ್ಲಾ ಚರ್ಮಕಾರರು ಕೈಯಿಂದಲೇ ಮಾಡುತ್ತಿದ್ದರು. ಇಂತಹ ಅನಾರೋಗ್ಯಕರ ವಾತಾವರಣದಲ್ಲಿ ಕೆಲಸ ಮಾಡುವಾಗ ಅವರಿಗೆ ರೋಗ ತಗಲುವ ಸಾಧ್ಯತೆಯೂ ಇತ್ತು.

ನಾನು ನಮ್ಮ ಬ್ಯಾಂಕಿನಲ್ಲಿ ಅಸಿಸ್ಟೆಂಟ್ ಮ್ಯಾನೇಜರ್ ಆಗಿ ಉತ್ತರ ಪ್ರದೇಶದ ಕಾನ್ಪುರ್ ನಗರದಲ್ಲಿ ನಾಲ್ಕು ವರ್ಷ ಕೆಲಸ ಮಾಡಿದ್ದೇನೆ. ಇಡೀ ಭಾರತದಲ್ಲಿ ಅತೀಹೆಚ್ಚು ಚರ್ಮ ಸಂಸ್ಕರಿಸುವ ಟ್ಯಾನರಿಗಳು ಇರುವುದು ಕಾನ್ಪುರದಲ್ಲಿಯೇ. ನಮ್ಮ ಬ್ಯಾಂಕಿನಲ್ಲಿ ಸಾಲ ಸೌಲಭ್ಯವಿರುವ ಟ್ಯಾನರಿಗಳ ತಪಾಸಣೆಗೆ ನಾನು ಹೋಗಬೇಕಾಗುತ್ತಿತ್ತು. ಆಗ ಅಲ್ಲಿ ದನ ಎಮ್ಮೆ ಆಡು ಕುದುರೆ ಒಂಟೆ ಇವುಗಳ ಚರ್ಮವನ್ನು ಯಂತ್ರಗಳಲ್ಲಿ ಸಂಸ್ಕರಿಸುವುದನ್ನು ನೋಡಿದ್ದೇನೆ. ವಿದೇಶಕ್ಕೆ ಜನರ ಜ್ಯಾಕೆಟ್ ಸ್ಕರ್ಟ್ ಬ್ಯಾಗ್ ತಯಾರಿಸಲು ಬೇಕಾಗುವ ಚರ್ಮ ಅತೀ ನುಣುಪಾಗಿ ಇರಬೇಕಾಗುವುದರಿಂದ ಅದರ ಸಂಸ್ಕರಣೆ ಎಷ್ಟೊಂದು ನಾಜೂಕು ಮತ್ತು ಕಷ್ಟದಾಯಕ ಎಂಬುದನ್ನೂ ನಾನು ಗಮನಿಸಿದ್ದೇನೆ. ಇಂತಹ ಕೆಲಸ ಸವರ್ಣೀಯರಿಂದ ಅಸಾಧ್ಯ. ಕಾನ್ಪುರ ಟ್ಯಾನರಿಗಳಲ್ಲಿ ಕೆಲಸ ಮಾಡುವ ಕಾರ್ಮಿಕರೆಲ್ಲಾ ದಲಿತರು ಅಥವಾ ಮುಸ್ಲಿಮರು. ಇವರು ಕೆಲಸ ಮಾಡದಿದ್ದರೆ ಸಾಮಾನ್ಯ ಜನರಿಗೆ ಮಾತ್ರವಲ್ಲ ಘೋರ ಕಾರ್ಗಿಲ್ಲಿನ ಹಿಮದಲ್ಲಿ ನಮ್ಮ ದೇಶದ ಗಡಿ ಕಾಯುವ ಸೈನಿಕರಿಗೂ ಕಾಲಿಗೆ ಬೂಟು ಸಿಗದೇ ಅಲ್ಲಿ ಒಂದು ದಿನವೂ ನಮ್ಮ ಸೈನಿಕರಿಗೆ ನಿಲ್ಲಲು ಸಾಧ್ಯವಾಗಲಾರದು. ದಲಿತರ ಇಂತಹ ಒಂದು ಘನ ವೃತ್ತಿಯನ್ನು ಸಂಘಪರಿವಾರದವರು ತುಚ್ಛವಾಗಿ ಕಂಡು ಈ ಚರ್ಮಗಾರ ವೃತ್ತಿಯಲ್ಲಿರುವ ದಲಿತರನ್ನು ಹೊಡೆಯುತ್ತಾರೆ, ಸ್ವಂತ ಬುದ್ಧಿ ಮತ್ತು ಮಾನವತೆ ಇಲ್ಲದ ಈ ಸಂಘಿಗಳಿಗೂ ಜನರು "ತೊಗಲುಪ್ರಿಯರೆಂದು" ಅಡ್ಡ ಹೆಸರು ಇಟ್ಟಿರುವುದಕ್ಕೆ ಯಾರೂ ಆಶ್ಚರ್ಯಪಡಬೇಕಿಲ್ಲ, ಕಾರಣ ಸಂಘಿಗಳಿಗೆ ತೊಗಲುಪ್ರಿಯ ಅನ್ನುವುದು ಕಚ್ಚಿಹರುಕ ಎಂಬ ಅರ್ಥದಲ್ಲಿ ಅಷ್ಟೇ.

ಕುರುಕ್ಷೇತ್ರ ಯುದ್ಧದಲ್ಲಿ 50 ಲಕ್ಷಕ್ಕೂ ಹೆಚ್ಚು ಮನುಷ್ಯರು ಸತ್ತರು. ಅಷ್ಟೇ ಅಲ್ಲ 18 ದಿನದ ಯುದ್ಧದಲ್ಲಿ ನಾಲ್ಕು ಲಕ್ಷ ಆನೆಗಳು ಮತ್ತು ಹದಿನಾರು ಲಕ್ಷ ಕುದುರೆಗಳೂ ಸತ್ತವಂತೆ. ದಿನವೊಂದಕ್ಕೆ 22 ಸಾವಿರ ಆನೆಗಳು ಮತ್ತು 90 ಸಾವಿರ ಕುದುರೆಗಳು ಸಾಯುತ್ತಿದ್ದವು. ಇಷ್ಟೊಂದು ಬೃಹತ್ ಸಂಖ್ಯೆಯಲ್ಲಿ ಸತ್ತ ಆನೆಗಳನ್ನು ಮತ್ತು ಕುದುರೆಗಳನ್ನು ಆ ದಿನಗಳಲ್ಲಿ ಯುದ್ಧ ಭೂಮಿಯಿಂದ ಹೊರ ಸಾಗಿಸಿ ದಫನ್ ಮಾಡಲು ಯಂತ್ರಗಳಿರಲಿಲ್ಲ, ಎಲ್ಲವನ್ನೂ ಮಾನವ ಶ್ರಮದಿಂದಲೇ ಅದೇ ರಾತ್ರಿ ಮಾಡಿ ಮುಗಿಸಬೇಕಿತ್ತು.

ಹೊಗಳಿಕೆ ತೆಗಳಿಕೆ




ಸಾಯಂಕಾಲ ಯುದ್ಧ ಮುಗಿದ ಮೇಲೆ ಆ
ಬೃಹತ್ ಪ್ರಾಣಿಗಳ ಮತ್ತು ಕುದುರೆಗಳ ಮೃತದೇ
ಅಂತ್ಯಸಂಸ್ಕಾರ ಮಾಡಲು ಐದು ಲಕ್ಷ ಚರ್ಮಗಾರ
ಕಾರ್ಮಿಕರು ಕುರುಕ್ಷೇತ್ರದಲ್ಲಿ 18 ರಾತ್ರಿಗ
ಶ್ರಮಿಸಿದ್ದರಂತೆ. ಕೃಷ್ಣ ಮತ್ತು ಪಾಂಡವರನ್ನು ಹ
ಭರದಲ್ಲಿ ಕೆಳವರ್ಗದ ಶ್ರಮಿಕ ಜನರನ್ನು ಪುರಾ
ಮರೆತು ಬಿಟ್ಟಿರುವುದು ವೈದಿಕರು ತಮ್ಮೆಲ್ಲ ಗ
ಕೇವಲ ಮೇಲ್ಜಾತಿಗಳನ್ನು ಮಾತ್ರ ವೈಭವಿ
ರಚಿಸಿದ್ದರು ಎಂಬುದು ಸ್ಪಷ್ಟ.

-ಪ್ರವೀಣ್ ಎಸ್ ಶೆಟ್ಟಿ, ಮಂ

ಮೋದಿ, ಪೇಜಾವರ ಶ್ರೀ
ಅಪಾಢಭೂತಿಗಳು

ಡಿವೈಎಸ್‌ಪಿ ಗಣಪತಿ ಆತ್ಮಹತ್ಯೆ ಮಾಡಿ
ಉಡುಪಿಯ ಪೇಜಾವರ ಸ್ವಾಮಿ ಅದರ ಬಗ
ವ್ಯಕ್ತ ಮಾಡಿ ಸಿಬಿಐ ತನಿಖೆ ಆಗಬೇಕೆಂದು ಒತ್ತಾ
ಆದರೆ ಅದೇ ಕಾಲಕ್ಕೆ ಚಿಕ್ಕಮಗಳೂರಿನ ಡಿ
ಕಲ್ಲಪ್ಪನವರು ಆತ್ಮಹತ್ಯೆ ಮಾಡಿಕೊಂಡ ಬಗ್ಗೆ ಪೇಜ
ಯಾವುದೇ ಬೇಸರವಿಲ್ಲ. ಕಲ್ಲಪ್ಪನವರು
ಸಮುದಾಯದವರು ಆದುದರಿಂದ ಅವ
ಪೇಜಾವರರಿಗೆ ಹೆಚ್ಚು ಕಾಳಜಿ ಇರಬೇಕಿತ್ತು.
ಕನಕದಾಸರಿಂದಾಗಿ ಕುರುಬ ಸಮುದಾಯಕ್ಕೂ
ದೇವಸ್ಥಾನಕ್ಕೂ ತುಂಬಾ ನಿಕಟ ಸಂಬಂಧವಿದೆ
ಕಲ್ಲಪ್ಪನವರ ಮರಣಕ್ಕೆ ಪೇಜಾವರರ ಆತ್ಮೀಯ
ಪಡೆಗಳೇ ಕಾರಣವಾದುದರಿಂದ ಕಲ್ಲಪ್ಪನವರ ಕು
ಬಗ್ಗೆ ಸ್ವಾಮಿಗಳಿಗೆ ಕಾಳಜಿ ಹುಟ್ಟಲೇ ಇಲ್ಲ. ಇ
ಪ್ರತಿಯೊಂದು ವಿಷಯದ ಕುರಿತೂ ಯಾರೂ ಕೇ

ಸೆಗಣಿಯಲ್ಲಿ ಎಷ್ಟು ಕಾಲ ಲಕ್ಷ್ಮಿ ವಾಸ ಮಾಡಲು ಸಾಧ್



ಗುಜರಾತಿನ ಊನಾದಲ್ಲಿ ಸತ್ತ ದನದ ಚರ್ಮ ಸುಲಿಯುತ್ತಿದ್ದ ದಲಿತರ ಮೇಲೆ ಹಲ್ಲೆಯಾದ ನಂತರ ಅಲ್ಲಿಯ ದಲಿತರು ಸತ್ತ ಪ್ರಾಣಿಗಳನ್ನು ತೆಗೆಯುವ ಕೆಲಸವನ್ನು ಸಂಪೂರ್ಣ ಬಿಟ್ಟಿರುವುದರಿಂದ ಹಿಂದಿನ ಎರಡು ವಾರದಲ್ಲಿ ಸತ್ತ ಸುಮಾರು 75 ಸಾವಿರಕ್ಕೂ ಹೆಚ್ಚು ಜಾನುವಾರುಗಳನ್ನು ತೆಗೆಯುವವರಿಲ್ಲದೇ ಇಡೀ ಗುಜರಾತ್ ರಾಜ್ಯ ಗುಜರಿಯಾಗಿ ನಾರುತ್ತಿದೆ ಹಾಗೂ ಕೊಳೆತ ಕಳೇಬರಗಳಿಂದಾಗಿ ಭೀಕರ ರೋಗರುಜಿನಗಳು ಹರಡುತ್ತಿದ್ದು ಮೋದಿಯ ಸ್ವಚ್ಛ ಭಾರತ್ ಅಭಿಯಾನವೂ ಸತ್ತು ಕೊಳೆತುಹೋಗಿದೆಯಂತೆ. ಪಶುಸಂಗೋಪನೆಯಲ್ಲಿ ಅಗ್ರಗಣ್ಯವಾಗಿದ್ದ ಗುಜರಾತ್ ರಾಜ್ಯ ಈಗ ದನಗಳ ಶವ-ಸಂಗೋಪನೆಯಲ್ಲೂ ಒಂದನೇ ನಂಬರಿಗೆ ಜಿಗಿದಿದೆ.

ಗುಜರಾತಿನಲ್ಲಿರುವ ನನ್ನ ಮಿತ್ರನೊಬ್ಬ ನಿನ್ನೆ ಬರೋಡಾದಿಂದ ಫೋನು ಮಾಡಿದಾಗ ಹೇಳಿದ್ದೇನೆಂದರೆ- ಇತ್ತೀಚೆಗೆ ಸವರ್ಣೀಯರು ತಮ್ಮ ಸತ್ತ ದನಗಳನ್ನು ತೆಗೆಯಲು ದಲಿತರನ್ನು ಕರೆದಾಗ ದಲಿತರು ಸವರ್ಣೀಯರಿಗೆ ಕೊಟ್ಟ ಉತ್ತರವೇನೆಂದರೆ "ನಿಮ್ಮ ಸ್ವಂತ ತಾಯಿ ಸತ್ತಾಗ ಅವಳ ಹೆಣವನ್ನು ನೀವೇ ಹೊತ್ತುಕೊಂಡು ಹೋಗಿ ಶವಸಂಸ್ಕಾರ ಮಾಡುವುದಿಲ್ಲವೇ? ಅದೇ ತರಹ ಗೋಮಾತೆಯೆಂಬ ನಿಮ್ಮ ತಾಯಿಯನ್ನೂ ಸ್ವತಃ ಅದರ ಮಕ್ಕಳಾದ ನೀವೇ ತಲೆ ಬೋಳಿಸಿಕೊಂಡು ಕೈಯಾರೆ ಹೊತ್ತುಕೊಂಡು ಹೋಗಿ ಮಣ್ಣು ಬೂದಿ ಮಾಡುವುದು ನಿಮ್ಮ ಪವಿತ್ರ ಕರ್ತವ್ಯ ತಾನೇ. ಮೇಲಾಗಿ ಈ ಗೋವುಗಳು 33 ಕೋಟಿ ದೇವರನ್ನು ಹೊತ್ತಿರುವ ಪ್ಯಾಕೇಜುಗಳು. ಇಂತಹ ನಿಮ್ಮ ಪವಿತ್ರ ದೇವರ ಮೂಟೆಗಳನ್ನು ನಮ್ಮಂತಹ ದಲಿತರು ಮುಟ್ಟುವುದೂ ಮಹಾ ಪಾಪ. ಆದಕ್ಕಾಗಿ ದೇವರ ಈ ಬಂಡಲ್ಲುಗಳನ್ನು ಯಾರಿಗೂ ಮುಟ್ಟಲು ಬಿಡದೇ ದೇವರ ಬೀಗರಾದ ನೀವೇ ಮಣ್ಣು ಮಾಡಬೇಕು. ಇಲ್ಲದಿದ್ದರೆ 33 ಕೋಟಿ ದೇವರುಗಳು ನಿಮ್ಮ ಮೇಲೆ ಮುನಿಯುವ ಸಾಧ್ಯತೆ ಇದೆ ಜೋಕೆ!!"

ದಲಿತರ ಈ ಉತ್ತರದಿಂದಾಗಿ ಗುಜರಾತಿನಲ್ಲಿ ದಲಿತರನ್ನು ಚಚ್ಚಿದ ಕೈಗಳು ಈಗ ತಮ್ಮ ಸ್ವಂತ ಜುಟ್ಟಿನ ತಲೆಯನ್ನು ಚಚ್ಚಿಕೊಳ್ಳುತ್ತಿವೆಯ ' ಾಪ. 'ಾಗವತ ಪುರಾಣದ ಪ್ರಕಾರ ಈಗಿನ ಗುಜರಾತಿನಲ್ಲಿಯೆ ಇದ್ದ ದ್ವಾರಕೆ ... ವಂಶ ಸಂಪೂರ್ಣ ನಾಶವಾಗುವುದಕ್ಕೆ ಮೊದಲು ಕೃಷ್ಣನ ಹದಿನಾರು ಸಾವಿರ ಹೆಂಡತಿಯರಿಗೆ ಹುಟ್ಟಿದ ಒಂದೂ ಮುಕ್ಕಾಲು ಲಕ್ಷ ಮಕ್ಕಳು ನಡೆಸಿದ ಭೀಭತ್ಸ ಅತಿರೇಕಗಳೇ ಈಗ ಪುನರ
ಆಗುತ್ತಿರುವಂತಿದೆ. ಇದೂ ಗುಜ್ಜು ವಂಶದ ನಾಶದ ಸಂಕೇತವಿರಬಹುದೇ?

ಜೀವಂತ ದನಗಳ ಮೈಯಲ್ಲಿರುವ 33 ಕೋಟಿ ದೇವರು ಆ ದನ ಸತ್ತ
ಏನಾಗುತ್ತಾರೆ ಎಂಬುದು ಮಕ್ಕಳ ಮುಗ್ಧ ಪ್ರಶ್ನೆ. ಅವರೂ ದನದೊಂದಿಗೆ ಸಾಯು
ಅಥವಾ ಹೊಸದಾಗಿ ಹುಟ್ಟಿರುವ ಆಕಳ ಕರುವಿನ ಮೈಗೆ ವಲಸೆ ಹೋಗುತ್ತ
ಪುರಾಣ ಕಥೆಯೊಂದರ ಪ್ರಕಾರ ಬ್ರಹ್ಮನು ಗೋವನ್ನು ಮೊದಲ ಬಾರಿಗೆ ಸೃ
ಎಲ್ಲಾ 33 ಕೋಟಿ ದೇವರು ಓಡಿಹೋಗಿ ಗೋವಿನ ಬಾಯಿಯ ಮುಖಾಂತ
ದೇಹದೊಳಗೆ ಸೇರಿಕೊಂಡರಂತೆ. ಆದರೆ ಲಕ್ಷ್ಮಿ ಮತ್ತು ಇಂದ್ರ ಸ್ವಲ್ಪ ಲೇಟಾಗಿ ವೈಯ
ಹೋಗಿದ್ದರಿಂದ ಗೋವಿನ ಮೈ ಹೌಸ್-ಫುಲ್ ಆಗಿ ಅವರಿಬ್ಬರಿಗೂ ಗ
ಮೈಯೊಳಗೆ ಜಾಗ ಸಿಗಲಿಲ್ಲವಂತೆ. ಇಂದ್ರನಿಗೆ ಜಾಗ ಸಿಗದೇ ಇದ್ದುದು ಒ
ಆಯಿತು ಬಿಡಿ, ಇಲ್ಲದಿದ್ದರೆ ಗೋವಿನ ಮೈಯೊಳಗೆ ಸೇರಿ ಅವನು ಅಂತಹ
ಜಾಗದಲ್ಲೂ ತನ್ನ ಲಂಪಟ ಬುದ್ಧಿ ತೋರಿಸಿ ಇತರ ಹೆಣ್ಣು ದೇವರಿಗೆ
ಕಿರುಕುಳ ಕೊಡುವ ಸಾಧ್ಯತೆಯೂ ಇತ್ತು. ಆದರೆ ಲಕ್ಷ್ಮಿದೇವಿ ಮಾತ್ರ ಹಠ
ಗೋವಿನ ಹಿಂಬದಿಯಿಂದ ಅದರ ಮೈಯಲ್ಲಿ ಹೊಕ್ಕಳಂತೆ. ಆದುದರಿಂದ
ಗೋವಿನ ಸೆಗಣಿಯಲ್ಲಿ ಸ್ಥಾನ ಸಿಕ್ಕಿತಂತೆ. ಹಾಗಾಗಿ ಈಗಲೂ ವೈದಿಕರು ಗ
ಸೆಗಣಿಯನ್ನು ಲಕ್ಷ್ಮಿಗೆ ಸಮಾನ ಎಂದು ಪರಿಗಣಿಸುತ್ತಾರೆ. (ಗೋವಿನ ಸೆಗ
ಕೀಟನಾಶಕ ಗುಣ ಇರುವುದು ನಿಜ. ಅದಕ್ಕಾಗಿ ನಮ್ಮ ಹಿರಿಯರು ಅದನ್ನು
ಅಂಗಳಕ್ಕೆ, ನೆಲಕ್ಕೆ ಮತ್ತು ಗೋಡೆಗೆ ಬಳಿಯುತ್ತಿದ್ದರು, ಅದೇ ಕಾರಣಕ್ಕೆ ಹಳ್ಳಿ
ಈಗಲೂ ಬೆರಣಿ ಮಾಡಿ ಮನೆ ಗೋಡೆಗೇ ತಟ್ಟಿ ಒಣಗಿಸುತ್ತಾರೆ.)

ಕಳೆದ ಬಾರಿ ಲಕ್ಷ್ಮಿದೇವಿಗೆ ಹಸುವಿನ ಬಾಯಿಯಿಂದ ದೇಹದೊಳಗೆ ಹ
ಅವಕಾಶ ಸಿಗದ್ದರಿಂದ ಅವಳು ಹಸುವಿನ ಸೆಗಣಿಯಲ್ಲಿ ವಾಸ ಮಾಡುವಂತಾ
ಪಾಪ. ಹಾಗಾಗಿ ವೈದಿಕರು ಹಸುವನ್ನು ಪೂಜೆ ಮಾಡಿದರೂ ಲಕ್ಷ್ಮಿ
ಒಲಿಸಿಕೊಳ್ಳಬೇಕಾದರೆ ಹಸುವಿನ ಸೆಗಣಿಯನ್ನೂ ಪೂಜೆ ಮಾಡುವ ಅಗತ್ಯ ಹ
ಆದರೆ ಈಗಿನ ಆಧುನಿಕ ಕಾಲದಲ್ಲಿ ಇನ್ನು ಮುಂದೆ ವೈದಿಕರೇ ಸತ್ತ ದ
ಮಡಿಯುಟ್ಟು ಮಣ್ಣು-ಬೂದಿ ಮಾಡಲಿರುವುದರಿಂದ ಸತ್ತ ದನದ ಸೆಗಣಿಯಿಂ
ಹೊರಬಂದು ಇನ್ನೊಂದು ಹೊಸ ಕರುವಿನ ಮೈಗೆ ವಲಸೆ ಹೋಗುವಾ
ಬೇಗ ಹೋಗಿ ಕರುವಿನ ಬಾಯಿಂದ ಹೊಕ್ಕು ಮೈಯಲ್ಲಿಯೇ ವಾಸ ಮ
ಒಳಿತಲ್ಲವೇ? ಪಾಪ ಸೆಗಣಿಯಲ್ಲಿ ಎಷ್ಟು ಕಾಲ ಲಕ್ಷ್ಮಿ ವಾಸ ಮಾಡಲು
ಮೇಲಾಗಿ ಲಕ್ಷ್ಮಿಯ ಮೈ ಯಾವಾಗಲೂ ಸೆಗಣಿ ವಾಸನೆ ಬರುವುದರಿಂದ ವಿಷ
ಲಕ್ಷ್ಮಿಯಿಂದ ರೋಸಿ ದೂರ ಸರಿದಿರಬಹುದೇನೋ.

ಈಗ ಸೆಗಣಿಯಲ್ಲಿ ಕೊಹಿನೂರ್ ವಜ್ರವಿದೆಯೆಂದು ನಮ್ಮ ರಾಮಚಂದ
ಸ್ವಾಮೀಜಿ ಹೇಳಿರುವುದರಿಂದ ಸೆಗಣಿಯಲ್ಲಿ ವಾಸಿಸುವ ಲಕ್ಷ್ಮಿದೇವಿಗೆ ಇನ್ನು ವ
ವಜ್ರೇಶ್ವರಿ ಎಂದು ಕರೆಯುವುದೇ ಸೂಕ್ತ.

-ಜೆ. ರವಿಕಿರಣ, ಮೈ

ಷ್ಣ ಅಭಿಪ್ರಾಯ ತೂರಿಬಿಡುವ ಈ ಪೇಜಾವರ ಸ್ವಾಮಿ ಗುಜರಾತಿನ ಊನಾದಲ್ಲಿ ದಲಿತರ ಮೇಲೆ ಆದ ಅಮಾನುಷ ದಾಳಿ ಖಂಡಿಸಿ ಒಂದು ಶಬ್ದವನ್ನೂ ಆಡಿಲ್ಲವೆಂದರೆ ಈ ಸ್ವಾಮಿಗೆ ಹೃದಯವೆಂಬುದು ಇದೆಯೇ ಎಂಬ ಸಂಶಯ ಮೂಡುತ್ತದೆ. ಅಷ್ಟಾಗಿಯೂ ಇವರು ದಲಿತರಿಗೆ 'ಉಚಿತವಾಗಿ' ವೈಷ್ಣವ ದೀಕ್ಷೆ ಕೊಡಲು ತಾನು ಸಿದ್ಧ ಎಂದು ಆಗಾಗ ಘೋಷಿಸುತ್ತಲೇ ಇರುತ್ತಾರೆ. ಮೋದಿಯಂತೆಯೇ ಈ ಸ್ವಾಮೀಜಿ ಸಹ ದೊಡ್ಡ ನಾಟಕಭೂತಿ.

ಇನ್ನು ಮೋದಿ ದೇಶದ ಪ್ರಧಾನಿ ಆಗಿಯೂ ತನ್ನದೇ ರಾಜ್ಯದ ಊನಾದ ದಲಿತರ ಮೇಲಿನ ದಾಳಿಯನ್ನು ಖಂಡಿಸಿ ಹೇಳಿಕೆ ಕೊಡುತ್ತಿಲ್ಲ ಎಂದರೆ ಈ ದಾಳಿಯನ್ನು ಬಿಜೆಪಿ ಪಕ್ಷದ ವರಿಷ್ಠರ ಅನುಮತಿ ಪಡೆದೇ ಮಾಡಲಾಗಿದೆ ಎಂಬ ಸಂಶಯ ಮೂಡುತ್ತದೆ. ತಾನು ದಲಿತರ ಪರ ಸಹಾನುಭೂತಿ ತೋರಿದರೆ ಇನ್ನು ಕೇವಲ ಒಂದೇ ವರ್ಷದೊಳಗೆ ನಡೆಯುವ ಗುಜರಾತ್ ವಿಧಾನಸಭಾ ಚುನಾವಣೆಯಲ್ಲಿ ಮೇಲ್ಜಾತಿ ವೋಟು ಕಳೆದುಕೊಳ್ಳಬೇಕಾಗುತ್ತದೆ ಎಂಬ ಭಯದ ಲೆಕ್ಕಾಚಾರ ಮೋದಿಗಿರುವಂತಿದೆ. ಸುಮಾರು ನಾಲ್ಕು ಗಂಟೆಗಳ ಕಾಲ ದಲಿತರ ಮೇಲೆ ಷಂಡ ಶಿವಸೇನೆಯ ಗೂಂಡಾಗಳು ಕಬ್ಬಿಣದ ರಾಡುಗಳಿಂದ ಭೀಕರ ಹಲ್ಲೆ ನಡೆಸುತ್ತಿದ್ದರೂ ಹತ್ತಾರು ಜನರು ಪೊಲೀಸರಿಗೆ ಕರೆ ಮಾಡಿ ದೂರು ಕೊಟ್ಟರೂ ಪೊಲೀಸರು ಸುಳಿಯಲಿಲ್ಲ ಎಂದರೆ ಇದರ ಅರ್ಥ ಈ ಎಲ್ಲಾ ನೀಚ ಘಟನೆ ಬಿಜೆಪಿ ಸರಕಾರದ ಅನುಮೋದನೆಯಿಂದಲೇ ನಡೆದಿದೆ ಎಂಬುದಕ್ಕೆ ಪಕ್ಕಾ ಸಾಕ್ಷಿ. ಗುಜರಾತಿನ ಸೌರಾಷ್ಟ್ರ ಪ್ರದೇಶದಲ್ಲಿ ಇಂತಹದ್ದೇ ಘೋರ ಹಲ್ಲೆಗಳು ಚರ್ಮಕಾರ ದಲಿತರ ಮೇಲೆ ಹಿಂದೆಯೂ ಹಲವಾರು ಬಾರಿ ನಡೆದಿವೆಯಂತೆ. ಆದರೆ ಬಿಜೆಪಿ ಪರವಾಗಿರುವ ಪೊಲೀಸರು ಮತ್ತು ಪತ್ರಿಕೆಗಳು ಇವನ್ನು ವರದಿ ಮಾಡಲಿಲ್ಲ. ಇದರಿಂದ ಇನ್ನೂ ಹೆಚ್ಚು ಧೈರ್ಯ ಗಳಿಸಿದ ಕೇಸರಿ ಗೂಂಡಾಗಳು ಈ ಬಾರಿ ತಾವೇ ತಮ್ಮ ಹಲ್ಲೆಯನ್ನು ವಿಡಿಯೋ ರಿಕಾರ್ಡ್ ಮಾಡಿ ಸಾಮಾಜಿಕ ತಾಣಗಳಲ್ಲಿ ಹರಿಯಬಿಟ್ಟು ತಮ್ಮ ಕೈಗೆ ತಾವೇ ಕೋಳ ಹಾಕಿಸಿಕೊಂಡರು. ಒಂದು ವೇಳೆ ಅವರು ಈ ವಿಡಿಯೋ ಸಾಮಾಜಿಕ ತಾಣಗಳಲ್ಲಿ ಹಾಕಿರದಿದ್ದರೆ ಹಿಂದಿನ ಪ್ರಕರಣಗಳಂತೆ ಇದೂ ಸಹ ಮುಚ್ಚಿಹೋಗುತ್ತಿತ್ತು.

ಗುಜರಾತಿನಲ್ಲಿ ಈಗ 60 ಸಾವಿರ ಎಸ್‌ಸಿ/ಎಸ್‌ಟಿ ಬ್ಯಾಕ್‌ಲಾಗ್ ಹುದ್ದೆಗಳನ್ನು ತುಂಬುವುದು ಬಾಕಿ ಇದೆಯಂತೆ. ಹಿಂದಿನ 15 ವರ್ಷಗಳಿಂದ ಅಲ್ಲಿಯ ಬಿಜೆಪಿ ಸರಕಾರ ಎಸ್‌ಸಿ/ಎಸ್‌ಟಿ ಕೋಟಾವನ್ನು ಉದ್ದೇಶಪೂರ್ವಕವಾಗಿ ತುಂಬದೇ ಖಾಲಿ ಇಟ್ಟಿರುವುದರಿಂದ ಇಷ್ಟೊಂದು ದೊಡ್ಡ ಸಂಖ್ಯೆಯಲ್ಲಿ ಬ್ಯಾಕ್‌ಲಾಗ್ ಹುದ್ದೆಗಳು ಬಾಕಿ ಉಳಿಯುವಂತಾಗಿದೆ ಎಂದು ಪತ್ರಿಕಾ ವರದಿಯೊಂದು ಹೇಳಿದೆ. ಇಂತಹ ಗುಜರಾತ್ ಸರಕಾರವನ್ನು 13 ವರ್ಷ ಮುನ್ನಡೆಸಿದ ಮೋದಿಯನ್ನು ಪೇಡ್ ಮಾಧ್ಯಮಗಳು ಅಭಿವೃದ್ಧಿಯ ಹರಿಕಾರ ಎಂದು ಘೋಷಿಸಿದ್ದು ಮಾತ್ರ ವಿಪರ್ಯಾಸವಾಗಿದೆ. ಅಭಿವೃದ್ಧಿ ಎಂದರೆ ಮೋದಿಯ ಅರ್ಥ ಕೇವಲ ಬೆರಳೆಣಿಕೆಯಷ್ಟು ಮೇಲ್ಜಾತಿ ಜೈನ ಮತ್ತು ಬನಿಯಾ ಉದ್ಯಮಿಗಳಿಗೆ ತಮ್ಮ ಬಂಡವಾಳಶಾಹಿ ವಿಸ್ತರಿಸಲು ಅನುವು ಮಾಡಿಕೊಡುವುದೇ ಆಗಿರುವಂತಿದೆ.

-ಗಿರೀಶ್ ಟಿ ಎಸ್, ಮುಲ್ಕಿ

ಮಾಡಿದ ಕರ್ಮ ಹಿಂತಿರುಗಿ ಬರುತ್ತೆ

ಗುಜರಾತಿನಲ್ಲಿ ಚರ್ಮಕಾರ ಜಾತಿಯ ದಲಿತರ ಮೇಲೆ ಸಂಘ ಗೂಂಡಾಗಳು ದಾಳಿ ಮಾಡಿ ಭೀಕರವಾಗಿ ಹಲ್ಲೆ ಮಾಡಿದ್ದರಿಂದ ಸತ್ತ ಜಾನುವಾರುಗಳನ್ನು ಕೊಂಡೊಯ್ದು ಅವುಗಳ ಚರ್ಮ ಸುಲಿದು ಮಾರಿ ಜೀವನ ನಡೆಸುತ್ತಿದ್ದ ದಲಿತರು ಹಿಂದಿನ ಕೆಲವು ದಿನಗಳಿಂದ ತಮ್ಮ ಈ ಕಸುಬು ಬಂದ್ ಮಾಡಿರುವುದರಿಂದ ಈಗ ಗುಜರಾತಿನಲ್ಲಿ



ಭಯಂಕರ ಪರಿಸ್ಥಿತಿಯುಂಟಾಗಿದೆ ಎಂದು ವರದಿಯಾಗಿದೆ. ಹಿಂದಿನ 50 ವರ್ಷಗಳಿಂದ ಅಲ್ಲಿಯ ಅಮೂಲ್ ಡೇರಿಯ ಸಹಾಯದಿಂದಾಗಿ ಇಂದು ಗುಜರಾತ್ ಹೈನುಗಾರಿಕೆಯಲ್ಲಿ ಭಾರತದ ಪ್ರಮುಖ ರಾಜ್ಯವಾಗಿರುವುದು ನಿಜ. ಇದು ಫೇಕೂ-ಸೂಪರ್‌ಮ್ಯಾನ್ ಅಧಿಕಾರಕ್ಕೆ ಬರುವ ಮುಂಚೆಯೇ ಅಲ್ಲಿಯ ಜನ ಮಾಡಿರುವ ಸಾಧನೆ. ಹಾಗಾಗಿ ಇಂದು ಗುಜರಾತಿನ ಹಳ್ಳಿಗಳಲ್ಲಿ ಒಟ್ಟು ಮೂರು ಕೋಟಿಗೂ ಹೆಚ್ಚು ಹೈನುಗಾರಿಕೆಯ ಜಾನುವಾರುಗಳಿವೆ. ಇನ್ನು ಕೃಷಿಗೆ ಬೇಕಾಗುವ ಎತ್ತು ಹೋರಿ ಕೋಣ ಸೇರಿಸಿದರೆ ಅದು ಐದು ಕೋಟಿ ದಾಟುತ್ತದೆ. ಜತೆಗೆ ಬಂಡಿ ಎಳೆಯುವ ಭಾರವಾಹಕ ಪ್ರಾಣಿಗಳಾದ ಕುದುರೆ ಕತ್ತೆ ಎತ್ತುಗಳನ್ನು ಸೇರಿಸಿದರೆ ಒಟ್ಟು ಆರು ಕೋಟಿಗೂ ಹೆಚ್ಚು ಜಾನುವಾರುಗಳು ಗುಜರಾತಿನಲ್ಲಿವೆ. ಇದು ಆ ರಾಜ್ಯದ ಒಟ್ಟು ಜನಸಂಖ್ಯೆಗೆ ಸಮ.

ಈ ಆರು ಕೋಟಿಗೂ ಹೆಚ್ಚಿರುವ ಈ ಸಾಕುಪ್ರಾಣಿಗಳಲ್ಲಿ ಪ್ರಕೃತಿ ಸಹಜ ಕಾರಣಗಳಿಂದ ದಿನಾಲೂ ಐದು ಸಾವಿರಕ್ಕಿಂತ ಹೆಚ್ಚು ಜಾನುವಾರುಗಳು ಸಾಯುತ್ತವೆ. ಅದನ್ನು ಚರ್ಮಕಾರರು ಕೊಂಡು ಹೋಗಿ ಚರ್ಮ ಸುಲಿದು ಉಳಿದ ಮಾಂಸ ಹಾಳಾಗಿದ್ದರೆ ಹೂಳಿ ಬಿಡುತ್ತಿದ್ದರು. ಆಕಳು ಅಥವಾ ಎಮ್ಮೆಯ ಮಾಂಸ ಹಾಳಾಗಿರದಿದ್ದರೆ (ಪ್ರಾಣಿಗಳು ಸತ್ತು ಹೆಚ್ಚು ಹೊತ್ತಾಗಿರದಿದ್ದರೆ) ಅದನ್ನು ಜನರ ಸೇವನೆಗಾಗಿ ಮಾರುತ್ತಿದ್ದರು. ಸತ್ತ ಜಾನುವಾರುಗಳನ್ನು ಇವರು ಅದರ ಚರ್ಮಕ್ಕಾಗಿ ಬೆಲೆ ಕೊಟ್ಟೇ ರೈತರಿಂದ ಕೊಂಡುಕೊಳ್ಳುತ್ತಿದ್ದರು. ರೈತರ ಮನೆ ಬಾಗಿಲಿಗೆ ಬಂದು ಇವರು ಸತ್ತ ಜಾನುವಾರುಗಳನ್ನು ಖರೀದಿಸಿಕೊಂಡು ಹೋಗುತ್ತಿದ್ದುದರಿಂದ ರೈತರಿಗೆ ಕುಳಿತಲ್ಲೇ ಸ್ವಲ್ಪ ಆದಾಯವೂ ಆಗುತ್ತಿತ್ತು, ಜತೆಗೆ ಸ್ವಲ್ಪವೂ ಶ್ರಮವಿಲ್ಲದೇ ಸತ್ತ ಪ್ರಾಣಿಯ ಅತಿ ಭಾರದ ಮೃತ ದೇಹ ಊರಿನ ಹೊರಗೆ ಸಾಗಿಸುವ ತಲೆ ನೋವೂ ತಪ್ಪುತ್ತಿತ್ತು.


ಆದರೆ ಊನಾ ಎಂಬಲ್ಲಿ ಸತ್ತ ದನದ ಚರ್ಮ ಸುಲಿಯುತ್ತಿದ್ದ ದಲಿತರ ಮೇಲೆ ಘೋರ ಹಲ್ಲೆಯಾದ ನಂತರ ಸಮಸ್ತ ಗುಜರಾತಿನ ದಲಿತರು ರಾಜ್ಯದೆಲ್ಲೆಡೆ ಇಂತಹ ಸತ್ತ ಜಾನುವಾರುಗಳನ್ನು ಚರ್ಮಕ್ಕಾಗಿ ಖರೀದಿಸುವುದನ್ನು ನಿಲ್ಲಿಸಿದರು. ಹಾಗಾಗಿ ಒಂದು ದಿನಕ್ಕೆ ಐದು ಸಾವಿರ ಪ್ರಾಣಿಗಳು ಸಾಯುತ್ತವೆ ಎಂದು ಲೆಕ್ಕ ಹಾಕಿದರೂ ಹಿಂದಿನ ಎಂಟತ್ತು ದಿನಗಳಲ್ಲಿ ಸುಮಾರು ಐವತ್ತು ಸಾವಿರ ಜಾನುವಾರುಗಳು ಗುಜರಾತಿನ ರೈತರ ಮನೆಯಲ್ಲಿಯೇ ಸತ್ತು ಕೊಳೆಯುತ್ತಿವೆ. ಕೆಲವು ರೈತರು ಜೆಸಿಬಿ ಕ್ರೇನು ಟ್ರಾಕ್ಟರ್ ಬಾಡಿಗೆಗೆ ತರಿಸಿ ಪ್ರಾಣಿಗಳ ಕಳೇಬರ ಊರ ಹೊರಗೆ ಸಾಗಿಸಿ ಗುಂಡಿ ತೆಗೆಸಿ ಸ್ವಂತ ಖರ್ಚಿನಲ್ಲಿ ಹೂಳುತ್ತಿದ್ದಾರೆ. ಈ ರೀತಿ ಕ್ರೇನು-ಜೆಸಿಬಿಗೆ ಬಾಡಿಗೆ ಹಾಗೂ ಗುಂಡಿ ತೆಗೆಯಲು ಕಾರ್ಮಿಕರಿಗೆ ಸಂಬಳ ಹೀಗೆ ಒಂದು ಸತ್ತ ಜಾನುವಾರಿಗಾಗಿ ಕನಿಷ್ಠ ಒಂದು ಸಾವಿರ ರೂಪಾಯಿ ರೈತನ ಕೈಯಿಂದ ಖರ್ಚಾಗುತ್ತಿದೆ. ಜತೆಗೆ ಅರೆಬರೆ ಹೂಳಿದ ಕೊಳೆತ ಶವಗಳನ್ನು ಹೆಗ್ಗಣ ನಾಯಿಗಳು ಕೆದಕಿ ತೆಗೆದು ಎಲ್ಲೆಡೆ ಸಾಂಕ್ರಾಮಿಕ ರೋಗ ವೇಗವಾಗಿ ಹರಡುತ್ತಿದೆ.

ಮೊದಲೆಲ್ಲಾ ದಲಿತರೇ ರೈತರಿಗೆ ಹಣ ಕೊಟ್ಟು ಜಾನುವಾರುಗಳ ಕಳೇಬರ ಖರೀದಿಸುತ್ತಿದ್ದರು. ಆದರೆ ಈಗ ಪರಿಸ್ಥಿತಿ ಉಲ್ಟಾ ಆಗಿದೆ. ರೈತರೇ ಹಣ ಖರ್ಚು ಮಾಡಿ ಪ್ರಾಣಿಗಳ ಕಳೇಬರ ವಿಲೇವಾರಿ ಮಾಡಬೇಕಾಗುತ್ತಿದೆ. ಇದೆಲ್ಲಾ ಕೇಸರಿ ಗೂಂಡಾಗಳ ಕೃಪೆಯಿಂದ ಹಾಗೂ ಸಂಘಿ ಸರಕಾರದ ಬೆಂಬಲದಿಂದ ರೈತರಿಗೆ ಆಗಿರುವ ಭಯಂಕರ ಉಪಕಾರ! ದೇಶಿ ಹಸುಗಳ ಚರ್ಮಕ್ಕಿಂತ ಜರ್ಸಿ ಹಸುಗಳ ಚರ್ಮ ವಿದೇಶಕ್ಕೆ ಹೆಚ್ಚು ರಫ್ತಾಗುತ್ತಿತ್ತು, ಕಾರಣ ಜರ್ಸಿ ದನದ ಚರ್ಮ ದೇಶಿ ದನದ ಚರ್ಮಕ್ಕಿಂತ ಹೆಚ್ಚು ಮೃದುವಾಗಿದ್ದು ಮಹಿಳೆಯರ ಬ್ಯಾಗ್, ಪರ್ಸ್, ಕ್ಯಾಪ್ ಮತ್ತು ಜಾಕೆಟ್ ಮಾಡಲು ಅದಕ್ಕೆ ವಿದೇಶದಲ್ಲಿ ಹೆಚ್ಚು ಬೇಡಿಕೆ ಇದೆ. ತಮ್ಮ ಧರ್ಮದ ಅಹಿಂಸಾವಾದದ ಬಗ್ಗೆ ಯಾವಾಗಲೂ ಕೊಚ್ಚುವ ಜೈನರೇ ಈ ಜರ್ಸಿ ದನದ ಚರ್ಮದ ಮುಖ್ಯ ನಿರ್ಯಾತಗಾರರು. ಈಗ ಅವರ ನಿರ್ಯಾತಕ್ಕೆ ಭಾರಿ ಪೆಟ್ಟು ಬಿದ್ದು ಒದ್ದಾಡುತ್ತಿದ್ದಾರೆ. ಅಮಿತ್ ಷಾನ ಜಾತಿಯ ಈ ಜೈನರೇ ಗುಜರಾತಿನ ಸಂಘಿಗಳ ಅತಿದೊಡ್ಡ ಫೈನಾನ್ಸರ್ ಸಹ ಆಗಿರುವರು. ಈಗ ಅವರ ಕೊಡಲಿ ಕಾವು ಅವರ ಬುಡಕ್ಕೇ ಪೆಟ್ಟು ಹಾಕಿದೆ. ಮಹಾವೀರ ತೀರ್ಥಂಕರರು ಹೇಳಿದಂತೆ ನಾವು ಮಾಡಿದ ಕರ್ಮ ಹಿಂತಿರುಗಿ ನಮಗೇ ಬರಲೇಬೇಕಲ್ಲವೇ ಜೈನ ಬಂಧುಗಳೇ!

-ಕ್ಷಿತಿಜ್ ಕೆ ಹೆಗಡೆ, ಮಂಗಳೂರು

ಲೂಸ್‌ಮಾದ ಯೋಗಿ ಎರಡು ವರ್ಷಗಳಿಂದ ಎಲ್ಲಿಗೆ ಹೋದರು ಅನ್ನುವ ಕುತೂಹಲ ಅವರ ಅಭಿಮಾನಿಗಳಲ್ಲಿತ್ತು. ಅದಕ್ಕೀಗ ಉತ್ತರ ಸಿಕ್ಕಿದೆ. ಅವರು ಮತ್ತೆ ಸಿನಿಮಾ ರಂಗದಲ್ಲಿ ಬಿಜಿಯಾಗಿದ್ದಾರೆ. ವಿಭಿನ್ನ ಪಾತ್ರಕ್ಕಾಗಿ ಅವರು ಅಜ್ಞಾತವಾಸಕ್ಕೆ ಹೋಗುವುದು ಅನಿವಾರ್ಯವಾಗಿತ್ತು ಎಂದು ಒಪ್ಪಿಕೊಳ್ಳುತ್ತಾರೆ.

ವಿಭಿನ್ನ ಪಾತ್ರಕ್ಕಾಗಿ ಹದಿನಾಲ್ಕು ತಿಂಗಳು ಕಾಯಬೇಕಾಯ್ತು: ಯೋಗಿ



ಪೋರ್ಕಿ ಪಾತ್ರಗಳ ಮೂಲಕವೇ ಗುರುತಿಸಿಕೊಂಡ ನಟ ಲೂಸ್‌ಮಾದ ಅಲಿಯಾಸ್ ಯೋಗೀಶ್. 'ದುನಿಯಾ' ಸಿನಿಮಾದಿಂದ ಸ್ಯಾಂಡಲ್‌ವುಡ್‌ಗೆ ಬಂದ ಈ ಪ್ರತಿಭೆ ಆನಂತರ ಕಾಣಿಸಿಕೊಂಡಿದ್ದು ಏಕತಾನತೆಯ ಪಾತ್ರಗಳ ಮೂಲಕ. ಅದರಿಂದ ಆಚೆ ಬರಲು ಯೋಗಿ ಎರಡು ವರ್ಷಗಳ ಕಾಲ ಸಿನಿಮಾ ರಂಗದಿಂದ ದೂರವಿದ್ದರು. ಈಗ ಮತ್ತೆ ಚಿತ್ರರಂಗದಲ್ಲಿ ಸಕ್ರಿಯರಾಗಿದ್ದಾರೆ. ನಾಲ್ಕು ಸಿನಿಮಾಗಳಿಗೂ ಸಹಿ ಹಾಕಿದ್ದಾರೆ. ಸದ್ಯ 'ಜಾನ್ ಜಾನಿ ಜನಾರ್ದನ್' ಸಿನಿಮಾದ ಶೂಟಿಂಗ್ ಮುಗಿಸಿಕೊಂಡು ಮತ್ತೊಂದು ಚಿತ್ರದ ಪಾತ್ರಕ್ಕಾಗಿ ಭರ್ಜರಿ ತಯಾರಿ ನಡೆಸುತ್ತಿದ್ದಾರೆ. ಈ ಕುರಿತು ಅವರು ಇಲ್ಲಿ ಮಾತಾಡಿದ್ದಾರೆ.

** ಎರಡು ವರ್ಷಗಳ ಹಿಂದೆ ನಿಮ್ಮ ಬಹುತೇಕ ಚಿತ್ರಗಳು ಸೋತವು. ಈ ಬೇಸರಕ್ಕಾಗಿ ನೀವು ಸಿನಿಮಾ ಮಾಡಲಿಲ್ಲವಾ?*

ಹಾಗೇನೂ ಇಲ್ಲ. ಸಿನಿಮಾ ಸೋತಾಗಲೂ ಮತ್ತು ಗೆದ್ದಾಗಲೂ ನಾನು ಯೋಚಿಸಿದವನು ಅಲ್ಲ. ನನಗೆ ಕೊಟ್ಟ ಪಾತ್ರವನ್ನು ನಾನು ಈವರೆಗೂ ಸರಿಯಾಗಿಯೇ ನಿಭಾಯಿಸಿದ್ದೇನೆ. ಸಿನಿಮಾವೊಂದು ಸೋಲುವುದಕ್ಕೆ ಮತ್ತು ಗೆಲ್ಲುವುದಕ್ಕೆ ನಾನು ಯಾವತ್ತೂ ಹೊಣೆಯಾಗಿಲ್ಲ. ನನ್ನ ಪಾತ್ರಗಳನ್ನು ಎಲ್ಲರೂ ಮೆಚ್ಚಿದ್ದಾರೆ. ಮೆಚ್ಚುವಂತೆಯೇ ನಾನೂ ನಟಿಸಿದ್ದೇನೆ. ಆದರೆ, ನನಗೆ ಒಂದೇ ರೀತಿಯ ಪಾತ್ರವನ್ನು ಮಾಡಲು ಬೇಸರವಾಯಿತು. ಹೀಗಾಗಿಯೇ ನಾನು ಗ್ಯಾಪ್ ತೆಗೆದುಕೊಳ್ಳುವ ನಿರ್ಧಾರಕ್ಕೆ ಬಂದೆ.

** ಯಾಕೆ ಪೋರ್ಕಿ ಪಾತ್ರಗಳನ್ನೇ ನೀವು ಆಯ್ಕೆ ಮಾಡಿಕೊಂಡಿರಿ? ತಪ್ಪು ಮಾಡಿದ್ದು ನೀವೇ ತಾನೆ?*

ಇದನ್ನು ತಪ್ಪು ಅಂತ ನಾನು ಒಪ್ಪಿಕೊಳ್ಳಲಾರೆ. ನನ್ನನ್ನು ನಂಬಿಕೊಂಡು ಬರುವ ನಿರ್ದೇಶಕರಿಗೆ ಮತ್ತು ನಿರ್ಮಾಪಕರಿಗೆ ನಿರಾಸೆ ಮಾಡಲಿಲ್ಲ. ಅವರ ಮೇಲೆ ನಾನು ನಂಬಿಕೆ ಇಟ್ಟೆ. ಒಂದಿಷ್ಟು ನಿರ್ದೇಶಕರು ನಂಬಿಕೆಯನ್ನು ಉಳಿಸಿಕೊಂಡರು, ಇನ್ನೂ ಕೆಲವರು ಕತೆ ಹೇಳಿದ್ದು ಬೇರೆ, ತೆರೆಯ ಮೇಲೆ ತೋರಿಸಿದ್ದು ಬೇರೆ. ಇದಕ್ಕೆ ನಾನು ಯಾರನ್ನೂ ದೂರಲ್ಲ. ಎಲ್ಲೋ ಒಂದು ಕಡೆ, ಯಾವುದೂ ಸರಿ ಇಲ್ಲ ಅನಿಸಿತು. ಹೀಗಾಗಿಯೇ ನಾನೇ ಒಂದು ನಿರ್ಧಾರಕ್ಕೆ ಬಂದೆ. ಒಂದಿಷ್ಟು ದಿನ ನಟನೆಗೆ ಗ್ಯಾಪ್ ತೆಗೆದುಕೊಂಡು ಹೊಸ ಯೋಗಿಯಾಗಿ ಬರಬೇಕು ಅಂತ ತೀರ್ಮಾನ ತೆಗೆದುಕೊಂಡೆ. ಹೀಗಾಗಿ ಎರಡು ವರ್ಷಗಳ ಕಾಲ ಸುಮ್ಮನೇ ಇರಬೇಕಾಯಿತು.

** ಈ ಎರಡು ವರ್ಷಗಳಲ್ಲಿ ಏನು ಮಾಡಿದ್ದೀರಿ?*

ಅನೇಕ ಕತೆಗಳನ್ನು ಕೇಳಿದ್ದೇನೆ. ಅಲ್ಲದೇ, ನಾನು ಯಾವ ರೀತಿಯಲ್ಲಿ ರೀಲ್ಯಾಂಚ್ ಆಗಬೇಕು ಅಂತ ಅರ್ಥಮಾಡಿಕೊಂಡಿದ್ದೇನೆ. ಹೊಸ ಬಗೆಯ ಸಾಕಷ್ಟು ಸಿನಿಮಾಗಳನ್ನೂ ನೋಡಿದ್ದೇನೆ. ಎರಡು ವರ್ಷಗಳು ಸುಮ್ಮನೆ ಕಳೆದಿದ್ದೇನೆ ಅನ್ನುವ ಫೀಲ್ ನನಗಂತೂ ಇಲ್ಲ. ಎರಡು ವರ್ಷಗಳನ್ನು ಎಂಜಾಯ್ ಮಾಡಿದ್ದೇನೆ. ಜತೆಗೆ ಕೊಂಚ ನೋವು ಕೂಡ ಇದೆ.

** ಅಂತಹ ನೋವು ಯಾಕಾಯಿತು? ಯಾವುದಕ್ಕಾಗಿ ಸಂಕಟ ಪಟ್ಟಿದ್ದೀರಿ?*


ಸಡನ್ನಾಗಿ ಮನೆಯಲ್ಲಿ ಉಳಿದದ್ದಕ್ಕೆ ಗಾಂಧಿನಗರದ ಕೆಲವರು ನನ್ನ ಬಗ್ಗೆ ಇಲ್ಲದೇ ಇರುವ ಕತೆ ಕಟ್ಟಿದರು. ಯೋಗಿಗೆ ಸಿನಿಮಾನೇ ಇಲ್ಲ ಅನ್ನುವ ಸುದ್ದಿಯನ್ನೂ ಅವರು ಹಬ್ಬಿಸಿದರು. ಮತ್ತೆ ಸಿನಿಮಾಗೆ ಬರುವುದಿಲ್ಲ ಅನ್ನುವ ಮಾತನ್ನೂ ನಾನು ಕೇಳಬೇಕಾಯಿತು. ಎಲ್ಲರಿಗೂ ತಕ್ಕ ಉತ್ತರ ಕೊಡುವ ನಂಬಿಕೆ ನನಗಿತ್ತು. ಹೀಗಾಗಿ ನಾನು ಯಾವುದಕ್ಕೂ ತಲೆ ಕೆಡಿಸಿಕೊಳ್ಳಲಿಲ್ಲ.

** ತಕ್ಕ ಉತ್ತರ ಕೊಡುವಂತಹ ಸಿನಿಮಾಗಳು ಈಗ ನಿಮಗೆ ಸಿಕ್ಕಿದೆಯಾ?*

ಸದ್ಯ ಮೂರು ಚಿತ್ರಗಳನ್ನು ನಾನು ಒಪ್ಪಿಕೊಂಡಿದ್ದೇನೆ. ಈಗಾಗಲೇ ಗುರುದೇಶಪಾಂಡೆ ನಿರ್ದೇಶನದ 'ಜಾನ್ ಜಾನಿ ಜನಾರ್ದನ್' ಸಿನಿಮಾದ ಶೂಟಿಂಗ್ ಮುಗಿಸಿದ್ದೇನೆ. ಈ ಸಿನಿಮಾದಲ್ಲಿ ನನ್ನದು ಮುಸ್ಲಿಂ ಪಾತ್ರ. ಇದೇ ಮೊದಲ ಬಾರಿಗೆ ನಾನು ಇಂಥದ್ದೊಂದು ಪಾತ್ರ ನಿರ್ವಹಿಸುತ್ತಿದ್ದೇನೆ. ಅಲ್ಲದೇ, ಜೋಗಿ ಪ್ರೇಮ್ ಜತೆ ಕೆಲಸ ಮಾಡಿರುವ ಶಿವಮಂಜು ಅವರ ಮತ್ತೊಂದು ಚಿತ್ರ ಒಪ್ಪಿಕೊಂಡಿದ್ದೇನೆ. ಈ ಚಿತ್ರದಲ್ಲೂ ಡಿಫರೆಂಟ್ ಪಾತ್ರ ಸಿಕ್ಕಿದೆ. ಈ ಕ್ಯಾರೆಕ್ಟರ್‌ಗಾಗಿ ನಾನು ಮೂವತ್ತು ಕೇಜಿ ತೂಕ ಹೆಚ್ಚಿಸಿಕೊಳ್ಳಬೇಕಿದೆ. ಅಲ್ಲದೇ ನಮ್ಮದೇ ಬ್ಯಾನರ್‌ನಲ್ಲಿ 'ದುನಿಯಾ 2' ಚಿತ್ರ ಕೂಡ ಮಾಡಲಿದ್ದೇವೆ. ಇಲ್ಲಿಯೂ ಹೊಸ ರೀತಿಯ ಪಾತ್ರ ಸಿಕ್ಕಿದೆ.

** 'ದುನಿಯಾ 2' ಸಿನಿಮಾದಲ್ಲಿಯ ವಿಶೇಷತೆ ಏನು? 'ದುನಿಯಾ' ಚಿತ್ರದ ಮುಂದುವರಿಕೆಯಾ ಇದು?*

ಸಿಕ್ವೇಲ್ ಸಿನಿಮಾ ಖಂಡಿತಾ ಅಲ್ಲ. 'ದುನಿಯಾ'ಗೂ ಹೊಸ 'ದುನಿಯಾ'ಗೂ ಯಾವುದೇ ಸಂಬಂಧ ಕೂಡ ಇಲ್ಲ. ನಮ್ಮ ಕುಟುಂಬದ ಸದಸ್ಯರು ಒಪ್ಪಿಕೊಂಡಿದ್ದರಿಂದ ಈ ಶೀರ್ಷಿಕೆ ಇಡಬೇಕಾಯಿತು. ನಮ್ಮ ಬ್ಯಾನರ್‌ನಲ್ಲೇ ಮತ್ತೊಂದು ಚಿತ್ರ ಮಾಡಬೇಕು ಅನ್ನುವ ಪ್ಲಾನ್ ಮೊದಲಿನಿಂದಲೂ ಇತ್ತು. ಅದಕ್ಕಾಗಿಯೇ ನಾನು ಮತ್ತು ನನ್ನ ತಂದೆ ಹೊಸ ರೀತಿಯ ಕತೆಗಳನ್ನು ಕೇಳಿದ್ದೆವು. 'ದುನಿಯಾ 2' ಕತೆ ಇಷ್ಟವಾಯಿತು. ಹೀಗಾಗಿ ಸಿನಿಮಾ ಮಾಡಲು ಒಪ್ಪಿಕೊಂಡೆ.



** ತಮಿಳು ಸಿನಿಮಾರಂಗಕ್ಕೆ ಹೋಗುವ ಕನಸು ಎಲ್ಲಿವರೆಗೂ ಬಂತು?*

ಕಳೆದ ವರ್ಷವೇ ನಾನು ತಮಿಳಿನ ಎರಡು ಚಿತ್ರಗಳಲ್ಲಿ ನಟಿಸಬೇಕಿತ್ತು. ನಿರ್ದೇಶಕ ಸಮುದರಕಣಿ ಅವರು ನಟನೆಯಲ್ಲಿ ಬಿಜಿಯಾದರು. ನಿರ್ದೇಶಕರೇ ಬಿಜಿ ಆದ ಮೇಲೆ ನಾನು ಸುಮ್ಮನೆ ಇರಬೇಕಾಯಿತು. ಸಿನಿಮಾ ಮಾಡಬೇಕಿದ್ದ ನಿರ್ದೇಶಕರು ಸದ್ಯ ಭಾರೀ ಬಜೆಟ್‌ನ ಚಿತ್ರಗಳಲ್ಲಿ ನಟಿಸುತ್ತಿದ್ದಾರೆ. ಹೀಗಾಗಿ ಅವರಿಗೆ ನಿರ್ದೇಶನ ಮಾಡುವುದಕ್ಕೆ ಸಮಯವೇ ಸಿಗುತ್ತಿಲ್ಲ. ಇದೇ ವರ್ಷ ಕೊನೆಯಲ್ಲಿ ಆ ಸಿನಿಮಾಗಳ ಬಗ್ಗೆ ಸ್ಪಷ್ಟತೆ ಸಿಗಲಿದೆ. ಖಂಡಿತಾ ತಮಿಳಿನ ಸಿನಿಮಾಗಳಲ್ಲಿ ನಟಿಸುತ್ತೇನೆ. ■


Registered No.RNP/KA/BGS/2036/2014-16 Posted at :Bangalore-26, PSO, Mysore Road. Thursday R B P LANKESH, Kannada Weekly Price Rs. 15/- 10-08-2016 RNI No. KARKAN2

ಅದೃಷ್ಟದ ಶಿವರಾಜ್‌ಕುಮಾರ್

ಅದ್ಯಾರು ಈ ರೀತಿ ಪುಕಾರು ಹಬ್ಬಿಸಿದರೋ ಏನೋ? ಸೋಲಿನ ಸುಳಿಯಲ್ಲಿ ಸಿಲುಕಿರುವ ನಟರಿಗೆಲ್ಲ ಶಿವರಾಜ್‌ಕುಮಾರ್ ಡಾರ್ಲಿಂಗ್ ಆಗಿದ್ದಾರೆ. ಶಿವಣ್ಣನ ಸಿನಿಮಾದಲ್ಲಿ ಕಾಣಿಸಿಕೊಂಡರೆ, ಗೆಲುವು ಕಟ್ಟಿಟ್ಟಬುತ್ತಿ ಅನ್ನುವ ಮಾತು ಗಾಂಧಿನಗರದಲ್ಲಿ ಹರಿದಾಡುತ್ತಿದೆ. ಹೀಗಾಗಿಯೇ ಪುಟ್ಟ ಪಾತ್ರ ಸಿಕ್ಕರೂ ಶಿವರಾಜ್‌ಕುಮಾರ್ ಜತೆ ನಟಿಸಲು ತುದಿಗಾಲಲ್ಲಿ ನಿಂತಿದ್ದಾರೆ ಹಲವು ನಟರು. ಅವರ ಸಾಲಿಗೆ ಹೊಸದಾಗಿ ಸೇರ್ಪಡೆ ಆದವರು ಧನಂಜಯ್. ಇವರ ಮೂರ್‍ನಾಲ್ಕು ಚಿತ್ರಗಳು ರಿಲೀಸ್ ಆಗಿವೆ. ಗೆಲುವು ಮಾತ್ರ ಸಿಕ್ಕಿಲ್ಲ, ಅಲ್ಲದೇ ಇನ್ನೂ ಮೂರು ಚಿತ್ರಗಳು ಬಿಡುಗಡೆಗೆ ಸಿದ್ಧವಾಗಿದೆ. ಈ ನಡುವೆಯೇ ಶಿವಣ್ಣ ಅಭಿನಯದ 'ಟಗರು' ಚಿತ್ರದಲ್ಲಿ ಧನಂಜಯ್ ವಿಲನ್ ಪಾತ್ರ ನಿರ್ವಹಿಸುತ್ತಿದ್ದಾರೆ. ಈ ಹಿಂದೆ ಲೂಸ್‌ಮಾದ ಯೋಗಿ, ವಿಜಯ ರಾಘವೇಂದ್ರ, ಶ್ರೀನಗರ ಕಿಟ್ಟಿ ಹೀಗೆ ಅನೇಕ ನಟರು ಶಿವಣ್ಣನ ಚಿತ್ರದಲ್ಲಿ ನಟಿಸಿದ್ದಾರೆ. ಆನಂತರ ಅವರಿಗೆ ಗೆಲುವು ಕೂಡ ಸಿಕ್ಕಿದೆಯಂತೆ. ಈ ಮಾತು ಹೇಳುತ್ತಲೇ ಇತರ ನಟರನ್ನೂ ನಂಬಿಸುವ ಕೆಲಸ ನಡೆಯುತ್ತಿದೆ. ಏನೇ ಇರಲಿ, ಧನಂಜಯ್ ಇದೇ ಮೊದಲ ಬಾರಿಗೆ ಸೂರಿ ನಿರ್ದೇಶನದ ಚಿತ್ರದಲ್ಲಿ ಕಾಣಿಸಿಕೊಳ್ಳುತ್ತಿದ್ದಾರೆ. ವಿಲನ್ ಪಾತ್ರ ಆದಾಗಿದ್ದರೂ, ಪಾತ್ರದ ಹಿನ್ನೆಲೆಯ ಬಗ್ಗೆ ಸಿನಿಮಾ ತಂಡ ಯಾವುದೇ ಮಾಹಿತಿ ಹೊರಹಾಕಿಲ್ಲ, ಆಗಸ್ಟ್ 21ರಂದು ಶೂಟಿಂಗ್ ಶುರುವಾಗಲಿದೆಯಂತೆ.

ಕನ್ನಡಕ್ಕೆ ಶ್ರುತಿ ಮೀಟಿದಾಗ

ಸ್ಯಾಂಡಲ್‌ವುಡ್‌ನಲ್ಲಿ ತಮಗೊಂದು ಸ್ಥಾನ ಸಿಗುತ್ತಿದ್ದಂತೆಯೇ ತಾವು ನಡೆದುಬಂದ ಹಾದಿಯನ್ನೇ ಮರೆಯುವವರು ಹೆಚ್ಚು. ಆದರೆ ಶ್ರುತಿ ಹರಿಹರನ್ ಹಾಗಿಲ್ಲ, ತಾವು ಮೂಲತಃ ಬೇರೆ ರಾಜ್ಯದವರಾದರೂ, ಕನ್ನಡ ತಮಗೊಂದು ನೆಲೆ ಕಲ್ಪಿಸಿದ ಹಿನ್ನೆಲೆಯಲ್ಲಿ ಈ ರಾಜ್ಯಕ್ಕಾಗಿ ಕೊಡುಗೆ ಕೊಡಲು ಮುಂದಾಗಿದ್ದಾರೆ. ಕಿರುಚಿತ್ರ ನಿರ್ಮಾಣ ಸಂಸ್ಥೆಯೊಂದನ್ನು ಹುಟ್ಟು ಹಾಕುವುದರ ಜತೆಗೆ ರಂಗಭೂಮಿ ಸಂಬಂಧಿ ಕೆಲಸಗಳಿಗೂ ಕೈಹಾಕಿದ್ದಾರೆ. ಕಲಾತ್ಮಕ ಹೆಸರಿನ ಸಂಸ್ಥೆಯೊಂದನ್ನು ಆರಂಭಿಸಿರುವ ಇವರು, ಇದರ ಮೂಲಕ ಮೊದಲ ಕಿರುಚಿತ್ರ 'ದಿ ಲಾಸ್ಟ್ ಕನ್ನಡಿಗ' ತಯಾರಿಸಿದ್ದಾರೆ. ಈ ಚಿತ್ರದಲ್ಲಿ ಕನ್ನಡ ಭಾಷೆ ಮತ್ತು ಪ್ರೇಮವನ್ನು ಹೀರೋನನ್ನಾಗಿ ಮಾಡಿದ್ದಾರೆ. ವಸಿಷ್ಠ ಸಿಂಹ, ರವಿಕಿರಣ್ ರಾಜೇಂದ್ರ ಹಾಗೂ ಜಯಪ್ರಕಾಶ್. ಸೇರಿದಂತೆ ಹಲವರು ತಾರಾಗಣದಲ್ಲಿದ್ದಾರೆ. ಮದನ್ ರಾಮ್‌ವೆಂಕಟೇಶ್ ಚಿತ್ರದ ಕತೆಯನ್ನು ಬರೆಯುವುದರ ಜತೆಗೆ ನಿರ್ದೇಶನದ ಜವಾಬ್ದಾರಿಯನ್ನೂ ಹೊತ್ತಿದ್ದಾರೆ. 'ದಿ ಲಾಸ್ಟ್ ಕನ್ನಡಿಗ' ಈಗ ಪೋಸ್ಟ್ ಪ್ರೊಡಕ್ಷನ್ ಹಂತದಲ್ಲಿದೆ. ಚಿತ್ರದ ವಿಶೇಷತೆ ಅಂದರೆ, ಅದೊಂದು ಮೂಕಿ ಚಿತ್ರ, ಇಲ್ಲಿ ಸಂಗೀತಕ್ಕೆ ಪ್ರಧಾನ ಆದ್ಯತೆ. ಅಭಿಷೇಕ್ ಜಿ.ಕೆ. ಈ ಚಿತ್ರದ ಸಿನಿಮಾಟೋಗ್ರಾಫರ್. ಮುಂದಿನ ದಿನಗಳಲ್ಲಿ ನಾಟಕದ ಪ್ರೊಡಕ್ಷನ್ ಮಾಡುವ ಹಂಬಲ ಶ್ರುತಿ ಅವರದ್ದು, ಈಗಾಗಲೇ ರಾಮ್ ಕುಮಾರ್ ನಿರ್ದೇಶನದಲ್ಲಿ 'ಫೇಸಸ್' ಎಂಬ ನಾಟಕದ ತಯಾರಿ ಕೂಡ ನಡೆಯುತ್ತಿದೆ.



'ಕೋಟಿಗೊಬ್ಬ'ನಿಗೆ ದಾರಿಮಾಡಿಕೊಟ್ಟ 'ದೊಡ್ಮನೆ ಹುಡ

ಸುದೀಪ್ ಅಭಿನಯದ 'ಕೋಟಿಗೊಬ್ಬ-2' ಸಿನಿಮಾ ಬಹುತೇಕ ಶೂಟಿಂಗ್ ಮುಗಿದಿದೆ. ಈಗಷ್ಟೇ ಪ್ರಥಮ ಕಾಪಿ ಕೂಡ ಬಂದಿದೆ. ಹೀಗಾಗಿ ಸಿನಿಮಾ ರಿಲೀಸ್ ಯಾವಾಗ ಎಂಬ ನಿರೀಕ್ಷೆ ಎಲ್ಲರದ್ದಾಗಿತ್ತು, ಅಲ್ಲದೇ



'ದೊಡ್ಮನೆ ಹುಡುಗ' ಮತ್ತು 'ಕೋಟಿಗೊಬ್ಬ-2' ಒಂದೇ ವಾರದಲ್ಲಿ ಆಗಲಿವೆ ಎನ್ನುವ ಸುದ್ದಿ ಇತ್ತು, ಅದೆಲ್ಲದಕ್ಕೂ ಈಗ ಉತ್ತರ ಸಿಕ್ಕಿದೆ. ಸಿನಿಮಾ ರಿಲೀಸ್ ಆಗಿದ್ದರಿಂದ, ಆಗಸ್ಟ್ 12ಕ್ಕೆ 'ಕೋಟಿಗೊಬ್ಬ 2' ಸಿನಿ ತೆರೆಗೆ ತರಲು ಸಿದ್ಧರಾಗಿದ್ದಾರೆ ನಿರ್ಮಾಪಕ ಸೂರಪ್ಪ ಬಾಬು.

"'ಕಬಾಲಿ' ಚಿತ್ರದ ಬಿಡುಗಡೆಗಾಗಿ ಕಾಯುತ್ತಿದ್ದೆವು. ರಿಲೀ ಎರಡು ವಾರ ಅಂತರ ಕಾಯ್ದುಕೊಂಡು ಬರಬೇಕು ಅನ್ನುವುದ ಪ್ಲಾನ್ ಆಗಿತ್ತು, ಅದರಂತೆಯೇ ಬಿಡುಗಡೆಗೆ ಸಿದ್ಧತೆ ಮಾಡಿಕೊಳ್ಳ ಎಂದಿದ್ದಾರೆ ಸೂರಪ್ಪ ಬಾಬು. ಕನ್ನಡ ಮತ್ತು ತಮಿಳು ಎರಡು ಭಾ ಈ ಸಿನಿಮಾ ಏಕಕಾಲಕ್ಕೆ ರಿಲೀಸ್ ಆಗುತ್ತಿರುವುದು ಮತ್ತೊಂದು

'ಕೋಟಿಗೊಬ್ಬ-2' ತೆರೆಗೆ ಬರುತ್ತಿದ್ದಂತೆಯೇ ಪುನೀತ್ ಅವರ ಹುಡುಗ' ಕೂಡ ಬಿಡುಗಡೆಗೆ ತಯಾರಿ ಮಾಡಿಕೊಳ್ಳುತ್ತಿದೆ. 'ಕೋ ಮತ್ತು 'ದೊಡ್ಮನೆ ಹುಡುಗ' ಎರಡು ವಾರಗಳ ಅಂತರದಲ್ಲಿ ಜ ಬರಲಿವೆ. 'ದೊಡ್ಮನೆ' ಸೂರಿ ನಿರ್ದೇಶನದ ಬಿಗ್ ಬಜೆಟ್ ದ್ದರಿಂದ, ಈಗಾಗಲೇ ಸಾಕಷ್ಟು ಕುತೂಹಲ ಕೂಡ ಮ

ಬೆಚ್ಚಿ ಬೀಳಿಸುವ ಮಮ್ಮಿ ಟ್ರೇಲರ್

ಪ್ರಿಯಾಂಕ ಉಪೇಂದ್ರ ಅವರ 'ಮಮ್ಮಿ' ಚಿತ್ರದ ಟ್ರೇಲರ್ ಮೊನ್ನೆಯಷ್ಟೇ ರಿಲೀಸ್ ಆಗಿದೆ. ಸಾಮಾಜಿಕ ಜಾಲತಾಣದಲ್ಲಿ ಈಗಾಗಲೇ ಭರ್ಜರಿ ಸದ್ದು ಮಾಡಿರುವ ಈ ಟ್ರೇಲರ್, ತಾಯಿ ಮತ್ತು ಮಗಳ ನಡುವಿನ ಬಾಂಧವ್ಯವನ್ನು ಹೇಳುತ್ತಿದೆ. ಜತೆಗೆ ಇದೊಂದು ಸಸ್ಪೆನ್ಸ್ ಚಿತ್ರ ಕೂಡ ಆಗಿರುವುದರಿಂದ, ಬೆಚ್ಚಿ ಬೀಳಿಸುವ ಸಾಕಷ್ಟು ಅಂಶಗಳು ಇವೆ.

'ಮಮ್ಮಿ' ಲೋಹಿತ್ ನಿರ್ದೇಶನದ ಚಿತ್ರ. ಚಿತ್ರದಲ್ಲಿ ಪ್ರಿಯಾಂಕ ಉಪೇಂದ್ರರಿಗೆ ಬೇಬಿ ಯುವಿನಾ ಸಾಥ್ ಕೊಟ್ಟಿದ್ದಾರೆ. ಕನ್ನಡದ ಖ್ಯಾತ ಕ್ಯಾಮೆರಾಮನ್ ಹೆಚ್.ಸಿ.ವೇಣು ಸಿನಿಮಾಟೋಗ್ರಫಿಯಲ್ಲಿ ಸಿನಿಮಾ ಮೂಡಿಬಂದಿರುವುದರಿಂದ, ನೆರಳು ಬೆಳಕಿನಾಟವೂ ಸಖತ್ತಾಗಿ ಮೂಡಿಬಂದಿದೆ. ಇವೆಲ್ಲವುಗಳ ಜತೆಗೆ ಅಜನೀಶ್ ಲೋಕನಾಥ್ ಸಂಗೀತ ಮತ್ತು ರವಿಚಂದ್ರನ್ ಅವರ ಸಂಕಲನ ಕೂಡ ಮೇಕಿಂಗ್‌ಗೆ ಇನ್ನಷ್ಟು ಜೀವ ತುಂಬಿದೆ.

'ಮಮ್ಮಿ' ಸಿನಿಮಾದ ಬಗ್ಗೆ ಪ್ರಿಯಾಂಕ ಸಾಕಷ್ಟು ನಿರೀಕ್ಷೆ ಇಟ್ಟುಕೊಂಡಿದ್ದಾರೆ. ಇದೊಂದು ಬೇರೆ ರೀತಿಯ ಸಿನಿಮಾವಾಗಿದ್ದರಿಂದ, ಜನರು ಉತ್ತಮ ಪ್ರತಿಕ್ರಿಯೆ ನೀಡುತ್ತಾರೆ ಅನ್ನುವ ನಂಬಿಕೆ ಅವರದ್ದು, ಹೀಗಾಗಿಯೇ ಸ್ವತಃ ತಾವೇ ಸಿನಿಮಾದ ಪ್ರಚಾರದಲ್ಲೂ ತೊಡಗಿದ್ದಾರೆ. "ನಾನು ಈವರೆಗೂ ಇಂತಹ ಸಿನಿಮಾವನ್ನು ನೋಡಿಯೇ ಇಲ್ಲ, ಅಲ್ಲದೇ ದೆವ್ವದ ಚಿತ್ರಗಳೆಂದರೆ ನನಗೆ ತುಂಬಾನೇ ಖುಷಿ. ಅಂತಹ ಸಿನಿಮಾದಲ್ಲಿ ನಾನು ನಟಿಸಿದ್ದೇನೆ ಎಂಬ ಹೆಮ್ಮೆ ನನಗಿದೆ" ಅಂತಾರೆ ಪ್ರಿಯಾಂಕ.



ಟಾಲಿವುಡ್‌ಗೆ ರಚಿ

ಕನ್ನಡದಲ್ಲಿ ಈಗಾಗಲೇ ಬಿಜಿ ಆಗಿರುವ ಬು ಹುಡುಗಿ ರಚಿತಾ ರಾಮ್, ಟಾಲಿವುಡ್‌ಗೆ ಹಾ ಅನ್ನುವ ಸುದ್ದಿ ಗಾಂಧಿನಗರದಲ್ಲಿ ಹರಿದ ಬರೋಬ್ಬರಿ ಮೂರು ಸಿನಿಮಾಗಳಿಗೆ ಸಂಪರ್ಕ ಮಾಡಿದ್ದಾರೆ ಅನ್ನುವ ಸುದ್ದಿಯ ಆದರೆ ಈ ಬಗ್ಗೆ ರಚಿತಾ ಯಾವುದೇ ನೀಡುತ್ತಿಲ್ಲ, ಸದ್ಯ 'ಕಿಕ್' ರಿಯಾಲಿಟಿ ಬಿಜಿ ಆಗಿರುವ ಇವರು, 'ಭರ್ಜರಿ' ನಟಿಸುತ್ತಿದ್ದಾರೆ. ಅಲ್ಲದೇ ಕನ್ನಡದ ಚಿತ್ರಗಳಿಗೆ ಸಹಿ ಮಾಡಿದ್ದಾರೆ. ಟಾಲಿವುಡ್‌ಗೆ ಯಾವಾಗ ಹೋ ಅನ್ನುವ ಅನುಮಾನ ಕೂಡ ಮೂ

ಟಾಲಿವುಡ್ ವಿಷಯದ ಕ ಅವರನ್ನು ಕೇಳಿದರೆ, "ನನ್ನನ್ನು ಸಂಪ ನಿಜ. ಕತೆಯನ್ನೂ ಕೇಳಿದ್ದೇನೆ. ಅಲ್ಲಿನ ಸ್ಟಾ ಜತೆ ನಟಿಸಲು ಆಫರ್ ಸಿಕ್ಕಿದೆ. ಹೋಗುವ ಚಿಂತಿಸಬೇಕಿದೆ. ಮೊದಲು ಕನ್ನಡ ಸಿನಿಮಾಗಳಿಗೆ ಆನಂತರವಷ್ಟೇ ಬೇರೆ ಸಿನಿಮಾರಂಗಕ್ಕೆ ಹೋಗಲು ಮಾಡುತ್ತೇನೆ" ಅಂತಾರೆ ಬುಲ್‌ಬುಲ್ ಹುಡುಗಿ.

ಈಗಾಗಲೇ ಕನ್ನಡದ ಅನೇಕ ನಾಯಕಿಯರು ಟಾ ಹೋಗಿ, ಅಲ್ಲಿಂದ ವಾಪಸ್ಸು ಬಂದಿದ್ದಾರೆ. ಈ ರಚಿತಾಗೂ ಗೊತ್ತಿದೆ. ಹೀಗಾಗಿ ಯಾವ ತೆಗೆದುಕೊಳ್ಳುತ್ತಾರೆ ಅನ್ನುವುದನ್ನು ಕಾದು ನೋಡಬೇ

PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427,
Fax : 26604536, E-mail :lankesh70@rediffmail.com